# ಅಧ್ಯಾಯ–೧೪

# ಸಾಹಿತ್ಯ ಮತ್ತು ಸಂಸ್ಕೃತಿ

ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕೋಲಾರ ಜಿಲ್ಲೆಯು ಅಪಾರ ಕೊಡುಗೆ ನೀಡಿದ್ದು, ಸಾಹಿತ್ಯ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಗಣನೀಯ ಪ್ರಮಾಣದಲ್ಲಿ ಇದನ್ನು ಕಾಣಬಹುದಾಗಿದೆ. ಇಲ್ಲಿಯ ಸಾಂಸ್ಕೃತಿಕ ಕ್ಷೇತ್ರ ಬಹುಮುಖಿಯಾಗಿದ್ದು, ವೈವಿಧ್ಯತೆಯಿಂದ ಕೂಡಿರುವುದು ಮೊದಲ ನೋಟಕ್ಕೆ ಕಂಡು ಬರುತ್ತದೆ. ಮುಖ್ಯವಾಗಿ ಜಿಲ್ಲೆ ತೆಲುಗು, ತಮಿಳು ಭಾಷಾ ಪ್ರಾಂತ್ಯಗಳ ಮಧ್ಯೆಯಿರುವುದರಿಂದ ಸಹಜವಾಗಿ ನಡೆನುಡಿಗಳಾದಿಯಾಗಿ ನಿತ್ಯ ಜೀವನದ ಸಾಂಸ್ಕೃತಿಕ ಅಂಶಗಳಲ್ಲೂ ವಿಭಿನ್ನತೆ ಗೋಚರವಾಗುತ್ತದೆ. ಜಿಲ್ಲೆಯ ಪೂರ್ವಭಾಗ ಇಡಿಯಾಗಿ ಆಂಧ್ರ ಪ್ರದೇಶಕ್ಕೆ ಹೊಂದಿಕೊಂಡೇ ಇರುವುದರಿಂದ ತೆಲುಗು ಭಾಷೆ ಹಾಗೂ ಸಂಸ್ಕೃತಿಗಳ ಪ್ರಭಾವ ದಟ್ಟವಾಗಿದೆ. ಕೋಲಾರದ ಚಿನ್ನವು ಭಾರತದ ವಿವಿಧ ಪ್ರದೇಶಗಳಿಗೆ ಬಹಳ ಹಿಂದೆಯೇ ಸಾಗಾಣಿಕೆ ಆಗಿದ್ದಿರಬಹುದು. ಆದರೆ ಹತ್ತೊಂಬತ್ತರ ಅಂತ್ಯ ಹಾಗೂ ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಬ್ರಿಟಿಷರಿಂದ ಕ್ರಮಬದ್ಧವಾಗಿ ಗಣಿಗಾರಿಕೆ ಹಾಗೂ ಚಿನ್ನದ ಉತ್ಪಾದನೆ ಆಗತೊಡಗಿದ ಮೇಲೆ ಕೂಲಿಗಾರರಾಗಿ ತಮಿಳು ಭಾಷಿಗರು ಅಧಿಕ ಸಂಖ್ಯೆಯಲ್ಲಿ ವಲಸೆ ಬಂದು ನೆಲೆಸಿದರು. ಸಹಜವಾಗಿ ಇವರೊಂದಿಗೆ ತಮಿಳು ಭಾಷೆ ಹಾಗೂ ಸಂಸ್ಕೃತಿಗಳು ಬಂದವು. ಗಣಿಗಾರಿಕೆಯ ಮುಖ್ಯಸ್ಥರು ಐರೋಪ್ಯ ದೇಶದವರಾಗಿದ್ದರಿಂದ ಇಂಗ್ಲಿಷ್ ಭಾಷಿಗರ ಗಣನೀಯ ಸಮುದಾಯ ಕೋಲಾರ ಗಣಿ ಪ್ರದೇಶದಲ್ಲಿ ನೆಲೆಸುವಂತಾಯಿತು. ೧೮ನೇ ಶತಮಾನದ ಆರಂಭದಲ್ಲೇ ಚಿಕ್ಕಬಳ್ಳಾಪುರ, ಗೌರಿಬಿದನೂರು ಕಡೆಗಳಲ್ಲಿ ಕ್ರೈಸ್ತ ಮಿಷನರಿಗಳು, ಚರ್ಚ್‌ಗಳು ಇದ್ದವು ಕ್ರಿಶ್ಚಿಯನ್ ಸಮುದಾಯದವರದೇ (ಇವರನ್ನು ಚಟ್ಟಿಕಾರ್ ಎಂದೂ ಕರೆಯಲಾಗುತ್ತಿತ್ತು) ಆದ ಸಾಂಸ್ಕೃತಿಕ ವಲಯವೊಂದು ರೂಪುಗೊಂಡಿತು. ಮೈಸೂರಿನ ಚರಿತ್ರೆಯಲ್ಲಿ ಗಮನಾರ್ಹ ಸಾಧನೆಯನ್ನು ಮಾಡಿ ಇಂದಿಗೂ ರಾಜ್ಯದ ಇತಿಹಾಸದಲ್ಲಿ ಹಲವಾರು ಅಧ್ಯಯನ, ಸಂಶೋಧನೆಗಳಿಗೆ ಕಾರಣರಾದ ಹೈದರ್ ಅಲಿ ಹಾಗೂ ಟಿಪ್ಪುರವರೊಂದಿಗೆ ಜಿಲ್ಲೆ ನೇರವಾಗಿ ಸಂಬಂಧ ಹೊಂದಿತ್ತು. ಹೈದರ್ ಜನಿಸಿದ್ದೇ ಕೋಲಾರ ಜಿಲ್ಲೆಯ ಬೂದಿಕೋಟೆಯಲ್ಲಿ. ಈತನ ಹಿರೇಕರು ಇಲ್ಲಿಗೆ ಬರುವ ವೇಳೆಗೆ ಸ್ಥಳೀಯವಾಗಿ ಮುಸ್ಲಿಂ ಜನಾಂಗ ಜಹಗೀರಿ, ಫೌಜುದಾರಿಕೆ, ಜಮೀನುಗಳನ್ನು ಪಡೆದು ನೆಲೆನಿಂತಿದ್ದರು. ತಂದೆ–ಮಕ್ಕಳ ಕಾಲದಲ್ಲಿ ಜಿಲ್ಲೆಯಾದ್ಯಂತ ಮುಸ್ಲಿಂ ಸಮುದಾಯಕ್ಕೆ ಪ್ರೋತ್ಸಾಹ ದೊರೆತು, ಅವರ ಧಾರ್ಮಿಕ ಮಂದಿರಗಳು ರಚನೆಯಾಗಿ ಉರುಸ್, ಮೊಹರಂ ಮುಂತಾದ ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳು ಆರಂಭವಾಗಿ ಇಂದಿಗೂ ಮುಂದುವರಿದಿದೆ. ಷಹಜಿಗೆ ಜಹಗೀರಿಯಾಗಿ ದೊರೆತ ಸ್ಥಳಗಳಲ್ಲಿ ಕೋಲಾರದ ಒಂದು ಭಾಗವೂ ಇದ್ದು, ಮರಾಠಿ ಶಾಸನಗಳೂ ದೊರೆಯುತ್ತವೆ. ಕೆ.ಜಿ.ಎಫ್.ನಲ್ಲಿ ಬಿ.ಇ.ಎಂ.ಎಲ್. (ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್) ಆರಂಭವಾದ ಮೇಲೆ ಬಂಗಾಳವೂ ಸೇರಿದಂತೆ ಉತ್ತರ ಪ್ರದೇಶ ಹಾಗೂ ದಕ್ಷಿಣದ ಮಲೆಯಾಳಿ ಭಾಷಿಗರೂ ಇಲ್ಲಿಗೆ ನೌಕರಿಗಾಗಿ ಬಂದಿರುವುದು ಈ ಪ್ರದೇಶ ಒಂದು ಪುಟ್ಟ ಭಾರತದಂತೆ ಗೋಚರವಾಗುತ್ತದೆ. ಇಷ್ಟೆಲ್ಲಾ ಅನ್ಯ ಭಾಷಿಗರು, ಅನ್ಯ ಧಾರ್ಮಿಕರು ಇಲ್ಲಿ ನೆಲೆಸಿರುವರಾದರೂ ಇದರಿಂದಾಗಿ ಕನ್ನಡ ಭಾಷೆ–

ಸಂಸ್ಕೃತಿಗಳು ಸೊರಗುವಂತಾಗಿಲ್ಲ. ಬದಲಿಗೆ ಹೊರಗಿನ ಸಂಸ್ಕೃತಿಯನ್ನು ಅರಗಿಸಿಕೊಂಡು ಬೆಳೆಯುತ್ತಿದೆ. ಇದಕ್ಕೆ ಜಿಲ್ಲೆಯಲ್ಲಿ ನಡೆಯುತ್ತಿರುವ ರಾಜ್ಯ, ಜಿಲ್ಲಾ, ತಾಲೂಕು ಮಟ್ಟಗಳ ಸಾಹಿತ್ಯ ಸಮ್ಮೇಳನಗಳೇ ಸಾಕ್ಷಿ. ಈ ಸಮ್ಮೇಳನಗಳಲ್ಲಿ ಸಾಂಸ್ಕೃತಿಕ ಪ್ರದರ್ಶನಗಳಿಗೇನೂ ಕೊರತೆಯಿಲ್ಲ. ಜಿಲ್ಲೆಯಲ್ಲಿ ಜನಿಸಿದ ಸಾಹಿತಿಗಳ ಹಾಗೂ ಕಲಾವಿದರ ಒಂದು ಗಣನೀಯ ತಂಡ ಜಿಲ್ಲೆಯ ಹೊರಗೆ ಹೋಗಿರಬಹುದಾದರೂ, ಜಿಲ್ಲೆಯಲ್ಲಿಯೇ ಜನಿಸಿ, ನೆಲೆನಿಂತು ಕ್ರಿಯಾಶೀಲವಾಗಿ ಸಾಹಿತ್ಯ ಸಂಸ್ಕೃತಿಗಳಲ್ಲಿ ತೊಡಗಿಸಿಕೊಂಡಿರುವವರ ಸಂಖ್ಯೆಯೂ ಅಪಾರವಾಗಿದೆ. ಈ ಎಲ್ಲ ಚಟುವಟಿಕೆಗಳನ್ನು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ನೋಡಲಾಗಿದೆ.

## ಸಾಹಿತ್ಯ

### ಶಾಸನ ಕವಿಗಳು

ಕೋಲಾರ ಜಿಲ್ಲೆಯಲ್ಲಿ ಹಲವಾರು ಶಾಸನಕವಿಗಳ ಉಲ್ಲೇಖ ದೊರೆಯುತ್ತದೆ. ಅವುಗಳಲ್ಲಿ ಅತಿ ಪ್ರಾಚೀನವಾದುದು ಎಂದರೆ ಕಬ್ಬದ ನಾಗಮಯ್ಯ ಎಂಬಾತ ಚಿಂತಾಮಣಿ ತಾಲೂಕಿನ ಕರಬೂರು ಗ್ರಾಮದ ಸೋಮೇಶ್ವರ ದೇವಾಲಯಕ್ಕೆ ವೀರನೊಳಂಬನ ಕಾಲದಲ್ಲಿ ಎಂದರೆ ಕ್ರಿ.ಶ.೯೬೦ರಲ್ಲಿ ಬರೆದ (ಚಿಂತಾಮಣಿ ೪೩ನೇ ಸಂಖ್ಯೆಯ) ಶಾಸನ ಇದರಲ್ಲಿ ಕೇವಲ ಗದ್ಯವಷ್ಟೇ ಇದ್ದರೂ ಈತ ಬೇರೆಯ ಕಾವ್ಯವನ್ನೂ ಬರೆದಿರಬಹುದೆಂದು ವಿದ್ವಾಂಸರು ಊಹಿಸಿದ್ದಾರೆ. (ಅದೇ ಭಾಗದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಇದೇ ಶಾಸನದ ಇನ್ನೊಂದು ಪ್ರತಿ ಇದೆ) (ಚಿಂತಾಮಣಿ ೪೪). ಕೋಲಾರದ ಕೋಲಾರಮ್ಮ ದೇವಾಲಯದ ೧೦೭೧ರ ತಮಿಳು ಶಾಸನದಲ್ಲಿ 'ನಿರೂಪ ಶಿಖಾಮಣಿ ವಿಳುಪ್ಪರಿಯನ್' ಎಂಬಾತನ ಹೆಸರಿದೆ. (ಕೋಲಾರ ೧೦೧) ಮುಳಬಾಗಿಲಿನ ಮುಡಿಯನೂರಿನ ತಾಮ್ರ ಶಾಸನವನ್ನು ಹಾಗೂ ಗೌರೀಬಿದನೂರಿನ ಹೊಸೂರ ತಾಮ್ರ ಶಾಸನವನ್ನು ಬರೆದಾತ ಮಲ್ಲಣಾರಾಧ್ಯ ಇವುಗಳ ಕಾಲಾವಧಿ ಕ್ರಮವಾಗಿ ೧೩೪೭ ಹಾಗೂ ೧೩೭೦ ಎಂದು ಗುರುತಿಸಲಾಗಿದೆ. ಚಿಂತಾಮಣಿ ತಾಲೂಕಿನ ಕೋನಪ್ಪನ ಹಳ್ಳಿಯ ೧೩೬೦ರ ಶಾಸನದ ರಚನಕಾರ ನೀಲಪ್ಪರ್ (ಚಿಂತಾಮಣಿ ೭೫), ವಿಜಯನಗರದ ಬುಕ್ಕರಾಯನನ್ನು ಹೆಸರಿಸುವ ತಾಮ್ರಪಟ ಶಾಸನ ವಿಸ್ತಾರವಾಗಿ ಸಂಸ್ಕೃತ ಭೂಯಿಷ್ಠವಾಗಿದ್ದು, ಮಲ್ಲಣಾರಾಧ್ಯನನ್ನು 'ಸರ್ವಶಾಸ್ತ್ರ ಪ್ರವೀಣಃ' ಎಂದು ಕರೆದಿದೆ. ಈತನ ೧೩೭೦ರ ಹೊಸೂರು ಶಾಸನದಲ್ಲಿ ನಾಚನ ಸೋಮ ಎಂಬಾತನನ್ನು ಹೆಸರಿಸಿದ್ದು, ಆತ ಎಂಟು ಭಾಷೆಗಳಲ್ಲಿ ಕವಿತ್ವ ಶಕ್ತಿಯುಳ್ಳ, ವಾಕ್ಸಂಪತ್ತನ್ನು ಪಡೆದಿದ್ದನೆಂದೂ, ಮಹಾಕವಿವರನೆಂದೂ ಹೊಗಳಿದೆ. ಗೌರಿಬಿದನೂರಿನ, ನಗರೆಗೆರೆಯ ೧೫೦೫ರ ವೀರನರಸಿಂಹನ ಕಾಲದ ಸಂಸ್ಕೃತ ತಾಮ್ರಶಾಸನ ಬರೆದಾತ ನರಸಿಂಹಾರ್ಯ (ಗೌರಿಬಿದನೂರು ೭೭). ಚಿಂತಾಮಣಿ ತಾಲೂಕಿನ ಮಂಡಗಲ್ಲು ಗ್ರಾಮದ ೧೫೩೪ರ ಶಾಸನ ಬರೆದಾತ ಸ್ವಯಂಭೂ (ಚಿಕ್ಕಮಗಳೂರು ೨೮). (ಆವರಣದಲ್ಲಿರುವುದು ಶಾಸನಗಳ ಸಂಖ್ಯೆ).

### ಪ್ರಾಚೀನ ಕವಿಗಳು

ಕೋಲಾರ ಜಿಲ್ಲೆಯ ಪ್ರಾಚೀನ ಕವಿಗಳಲ್ಲಿ 'ಸಿರಿಭೂವಲಯ' ಬರೆದ ಕುಮುದೇಂದುವು ಇಂದಿನ ನಂದಿದುರ್ಗದ ತಪ್ಪಲಿನಲ್ಲಿರುವ 'ಯಲವ' ಎಂಬ (ಯಲವಳ್ಳಿ) ಗ್ರಾಮದವನೆಂದು ವಿದ್ವಾಂಸರ ಅಭಿಪ್ರಾಯ. ಅಂತೆಯೇ ಹೊಯ್ಸಳ ೩ನೇ ನರಸಿಂಹನ ಕಾಲದಲ್ಲಿ ೧೨೭೫ರಲ್ಲಿ ರಾಮಾಯಣ ಕಾವ್ಯವೊಂದನ್ನು ಬರೆದ ಕುಮುದೇಂದು ಎಂಬಾತನ ಹೆಸರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದೊರೆಯುತ್ತದೆ. ಈ ಇಬ್ಬರೂ ಭಿನ್ನ/ಅಭಿನ್ನರೆಂದು ಹಲವಾರು ಚರ್ಚೆಗಳು ನಡೆದಿವೆ. ಈ ಎರಡೂ ಕಾವ್ಯಗಳಲ್ಲೂ ಕವಿಯ ಊರಿನ ಹೆಸರು ದೊರೆಯುವುದಿಲ್ಲ. ಸಿರಿಭೂವಲಯ ಗ್ರಂಥದ ಶೋಧನೆ, ಸಂಪಾದನೆ, ಪ್ರಕಟಣೆಗಳದ್ದೇ ಒಂದು ರೋಚಕ ಕಥೆ. ಕರ್ಲಮಂಗಲಂ ಶ್ರೀಕಂಠಯ್ಯ, ಎಂ.ಯಲ್ಲಪ್ಪ ಶಾಸ್ತ್ರಿಗಳು, ಎಂ.ವೈ.ಧರ್ಮಪಾಲ್, ವೈ.ಕೆ. ಮೋಹನ್ ಮುಂತಾದವರು ಕೃತಿ ಬೆಳಕು ಕಾಣಲು ಶ್ರಮಿಸಿದವರು. ಸದರಿ ಕೃತಿಯಲ್ಲಿ ತಲಕಾಡಿನ ಗಂಗ ರಾಜ ಶಿವಮಾರ (ಸು.೬೭೯–೭೧೩) ಹಾಗೂ ರಾಷ್ಟ್ರಕೂಟ ಅಮೋಘವರ್ಷನನ್ನು (ಸು.೬೭೦–೭೫೩) ಹೆಸರಿಸಿರುವುದರಿಂದ ಕೃತಿಕಾರ ಕುಮುದೇಂದುವು ೬೮೦ರ ಸುಮಾರಿನಲ್ಲಿದ್ದವನೆಂದು ಊಹಿಸಲಾಗಿದೆ. ಕುಮುದೇಂದುವಿನ ಕಾಲ ದೇಶಗಳ ಬಗ್ಗೆ ತಿಳಿದು ಬರುವುದು ಪಿರಿಯಾಪಟ್ಟಣದ ದೇವಪ್ಪನೆಂಬಾತ ರಚಿಸಿದ 'ಕುಮುದೇಂದು ಶತಕ'ದಿಂದ. ಅದರಂತೆ ಕುಮುದೇಂದುವಿನ ಊರು ನಂದಿಯ ಬಳಿಯ ಯಲವ (ಅಥವಾ ಯಲವಳ್ಳಿ) ಎಂದು ತಿಳಿದುಬರುತ್ತದೆ. ಈ ದೇವಪ್ಪ ಎಂಬಾತನ ಬಗ್ಗೆಯೂ ಹೆಚ್ಚಿನ ಸಂಗತಿ ಲಭ್ಯವಿಲ್ಲ.

ಕುಮದೇಂದುವಿನ 'ಸಿರಿ ಭೂವಲಯ' ಗ್ರಂಥದ ಬಗ್ಗೆ ಪರಿಚಯಿಸುತ್ತಾ ಎಂ.ವೈ.ಧರ್ಮಪಾಲ್ ಅವರು ತಿಳಿಸುವಂತೆ "ಈ ಗ್ರಂಥವು ಯಾವ ಭಾಷಾಲಿಪಿಯಲ್ಲಿಯೂ ಇರದೆ ಕೇವಲ ಅಂಕಮಾಧ್ಯಮದ ಚಕ್ರರೂಪದಲ್ಲಿ ರಚಿತವಾಗಿದೆ. ಒಂದೊಂದು ಚಕ್ರವು ೨೭ x ೨೭ ಚೌಕಾಕಾರದ ೭೨೯ ಮನೆಗಳಿಂದ ಕೂಡಿ ಒಂದು ಚಕ್ರವಾಗಿದೆ. ಈ ಗ್ರಂಥದಲ್ಲಿ ಒಟ್ಟು ೧೨೭೦ ಚಕ್ರಗಳಿವೆ. ಪ್ರತಿಯೊಂದು ಚಕ್ರದಲ್ಲಿಯೂ ೧ ರಿಂದ ೬೪ರವರೆಗಿನ ಅಂಕಿಗಳನ್ನು ೭೨೯ ಮನೆಗಳಲ್ಲಿ ತುಂಬಲಾಗಿದೆ. ಇಲ್ಲಿ ಜಗತ್ತಿನ ಎಲ್ಲಾ ಉಚ್ಚಾರಣಾ ಧ್ವನಿಗಳೂ ಅಂಕ ಸಂಕೇತಕ್ಕೆ ಪರಿವರ್ತಿಸಿಕೊಂಡು, ಚಕ್ರಬಂಧ ರೂಪದಲ್ಲಿ ರಚಿಸಲಾಗಿದೆ. ಈ ಚಕ್ರಬಂಧವನ್ನು ಪುನಃ ಲಿಪಿ ಮಾಧ್ಯಮಕ್ಕೆ ಪರಿವರ್ತಿಸಬೇಕಾದಾಗ ಈ ೬೪ ಅಂಕಿಗಳನ್ನು ಧ್ವನಿಗಳಾಗಿ ಪರಿವರ್ತಿಸಬೇಕಾಗುತ್ತದೆ. ಈ ಕ್ರಮದ ಪರಿವರ್ತನೆಯಿಂದ ಕಾವ್ಯ ಸೃಷ್ಟಿಯಾಗುತ್ತದೆ. ಗಣಿತ ಸಿದ್ಧಾಂತದ ಮೂಲಕ ೧ ರಿಂದ ೬೪ ಧ್ವನಿಗಳಲ್ಲಿ ಒಂದು ವಿಶಿಷ್ಟ ರೀತಿಯ ನಾನಾ ವಿಧದ ಸಂಯೋಗ ಭಂಗಗಳ (Permutation and Combination) ಮೂಲಕ ಪ್ರಪಂಚದ ಸಕಲ ಶಬ್ದಾಗಮವು ೯೨ ಬಿಡಿ ಅಂಕಿಗಳಲ್ಲಿ (digits) ಮುಕ್ತಾಯವಾಗುವುದೆಂದೂ, ಅದರಲ್ಲಿ ಹಿಂದಿನ, ಇಂದಿನ ಮತ್ತು ಮುಂದಿನ ಎಲ್ಲ ಶಬ್ದಗಳೂ ತಾವೇ ತಾವಾಗಿ ಹುಟ್ಟಿವೆ ಎಂದು ತೋರಿಸಲಾಗಿದೆ. ಈ ಗ್ರಂಥದ ಪ್ರಾರಂಭವು ಕನ್ನಡ ಭಾಷೆಯಿಂದಲೇ ಆಗಿರುವುದು ಮತ್ತು ಕುಮುದೇಂದು ಮುನಿಯು ಕನ್ನಡದವರೇ ಆಗಿರುವುದು ಅತ್ಯಂತ ಹೆಮ್ಮೆಯ ವಿಷಯವೇ ಆಗಿದೆ. ಕನ್ನಡ ಭಾಷೆಯ ಧ್ವನಿಗಳನ್ನೇ ಪ್ರಧಾನವಾಗಿಟ್ಟುಕೊಂಡು ಪ್ರಪಂಚದ ೭೧೮ ಭಾಷೆಗಳಿಗೂ ಪರಿವರ್ತನೆ ಮಾಡಲು ಸಾಧ್ಯವಾಗಿರುವ ಏಕೈಕ ಗ್ರಂಥ ಇದು. ಈ ಕಾರಣದಿಂದ ಸಿರಿಭೂವಲಯ ಗ್ರಂಥವನ್ನು 'ಸರ್ವಭಾಷಾಮಯೀ' ಎಂದು ಕರೆಯಲಾಗಿದೆ".

ಜಿಲ್ಲೆಯ ಇನ್ನೊಬ್ಬ ಪ್ರಸಿದ್ಧ ಕವಿ ಲಕ್ಕಣ್ಣದಂಡೇಶ. ಈತ ವಿಜಯನಗರದ ಪ್ರೌಢದೇವರಾಯನ (೧೪೧೯–೧೪೪೬) ಆಸ್ಥಾನದಲ್ಲಿದ್ದ. ಈತನನ್ನು ಅಮಾತ್ಯ ಶ್ರೇಷ್ಠ, ಅಮಾತ್ಯ ಶಿರೋಮಣಿ ಎಂದೆಲ್ಲಾ ಶಾಸನಗಳಲ್ಲಿ ಕರೆಯಲಾಗಿದೆ. (ಈತ ಕಲಿಯೂ ಹೌದು, ಕವಿಯೂ ಹೌದು. ೧೪೪೨ರಲ್ಲಿ ಸಿಂಹಳದ ಮೇಲೆ ದಿಗ್ವಿಜಯ ನಡೆಸಿದವನು. ವಿಜಯನಗರ ಸಾಮ್ರಾಜ್ಯ ವಿಸ್ತೀರ್ಣಕ್ಕೆ ನೆರವಾದವನು). ಈತನನ್ನು ಹೆಸರಿಸುವ (೧೪೦೦ ರಿಂದ ೧೪೬೩ರವರೆಗೆ) ೨೧ ಶಾಸನಗಳಿದ್ದು, ಕೋಲಾರದಲ್ಲಿ ಆರು ಶಾಸನಗಳಿವೆ. ಮುಳಬಾಗಿಲಿನ ಹೊಸಪಟ್ಟಣದಲ್ಲಿ ಜನಿಸಿದ ಈತ ವಿಷ್ಣುವರ್ಧನ ಗೋತ್ರದವನೆಂದೂ ಹೆಗ್ಗಡೆದೇವ ಹಾಗೂ ಒಮ್ಮೆಯಮ್ಮರವರ ಮಗನೆಂದೂ, ಈತನಿಗೆ ಮಾದಣ್ಣದಣ್ಣಾಯಕ ಎಂಬ ತಮ್ಮ ಇದ್ದನೆಂದೂ ಪ್ರೌಢದೇವರಾಯನು ನೀಡಿದ ಧರ್ಮದಿಂದ ವಿರೂಪಾಕ್ಷಪುರದ ವಿರೂಪಾಕ್ಷ ದೇವರಿಗೆ ಸೇವೆ ಮಾಡಿದನೆಂದು ಮುಳಬಾಗಿಲ ೨ ಮತ್ತು ೯೬ನೇ ಸಂಖ್ಯೆ ಶಾಸನಗಳಿಂದ (೧೪೩೧ ಕ್ರಿ.ಶ.) ತಿಳಿದುಬರುತ್ತದೆ. ಈತ ಭೂದಾನ ಮಾಡಿದ ಬಗ್ಗೆ (ಕೋಲಾರ ೧೦೪) (ಕ್ರಿ.ಶ. ೧೪೨೮) ಮುಳಬಾಗಿಲು ರಾಜ್ಯದಲ್ಲಿ ವಾಸವಾಗಿದ್ದಂತೆ (ಬೌರಿಂಗ್ ಪೇಟೆ ೭೨ (ಕ್ರಿ.ಶ. ೧೪೩೦), ೮೭ (ಕ್ರಿ.ಶ. ೧೪೩೩) ಯೂ, ಸಾಳುವ ಗೋಪರಾಜನಿಗೆ ಮಾದಣ್ಣ ದಣ್ಣಾಯಿಕನು, ತೇಕಲ್ಲನ್ನು ದಾನ ನೀಡಿದ ಬಗ್ಗೆಯೂ (ಮಾಲೂರು:ಕ್ರಿ.ಶ. ೧೪೩೪) ತಿಳಿದುಬರುತ್ತದೆ. ಎಂದರೆ ಜಿಲ್ಲೆಯಲ್ಲಿ ಜನಿಸಿ, ರಾಜಧಾನಿಯಾದ ವಿಜಯನಗರ (ಹಂಪೆ) ದಲ್ಲಿದ್ದರೂ, ತನ್ನ ಜಿಲ್ಲೆಯನ್ನು ಮರೆಯದೆ ಅದರ ಬಗ್ಗೆ ಗೌರವಾದರಾಭಿಮಾನವುಳ್ಳವನಾಗಿದ್ದನು ಎಂಬುದು ಗಮನಾರ್ಹ. ಕವಿಯಾಗಿ ಈತನ 'ಶಿವತತ್ವ ಚಿಂತಾಮಣಿ' ಒಂದು ವಿಶಿಷ್ಟ ಬಗೆಯ ಆಕರ ಗ್ರಂಥ. ೫೪ ಸಂಧಿ–೨೧೨೧ ಪದ್ಯಗಳ ವಾರ್ಧಕ ಷಟ್ಪದಿಯ ವಿಶ್ವಕೋಶದಂತಹ ರಚನೆಯಲ್ಲಿ ನಿತ್ಯಾನಿತ್ಯವಸ್ತು ವಿವರಣ, ಸಕಲನಿಷ್ಕಲವಿಚಾರ, ಪಂಚವಿಂಶತಿ ಲೀಲೆಗಳು, ಭುವನಕೋಶ, ಶಿವಲೋಕ ವರ್ಣನೆ, ಶಿವನಂದೀಶ ಸಂವಾದ ಮುಂತಾದ ಸಂಗತಿಗಳಿವೆ. ತನಗಿಂತ ಹಿಂದಿನ ಅನೇಕ ಕವಿಗಳ ಪದ್ಯಗಳನ್ನು ತನ್ನ ಗ್ರಂಥದಲ್ಲಿ ಉದಾಹರಿಸಿರುವುದರಿಂದ ಅವರುಗಳ ಕಾಲನಿರ್ಣಯಕ್ಕೆ ಸಹಕಾರಿಯಾಗಿದೆ. "ಕವಿಗಿಂತ ಹಿರಿಯರೂ ಸಮಕಾಲೀನರೂ ಆದ ಸುಮಾರು ಆರುನೂರು ಮಂದಿ ಶರಣರ ನಾಮ ನಿರ್ದೇಶನದೊಂದಿಗೆ ಅವರ ಸ್ಥಳ ಹಾಗೂ ಅವರ ಮಹತ್ವದ ವಿವರವಿದೆ. ಕೃತಿಯ ವಸ್ತು ಶೈವಾದ್ವೈತದ ಪ್ರತಿಪಾದನೆಯೇ ಆದರೂ ಶಾಸ್ತ್ರಕಾವ್ಯದ ರುಚಿ ಹೀನವಾಗಿಸಿಲ್ಲ" ಎಂದು ವಿದ್ವಾಂಸರ ಅಭಿಪ್ರಾಯ.

ಹರಿದಾಸರಲ್ಲಿ ಪ್ರಮುಖರಾದ ಶ್ರೀಪಾದರಾಜರು ಮೂಲತಃ ಚನ್ನಪಟ್ಟಣದ ಬಳಿಯ ಅಬ್ಬೂರಿನವರು. ಶ್ರೀರಂಗದಲ್ಲಿ ವೇದಾಂತ ವ್ಯಾಸಂಗ ಹಾಗೂ ದೀಕ್ಷೆ ಪಡೆದು ಮುಳಬಾಗಿಲಿನಲ್ಲಿ ಮಠ ಸ್ಥಾಪಿಸಿ ಅದನ್ನು ದ್ವೈತ ಸಿದ್ಧಾಂತದ ಪ್ರಮುಖ ಕೇಂದ್ರವನ್ನಾಗಿ ಮಾಡಿದರು. ಇವರ ಕಾಲವನ್ನು ಸುಮಾರು ೧೪೫೦ ಕ್ರಿ.ಶ. ಎಂದು ನಿರ್ಧರಿಸಲಾಗಿದೆ. ಶ್ರೀಪಾದರಾಜರು ರಂಗ ವಿಠಲ ಎಂಬ ಹೆಸರಿನಲ್ಲಿ ಉಗಾಭೋಗ, ಕೀರ್ತನೆ, ಸುಳಾದಿಗಳನ್ನು ರಚಿಸಿದ್ದಾರೆ. ಈವರೆಗೆ ಇವರ ೮೨ ಕೀರ್ತನೆಗಳು,

೩ ಸುಳಾದಿಗಳು, ೧೫ ಉಗಾಭೋಗಗಳು ಮತ್ತು ೧ ದಂಡಕ ಉಪಲಬ್ಧವಿದೆ. ಇವುಗಳಲ್ಲಿ ಆತ್ಮಶೋಧನೆ, ದ್ವೈತ ತತ್ವ, ದೈವಭಕ್ತಿ, ನೀತಿಬೋಧೆಗಳು ಪ್ರಮುಖವಾಗಿವೆ. ಭಕ್ತಿಗೀತೆಗಳಲ್ಲಿ ವಾತ್ಸಲ್ಯ ಮತ್ತು ಮಧುರಭಾವ, ದ್ವೈತ ತತ್ವ ಪ್ರತಿಪಾದನೆಯಲ್ಲಿ ಹರಿಸರ್ವೋತ್ತಮತ್ವ ಗುರುವಿನ ಪ್ರಾಮುಖ್ಯ; ಸುಳಾದಿಗಳಲ್ಲಿ ಸಂಸಾರದ ಜಂಜಡ, ಗೋಪಿಯರ ವಿರಹಭಾವ, ಉಗಾಭೋಗಗಳಲ್ಲಿ ಭಕ್ತಿ ಹಾಗೂ ಭಕ್ತರ ಶ್ರೇಷ್ಠತೆಗಳನ್ನು ಕಾಣಬಹುದು. ದಂಡಕದ ವಿನಾ ಉಳಿದ ಕೃತಿಗಳಲ್ಲಿ ಸಂಗೀತದ ತಳಹದಿಯನ್ನು, ರಾಗ–ತಾಳ ಸಹಿತವಾಗಿರುವುದನ್ನು ಕಾಣಬಹುದೆಂದೂ ಪೂಜಾಕಾಲದಲ್ಲಿ ಈ ಹಾಡುಗಳನ್ನು ಹಾಡಲಾಗುತ್ತಿತ್ತೆಂದೂ ಅಭಿಪ್ರಾಯವಿದೆ.

ಗೋವಿಂದ ಕವಿ ಅಥವಾ ಗೋಪಕವಿ ಎಂಬಾತ ಗುಲ್ಬರ್ಗಾದ ಸೇಡಂನಲ್ಲಿ ಜನಿಸಿ ದೇಶಸಂಚರಿಸುತ್ತಾ, ನಂದಿಗಿರಿಯ ಬಳಿ ಆವತಿಯಲ್ಲಿ ರಾಜಾಶ್ರಯದಲ್ಲಿ ನೆಲೆಸಿದನೆಂದು ತಿಳಿದು ಬರುತ್ತದೆ. 'ನಂದಿ ಮಹಾತ್ಮೆ' ಹಾಗೂ 'ಚಿತ್ರ ಭಾರತ' ಈತನ ಕೃತಿಗಳು. ಕಾರಣಾಂತರದಿಂದ ನಂದಿಯು ಕೈಲಾಸ ತ್ಯಜಿಸಿ ಭೂಮಿಗೆ ಬಂದು ಕೂಷ್ಮಾಂಡ ಗಿರಿಯಲ್ಲಿ ತಪಸ್ಸು ಮಾಡಿ ಶಿವಪಾರ್ವತಿಯರ ಸಾಕ್ಷಾತ್ಕಾರ ಪಡೆದ ಕಥೆ 'ನಂದಿ ಮಹಾತ್ಮೆ' ಯಲ್ಲಿದ್ದು ಅನೇಕ ಉಪಕಥೆಗಳಿಂದ ಕೂಡಿದೆ. 'ಚಿತ್ರಭಾರತ' ಹೆಸರಿಗೆ ತಕ್ಕಂತೆ ಚಿತ್ರಕವಿತ್ವದಿಂದ ಕೂಡಿದ್ದು, ಪ್ರಾಸ, ಅನುಪ್ರಾಸ, ಅಲಂಕಾರ, ಶ್ಲೇಷೆ, ಉಪಮೆ, ರೂಪಕಗಳಿಂದ ಕೂಡಿದ ಮೂವತ್ತು ಸಂಧಿಗಳ ಸಾವಿರಕ್ಕೂ ಮಿಕ್ಕಿದ ವಾರ್ಧಿಕ ಷಟ್ಪದಿಯ ಕಾವ್ಯವಿದು. ಈತನ ಕಾಲ ೧೫೬೦ ರಿಂದ ೧೬೨೦ ಎಂದು ನಿರ್ಧರಿಸಲಾಗಿದೆ.

ಜೈನ ಕ್ಷೇತ್ರವೂ ಆಗಿದ್ದ ನಂದಿಯಲ್ಲಿದ್ದ ಪಾಯಣ್ಣವ್ರತಿ ಸಾಂಗತ್ಯದಲ್ಲಿ ಸಂಯುಕ್ತಕೌಮುದಿಯನ್ನು ರಚಿಸಿದ್ದಾನೆ. ಈತನ ಕಾಲ ೧೬೦೦ ಎಂದೂ; ಭವ್ಯರಿಗೆ ಧರ್ಮಕಥೆಗಳನ್ನು ಓದಿ ಹೇಳುವ ಉಪಾಧ್ಯಾಯನಾಗಿದ್ದನೆಂದೂ ನಂತರ ಪಾರ್ಶ್ವನಾಥನ ಬಸದಿಯಲ್ಲಿ ದೀಕ್ಷೆ ಪಡೆದು ಪಾರ್ಶ್ವವರ್ಣಿ ಎಂದು ಹೆಸರು ಪಡೆದನೆಂದೂ, ಈತನ ಸ್ಥಳ ಪೆನುಗೊಂಡೆ ದೇಶದ ನಂದಿಯಪುರವೆಂದೂ ಕವಿಚರಿತೆಕಾರರು ಹೇಳುತ್ತಾರೆ. ೧೮ ಸಂಧಿಗಳಿಂದ ೯೮೯ ಪದ್ಯಗಳಿಂದ ಕೂಡಿದ ಸಂಯುಕ್ತಕೌಮುದಿಯಲ್ಲಿ ದಾನ, ಪೂಜೆ, ಶೀಲ, ಉಪವಾಸಗಳೆಂಬ ಮುಕ್ತಿ ಪಥದ ವಿವರಗಳಿವೆ.

ಕನ್ನಡ, ತೆಲುಗು, ಸಂಸ್ಕೃತಗಳಲ್ಲಿ ಸಾಕಷ್ಟು ಸಾಹಿತ್ಯ ಕೃತಿಗಳನ್ನು ರಚಿಸಿದರೂ, ಅಜ್ಞಾತನಾಗಿಯೇ ಇರುವ ಕವಿ 'ಮುಮ್ಮಡಿ ತಮ್ಮ'. ಈತನ ಅಜ್ಜ ತಮ್ಮ ಭೂಪಾಲ, ತಂದೆ ಇಮ್ಮಡಿ ತಮ್ಮ ಭೂಪಾಲ ಈತನ ಮಗ ಮುಮ್ಮಡಿ ತಮ್ಮ ಅವರುಗಳು ಸುಗಟೂರು ಪಾಳೆಯಗಾರರ ಮೂಲಪುರುಷ ದೇವರಾಜನ ವಂಶಸ್ಥರು. ಸು.೧೬೬೫ರಲ್ಲಿದ್ದ ಮುಮ್ಮಡಿ ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ತೆಲುಗಿನಲ್ಲಿ ಹಾಗೂ ಸಂಸ್ಕೃತದಲ್ಲಿ ಕಾವ್ಯರಚಿಸಿದ್ದು ಕನ್ನಡದಲ್ಲಿಯೂ ಯಕ್ಷಗಾನ ಕೃತಿಯೊಂದನ್ನು ಆಶುವಾಗಿ (ಮೌಖಿಕವಾಗಿ) ಹೇಳಿದ್ದು, ಪ್ರಜೆಗಳ ಕೋರಿಕೆಯಂತೆ ಕನ್ನಡದಲ್ಲಿ ಶಂಕರ ಸಂಹಿತೆಯನ್ನು ಬರೆದೆನೆಂದು ಹೇಳಿಕೊಂಡಿದ್ದಾನೆ. ಶಂಕರ ಸಂಹಿತೆಯಲ್ಲಿ ೪೧೦೦ ವಾರ್ಧಿಕ ಷಟ್ಪದಿಗಳಿದ್ದು, ೭ ಕಾಂಡ, ೮೦ ಸಂಧಿಗಳಲ್ಲಿ ಅಡಕವಾಗಿವೆ. ಅಪೂರ್ಣವಾಗಿ ದೊರೆತಿರುವ ಇದು ಇನ್ನೂ ಪ್ರಕಟವಾಗಿಲ್ಲ. ಕಾವ್ಯದಲ್ಲಿ ಕುಮಾರೋತ್ಪತ್ತಿ, ತಾರಕಾವಧೆ, ವಿಭೂತಿ ಇತ್ಯಾದಿಗಳ ಮಹಿಮೆ, ಸೋಮವಾರದ ವ್ರತ ಮುಂತಾದ ವಿವರಗಳಿವೆ. ಕ್ರಿಶ.೧೬೬೦ರಲ್ಲಿದ್ದ ಮುಳಬಾಗಿಲು ತಾಲೂಕಿನ ಆಲಂಗೂರು ಗ್ರಾಮದ ಬುಚ್ಚಾಲಿ ಗೋಪಾಲಯ್ಯ ಎಂಬ ವಿಕಟಕವಿ ಆನೆಗೊಂದಿ ಸಂಸ್ಥಾನದಲ್ಲಿ ಕೆಲವು ಶೃಂಗಾರ ಕಾವ್ಯಗಳನ್ನು ತೆಲುಗಿನಲ್ಲಿ ರಚಿಸಿದ್ದು, ಕನ್ನಡದಲ್ಲಿಯೂ ಒಂದು ಶೃಂಗಾರ ಕಾವ್ಯವನ್ನು ರಚಿಸಿದಂತೆ ತಿಳಿದುಬರುತ್ತದೆ. ಕವಿ ಚರಿತೆಕಾರರು ಸಜ್ಜೆಯ ಸಿದ್ದಲಿಂಗಾರ್ಯ ಎಂಬ ಕವಿಯನ್ನು ಹೆಸರಿಸಿದ್ದು, ಈತ ಮುಮ್ಮಡಿ ತಮ್ಮನ ಶೌರ್ಯ, ಸಾಹಸ ಹಾಗೂ ಕವಿತ್ವಗಳ ಬಗ್ಗೆ ಹೊಗಳಿ ಹಾಗೂ ಹಲವಾರು ದಾನಗಳನ್ನು ಪಡೆದಿದ್ದರಿಂದ ಸಿದ್ದಲಿಂಗರ್ಯನೂ ಸುಗಟೂರಿನಲ್ಲಿದ್ದಿರಬಹುದು. ಅಂತೆಯೇ ಈತನ ಕಾಲವನ್ನು ಮುಮ್ಮಡಿ ತಮ್ಮನ ಕಾಲವಾದ ೧೬೬೫ ಎಂದೇ ಗುರುತಿಸಲಾಗಿದೆ. ಸಿದ್ದಲಿಂಗನ ಕಾವ್ಯ ೩೪ ಸಂಧಿಗಳಲ್ಲಿರುವ 'ಮಳೆಯರಾಜನ ಚರಿತ್ರೆ'. ಮೊದಲಿಗೆ ಭೋಗಲಿಂಗ ಸ್ತುತಿಯ ನಂತರ ಶಿವ ಪರಿವಾರ, ಪುರಾತನರು, ಬಸವಾದಿ ಪ್ರಮಥರು, ತೋಂಟದ ಸಿದ್ಧಲಿಂಗ ಮುಂತಾದ ನೂತನರನ್ನು ಹೊಗಳಿದ್ದಾನೆ. ಸುಮಾರು ೧೭೦೦ರಲ್ಲಿದ್ದ (ಚಿಕ್ಕ)ಬಳ್ಳಾಪುರದ ಕೃಷ್ಣ ಎಂಬಾತ ಭಾಗವತದ ದಶಮಸ್ಕಂದ ಆಧರಿಸಿ 'ಕೃಷ್ಣಕರ್ಣಾಮೃತ' ಎಂಬ ಕಾವ್ಯವನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾನೆ. ದೊರೆತಿರುವ ಕಾವ್ಯ ಅಪೂರ್ಣವಾಗಿದೆ. ಸುಮಾರು ೧೭೨೦ರಲ್ಲಿ ಚಿಕ್ಕಬಳ್ಳಾಪುರದ ಪ್ರಭುವಾಗಿದ್ದ ಬೈಚಭೂಪಾಲನಲ್ಲಿದ್ದ ಅಂತಪ್ಪ ಎಂಬ ಜೈನಕವಿ 'ಅಹಿಂಸಾಕಥೆ' ಎಂಬ ಯಕ್ಷಗಾನವನ್ನು ಬರೆದಿದ್ದಾನೆ. ಧನಕೀರ್ತಿ ಎಂಬಾತನ ಚರಿತೆಯನ್ನು ಒಳಗೊಂಡ ಈ ಕೃತಿಯ ಆರಂಭದಲ್ಲಿ ಸಮಂತಭದ್ರ, ಲಕ್ಷ್ಮೀಸೇನಮುನಿಗಳನ್ನು ಸ್ಮರಿಸಿದ್ದಾನೆ.

ಹದಿನೆಂಟನೆಯ ಶತಮಾನದ ಆರಂಭದಲ್ಲಿ ಕೋಲಾರ ಜಿಲ್ಲೆಯ ಗುಮ್ಮಳಾಪುರದಲ್ಲಿದ್ದ ವೆಂಕಟೇಶ ಎಂಬಾತ 'ಹಾಲಸ್ಯ ಮಹಾತ್ಮ್ಯ' ಎಂಬ ಗ್ರಂಥವನ್ನು ಬರೆದಿದ್ದಾನೆ. ಗುಮ್ಮಳಾಪುರದಲ್ಲಿದ್ದ ತನ್ನ ಪೂರ್ವಿಕರ ಸುಮಾರು ಐನೂರು ವರ್ಷಗಳ ಇತಿಹಾಸ, ಅಲ್ಲಿಯ ಗುರುಪರಂಪರೆ ನೀಡುವ ಈತ ತನ್ನ ಗುರುವಾದ ಯೋಗಿಚಂದ್ರರಲ್ಲಿ ವೇದ, ಆಗಮ, ಶಾಸ್ತ್ರ ಕಾವ್ಯಗಳನ್ನು ಅಧ್ಯಯನ ಮಾಡಿ ನಂತರ ಕಳಲೆ ನಂಜರಾಜನಲ್ಲಿ ಆಶ್ರಿತನಾಗಿ ೧೭೪೦ರಲ್ಲಿ 'ಹಾಲಸ್ಯ ಮಹಾತ್ಮ್ಯೆ' ಬರೆದುದಾಗಿ ತಿಳಿಸಿದ್ದಾನೆ. ಚಂಪೂರೂಪದ ಅಸಮಗ್ರವಾದ ಕೃತಿಬಂಧ ಪ್ರೌಢವಾಗಿದೆಯೆಂದು ಕವಿಚರಿತೆಕಾರರು ಅಭಿಪ್ರಾಯ ಪಡುತ್ತಾರೆ. ಬೈಚಭೂಪಾಲನನ್ನು ಹೆಸರಿಸುವ ಕವಿ ನಂದಿನಾಥ. ನಂದಿಕ್ಷೇತ್ರದ ಪರಿಸರದಲ್ಲಿದ್ದವನು. ಒಂಭತ್ತು ಸ್ಥಲಗಳು, ೧೬೧೦ ಕಂದ, ವೃತ್ತಪದಗಳಿಂದ ಕೂಡಿದ ಈತನ ಕೃತಿ 'ವಲ್ಲೀ ಕಂಠಾಭರಣ' ಯಕ್ಷಗಾನ ರೂಪದಲ್ಲಿದ್ದು ಮುಖ್ಯವಾಗಿ ಷಣ್ಮುಗನ ದಿಗ್ವಿಜಯ 'ವಲ್ಲೀ ಪರಿಣಯ' ವರ್ಣಿತವಾಗಿವೆ. ಈತನ ಕಾಲ ಅಸ್ಪಷ್ಟವಾಗಿದ್ದು, ಕಾವ್ಯದಲ್ಲಿರುವ ಕ್ರೋಧನ ಸಂವತ್ಸರ ಉಲ್ಲೇಖದಿಂದಾಗಿ ಕ್ರಿ.ಶ.೧೭೪೫ ಇರಬಹುದೆಂದು ಕವಿಚರಿತೆಕಾರರು ಹೇಳುತ್ತಾರೆ. ಕೋಲಾರ ತಾಲೂಕಿನ ಕುರಗಲ್ಲು ಗ್ರಾಮದ ಕಾಶೀರಾಮ ೧೭೫೦ರಲ್ಲಿ 'ಮಲ್ಲಿಕಾರ್ಜುನ ಚರಿತೆ' ಎಂಬ ಯಕ್ಷಗಾನ ಕೃತಿ ರಚಿಸಿದ್ದಾನೆ. (ಶ್ರೀ ಗಿರೀಶನ ಚರಿತ್ರೆ, ಮಲ್ಲೇಶ್ವರನ ಚರಿತ್ರೆ ಎಂದೂ ಕರೆಯಲಾಗಿದೆ) ಕೃತಿ ನಟನೆಯ ಉದ್ದೇಶದಿಂದ ಕೂಡಿದೆ ಎಂದು ಜ್ಞಾನಾನಂದ ಅವರು ತಿಳಿಸುತ್ತಾರೆ. ಕೋಲಾರದವನೆಂದು ತಿಳಿದುಬರುವ ಹರಿದಾಸ ಎಂಬಾತ 'ಮೂಲಬಾಲ ರಾಮಾಯಣ' ಹಾಗೂ 'ಸಂಕ್ಷಿಪ್ತ ಭಾಗವತ' ಬರೆದಿದ್ದಾನೆ. ೧೭೫೦ರಲ್ಲಿದ್ದ ಈತನ ಎರಡೂ ಕಾವ್ಯಗಳೂ ಭಾಮಿನಿ ಷಟ್ಪದಿಯಲ್ಲಿದೆ. ಎರಡನೇ ಕಾವ್ಯ ಆತ್ಮಾರಾಮ ಎಂಬಾತ ಬರೆದ ಭಾಗವತವನ್ನು ಕೇವಲ ೫೩ ಪದ್ಯಗಳಲ್ಲಿ ಸಂಗ್ರಹಿಸಿ ಹೇಳಿದ್ದಾನೆ. ಮುಂದಿನ ಮೈಸೂರು ಅರಸರು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದು, ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಯದಲ್ಲಿದ್ದ ಬಾಡಾಲ ಸುಬ್ರಹ್ಮಣ್ಯ ಎಂಬಾತ ಚಿಕ್ಕಬಳ್ಳಾಪುರದವನಾಗಿದ್ದು 'ತಾರಾಶಶಾಂಕ' ನಾಟಕವನ್ನು ೧೮೩೦ರಲ್ಲಿ ರಚಿಸಿದ. ನಾಟಕ ಶೃಂಗಾರರಸ ಪೂರ್ಣವಾಗಿದ್ದು ಯಕ್ಷಗಾನ ಶೈಲಿಯಲ್ಲಿದೆ. ಈತನ ಇನ್ನೊಂದು ಕೃತಿ ಗಜೇಂದ್ರ ಮೋಕ್ಷವೂ ಯಕ್ಷಗಾನವೇ ಆಗಿದೆ.

ಮುಂದಿನ ಹತ್ತೊಂಬತ್ತನೆಯ ಶತಮಾನದ ಅಂತ್ಯದವರೆಗೂ ಸೃಜನಶೀಲವಾಗಿ ಸಾಹಿತ್ಯ ರಚಿಸಿದವರನ್ನು ಹೊಸಗನ್ನಡದ ಉದಯಕಾಲದ ಸಾಹಿತಿಗಳೆಂದು ಕರೆಯಬಹುದು. ಈ ಅವಧಿಯ ಹತ್ತಾರು ಸಾಹಿತಿಗಳು ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಧೋಂಡೋನರಸಿಂಹ ಮುಳಬಾಗಿಲು (೧೮೪೮–೧೯೧೮) ಅವರು ಧಾರವಾಡದ ಟ್ರೈನಿಂಗ್ ಕಾಲೇಜಿನಲ್ಲಿ (ಶಿಕ್ಷಕ ತರಬೇತಿ ಸಂಸ್ಥೆ) ಅಧಿಕವಾದ ಸೇವೆ ಸಲ್ಲಿಸಿದ್ದರಿಂದ ಅವರನ್ನು ಧಾರವಾಡದವರೆಂದು ಪರಿಗಣಿಸಲಾಗಿತ್ತು. (ಧಾರವಾಡ ಜಿಲ್ಲಾ ಗ್ಯಾಸೆಟಿಯರ್, ಪರಿಷ್ಕೃತ ಕನ್ನಡ ಆವೃತ್ತಿ, ೧೯೯೫ ಸಾಹಿತ್ಯ ಮತ್ತು ಸಂಸ್ಕೃತಿ, ಅಧ್ಯಾಯ ೧೪, ಪು.೭೩೦) ಆದರೆ ಕವಿಚರಿತೆಕಾರರಾದ ಆರ್.ನರಸಿಂಹಚಾರ್ಯ (ತೃತೀಯ ಸಂಪುಟ ಪು ೨೨೩) ಹಾಗೂ ರಾ.ಯ. ಧಾರವಾಡಕರ್, (ಹೊಸಗನ್ನಡ ಸಾಹಿತ್ಯದ ಉದಯಕಾಲ ೧೯೭೫, ಪು iii ಗಳಲ್ಲಿ) ಧೋಂಡೊನರಸಿಂಹ ಮುಳಬಾಗಿಲು ಅವರು ಕೋಲಾರ ಜಿಲ್ಲೆಯ ಮುಳಬಾಗಿಲಿನವರೆಂದು ಸ್ಪಷ್ಟಪಡಿಸಿದ್ದಾರೆ. ಶ್ರೀಯುತರು ಸಂಸ್ಕೃತದಿಂದ ಭವಭೂತಿಯ 'ಉತ್ತರ ರಾಮಚರಿತೆ', ಶೂದ್ರಕನ 'ಮೃಚ್ಛಕಟಿಕ', ಭಟ್ಟನಾರಾಯಣನ 'ವೇಣೀಸಂಹಾರ', ಕಾಳಿದಾಸನ 'ಮಾಳವಿಕಾಗ್ನಿ ಮಿತ್ರ'ಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡದ ಅಭ್ಯಾಸಿಗಳ ಅನುಕೂಲತೆಗಾಗಿ 'ಕನ್ನಡ ನುಡಿಗಟ್ಟು', 'ಕನ್ನಡ ಕೈಪಿಡಿ', 'ಛಂದಸ್ಸಾರ', 'ಪದಾರ್ಥಸಾರ' ಎಂಬ ಅಭ್ಯಾಸ ಪೂರ್ಣಗ್ರಂಥಗಳನ್ನು ಬರೆದಿದ್ದಲ್ಲದೆ ರಾಜಶೇಖರ ವಿಲಾಸದ ಏಳನೇ ಸಂಧಿಗೆ ಟೀಕೆ ಹಾಗೂ ಹಿತೋಪದೇಶದ ಅನುವಾದ ಭಾಗಶ: ಮಾಡಿದ್ದರು. ಕನ್ನಡ ಪರವಾದ ಧೋಂಡೋ ಅವರ ಕಾರ್ಯಗಳ ಬಗ್ಗೆ ಅನೇಕರು ಶ್ಲಾಘಿಸಿ ಬರೆದಿದ್ದಾರೆ. ಕೃಷ್ಣಾರ್ಯ ಎಂಬುವವರು 'ಮುಳಬಾಗಲವರ ಚರಿತ್ರ ಶತಕ'ವನ್ನು ೧೯೧೮ರಲ್ಲಿ ಪದ್ಯ ರೂಪದಲ್ಲಿ ಬರೆದಿದ್ದಾರೆ. ಇನ್ನುಳಿದಂತೆ ಹತ್ತೊಂಬತ್ತನೇ ಶತಮಾನದ ಅಂತ್ಯದ ಕವಿಗಳಲ್ಲಿ ಮಾಲೂರಿನ ಎಂ.ಶ್ರೀನಿವಾಸಯ್ಯಂಗಾರ್ ತೆಲುಗಿನ ಬೊಮ್ಮೆರ ಪೋತನಮಾತ್ಯಾನ ರುಕ್ಮಿಣಿ ಕಲ್ಯಾಣವನ್ನು ಕನ್ನಡಕ್ಕೆ 'ರುಕ್ಮಿಣಿ ಪರಿಣಯ' ಎಂಬ ಹೆಸರಿನಲ್ಲಿ ಚಂಪೂ ಶೈಲಿಯಲ್ಲಿ ಅನುವಾದಿಸಿದ್ದಾರೆ. ಇದೇ ಮಾಲೂರಿನ ಅರಸಿನಗುಂಟೆಯ ವೀರಪ್ಪಾರಾಧ್ಯ ಶರಷಟ್ಪದಿಯಲ್ಲಿ 'ಅಟವೀಶ ಭಜನಾಮೃತ' ರಚಿಸಿದ್ದಾರೆ. ಗೌರಿಬಿದನೂರಿನ ಇಡಗೂರು ಗ್ರಾಮದ ರುದ್ರಕವಿ ಕನ್ನಡದಲ್ಲಿ ಶಿವನಾಟಕ, ಮಾರ್ಕಂಡೇಯ ವಿಜಯ, ಹೊನ್ನಾವರದ ಹೊನ್ನೇಗೌಡ ವಂಶಾವಳಿ ದ್ವಿಪದಿ ಬರೆದಿದ್ದು ಮೈಸೂರು ಆಸ್ಥಾನದಲ್ಲಿ ಗೌರವಗಳಿಸಿದ್ದರು. ಶ್ರೀನಿವಾಸಪುರದ ಲೋಕನಾಥ ಕವಿಯ ಲಭ್ಯವಿರುವ ಯಕ್ಷಗಾನ ಕೃತಿ ಧ್ರುವ ಚರಿತ್ರೆಯೂ ಸೇರಿದಂತೆ ದಶಕುಮಾರ ಚರಿತ್ರೆ ರಚಿಸಿದ್ದಾರೆ. ಮಾಲೂರಿನ ಹೇಮರೆಡ್ಡಿ ಎಂಬಾತ 'ಪ್ರಹ್ಲಾದ ಚರಿತ್ರೆ' ಬರೆದಿರುವುದಾಗಿ ತಿಳಿದುಬರುತ್ತದೆ. ಬಾಗೇಪಲ್ಲಿಯ ಸೋಮನಹಳ್ಳಿಯ ವೇದಾಂತಂ ರಾಘವಾಚಾರ್ಯಸ್ವಾಮಿ ಅವರು ಮುಮ್ಮಡಿ ಕೃಷ್ಣರಾಜಒಡೆಯರ ಆಸ್ಥಾನದಲ್ಲಿದ್ದು

ಶಾಲ್ಯದ ಕೃಷ್ಣರಾಜನ ನಿಜದೀಪಿಕಾರತ್ನದ ಐದನೇ ಪಟಲದ 'ಪಂಚವಿಂಶಧಿ ಪದ್ಧತಿ'ಗೆ ವ್ಯಾಖ್ಯೆ ರಚಿಸಿದ್ದಾರೆ. ತಮ್ಮನ್ನು ಸಂಸ್ಕೃತ, ಆಂಧ್ರ, ಕರ್ನಾಟಕ ಕವಿತಾ ವಿಶಾರದ ಎಂದು ಕರೆದುಕೊಂಡಿದ್ದು ಮೇಲಿನ ಗ್ರಂಥ ೧೮೩೧ರಲ್ಲಿ ರಚನೆ ಮಾಡಿದ್ದಾಗಿ ಹೇಳಿಕೊಂಡಿದ್ದಾರೆ. ಶ್ರೀನಿವಾಸಪುರ ತಾಲೂಕಿನ ಭೈರಗಾನಪಲ್ಲಿಯ ಸಾತವಲ್ಲಿ ಚಂದ್ರಶೇಖರ ಶಾಸ್ತ್ರಿಗಳು (೧೮೯೦) ಮಂದಾರವಲ್ಲಿ ಪರಿಣಯ, ದ್ರೌಪತೀ ವಸ್ತ್ರಾಪಹರಣಗಳಲ್ಲದೆ ಅಲ್ಲಸಾನಿ ಪೆದ್ದನನ ಮನುಚರಿತ್ರೆಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

## ಸಂಸ್ಕೃತ ಸಾಹಿತ್ಯ

ಸಂಸ್ಕೃತದಲ್ಲಿ ಸಾಹಿತ್ಯ ರಚಿಸಿದ ಜಿಲ್ಲೆಯ ಕೆಲವು ಮಹನೀಯರನ್ನು ಉಲ್ಲೇಖಿಸಬಹುದು. ವಿಜಯನಗರದ ವೀರಕಂಪನರಾಯನ ಮಡದಿ ಗಂಗಾದೇವಿ ಮುಳಬಾಗಿಲಿನವಳಾಗಿದ್ದು 'ಮಧುರಾವಿಜಯ' ರಚಿಸಿದ್ದಾಳೆ. ಮುಮ್ಮಡಿ ತಮ್ಮ ಭೂಪಾಲ (೧೬೧೪–೧೬೯೦) ಸಂಸ್ಕೃತದಲ್ಲಿ ಕೌಮುದೀ ವ್ಯಾಖ್ಯಾನ, ರಸಿಕ ಮನೋರಂಜನ ಬರೆದಿದ್ದಾನೆ. ವೇದಾಂತ ರಂಗಾಚಾರ್ಯರು 'ಭಜಯತಿರಾಜಂ' ರಚಿಸಿದ್ದಾರೆ. ಗೌರಿಬಿದನೂರಿನ ಎಂ.ರಾಮರಾವ್ (೧೮೮೧–೧೯೪೬) ನಾಲ್ವಡಿಯವರ ಖಾಸಾ ಸಿಬ್ಬಂದಿಯಾಗಿದ್ದಲ್ಲದೆ ಸಂಸ್ಕೃತ ವಿದ್ವಾಂಸರೂ ಆಗಿದ್ದು ಋಗ್ವೇದದ ಕೆಲವು ಭಾಗಗಳನ್ನು ಮೂಲಾರ್ಥ ತಾತ್ಪರ್ಯಗಳೊಂದಿಗೆ ಅನುವಾದಿಸಿದ್ದು ಈಚೆಗೆ ಪ್ರಕಟವಾಗಿದೆ. ಉಳಿದಂತೆ ಚಿಕ್ಕಬಳ್ಳಾಪುರದ ಮಂಡಿಕಲ್ ಗ್ರಾಮದ ರಾಮಾಶಾಸ್ತ್ರಿ ವರದಾಚಾರ್ಯ ಹಾಗೂ ಶ್ರೀರಂಗಾಚಾರ್ಯರುಗಳು ೧೯ನೇ ಶತಮಾನದ ಸಂಸ್ಕೃತ ಸಾಹಿತ್ಯ ರಚನೆಯಲ್ಲಿ ಖ್ಯಾತಿ ಗಳಿಸಿದವರು. ಇವರಲ್ಲಿ ಮಂಡಿಕಲ್ ರಾಮಾಶಾಸ್ತ್ರಿಗಳು (೧೮೪೯–೧೯೨೯) ಉತ್ತರಭಾರತದಲ್ಲಿ ಹಾಗೂ ಸ್ವಂತ ಗ್ರಾಮದಲ್ಲಿ ಹೆಚ್ಚಿನ ಸಂಸ್ಕೃತಾಧ್ಯಯನ ನಡೆಸಿ ಮರಳಿ ಮೈಸೂರಿಗೆ, ರಾಜಾಶ್ರಯಕ್ಕೆ ಬಂದು ಅಲ್ಲಿಯ ಸಂಸ್ಕೃತ ಪಾಠಶಾಲೆಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ, ಕೌಟಿಲ್ಯನ ಅರ್ಥಶಾಸ್ತ್ರ ಬೆಳಕಿಗೆ ತಂದ ಆರ್.ರಾಮಾಶಾಸ್ತ್ರಿ ಅವರೂ ಸೇರಿದಂತೆ ಅನೇಕ ವಿದ್ವಾಂಸರನ್ನು ರೂಪಿಸಿದವರು. ಇವರ ಉಳಿದು ಬಂದಿರುವ ಕೃತಿಗಳಲ್ಲಿ ಆರ್ಯಧರ್ಮ ಪ್ರಕಾಶಿಕೆ (೧೮೯೦) ಹೊಸಕಾಲ ಧರ್ಮಕ್ಕೆ ಅನುಗುಣವಾದ ಧರ್ಮಾಚರಣೆಗೆ ಸಂಬಂಧಿಸಿದೆ. ೧೯೧೨ರಲ್ಲಿ ರಚಿತವಾದ 'ಭಗವತ್ ಪ್ರಾರ್ಥನಾ' ಮತಬೋಧೆಗೆ ಸಂಬಂಧಿಸಿದ್ದಾದರೆ 'ಕಥಾ ಸಪ್ತತಿ' ಮಕ್ಕಳ ಸಲುವಾಗಿ ರಚಿಸಿದ ನೀತಿ ಕಥೆಗಳು. ನಳದಮಯಂತಿಯರ ದಿವ್ಯ ಚರಿತೆಯಾದ 'ಭೈಮೀ ಪರಿಣಯ' ೧೯೧೪ರಲ್ಲಿ ಮುದ್ರಿತವಾದ ಬೃಹತ್ ಗ್ರಂಥ. ಶೃಂಗೇರಿಯಲ್ಲಿ ೧೯೧೭ರಲ್ಲಿ ನಡೆದ ಕುಂಬಾಭಿಷೇಕ ಕುರಿತ ಚಂಪು ಕಾವ್ಯ ಸಮಕಾಲೀನ ಪ್ರಸಂಗವೊಂದರ ದಾಖಲೆಯಾಗಿದೆ. ರಾಮಾಶಾಸ್ತ್ರಿಗಳಿಗೆ ಹೆಸರು ತಂದಿದ್ದು ೧೯೨೩ರಲ್ಲಿ ಪ್ರಕಾಶಿತವಾದ 'ಪ್ರತಿ ಮೇಘ ಸಂದೇಶ' ಮಹಾಕಾವ್ಯದಿಂದ. ಇದು ಕಾಳಿದಾಸ ಮೇಘಸಂದೇಶ ಅನುಸರಿಸಿ, ಮೇಘವು ಯಕ್ಷಿಗೆ ಸಂದೇಶವನ್ನು ನೀಡಿ ಮತ್ತೆ ಯಕ್ಷಿ ನೀಡಿದ ಉತ್ತರವನ್ನು ತಂದು ಯಕ್ಷನ ಶಾಪದ ಅವಧಿ ಕಡಿಮೆ ಮಾಡಿದಂತೆ ವಿನೂತನ ರೀತಿಯಲ್ಲಿ ರಚಿತವಾಗಿರುವಂತಹದು. ಇದರ ಇಂಗ್ಲೀಷ್ ಅನುವಾದ ೨೦೦೦ದ ಇಸವಿಯಲ್ಲಿ ಪ್ರಕಟವಾಯಿತು. ರಾಮಾಶಾಸ್ತ್ರಿ ಅವರಿಗೆ ಕವಿರತ್ನ, ಕವಿಶಿರೋಮಣಿ, ಕವಿಕುಲಾವತಂಸ, ಸರಸರಕವಿ ಕುಲ ಕಂಠೀರವ ಇತ್ಯಾದಿ ಬಿರುದುಗಳು ದೊರೆಕಿತ್ತು.

ಗೌರಿಬಿದನೂರಿನ ಗುಂಡ್ಲಹಳ್ಳಿಯ ಎಂ.ಜಿ. ನಂಜುಡಾರಾಧ್ಯರು ಮೈಸೂರಿನಲ್ಲಿ ಹೆಚ್ಚಿನ ಸಂಸ್ಕೃತಾಭ್ಯಾಸ ನಡೆಸಿ ಅಲ್ಲಿಯ ಹಾಗೂ ಬೆಂಗಳೂರಿನ ಸಂಸ್ಕೃತ ಕಾಲೇಜುಗಳಲ್ಲಿ ಹಾಗೂ ವಿದ್ಯಾಇಲಾಖೆಯಲ್ಲಿ ಸೇವೆ ಸಲ್ಲಿಸಿ ವಿದ್ವತ್ ಮತ್ತು ಸಂಸ್ಕೃತ ಶಿಕ್ಷಣಕ್ಷೇತ್ರದಲ್ಲಿ ಹೆಸರು ಮಾಡಿದವರು. ಆರಾಧ್ಯರು ಕನ್ನಡ ವ್ಯಾಖ್ಯಾನದೊಂದಿಗೆ ಕೆಲವು ಉಪನಿಷತ್‌ಗಳನ್ನು ವೀರಶೈವ ಸದಾಚಾರ, ರೇಣುಕ ಗೀತಾಭಾಷ್ಯ, ಬ್ರಹ್ಮಸೂತ್ರ ಶಾಂಕರೀ ವೃತ್ತಿ ಇತ್ಯಾದಿಗಳನ್ನು ರಚಿಸಿದ್ದಾರೆ. ಸಂಸ್ಕೃತದಲ್ಲಿ ಶೈವದರ್ಶನೇ ಪ್ರಸ್ಥಾನ ಬೇಧಃ, ಅಪಶೂದ್ರಾಧಿಕರಣಮ್ ಅಧಿಕೃತ್ಯ, ಆಗಮ ಸಂಸ್ಕೃತಿ, ಶೈವಾದ್ವೈತ ಪ್ರತಿಭೋಧ, ಶಕ್ತಿವಿಶಿಷ್ಠಾದ್ವೈತ ದರ್ಶನಂ, ಸಂಸ್ಕೃತ ಸ್ಥವನ ಮಂಜರಿ, ಸ್ತೋತ್ರಮಂಜರಿಗಳಲ್ಲದೆ ಶ್ರೀಶೈಲ ಪಂಡಿತಾರಾಧ್ಯ, ಮಾದೇಶ್ವರ, ಕೂಡಲಸಂಗಮರನ್ನು ಕುರಿತ ಸುಪ್ರಭಾತಗಳು ರಚಿಸಿದ್ದು ಬಸವಣ್ಣ, ಆಕ್ಕಮಹಾದೇವಿ, ಮಾದರ ಚನ್ನಯ್ಯ, ದೇವರ ದಾಸಿಮಯ್ಯ ಮೊದಲಾದವರ ವಚನಗಳನ್ನು ಸಂಸ್ಕೃತಕ್ಕೆ ಅನುವಾದಿಸಿದ್ದಾರೆ. ವೈದಿಕ ಆಗಮಿಕ ಕುರಿತ ಹಾಗೂ ಶಾಲಾ ಪಠ್ಯಪುಸ್ತಕಗಳನ್ನು ಪ್ರಕಟಿಸಿದ್ದ ಶ್ರೀಯುತರು ಪ್ರಬೋಧ ಪುಸ್ತಕಮಾಲೆಯನ್ನು ಸ್ಥಾಪಿಸಿದ್ದರು. 'ಶರಣಸಾಹಿತ್ಯ' ಪತ್ರಿಕೆಯ ಉಪಸಂಪಾದಕರಾಗಿದ್ದರು. ಆರಾಧ್ಯರಿಗೆ ಶಿವಾದ್ವೈತ ವಿದ್ಯಾಭೂಷಣ, ಸಾಹಿತ್ಯರತ್ನ ವ್ಯಾಖ್ಯಾನ ವಿಚಕ್ಷಣ. ಸಾಹಿತ್ಯ ವಿಶಾರದ ಶಿವತತ್ವಚಿಂತಾರತ್ನ ಬಿರುದುಗಳೂ ಮೈಸೂರು ಅರಮನೆಯ ಆಸ್ಥಾನ ವಿದ್ವಾನ್ ಗೌರವವೂ ದೊರೆತಿತ್ತಲ್ಲದೆ, ಮಠ, ಮಾನ್ಯಗಳು ಸನ್ಮಾನಿಸಿ ಗೌರವಿಸಿದ್ದವು. ಇವರ ಹಲವಾರು ಗ್ರಂಥಗಳಿಗೆ ವಿವಿಧ ಬಹುಮಾನಗಳು ಬಂದಿದ್ದವು.

ಉಳಿದಂತೆ ಮಂಡಿಕಲ್ ವರದಾಚಾರ್ಯರು ಸಾವಿತ್ರೀ ಪರಿಣಯ, ಘೋಷಗಿರಿ, ಶತಕ, ಆಂಜನೇಯ ದಂಡಕಗಳನ್ನು, ವೇದಾಂತಂ ರಂಗಾಚಾರ್ 'ಭಜಯತಿ ಸ್ತೋತ್ರ'ವನ್ನೂ, ಕಂದಾಳಂ ವೆಂಕಟಾಚಾರ್ ಅವರು 'ರಮಾದಂಡಕಂ', ಬಂಡೇನಹಳ್ಳಿಯ ವಿ. ಲಕ್ಷ್ಮೀಪತಿ ಶಾಸ್ತ್ರಿ ಅವರು ಕಾಳಿದಾಸನ ಶಾಕುಂತಲ ನಾಟಕವನ್ನು ವೇದಾಂತದ ದೃಷ್ಟಿಯಿಂದ ರಚಿಸಿದ ವ್ಯಾಖ್ಯಾನ, ಚಿಕ್ಕಬಳ್ಳಾಪುರದ ಎ. ಕೇಶವಯ್ಯರವರು 'ಪರಾಶರ ಸ್ಮೃತಿ ವ್ಯಾಖ್ಯಾನ'ವನ್ನೂ ಹೊಸಹುಡ್ಯದ ನಾಗೇಶಾಚಾರ್ಯರು 'ವೃತ್ತದೀಪಮಾಲ', 'ಕೇಶವ ಪಂಚವಿಂಶತಿ', 'ಕೇಶವಾಷ್ಟಕ'ಗಳನ್ನು, ವೆಂಕಟರಮಣಯ್ಯರವರು 'ಜೀವಸಂಜೀವಿನಿ ನಾಟಕ' 'ವಿಜ್ಞಾನ ಸಾರಸಮುಚ್ಚಯ'ವನ್ನು ಬರೆದಿದ್ದಾರೆ. ವೇಮಗಲ್ ಸುಬ್ಬಾಶಾಸ್ತ್ರಿಗಳು ತೆಲುಗು ಸಂಸ್ಕೃತಗಳಲ್ಲಿ ಕೃತಿರಚನೆ ಮಾಡಿದ್ದಾರೆ. ಚಿಕ್ಕಬಳ್ಳಾಪುರದ ರಾಜಗೋಪಾಲಾಚಾರ್ಯ ಹಾಗೂ ಪಡತಲ ಗಂಗಾಧರಶಾಸ್ತ್ರಿಗಳು ಸಂಸ್ಕೃತದಲ್ಲಿ ಗ್ರಂಥ ರಚಿಸಿದ್ದಾರೆ.

ಶಿಡ್ಲಘಟ್ಟ ತಾಲೂಕಿನ ಮತ್ತೂರು ಗ್ರಾಮದ ನರಹರಿಶಾಸ್ತ್ರಿಗಳು ಹಾಗೂ ಅವರ ಮಗ ಪುರುಷೋತ್ತಮ ಶಾಸ್ತ್ರಿಗಳು ಸಂಸ್ಕೃತ ಪಂಡಿತರಾಗಿ ಆಸ್ಥಾನ ವಿದ್ವಾಂಸರಾಗಿದ್ದವರು. ಇವರ ಮಗ ಖ್ಯಾತ ಶಿಕ್ಷಣತಜ್ಞ ಹಾಗೂ ಬೆಂಗಳೂರಿನ ಮಲ್ಲೇಶ್ವರದಲ್ಲಿ ಎಂ.ಇ.ಎಸ್. ವಿದ್ಯಾಸಂಸ್ಥೆಯ ಸ್ಥಾಪನಾಕಾರ್ಯದರ್ಶಿಯೂ ಆಗಿದ್ದ ಎಂ.ಪಿ.ಎಲ್.ಶಾಸ್ತ್ರಿ (೧೯೧೨–೨೦೦೨) ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಪಡೆದಿದ್ದು ಇವರು ರಚಿಸಿದ 'ಸುಭಾಷಿತ ಸಂಗ್ರಹಗಳು', 'ಸಂಸ್ಕೃತ ನಾಟಕಗಳು' ಹಾಗೂ ಅನೇಕ ಲೇಖನಗಳು ಪ್ರಕಟವಾಗಿವೆ. ಶಾಸ್ತ್ರಿಗಳು ಪಠ್ಯಪುಸ್ತಕ ರಚನೆಯನ್ನು ಮಾಡಿದ್ದಾರೆ. ನಾಗೇಶಾಚಾರ್ಯ, ಪುರುಷೋತ್ತಮ ಶಾಸ್ತ್ರಿ ಮೊದಲಾದವರು ಸಂಸ್ಕೃತದಲ್ಲಿ ಕಾವ್ಯ, ವ್ಯಾಖ್ಯಾನ, ಪ್ರಬಂಧ, ಸುಭಾಷಿತ, ನಾಟಕಗಳನ್ನು ರಚಿಸಿದ್ದಾರೆ. ಕ್ಯಾಲನೂರು ಗ್ರಾಮದ ಲಕ್ಷ್ಮೀನಾರಾಯಣ ಶಾಸ್ತ್ರಿಗಳು ಸಂಸ್ಕೃತ ವಿದ್ವಾಂಸರಿದ್ದು ಚಿಕ್ಕಬಳ್ಳಾಪುರದಲ್ಲಿ ಒಂದು ವೇದ ಪಾಠಶಾಲೆ ಆರಂಭಿಸಿ (೧೯೨೮–೪೨) ಜಿಲ್ಲೆ ಹಾಗೂ ಹೊರ ಜಿಲ್ಲೆಯ ಅನೇಕ ವಿದ್ವಾಂಸರನ್ನು ರೂಪಿಸಿದವರು.

**ತೆಲುಗು ಸಾಹಿತ್ಯ**

ಕೋಲಾರದ ಪೂರ್ವದ ಗಡಿ ಪ್ರದೇಶ ಕರ್ನಾಟಕಾಂಧ್ರ ಪ್ರದೇಶವೆಂದು ವಿಜಯನಗರಕಾಲದಲ್ಲಿ ಗುರುತಿಸಲಾಗಿದ್ದು ಇಂದಿಗೂ ಈ ಪ್ರದೇಶದಲ್ಲಿ ಕನ್ನಡ ತೆಲುಗು ಸಮಸಮವಾಗಿಯೇ ಇವೆ. ಕೆಲವು ಕವಿಗಳು ಉಭಯ ಭಾಷೆಗಳಲ್ಲಿ ಕಾವ್ಯ ರಚನೆ ಮಾಡಿದ್ದು ಬಹುತೇಕ ಕವಿಗಳು ತೆಲುಗಿನಲ್ಲಿ ಮಾತ್ರ ರಚಿಸಿದ್ದಾರೆ. ವಿಜಯನಗರದ ಪ್ರೌಢದೇವರಾಯನ ಆಸ್ಥಾನದಲ್ಲಿದ್ದ ಮುಮ್ಮನ (೧೪೦೦ ಕ್ರಿ.ಶ.) ಕೋಲಾರದ ವೀಪೂರು (ಇಂದಿನ ಈರಾಪುರ)ದವನಾಗಿದ್ದು ಅನ್ಯತ್ರ ಆಧಾರಗಳಿಂದ ಈತನನ್ನು ಕವಿ ಎಂದು ಪರಿಗಣಿಸಲಾಗಿದೆ. ಈತ ರಚಿಸಿದ ಕೃತಿಗಳು ಯಾವುವೂ ಲಭ್ಯವಿಲ್ಲ. ತೆಲುಗು ಕವಿ ಶ್ರೀನಾಥನ ಬರಹಗಳಿಂದಾಗಿ ಮುಮ್ಮನನ ನೆರವು, ಪಾಂಡಿತ್ಯ ಪ್ರಕಾಶಕ್ಕೆ ಬರುವಂತಾಯಿತು. ಇಬ್ಬರು ಕವಿಗಳು ಒಟ್ಟುಗೂಡಿ ಒಂದೇ ಕಾವ್ಯ ರಚಿಸುವ ಪರಂಪರೆ ತೆಲುಗಿನಲ್ಲಿ ಹಿಂದಿನಿಂದಲೇ ನಡೆದು ಬಂದಿದ್ದು, ನಂದಿಗ್ರಾಮದ ನಂದಿಮಲ್ಲಯ್ಯ ಹಾಗೂ ಆತನ ಸೋದರಳಿಯ ಘಂಟಿಸಿಂಗನ್ನರು ಈ ಪರಂಪರೆಯವರೇ ಆಗಿದ್ದಾರೆ. ಇವರು ಮೊದಲಿಗೆ ಸುಮಾರು ೧೪೮೦ರಲ್ಲಿ ಗಜಪತಿಯ ಸಾಮಂತ ಪೂಸಪಾಟಿ ಬಸವರಾಜನ ಬಳಿಯಿದ್ದು "ಪ್ರಬೋಧ ಚಂದ್ರೋದಯಂ" ಎಂಬ ತೆಲುಗು ನಾಟಕವನ್ನು ಮೂಲ ಸಂಸ್ಕೃತ ನಾಟಕ ಅನುಸರಿಸಿ ರಚಿಸಿದ್ದಾರೆ. ನಂತರ ಉತ್ತರ ಆರ್ಕಾಟ್‌ನ ತುಳುವ ನರಸನಾಯಕನ ಆಸ್ಥಾನ ಸೇರಿ ೧೨ ಆಶ್ವಾಸಗಳ, ೧೭೭೯ ಗದ್ಯ–ಪದ್ಯಗಳುಳ್ಳ 'ವರಾಹ ಪುರಾಣ' ವನ್ನೂ ಭಾಗವತದ ಆರನೇ ಸ್ಕಂದವನ್ನು ತೆಲುಗಿನಲ್ಲಿ ಬರೆದಿದ್ದಾರೆ. ಘಂಟಿಸಿಂಗನ್ನನ ಇನ್ನೊಬ್ಬ ಬಂಧು ನಂದಿತಿಮ್ಮನ. ಮುಕ್ಕುತಿಮ್ಮನ ಎಂದೂ ಕರೆಯುವ ಈತ ವಿಜಯನಗರದ ಕೃಷ್ಣದೇವರಾಯನ ಆಸ್ಥಾನದ ಅಷ್ಟದಿಗ್ಗಜಗಳಲ್ಲಿ ಒಬ್ಬನಾಗಿದ್ದ. ಈತ ಸಹ ಕೋಲಾರ ಜಿಲ್ಲೆಯ ನಂದಿಯವನಾಗಿದ್ದು ೧೫೧೯ರಲ್ಲಿ ರಚಿಸಿದ 'ಪಾರಿಜಾತಾಪಹರಣಂ' ಕೃತಿ ಲಭ್ಯವಿದೆ. ಈತನ ಇನ್ನೊಂದು ಕೃತಿ 'ವಾಣೀವಿಲಾಸಂ' ಇನ್ನೂ ಅಲಭ್ಯವಾಗಿದೆ. ವಿಶ್ವ ಬ್ರಾಹ್ಮಣರ ಗಾಯಿತ್ರಿಪೀಠ ಪರಂಪರೆಯ ವೀಪೂರಿ ವೆಂಕಟಾಚಾರ್ಯ ಕವಿ ಮುಮ್ಮನನ ವಂಶಸ್ಥನಾಗಿದ್ದು ೧೫೫೦ರಲ್ಲಿ 'ಆಂಧ್ರ ವಿಶ್ವಕರ್ಮ ಪುರಾಣಂ' ರಚಿಸಿದ್ದಾನೆ. ಹಲವಾರು ಗ್ರಂಥಗಳನ್ನಾಧರಿಸಿ ಚಂಪೂ ಶೈಲಿಯಲ್ಲಿ ಹತ್ತು ಅಧ್ಯಾಯಗಳಲ್ಲಿರುವ ಈ ಗ್ರಂಥ ತೆಲುಗಿನಲ್ಲಿ ಹಲವಾರು ಬಾರಿ ಮುದ್ರಣ ಕಂಡು ಅಲ್ಲಿಯ ಪ್ರೌಢ ಕಾವ್ಯವೆಂದೆನಿಸಿದೆ. ವಿಶ್ವಕರ್ಮ ಪುರಾಣದ ಸೂರ್ಯವಿವಾಹದ ಆಶ್ವಾಸವನ್ನು ರಾಮನಾಥಪುರದ ನಂಜಾಚಾರ್ಯರು 'ತ್ರಿಮೂರ್ತ್ಯಾತ್ಮಕ ಚರಿತ್ರೆ–ಸೂರ್ಯವಿವಾಹ' ಎಂಬ ಹೆಸರಿನಲ್ಲಿ ೧೮೫೦ರಲ್ಲಿ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಾರೆ.

ಮುಮ್ಮಡಿ ತಮ್ಮ ಭೂಪಾಲ (೧೬೧೪–೯೦) ರಾಜೇಂದ್ರಚೋಳ ಚರಿತ್ರೆ, ಕಿರಾತಾರ್ಜುನೀಯಂ ಹಾಗೂ ಸೌಂದರೇಶ ಚರಿತ್ರೆಗಳನ್ನು ತನ್ನ ಚಿಕ್ಕ ವಯೋಮಾನದಲ್ಲೇ ಬರೆದನೆಂದು ತಿಳಿದು ಬರುತ್ತದೆಯಾದರೂ ಈ ಎಲ್ಲ ಕೃತಿಗಳೂ ಕಾಲಾಘಾತದಿಂದಾಗಿ ಕಣ್ಮರೆಯಾಗಿ ಬಿಟ್ಟಿವೆ. ತಾಡಿಗೊಳ್ಳ ಕದರಿಪತಿ, ಶ್ರೀನಿವಾಸಪುರದ ತಾಡಿಗೊಳ್ಳು ಪಾಳೆಪಟ್ಟಿನ ಆಡಳಿತಗಾರನಾಗಿದ್ದು ೧೬೪೮ರಲ್ಲಿ 'ಶುಕ ಸಪ್ತತಿ' ಎಂಬ ಹಾಸ್ಯ, ಶೃಂಗಾರ ಪೂರಿತ ಕಾವ್ಯ ರಚಿಸಿದ್ದು, ಇದು ಪ್ರಭಾವತಿ ಎಂಬ ವಿರಹಿಣಿ ಶೀಲ ತಪ್ಪದಂತೆ ಇರಲು ಎಪ್ಪತ್ತು ರಾತ್ರಿಗಳಲ್ಲಿ ಹೇಳಿದ ಮೂವತ್ತು ಕಥೆಗಳ ಗೊಂಚಲಾಗಿದೆ. ಈ ಕೃತಿ 'ತೋತಿನಾಮ' ಎಂಬ ಹೆಸರಿನಿಂದ ಪರ್ಷಿಯನ್ ಹಾಗೂ ಅದರಿಂದ ಉರ್ದು ಭಾಷೆಗಳಿಗೆ ಅನುವಾದಗೊಂಡಿರುವುದಾಗಿ ತೆಲುಗು ವಿಶ್ವಕೋಶ ತಿಳಿಸುತ್ತದೆ. ಕನ್ನಡದಲ್ಲಿಯೂ ಕೃತಿ ರಚಿಸಿರುವನೆಂದು ತಿಳಿಯಲಾದ ಮುಳಬಾಗಿಲಿನ ಆಲಂಗೂರು ಗ್ರಾಮದ ಬಚ್ಚಾಲಿ ಗೋಪಾಲಯ್ಯ (೧೬೬೦) ರಂಗನಾಯಕಾಂಕಿತ ತಾರಾವಳಿ, ಮಂಗದುಷ್ಟಾಂಸುಲಾ ವಿಲಾಸಂ, ಮಧುರ ಮಂಗಾ ಪುಂಶ್ಚಲೀ ವಿಲಾಸ, ಹನುಮದ್ವಿನ್ನಪಂ ಇತ್ಯಾದಿ ಬರೆದಿದ್ದು ಅವುಗಳಲ್ಲಿ ವಿಪರೀತ ಶೃಂಗಾರವಿದೆಯೆಂದು ವಿದ್ವಾಂಸರ ಅಭಿಪ್ರಾಯ. ೧೭೦೦ರ ಸುಮಾರಿನಲ್ಲಿ ಮುಳಬಾಗಿಲಿನ (ಭೈರಾಪುರ) ಅರಸರು ಅದೇ ತಾಲೂಕಿನ ಕೋಡೂರಿ ವೆಂಕಟಾಚಲಂನನ್ನು ಆಹ್ವಾನಿಸಿ 'ಶಿವರಹಸ್ಯ ಖಂಡ'ವನ್ನು ತೆಲುಗಿನಲ್ಲಿ ಬರೆಯಲು ಪ್ರೋತ್ಸಾಹಿಸಿದರು. ಈತನಿಗೆ ಬಾಲ ಸರಸ್ವತಿ ಎಂಬ ಬಿರುದಿತ್ತು. ಇದೇ ಕಾಲದಲ್ಲಿ ಸುಗಟೂರಿನ ಆಸ್ಥಾನದಲ್ಲಿದ್ದ ಬದ್ದವೀಟಿದತ್ತಯ್ಯ ಹನ್ನೊಂದು ಭಾಗ (ಸೂತ್ರ)ಗಳುಳ್ಳ 'ಗಣಿತ ದೀಪಿಕ'ವನ್ನು ಬರೆದಿದ್ದಾನೆ. ಗೌರಿಬಿದನೂರು ಇಡಗೂರಿನ ರುದ್ರಕವಿ ಗುಬ್ಬಿಯ ಮಲ್ಲಣಾರ್ಯರಲ್ಲಿ ಅಭ್ಯಸಿಸಿ, ಪಾಲ್ಕುರಿಕೆ ಸೋಮನಾಥನ 'ಅಕ್ಷರಾಂಕನ ಗದ್ಯ'ಕ್ಕೆ ಟೀಕೆ ಬರೆದು ಗುರುವಿಗೆ ಅರ್ಪಿಸಿ ಮರಳಿ ಇಡಗೂರಿಗೆ ಬಂದು ನಾಟಕ ತಂಡ ಕಟ್ಟಿ, ಕನ್ನಡ ತೆಲುಗು ನಾಟಕಗಳನ್ನು ಪ್ರದರ್ಶಿಸಿದ. 'ಆಂಧ್ರ ಯಕ್ಷಗಾನ ಮಾರ್ಕಂಡ ಚರಿತಂ' ೧೮೫೧ರಲ್ಲಿ ಬರೆದ ಒಂದು ನಾಟಕ ಕೃತಿ. ಉಳಿದಂತೆ ವೆಂಕಟೇಶ ಮಹಾತ್ಮ್ಯಮು, ಮೀನಾಕ್ಷಿ ಕಲ್ಯಾಣಮು, ವಿರೂಪಾಕ್ಷ ಮಹಾತ್ಮ್ಯಮು, ಮುರುಡಪ್ಪ ಶತಕಮು, ಆಶೀರ್ವಾದ ಶತಕಮು, ಭಟ್ಟುಮೂರ್ತಿ ಪ್ರಶಂಸ, ಮುಮ್ಮಡಿ ಕೃಷ್ಣಾರಾಜ ಪ್ರಶಂಸ, ವಿರಾಸಂ ಮೊದಲಿಯಾರ್ಯ ನವರತ್ನ ಮಾಲಿಕ ಇತ್ಯಾದಿ ತೆಲುಗು ಕೃತಿಗಳನ್ನು ರಚಿಸಿ ಪ್ರಶಂಸೆಗಳಿಸಿದ್ದ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಂದ 'ಕರ್ನಾಟಕಾಂಧ್ರೋಭಯ ಭಾಷಾ ಕವಿತಾ ವಿಶಾರದ' ಎಂಬ ಬಿರುದು ದೊರೆಕಿತ್ತು.

ಸುಗಟೂರಿನವರಾದರೂ ರಾಜಾಶ್ರಯವಿಲ್ಲದ ಪಿನ್ನ ಬಯಲಾಚಾರ್ಯರು ಕೋಳೂರು ಕೊಡಗೂಸು ಕಾವ್ಯ ಆಧರಿಸಿ 'ಗೊಡಗೂಚಿ ಚರಿತ್ರೆ' ಎಂಬ ಯಕ್ಷಗಾನ ರಚಿಸಿದ್ದಾನೆ. (ಕೊಡಗೂಸು ಶಿವನಿಗೆ ಹಾಲು ಕುಡಿಸುವ ಸಂದರ್ಭದಲ್ಲಿ ಕವಿ ಕನ್ನಡ, ತೆಲುಗು, ತಮಿಳು, ಉರ್ದು, ಮಿಶ್ರಿತ ಭಾಷೆಯಲ್ಲಿ ಪದ್ಯ ರಚಿಸಿದ್ದು ಜಿಲ್ಲೆಯ ಭಾಷಾ ಬಾಂಧವ್ಯಕ್ಕೆ ಉದಾಹರಣೆಯೆಂಬಂತಿದೆ) ಶೃಂಗೇರಿ ಭಾರತೀಂದ್ರ ಸ್ವಾಮಿಗಳನ್ನು ಸ್ಮರಿಸಿರುವುದರಿಂದ ಈತನ ಕಾಲ ೧೬೬೭–೧೭೦೦ರ ಮಧ್ಯದ್ದಾಗಿರಬಹುದು. ಗೌರಿಬಿದನೂರು ತಾಲೂಕಿನ ಹೊಸೂರಿನವನಾದ ಪುಲ್ಲಕವಿ ೧೮೦೦ರ ಸುಮಾರಿನಲ್ಲಿ ಶ್ರೀಶೈಲ ಪಂಡಿತಾರಾಧ್ಯ ಚರಿತ್ರೆ ಬರೆದಿದ್ದಾನೆ. ಈತ ಗೂಳೂರಿನ ಶ್ರೀಶೈಲ ನಿಡುಮಾಮಿಡಿ ಜಗದ್ಗುರುಗಳ ಪೀಠದ ಶಿಷ್ಯನಾಗಿದ್ದ. ಈತನು ಬರೆದ ಕೃತಿಯ ತಾಳೆಯೋಲೆ ತ್ರುಟಿತವಾದಾಗ ಸು ೧೯೦೦ರಲ್ಲಿ ಮಠದ ಸ್ವಾಮಿಗಳ ನಿರ್ದೇಶನದಂತೆ ಅಪ್ಪಪ್ಪ ಎಂಬಾತ ಶಿಥಿಲವಾದ ಹಾಗೂ ಕಾಣೆಯಾದ ಭಾಗಗಳನ್ನು ಪುನಾರಚಿಸಿ ಸೇರಿಸಿದ್ದಲ್ಲದೆ ಇನ್ನೂ ನೂರು ವರ್ಷಗಳ ಇತಿಹಾಸವನ್ನು ಎರಡು ಆಶ್ವಾಸಗಳಲ್ಲಿ ಸೇರಿಸಿದ್ದಾನೆ ಹಾಗೂ ಈ ಎಲ್ಲ ರಚನೆಗಳ ಗೌರವ ಪುಲ್ಲಕವಿಗೇ ನೀಡಿದ್ದಾನೆ. ಶಿಡ್ಲಘಟ್ಟ ತಾಲೂಕಿನ ಕುಂದಲಗುರ್ಕಿಯ ಚಂದ್ರಕವಿಯ 'ಶ್ರೀಕೃಷ್ಣಭೂಪಾಲಿಯಮು' ಕೃತಿ ನನ್ನಯ್ಯನ ಆಂಧ್ರ ಶಬ್ದ ಚಿಂತಾಮಣಿಯ ಕಾವ್ಯರೂಪದ್ದೆಂದೂ ಕೃತಿ ರಚನೆ ೧೮೩೦ರಲ್ಲಾಯಿತೆಂದೂ ವಿದ್ವಾಂಸರ ಅಭಿಪ್ರಾಯ. ಈತ ಇನ್ನೂ ಕೆಲವು ಕೃತಿಗಳನ್ನು ಬರೆದಂತೆ ತೋರುತ್ತದೆ.

ಕೈವಾರ ನಾರಾಯಣಪ್ಪರ ಸಾಹಿತ್ಯ ಪ್ರತ್ಯೇಕವಾಗಿ ನಿಲ್ಲುವಂತಹದು. ಇವರು ಯೋಗಿಯಾಗಿದ್ದು ಆಧ್ಯಾತ್ಮ ವಿಚಾರವಾಗಿ ತತ್ವೋಪದೇಶಕರಾಗಿದ್ದರೂ ಕಾಲಜ್ಞಾನ, ಕೀರ್ತನೆಗಳನ್ನು ರಚಿಸಿದ್ದಾರೆ. ಶತಕ, ವಚನ, ಸೀಸಪದ್ಯಗಳು ತೆಲುಗಿನಲ್ಲಿ ರಚನೆಗೊಂಡಿದ್ದು ಕೀರ್ತನೆಗಳು ಕನ್ನಡದಲ್ಲಿವೆ. ಇವರ ಕಾಲ ೧೭೨೬ರಿಂದ ೧೮೮೦ರವರೆಗೆ ವಿವಿಧ ರೀತಿಯಲ್ಲಿದ್ದು ಒಟ್ಟಾರೆಯಾಗಿ ೧೧೦ ವರ್ಷಗಳು ಜೀವಿಸಿದ್ದರೆಂದು ಪ್ರತೀತಿಯಿದೆ. ಇವರ ಕೃತಿಗಳಲ್ಲಿ 'ತಾರಕ ಬ್ರಹ್ಮಾನಂದ ದ್ವಯಕಂದ ಶತಕಮು', 'ವಿನುಲಾತ್ಮಕ ನಾರೇಯಣ ಕವಿಶತಕಮು', 'ಕಂದಶತಕಮು', 'ಬ್ರಹ್ಮಾಂಡಪುರಿ ಶತಕಮು', 'ಅಮರನಾರಾಯಣಶತಮು', 'ನಾದಬ್ರಹ್ಮಾನಂದ ನಾರೇಯಣ ಕವಿಶತಕಂ' ಇತ್ಯಾದಿಗಳಿದ್ದು ಅವುಗಳಲ್ಲಿ ಯೋಗ ವಿಷಯ, ಸಂಸಾರ, ಪ್ರಕೃತಿ ಪುರುಷರ ಬಾಳ್ವೆ, ಲೋಕನೀತಿ,

ಧ್ಯಾನ, ಭಕ್ತಿ, ಚಿಂತನೆ ಇತ್ಯಾದಿ ಅನೇಕ ವಿಷಯಗಳನ್ನು ಕುರಿತಾಗಿವೆ. ಈ ಶತಕಗಳಲ್ಲಿ ಗೇಯತೆಯ ಗುಣವೂ ಇದ್ದು ಕೆಲವು ಜನಪ್ರಿಯವೂ, ಜನಬಳಕೆಯಲ್ಲಿಯೂ ಇವೆ. ನಾರಾಯಣಪ್ಪ ಅವರನ್ನು ಹೆಚ್ಚು ಪ್ರಸಿದ್ಧಿಗೆ ತಂದದ್ದು ಕಾಲಜ್ಞಾನವಚನಗಳು. ಅವುಗಳಲ್ಲಿ ಭವಿಷ್ಯ ಕುರಿತ ಕೆಲವು ಸಂಗತಿಗಳು ಇವೆ ಎಂಬ ಸೂಚನೆಗಳಿದ್ದರೂ ಚಾರಿತ್ರಿಕ ಅಂಶಗಳೂ ಹೆಚ್ಚಾಗಿವೆ. ಕೀರ್ತನೆಗಳಲ್ಲಿ ಕನ್ನಡದ ದಾಸರ ಪದಗಳು ಹಾಗೂ ವಚನಗಳ ಪ್ರಭಾವ ಗುರುತಿಸಲಾಗಿದೆ. ನಾದಬ್ರಹ್ಮ ನಾರಾಯೇಣ ಕವಿ, ಅಮರನಾರಾಯಣ ಇತ್ಯಾದಿ ಹಲವಾರು ಅಂಕಿತಗಳಿಂದ ರಚಿಸಿರುವ ಇವರ ಕೃತಿಗಳು ಈಚೆಗೆ ಧ್ವನಿಸುರುಳಿಯ ರೂಪದಲ್ಲೂ ಪ್ರಕಟವಾಗಿವೆ. ಇಂಗ್ಲೀಷ್ ಸೇರಿದಂತೆ ವಿವಿಧ ಭಾಷೆಗಳಿಗೆ ಅನುವಾದಗೊಂಡಿವೆ.

ಇದೇ ಕಾಲದ (೧೭ನೇ ಶತಮಾನ) ಅನಾಮಧೇಯ ಕವಿಯೊಬ್ಬ ಕೋಲಾರದ ಸೋಮೇಶ್ವರ ದೇವರನ್ನು ಕುರಿತು 'ಕೋಲಾಲ ಶತಕಮು' ರಚಿಸಿದ್ದಾನೆ. ಮುಂದಿನ ೧೮ನೇ ಶತಮಾನದಲ್ಲಿ ಚಿಂತಾಮಣಿಯ ಕೋಟೆಗಲ್ಲಿನ ದೇವರಕೊಂಡ ಶಾಮಭಟ್ಟ 'ನೃಕೇಸರಿ ಶತಕಂ' ಬರೆದಿರುವುದಲ್ಲದೆ 'ರಾಘವೇಶ್ವರ ಸ್ತೋತ್ರಂ', ಮೈರಾವಣ, ನಳಚರಿತ್ರೆಗಳನ್ನು ಹರಿಕಥೆ ರೂಪದಲ್ಲೂ, ಗಂಜಿಕೋಟೆಯ ಗಣಿಕೆಯೊಬ್ಬಳ ಬಗ್ಗೆ ಸೀಸ ಪದ್ಯಗಳನ್ನು ಬರೆದಂತೆ ತಿಳಿದುಬರುತ್ತದೆ. ಚಿಂತಾಮಣಿಯ ಹೊಸಹುಡ್ಯದಲ್ಲಿ ಜನಿಸಿದ ವೇದಾಂತಂ ವೆಂಕುರೆಡ್ಡಿ (೧೮೬೫–೧೯೫೪) ಅವರು 'ವೇದಾಂತಪ್ರಕಾಶರತ್ನಾವಳಿ', 'ಶ್ರೀಮದ್ವೇಣುಗೋಪಾಲ ಶತಕ' ಹಾಗೂ 'ವಿವೇಕರತ್ನಮಾಲ' ರಚಿಸಿದ್ದಾರೆ.

ನೆರೆಯ ತಮಿಳುನಾಡಿನ ಹೊಸೂರಿನಲ್ಲಿ ೧೮೬೯ರಲ್ಲಿ ಜನಿಸಿದ ಪರಮಹಂಸ ಆಂಜನಪ್ಪರವರು ತಮ್ಮಷ್ಟಕ್ಕೆ ಆಧ್ಯಾತ್ಮ, ಧಾರ್ಮಿಕ ತತ್ವಗಳನ್ನು ಅಭ್ಯಸಿಸಿ ರಾಮಕೃಷ್ಣಮಾಚಾರ್ಯರಿಂದ ಉಪದೇಶ ದೀಕ್ಷೆ ಪಡೆದು, ದೇಶಾಂತರಗಳಲ್ಲಿ ಜ್ಞಾನೋಪದೇಶ ನೀಡುತ್ತಾ, ಅಂತಿಮವಾಗಿ ೧೯೪೯ರಲ್ಲಿ ಕೋಲಾರ ತಾಲೂಕಿನ ಗಟ್ಟಹಳ್ಳಿಯಲ್ಲಿ ಆಂಜನೇಯಸ್ವಾಮಿಯ ದೇವಾಲಯ ನಿರ್ಮಿಸಿ ಅಲ್ಲಿಯೇ ನೆಲೆ ನಿಂತರು. ಇಂದು ಗಟ್ಟಹಳ್ಳಿ ಒಂದು ಧಾರ್ಮಿಕ ಕ್ಷೇತ್ರವಾಗಿದ್ದು ಆಂಜನಪ್ಪರವರು ರಚಿಸಿದ ತತ್ವಾದರ್ಶಗಳನ್ನು ಪ್ರಚುರಪಡಿಸುವ ಕೇಂದ್ರದಂತಿದೆ. ಇವರ 'ಅನುಭವ ವೇದಾಂತ ರತ್ನಾವಳಿ'ಮೂರು ಬಾರಿ ಪುನರ್ ಮುದ್ರಿತವಾಗಿದ್ದು ಅವರ ಬಹುತೇಕ ರಚನೆಗಳನ್ನು ಒಳಗೊಂಡಿದೆ. ಒಟ್ಟು ಅವರ ರಚನೆಗಳಲ್ಲಿ ಕೀರ್ತನೆ, ಶತಕ, ಕಾಲಜ್ಞಾನ, ತತ್ವಪದಗಳಿದ್ದು ಅವು ದ್ವಿಪದ, ದಂಡಕ, ಮಂತ್ರಸ್ತೋತ್ರಗಳಿಂದ ಕೂಡಿವೆ. ತೆಲುಗಿನಲ್ಲೇ ಅಧಿಕವಾಗಿದ್ದರೂ ೫೪ ಕನ್ನಡ ಕೀರ್ತನೆಗಳಿದ್ದು ಒಟ್ಟಾರೆಯಾಗಿ ಅವುಗಳಿಗೆ ರಾಗ, ತಾಳಗಳ ನಿರ್ದೇಶನ ಸಹ ಮಾಡಿದ್ದಾರೆ. ಇವುಗಳಲ್ಲಿ ಕೆಲವು ಸುಗಮ ಸಂಗೀತಗಾರರು ಹಾಡಿದ್ದು ಎರಡು ಧ್ವನಿಸುರುಳಿಯ ರೂಪದಲ್ಲಿ ಪ್ರಕಟವಾಗಿವೆ. ವೇದೋಪನಿಷತ್ತು, ಪೌರಾಣಿಕ ಮಹಾಕಾವ್ಯ ಮುಂತಾದವುಗಳ ವಿಚಾರಧಾರೆಯನ್ನು ಸರಳೀಕರಿಸಿ ಜನಸಾಮಾನ್ಯರಿಗೆ ಅರಿವಾಗುವಂತೆ ಜೀವನ್ಮುಕ್ತಿ ಸಾಧನೆ, ಆಧ್ಯಾತ್ಮ ಚಿಂತನೆಗಳನ್ನು ಕೃತಿಗಳಲ್ಲಿ ಹೇಳಿದ್ದಲ್ಲದೆ ಉಪದೇಶಗಳನ್ನು ನೀಡುತ್ತಿದ್ದರು. ಆಂಜನಪ್ಪರವರೂ ಸಹ ಶತಾಯುಶಿಯಾಗಿ ತಮ್ಮ ೧೦೩ನೇ ವಯಸ್ಸಿನಲ್ಲಿ ೧೯೭೧ರಲ್ಲಿ ನಿಧನರಾದರು.

ಗೌನಿಪಲ್ಲಿಯ ಗುಮ್ಮರಾಜು ರಾಮಕವಿಯ ಕಾಲ ೧೮೮೦–೧೯೬೭ರ ಅವಧಿಯದಾಗಿದ್ದು, ಚೌಡೇಶ್ವರಿ ಮಹಾತ್ಮ್ಯಮು, ಆಪದ್ಭಾಂಧವ ಶತಕಮು, ಸಂಗ್ರಹರಾಮಾಯಣಮು, ಆಶ್ರುಧಾರ ಇವರ ಕೃತಿಗಳು. ಚಂದ್ರಿಕಾ ಭಗವದ್ಗೀತೆ ಒಂದು ಅಪೂರ್ಣ ಕೃತಿ. ಪಂಡಿತಮಾನ್ಯವಾದ ಚೌಡೇಶ್ವರಿ ಮಹಾತ್ಮ್ಯಮು ಹಲವಾರು ಮೂಲ ಆಕರಗಳನ್ನು ಪರಿಶೀಲಿಸಿ ಬಳಸಿಕೊಂಡಿದ್ದು, ಗ್ರಂಥದ ಕೆಲವು ಭಾಗಗಳು ಮದ್ರಾಸ್ ವಿಶ್ವವಿದ್ಯಾಲಯದ ಇಂಟರ್ ಮೀಡಿಯೇಟ್ ತರಗತಿಗಳಿಗೆ ಪಠ್ಯಪುಸ್ತಕ ಸಹ ಆಗಿತ್ತು. ಶ್ರೀನಿವಾಸಪುರ ಭೈರಗಾನಹಳ್ಳಿಯ ಸಾತವಲ್ಲಿ ಚಂದ್ರಶೇಖರ ಶಾಸ್ತ್ರಿಗಳು ೧೮೯೦ರಲ್ಲಿ ಅಮರುಕನ ಕಾವ್ಯವನ್ನು ಶೃಂಗಾರ ಸ್ತೋತ್ರವೆಂಬ ಹೆಸರಿನಲ್ಲಿ ತೆಲುಗಿಗೆ ಅನುವಾದಿಸಿದಂತೆಯೂ ಶಾಸ್ತ್ರಿಗಳ ವಂಶಸ್ಥರಾದ ರಾಮಸ್ವಾಮಿಶಾಸ್ತ್ರಿಗಳೂ ಕನ್ನಡ, ಆಂಧ್ರ, ಸಂಸ್ಕೃತಗಳಲ್ಲಿ ಕೃತಿ ರಚನೆ ಮಾಡಿದಂತೆಯೂ ತಿಳಿದುಬರುತ್ತದೆ. ಇಪ್ಪತ್ತನೆಯ ಶತಮಾನದ ಅಂತ್ಯಭಾಗದಲ್ಲಿದ್ದ ಬಾರವೇಲು ಅಪ್ಪಾಶಾಸ್ತ್ರಿ ಶಂಕರಚಾರ್ಯರ ಆನಂದಲಹರಿಯನ್ನು ತೆಲುಗಿಗೆ ಅನುವಾದಿಸಿದಂತೆ ತಿಳಿದುಬರುತ್ತದೆಯಲ್ಲದೆ ಗುಮ್ಮರಾಜ ರಾಮಕವಿಗೆ ಲಿಪಿಕಾರನಾಗಿದ್ದನೆಂಬ ಹೇಳಿಕೆಗಳಿವೆ. ಗೌರಿಬಿದನೂರು ಬಳಿಯ ಹೊಸೂರಿನವರಾದ ಕೊಟ್ಟೂರು ಬಸವರಾಜ (೧೮ನೇ ಶತಮಾನದ ಕೊನೆ)ರ ಆಯುರ್ವೇದದ ಬೃಹತ್ ಕೃತಿ 'ಬಸವರಾಜೀಯಂ' ಆಂಧ್ರದಲ್ಲಿ ಜನಪ್ರಿಯ ಆಕರ ಗ್ರಂಥವಾಗಿದೆ.

'ಉಷಾಸ್ವಯಂವರ' ಬರೆದ ಕೈಪ ಮಾಯನಶಾಸ್ತ್ರಿಯ ವಂಶಸ್ಥನಾದ ಚಿಂತಾಮಣಿಯಲ್ಲಿದ್ದ (ಕೈಪ) ಕೊಮಾರ್ಲ ರಾಮಚಂದ್ರಯ್ಯ ೧೯–೨೦ನೇ ಶತಮಾನದವರಾಗಿದ್ದು 'ಸುಕರ್ಮ ನೀತಿ ಚಿಂತಾಮಣಿ' ಎಂಬ ಮೂರು ಸಾವಿರದ ಐನೂರಕ್ಕೂ ಮೀರಿದ ಪದ್ಯಗಳಿಂದ ಕೂಡಿದ ಮೂರು ಆಶ್ವಾಸಗಳ ಕೃತಿಯನ್ನು ರಚಿಸಿದ್ದಾರೆ. ಭಕ್ತಿ, ನೀತಿ, ಸಾಮುದ್ರಿಕೆ, ಜ್ಯೋತಿಷ್ಯ, ಯಾತ್ರೆ, ಅಶೌಚಕರ್ಮ ಅದಕ್ಕೆ ಪ್ರಾಯಶ್ಚಿತ್ತ ಇತ್ಯಾದಿಗಳಿಂದ ಕೂಡಿದ ಗ್ರಂಥ ಸಾಕಷ್ಟು ಮನ್ನಣೆ ಪಡೆದಿದೆ. ಇದೇ ಅವಧಿಯವರಾದ ಶ್ರೀನಿವಾಸಪುರದ ತೊರ್ಲವಾರಿಪಲ್ಲಿಯ ಒಕ್ಕಲಿಗ ಕವಿ ಕಾಹಳ ಭೈರವ ಅಥವ ತೊರ್ಲಬೈಯ್ಯಾರೆಡ್ಡಿ "ಪದ್ಮಾವತಿ – ಶ್ರೀನಿವಾಸ" ಎಂಬ ಕಾವ್ಯ ಬರೆದಿದ್ದು ಅದರಲ್ಲಿ ಅಂದಿನ ವಿವಾಹ ಸಂದರ್ಭದ ವಿವರಗಳು ಬಂದಿವೆ. ಚಿಂತಾಮಣಿ ತಾಲೂಕಿನ ಹೊಸ ಹುಡ್ಯಂ ವೆಂಕಟರೆಡ್ಡಿ ೧೯೦೧–೫೪ರಲ್ಲಿದ್ದು 'ವಿವೇಕ ರತ್ನಮಾಲ' ವಲ್ಲದೆ ವೇದಾಂತ ಪ್ರಶ್ನಾವಳಿ, ವೇಣುಗೋಪಾಲ ಶತಕಮುಗಳನ್ನು ತೆಲುಗಿನಲ್ಲೂ ಕೇಶವ ನಾಮಾವಳಿ, ಸಿದ್ಧಗಂಗ ಗುರ್ವಷ್ಟಕಗಳನ್ನು ಸಂಸ್ಕೃತದಲ್ಲಿಯೂ ಬರೆದಂತೆ ತಿಳಿದುಬರುತ್ತದೆ. 'ವಿವೇಕರತ್ನಮಾಲ' ೧೯೫೮ರಲ್ಲಿ ಬರೆದು ಮರುವರ್ಷ ಮುದ್ರಿತವಾಗಿದ್ದು ೫೦೦ ಖಂಡ ಪದ್ಯಗಳುಳ್ಳ ಇದು ಭಕ್ತಿ, ವಿವೇಕ, ಜ್ಯೋತಿಷ್ಯ, ವಿದ್ಯೆ, ಮತ, ಕುಲ ಇತ್ಯಾದಿ ಅನೇಕ ವಿಷಯಗಳಿಂದ ಕೂಡಿದೆ. ಚಿಂತಾಮಣಿಯ ಚಿಲಕಲನೇರ್ಪು ಗ್ರಾಮದ ರಾಜಯೋಗಿ ವಸಂತಯ್ಯ ಸಹ ಒಬ್ಬ ಆಧ್ಯಾತ್ಮ ಕವಿ. ಇವರ 'ಸುಜನ ಮನೋರಂಜನಿ' ೧೯೧೮ರಲ್ಲಿ ರಚಿತವಾಗಿ ೧೯೨೮ರಲ್ಲಿ ಮುದ್ರಣಗೊಂಡಿದೆ. ವೆಂಕಟಾಪುರ ತಿಮ್ಮರಸಯ್ಯ ತೆಲುಗಿನಲ್ಲಿ ಪದ್ಯ ರಚನೆ ಮಾಡಿದ್ದಾರೆ.

### ಉರ್ದು ಸಾಹಿತ್ಯ

ಜಿಲ್ಲೆಯಲ್ಲಿ ಉರ್ದು ಭಾಷಿಕರು ಬಹಳವಿದ್ದು ಅವರದೇ ಆದ ಸಾಹಿತ್ಯ ಪರಂಪರೆ ಸೃಷ್ಟಿಯಾಗಿದ್ದರೂ ನಿಖರವಾದ ಮಾಹಿತಿ ದೊರೆಯಲಿಲ್ಲ. ಕೋಲಾರದ ಅಸೀಮ್ ಎಂಬಾತ ೧೮೩೧ರ ವೇಳೆಯಲ್ಲಿ ಮೈಸೂರು ಅರಮನೆಯಲ್ಲಿ ಕವಿಯಾಗಿದ್ದಂತೆ ತಿಳಿದುಯಬರುತ್ತದೆ. ಶಿಡ್ಲಘಟ್ಟದ ಅಬ್ದುಲ್ ಹಸನ್ ಅದೀಬ್ ಅವರು, ಮೈಸೂರು ಹಾಗೂ ಲಾಹೋರ್‌ಗಳಲ್ಲಿ (ಅರಮನೆಯಿಂದ ವಿದ್ಯಾರ್ಥಿವೇತನ ಪಡೆದು) ಕಲಿತು ಕವಿ, ಚರಿತ್ರೆಕಾರ ಹಾಗೂ ಸಾಹಿತ್ಯ ವಿಮರ್ಶಕರಾಗಿದ್ದವರು. ಅದೀಬ್ ಅವರ ತಂದೆ ಸಹ ಬರಹಗಾರರಾಗಿದ್ದು ಸಿತಾರೆ–ಎ–ಸುಬಹ ಹಾಗೂ ರಸೂಲ್ ಮಕ್‌ಬೂಲ್ ಎಂಬ ಎರಡು ಗ್ರಂಥ ಬರೆದಿದ್ದರು. ಅದೀಬ್ ಅವರ ಮೊದಲ ಪುಸ್ತಕ ಜವಹರುಲ್ ಬಾಲಘತ್ ಒಂದು ಛಂದೋಗ್ರಂಥವಾಗಿದ್ದು ೧೯೩೦ರಲ್ಲಿ ಪ್ರಕಟವಾಯಿತು. ಅವರ 'ಜವಾಹಿರ್–ಎ–ಉರ್ದು' ಉರ್ದು ವ್ಯಾಕರಣ ಕುರಿತದ್ದು, 'ಘಾಜಿ–ಎ–ಅಜಮ್', ಹೈದರಲಿ ಕುರಿತ ಚಾರಿತ್ರಿಕ ಗ್ರಂಥ. 'ರಾಜ್‌ನಾಮ' ಮೈಸೂರು ಒಡೆಯರ ಚರಿತ್ರೆ ಇವಲ್ಲದೆ ಇನ್ನು ನೂರಾರು ಕೃತಿಗಳನ್ನು ಬರೆದಿದ್ದು ಇವರ ಕವಿತೆಗಳು ಇಂದಿಗೂ ಜನಪ್ರಿಯವಾಗಿದೆ. ವ್ಯಾಕರಣ ಕುರಿತ ಲೇಖನಗಳು ಪಠ್ಯಪುಸ್ತಕಗಳಲ್ಲಿ ಸೇರಿವೆ. ಅದೀಬ್ ಅವರು ೧೯೬೦ರಲ್ಲಿ ನಿಧನರಾದರು.

### ಆಧುನಿಕ ಕಾಲದ ಕನ್ನಡ ಸಾಹಿತ್ಯ

ಇಪ್ಪತ್ತನೆಯ ಶತಮಾನದ ಆದಿಯಿಂದ ಹಿಡಿದು ನವೋದಯ, ನವ್ಯ ಹಾಗೂ ನವ್ಯೋತ್ತರ ಸಾಹಿತ್ಯಕ ಚಳವಳಿಗಳನ್ನು ಆಧುನಿಕ ಕಾಲ ಎಂದು ಪರಿಗಣಿಸಿ ಕೋಲಾರ ಜಿಲ್ಲೆಯ ಕನ್ನಡದ ಕೆಲವು ಪ್ರಮುಖ ಸಾಹಿತಿಗಳನ್ನು ಕುರಿತು ಇಲ್ಲಿ ಹೇಳಿದೆ. ಇವರಲ್ಲಿ ಅನೇಕರು ಜಿಲ್ಲೆಯಲ್ಲೇ ಜನಿಸಿದರಾದರೂ ಕಾರಣಾಂತರ ಪರಸ್ಥಳಗಳಿಗೆ ಹೋಗಿ ನೆಲೆಸಿದ್ದು ಇವರಲ್ಲಿ ಗಣನೀಯ ಪ್ರಮಾಣದ ಕ್ರಿಯಾಶೀಲರು ಜಿಲ್ಲೆಯೊಂದಿಗೆ ನಿಕಟ ಸಂಬಂಧ ಹೊಂದಿದ್ದಾರೆ. ಉಳಿದವರು ಜಿಲ್ಲೆಗೆ ಸಾಹಿತ್ಯ ಸಂಬಂಧದ ಹೆಸರು ಬರಲು ಕಾರಣರಾಗಿದ್ದಾರೆ. ಈ ಅರ್ಥದಲ್ಲಿ ಡಿವಿಜಿ ಹಾಗೂ ಮಾಸ್ತಿಯವರುಗಳನ್ನು ಆದ್ಯರಾಗಿ ಪರಿಗಣಿಸಬಹುದು. ಡಿ.ವಿ.ಗುಂಡಪ್ಪನವರು (೧೮೮೭–೧೯೭೫) ಮುಳಬಾಗಿಲಿನಲ್ಲಿ ಜನಿಸಿ ಲೋಯರ್ ಸೆಕೆಂಡರಿ ವಿದ್ಯಾಭ್ಯಾಸ ಪೂರೈಸಿ ಬೆಂಗಳೂರಿಗೆ ೧೯೦೫–೦೬ರಲ್ಲಿ ವೃತ್ತಿಯನ್ನರಿಸಿ ತೆರಳಿ ಅಲ್ಲಿಯೇ ನೆಲೆಸಿದರು. ಸಾಹಿತ್ಯದ ಹಲವಾರು ಕ್ಷೇತ್ರಗಳಲ್ಲಿ ಕೃತಿ ರಚನೆ ಮಾಡಿದರಾದರೂ ಪದ್ಯ ರೂಪದ ಮಂಕುತಿಮ್ಮನ ಕಗ್ಗ, ಮರುಳಮುನಿಯನ ಕಗ್ಗ, ಉಮರನ ಒಸಗೆ, ಅಂತಃಪುರ ಗೀತೆಗಳು ಇತ್ಯಾದಿಗಳಲ್ಲದೆ, ಗದ್ಯದಲ್ಲಿ ವೈಚಾರಿಕ ಸಾಹಿತ್ಯ, ಪತ್ರಿಕೋದ್ಯಮ ಹಾಗೂ ಜೀವನಚರಿತ್ರೆಗಳಿಂದ ಪ್ರಥಮ ಶ್ರೇಣಿಯ ಸಾಹಿತಿ ಎನಿಸಿದ್ದಾರೆ, ಕನ್ನಡ ಸಾಹಿತ್ಯ ಪರಿಷತ್ತು ಸೇರಿದಂತೆ ಹಲವಾರು ಸಂಘ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಡಿವಿಜಿ ಅವರು ಮೈಸೂರಿನ ಪ್ರಜಾಪ್ರತಿನಿಧಿಸಭೆಯ ಸದಸ್ಯರೂ ಆಗಿದ್ದರು. ನೂರಾರು ಪತ್ರಿಕೆಗಳಿಗೆ (ಇಂಗ್ಲೀಷ್ ಹಾಗೂ ಕನ್ನಡದಲ್ಲಿ) ಲೇಖನಗಳನ್ನು ಬರೆದಿದ್ದ ಶ್ರೀಯುತರು 'ದಿ ಕರ್ನಾಟಕ' ಎಂಬ ಪತ್ರಿಕೆಯನ್ನು ಸ್ವಂತವಾಗಿ ಹೊರತಂದರು. ಗೋಪಾಲಕೃಷ್ಣ ಗೋಖಲೆಯವರ ವಿಚಾರಗಳಿಂದ

ಪ್ರೇರಿತರಾಗಿ 'ಗೋಖಲೆ ಸಾರ್ವಜನಿಕ ಸಂಸ್ಥೆ' ಕಟ್ಟಿ ತಮ್ಮ ತನು, ಮನ, ಧನಗಳಲ್ಲದೆ ಪುಸ್ತಕ ಸಂಗ್ರಹಗಳನ್ನೆಲ್ಲಾ ಧಾರೆ ಎರೆದರು. ದಿವಾನರಾಗಿದ್ದ ಎಂ. ವಿಶ್ವೇಶ್ವರಯ್ಯ, ಮಿರ್ಜಾಇಸ್ಮಾಯಿಲ್‌ರವರೊಂದಿಗೆ ನಿಕಟ ಸಂಪರ್ಕ ಇರಿಸಿಕೊಂಡಿದ್ದ ಡಿವಿಜಿಯವರು ಸಾರ್ವಜನಿಕ ಕ್ಷೇತ್ರದಲ್ಲಿ ಹೆಸರುವಾಸಿಯಗಿದ್ದರು. ವಿವಿಧ ಸಂಘಸಂಸ್ಥೆಗಳಿಂದ ಅನೇಕ ಗೌರವಾದರಗಳನ್ನು ಪಡೆದಿದ್ದ ಅವರು ೧೯೩೨ರಲ್ಲಿ ಮಡಿಕೇರಿಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು ಹಾಗೂ ಮೈಸೂರು ರಾಜ್ಯ ಪತ್ರಕರ್ತರ ಸಂಘದ ಸ್ಥಾಪಕ ಅಧ್ಯಕ್ಷರಾಗಿದ್ದರು. ೧೯೬೧ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪಡೆದಿದ್ದರು. ಭಾರತ ಸರ್ಕಾರ ೧೯೭೪ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿತು. ಡಿವಿಜಿಯವರ ನಿಧಾನಂತರ ೧೯೮೭ರಲ್ಲಿ ಜನ್ಮಶತಮಾನೋತ್ಸವ ಆಚರಣೆ ಎಲ್ಲೆಡೆ ನಡೆದು ಕೋಲಾರದ ಮುಳಬಾಗಿಲಿನಲ್ಲೂ ವಿಚಾರ ಸಂಕಿರಣ, ಪುಸ್ತಕ ಪ್ರಕಟಣೆ ಇತ್ಯಾದಿ ಕಾರ್ಯಕ್ರಮಗಳಾದವು. ೧೯೮೮ರಲ್ಲಿ ಭಾರತ ಸರ್ಕಾರ ಡಿವಿಜಿಯವರ ಭಾವಚಿತ್ರವಿರುವ ಗೌರವ ಅಂಚೆ ಚೀಟಿಯನ್ನು ಹೊರತಂದಿತು. ಶ್ರೀಯುತರ ಜ್ಞಾಪಕ ಚಿತ್ರಶಾಲೆಯ ಸಂಪುಟಗಳಲ್ಲಿ ಕೋಲಾರ ಜಿಲ್ಲೆಯ ಅನೇಕ ಸಾಂಸ್ಕೃತಿಕ ಸಂಗತಿಗಳು ದಾಖಲಾಗಿವೆ.

ಮಾಸ್ತಿವೆಂಕಟೇಶ ಅಯ್ಯಂಗಾರ್ (೧೮೯೧–೧೯೮೬) ಮಾಲೂರು ತಾಲೂಕಿನ ಮಾಸ್ತಿ ಗ್ರಾಮದಲ್ಲಿ ಜನಿಸಿ ಪ್ರಾಥಮಿಕ ಶಿಕ್ಷಣವನ್ನು ಹೊಂಗೇನಹಳ್ಳಿಯಲ್ಲಿ ಪೂರೈಸಿ ಉನ್ನತ ವ್ಯಾಸಂಗವನ್ನು ಮದ್ರಾಸ್, ಮೈಸೂರುಗಳಲ್ಲಿ ಕೈಗೊಂಡು ರಾಜ್ಯ ಆಡಳಿತ ಸೇವಾ ಪರೀಕ್ಷೆಯ ಮೂಲಕ ಅಂದಿನ ಮೈಸೂರು ರಾಜ್ಯದ ಸರ್ಕಾರಿ ಸೇವೆಗೆ ಸೇರಿ ಉನ್ನತ ಹುದ್ದೆಗಳನ್ನು ಅಲಂಕರಿಸಿದವರು. ಕಾರ್ಯನಿಮಿತ್ತ ಕೋಲಾರ ಜಿಲ್ಲೆಯಲ್ಲೂ ವ್ಯಾಪಕವಾಗಿ ಸಂಚರಿಸಿದ್ದುಂಟು. ಸಾಹಿತ್ಯಕವಾಗಿ ಮಾಸ್ತಿಯವರ ಕೊಡುಗೆ ದೊಡ್ಡಪಾಲಿನದೇ ಆಗಿದೆ. ಸಣ್ಣಕಥೆಗಳಿಗೆ ಹೆಸರಾದಂತೆ, ಗೀತನಾಟಕಗಳು, ಕವಿತೆ, ಕಾದಂಬರಿ, ವೈಚಾರಿಕ ಸಾಹಿತ್ಯ, ಅನುವಾದ ಇತ್ಯಾದಿ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಸುಮಾರು ೧೨೩ ಪುಸ್ತಕಗಳನ್ನು ರಚಿಸಿರುವ ಮಾಸ್ತಿಯವರು 'ಭಾವ' ಎಂಬ ಹೆಸರಿನಲ್ಲಿ ಆತ್ಮಚರಿತ್ರೆ ಸಹ ಬರೆದಿದ್ದಾರೆ. ಭಾರತಾದ್ಯಂತ ಹಲವಾರು ಸಾಹಿತ್ಯ ಮತ್ತು ಭಾಷಾ ಸಮ್ಮೇಳನಗಳಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀಯುತರು ೧೯೨೯ರಲ್ಲಿ ಬೆಳಗಾವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳಿಂದ ಫೆಲೋಶಿಪ್ ಹಾಗೂ ಗೌರವ ಸದಸ್ಯತ್ವ ಪಡೆದಿದ್ದ ಮಾಸ್ತಿ ಅವರಿಗೆ ೧೯೭೭ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್ ಪದವಿ ಲಭ್ಯವಾಗಿತ್ತು. ಮಾಸ್ತಿಯವರಿಗೆ ೧೯೮೩ರಲ್ಲಿ ಜ್ಞಾನಪೀಠ ಪ್ರಶಸ್ತಿ ನೀಡಲಾಯಿತು. ೧೯೯೧ರಲ್ಲಿ ಜನ್ಮಶತಾಬ್ಧಿ ಕಾರ್ಯಕ್ರಮ ಕೋಲಾರವೂ ಸೇರಿದಂತೆ ಅನೇಕ ಕಡೆ ನೆರವೇರಿದ್ದು ಮಾಸ್ತಿಯಲ್ಲಿ ಅವರ ಹೆಸರಿನಲ್ಲಿ ಸ್ಮಾರಕಭವನ ಹಾಗೂ ಗ್ರಂಥಾಲಯವೊಂದನ್ನು ತೆರೆಯಲಾಗಿದ್ದು ಸಾಂಸ್ಕೃತಿಕ ಚಟುವಟಿಕೆಗಳೂ ನಡೆಯುತ್ತಿವೆ.

ಚಿಂತಾಮಣಿ ತಾಲೂಕಿನ ಸಂತೆ ಕಲ್ಲಹಳ್ಳಿಯವರಾದ ಲಕ್ಷ್ಮೀನರಸಿಂಹ ಶಾಸ್ತ್ರಿಗಳು (ಜ ೧೮೮೯–೧೯೬೫) ವಿಕಟವಿನೋದಿನಿಗೆ ಲೇಖನಗಳನ್ನು ಬರೆಯುತ್ತಿದ್ದು ನಂತರ ತಮ್ಮದೇ ಆದ 'ಕನ್ನಡ ಸಾಹಿತ್ಯ ಸೇವಾಸದನ' ಆರಂಭಿಸಿದರು. (ಮೊದಲಿಗೆ ಜಯಚಾಮರಾಜೇಂದ್ರ ಗ್ರಂಥ ಮಾಲ ಎಂದು ಹೆಸರಿದ್ದು ಕಾನೂನು ತೊಡಕಿನಿಂದಾಗಿ ಬದಲಿಸಿದರು) ಅದರ ಮೂಲಕ ಪುರಾಣ, ಆಧ್ಯಾತ್ಮ, ಜೀವನಚರಿತ್ರೆ, ಸ್ತೋತ್ರ ಇತ್ಯಾದಿ ಕುರಿತ ಸುಮಾರು ೫೬ ಪುಸ್ತಕಗಳನ್ನು ಪ್ರಕಟಿಸಿದಂತೆ ತಿಳಿದುಬರುತ್ತದೆ. ಶೃಂಗೇರಿ ಶ್ರೀಗಳಿಂದ ಸನ್ಮಾನ ನಡೆದಿತ್ತಲ್ಲದೆ, ಶಾಸ್ತ್ರಿಗಳು ಸ್ವತಃ ಪ್ರತಿವರ್ಷ ಕಲಾವಿದರನ್ನು ಬರಮಾಡಿಕೊಂಡು ಸಾಂಸ್ಕೃತಿಕ ಉತ್ಸವ ನಡೆಸುತ್ತಿದ್ದರು. ಶಾಸ್ತ್ರಿಗಳ ರಚನೆಯಲ್ಲಿ ಮುಖ್ಯವಾಗಿ 'ಜಯಚಾಮನೃಪಾಲರಾಮರಾಜ್ಯ ವಿಲಾಸ, ಚಂದ್ರಹಾಸ ಚರಿತೆ, ಮಹಾತ್ಮಗಾಂಧಿ ಶತಕ, ಪೋತನನ ಭಾಗವತದ ಅನುವಾದ, ಲವಕುಶ, ಸಾರಂಗಧರ ಇತ್ಯಾದಿ ಪೌರಾಣಿಕ ನಾಟಕಗಳು, ಪುರಂದರ ದಾಸ, ಕನಕದಾಸ, ಕೈವಾರನಾರಣಪ್ಪ ಮುಂತಾದ ಜೀವನ ಚರಿತ್ರೆಗಳು ಇತ್ಯಾದಿ ಉದಾಹರಿಸಬಹುದು. ವಿಜಯನಗರದಲ್ಲಿ ರಾಜಗುರುಗಳಾಗಿದ್ದು ಸಾಮ್ರಾಜ್ಯ ಅಳಿವಿನ ನಂತರ ಚಿಕ್ಕಬಳ್ಳಾಪುರಕ್ಕೆ ಬಂದು ನೆಲೆಸಿದ ತಾತಾಚಾರ್ಯ ಅವರ ವಂಶಸ್ಥರಲ್ಲಿ ಅನೇಕರು ವಿದ್ವಾಂಸರಿದ್ದು ತಿರುಮಲೆ ರಾಜಗೋಪಾಲಾಚಾರ್ಯರು ಚಿಕ್ಕಬಳ್ಳಾಪುರದಲ್ಲಿ ಸಂಸ್ಕೃತ ಶಾಲೆಯೊಂದನ್ನು ೧೯ನೇ ಶತಮಾನದಲ್ಲಿಯೇ ಆರಂಭಿಸಿದ್ದರು. ಸಾಹಿತಿ, ದಾರ್ಶನಿಕ, 'ಚಿತ್ರಕವಿತಾರಾಜ' ಬಿರುದಾಂಕಿತರಾಗಿದ್ದ ಆಚಾರ್ಯರು ಬಿ.ಎಲ್.ರೈಸ್ ಹಾಗೂ ಹಲ್ಷ್ ಅವರುಗಳಿಗೆ ಶಾಸನ ವ್ಯಾಸಂಗ, ಪ್ರಕಟಣೆಗಳಿಗೆ ನೆರವಾಗಿದ್ದರು. ಅವರು ವೈದಿಕ ಗೋಷ್ಠಿಗಳಲ್ಲಿ ಮಾಡಿದ ಭಾಷಣಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಇವರ ವಂಶಸ್ಥರಾದ ತಿರುಮಲೆ ತಾತಾಚಾರ್ಯಶರ್ಮ (೧೮೯೭–೧೯೭೩) ಚಿಕ್ಕಬಳ್ಳಾಪುರದಲ್ಲಿ ಜನಿಸಿ ಶಾಸನವ್ಯಾಸಂಗ, ಪತ್ರಿಕೋದ್ಯಮ, ನಾಟಕ, ಸಾಹಿತ್ಯ ರಚನೆ, ಸ್ವಾತಂತ್ರ್ಯ ಸಂಗ್ರಾಮ, ಸಮಾಜಸೇವೆ ಇತ್ಯಾದಿ ಹಲವಾರು ಕ್ಷೇತ್ರಗಳಲ್ಲಿ

ದುಡಿದು ಖ್ಯಾತರಾಗಿದ್ದವರು. ಕಾಲೇಜಿನ ಅಪೂರ್ಣ ವಿದ್ಯಾಭ್ಯಾಸದ ನಂತರ ನಾಟಕ ಕಂಪನಿ ಸೇರಿ ನಾಟಕರಂಗದ ವಿವಿಧ ಕಾರ್ಯಗಳಲ್ಲಿ ಅನುಭವ ಪಡೆದು ಕೈಲಾಸಂರಂತಹವರ ಪರಿಚಯದಿಂದಾಗಿ ಜ್ಞಾನಕ್ಷೇತ್ರ ಹೆಚ್ಚಿಸಿಕೊಂಡರು. (ತಿ.ತಾ.ಶರ್ಮರ ಪತ್ನಿ ತಿರುಮಲೆ ರಾಜಮ್ಮ ಕೈಲಾಸಂ ಕುರಿತು ಪುಸ್ತಕ ಬರೆದಿದ್ದಾರೆ) ನಂತರ ಪುರಾತತ್ವ ಇಲಾಖೆಗೆ ಸೇರಿ ಶಾಸನಗಳ ಓದುವಿಕೆ, ಅರ್ಥೈಸುವಿಕೆ ಅಭ್ಯಸಿಸಿ ಸಾವಿರಾರು ಶಾಸನಗಳನ್ನು ಓದಿ ಪ್ರಕಟಿಸಿದ್ದಾರೆ. ಆ ಕುರಿತು ಅನೇಕ ಲೇಖನಗಳನ್ನು ಬರೆದಿದ್ದಾರೆ. 'ಮೈಸೂರು ಇತಿಹಾಸದ ಹಳೆಯ ಪುಟಗಳು', 'ವಿಚಾರ ಕರ್ನಾಟಕ' ಹಾಗೂ 'ಚಾರಿತ್ರಿಕ ದಾಖಲೆಗಳು' ಪ್ರಕಟಿತ ಪುಸ್ತಕಗಳು. ಹಲವಾರು ಪತ್ರಿಕೆಗಳಿಗೆ ಲೇಖನಗಳನ್ನು ಬರೆದಿದ್ದು ೧೯೨೫ರಲ್ಲಿ 'ವಿಶ್ವಕರ್ನಾಟಕ' ಎಂಬ ವಾರಪತ್ರಿಕೆ ಆರಂಭಿಸಿ ೧೯೩೪ರಿಂದ ದಿನಪತ್ರಿಕೆಯಾಗಿಸಿ ೧೯೪೮ರವರೆಗೆ ನಡೆಸಿದರು. ನಿರ್ಭೀತ ವರದಿಗಳಿಗೆ ಹೆಸರಾಗಿದ್ದ ಪತ್ರಿಕೆ ಹಲವಾರು ಬಾರಿ ಕಾನೂನು ತೊಡಕು ಅನುಭವಿಸುವಂತಾಯಿತು. ಗಾಂಧೀಜಿಯವರ ಪ್ರೇರಣೆಯಿಂದ ಸ್ವಾತಂತ್ರ್ಯಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲದೆ ಅದರ ಕುರಿತು ಲೇಖನ, ಪುಸ್ತಕಗಳನ್ನು ರಚಿಸಿದ್ದಾರೆ. ಸ್ವಾತಂತ್ರ್ಯಸಂಗ್ರಾಮ, ವಿಕ್ರಾಂತಭಾರತ, ಮಾಸ್ತಿಯವರ ಮನೋಧರ್ಮ, ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಜ್ಯೂಲಿಯಸ್ ಸೀಸರ್, ಇಂದಿರಾ ಪ್ರಿಯದರ್ಶಿನಿ ಇತ್ಯಾದಿ ಅವರ ಕೆಲವು ಗ್ರಂಥಗಳನ್ನು ಉದಾಹರಿಸಬಹುದು. ಪತ್ರಿಕೋದ್ಯಮಿಗಳ ಸಂಘ, ನಗರಪಾಲಿಕೆ ಇತ್ಯಾದಿಗಳಲ್ಲಿ ಅಧ್ಯಕ್ಷ, ಕಾರ್ಪೋರೇಟರ್ ಆಗಿದ್ದ ಶರ್ಮರು ಸಾಹಿತ್ಯಪರಿಷತ್ತಿನ ಅಧ್ಯಕ್ಷರೂ ಆಗಿದ್ದರು. ೧೯೩೭ರಲ್ಲಿ ಕಾಸರಗೂಡಿನಲ್ಲಿ ನಡೆದ ೩೧ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

೧೮೯೭ರಲ್ಲಿ ಜನಿಸಿದ ಮೂಲತಃ ಕೋಲಾರದವರಾದ ಕೆ.ಸಂಪದ್ಗಿರಿರಾವ್ ಅವರು ಶಿಕ್ಷಣ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಅಪಾರ ಕಾರ್ಯನಿರ್ವಹಿಸಿ ಹೆಸರು ಪಡೆದಿದ್ದು ಸಾಹಿತ್ಯ ಕ್ಷೇತ್ರದಲ್ಲಿಯೂ ಸೇವೆ ಸಲ್ಲಿಸಿದ್ದಾರೆ. ಮುಖ್ಯವಾಗಿ ರಾಜಾಜಿ ಅವರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವುಗಳಲ್ಲಿ ಉಪನಿಷತ್ತಿನ ಕಥೆಗಳು, ಶ್ರೀಕೃಷ್ಣನು ತೋರಿಸಿದ ದಾರಿ, ರಾಜಾಜಿ ರಾಮಾಯಣ, ಸಾಕ್ರಟೀಸ್, ಕಲ್ಪನೆಯ ಕಾಡು, ರಾಜಾಜಿ ಸಣ್ಣ ಕಥೆಗಳು, ರಾಜಾಜಿ ಭಗವದ್ಗೀತೆಗಳನ್ನು ಹೆಸರಿಸಬಹುದು. ಮಕ್ಕಳಿಗೆ ಹೊಯಿಸಳರು, ಸ್ವರಾಜ್ಯ, ದಾಸ ಸಾಹಿತ್ಯ ಹಾಗೂ ಹರ್ಡೀಕರ್ ಮಂಜಪ್ಪರವರನ್ನು ಕುರಿತ ಕೃತಿಗಳು ಪ್ರಕಟವಾಗಿವೆ.

ಹೆಸರಾಂತ ಕಾದಂಬರಿಕಾರ ಹಾಗೂ ದೈಹಿಕ ಸಾಮರ್ಥ್ಯದ ಗರಡಿಯಾಳು ಕೆ.ವಿ.ಅಯ್ಯರ್‌ರವರು ಮುಳಬಾಗಿಲು ತಾಲೂಕಿನ ದೇವರಾಯ ಸಮುದ್ರದವರು. ಅಯ್ಯರ್ (೧೮೯೮–೧೯೮೦) ಅವರು ಬೆಂಗಳೂರಲ್ಲಿ ವ್ಯಾಯಾಮ ಶಾಲೆ ಆರಂಭಿಸಿ ಜಿಮ್ನಾಸ್ಟಿಕ್ ಪ್ರದರ್ಶನ ನೀಡಿ 'ದೈಹಿಕ ಶಿಕ್ಷಣದ ಮಾಣಿಕ್ಯ' ಎಂಬ ಬಿರುದು ಪಡೆದಿದ್ದಲ್ಲದೆ ಅಮೆರಿಕೆಯ ಮಿಸ್ಸೋಯಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪಡೆದಿದ್ದರು. ಕೋಲಾರದಲ್ಲಿದ್ದಾಗ, ಚಿನ್ನದ ಗಣಿ ಪ್ರದೇಶದಲ್ಲಿ ಕೈಲಾಸಂ ಅವರ ಸಂಪರ್ಕದಿಂದಾಗಿ ನಾಟಕ, ಸಾಹಿತ್ಯಗಳಲ್ಲಿ ಹೆಚ್ಚಿನ ಅಭಿರುಚಿ ಪಡೆದು ರೂಪದರ್ಶಿ, ಲೀನಾ ಹಾಗೂ ಶಾಂತಲಾ ಕಾದಂಬರಿಗಳನ್ನು ರಚಿಸಿದರು. ಇವು ಅಂದಿನ ಕಾದಂಬರಿ ಕ್ಷೇತ್ರದಲ್ಲಿ ಅಯ್ಯರ್ ಅವರಿಗೆ ಜನಪ್ರಿಯತೆಯನ್ನು ತಂದುಕೊಟ್ಟಿತು. ಇವಲ್ಲದೆ ಸಮುದ್ಯತಾ ಎಂಬ ಸಣ್ಣಕಥೆಗಳ ಸಂಕಲನ ಹಾಗೂ ಟಿ.ಪಿ.ಕೈಲಾಸಂ ಸ್ಮರಣೆ, ಶೂದ್ರಕನ ಮೃಚ್ಛಕಟಿಕದ ಅನುವಾದ ಇವರ ಇನ್ನಿತರ ಕೃತಿಗಳು. ಅಯ್ಯರ್ ಅವರು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು.

ಗೌರಿಬಿದನೂರಿನ ಶ್ರಾವಂಡನ ಹಳ್ಳಿಯಲ್ಲಿ ಜನಿಸಿದ ಓ.ಎನ್. ಲಿಂಗಣಯ್ಯ ಅವರು ಸಂಸ್ಕೃತ ಹಾಗೂ ಇಂಗ್ಲೀಷ್ ಅಭ್ಯಸಿಸಿ, ೧೯೪೨ರಲ್ಲಿ 'ಮುಮ್ಮಡಿ ಕೃಷ್ಣರಾಜ ಒಡೆಯರು' ಎಂಬ ಗ್ರಂಥ ಬರೆದು ಮೈಸೂರು ಅರಮನೆಯಿಂದ ರಾಜಗೌರವ ಪಾರಿತೋಷಕ ಪಡೆದು 'ಅಮಲ್ದಾರ್' ಹುದ್ದೆಗೆ ಸೇರಿದರಾದರೂ ವಿವಿಧ ರೀತಿಯಲ್ಲಿ ಸಾಹಿತ್ಯ ಸೇವೆಯನ್ನು ಮಾಡಿದವರು. ಮೈಸೂರು ಒಡೆಯರ ಕಥೆಗಳು, ಮಹಾರಾಣಿ ಲಕ್ಷ್ಮಮ್ಮಣ್ಣಿ ಇತ್ಯಾದಿ ಚರಿತ್ರೆಗಳಲ್ಲದೆ ಮಹಾಮಂತ್ರಿ, ಕಲ್ಲುಗಾಣ, ನಲ್ಲೂರ ಚೆಲುವೆ, ಸದಾನಂದ ಮಠ (ಕಥೆ ಕಾದಂಬರಿಗಳು), ಜಂಗಮವಿಜಯ, ತಪಃಫಲ (ನಾಟಕ), ಮುದ್ದುಕನ್ನಡನಾಡು, ದವನ, ಹೊಂಬಾಳೆ (ಕವಿತೆ) ಗಳಲ್ಲದೆ ಆತ್ಮಜ್ಞಾನಿ ಅಲ್ಲಮಪ್ರಭು, ಶಿವಯೋಗಿ ಸಿದ್ದರಾಮ, ವೈರಾಗ್ಯ ನಿಧಿ ಅಕ್ಕಮಹಾದೇವಿ, ವೀರಶೈವಧರ್ಮ ಪರಿಚಯ, ಶೂನ್ಯ ಸಿಂಹಾಸನ, ಬಸವಣ್ಣ ಮುಂತಾದ ಶೈವ ಧರ್ಮದ ಹಾಗೂ ಜೈನ ಧರ್ಮ ಪರಿಚಯ ಕುರಿತ ಒಟ್ಟಾರೆಯಾಗಿ ಮುವತ್ತಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಮಠಮಾನ್ಯಗಳಿಂದ 'ವಿದ್ಯಾವಿಭೂಷಣ, ಸಾಹಿತ್ಯಭೂಷಣ' ಇತ್ಯಾದಿ ಪ್ರಶಸ್ತಿಗಳು ಬಂದಿದ್ದವು. ಲಿಂಗಣ್ಣಯ್ಯರವರು ೧೯೭೬ರಲ್ಲಿ ನಿಧನರಾದಂತೆ ತಿಳಿದುಬರುತ್ತದೆ. ಲಿಂಗಣ್ಣಯ್ಯ ಅವರ ಪುತ್ರ ಓ.ಎಲ್. ನಾಗಭೂಷಣ ಸ್ವಾಮಿ ಅವರೂ ಬರಹಗಾರರಾಗಿದ್ದು, ಅನೇಕ ವೈಚಾರಿಕ ಲೇಖನ, ಗ್ರಂಥಗಳನ್ನು ಬರೆದಿದ್ದಾರೆ.

ಗೌರಿಬಿದನೂರಿನ ಗುಂಡ್ಲಹಳ್ಳಿಯಲ್ಲಿ ಜನಿಸಿದ ಆಸ್ತಾನ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರು (೧೯೧೪–೯೦) ಈ ಹಿಂದೆ ಹೇಳಿದಂತೆ ಸಂಸ್ಕೃತದಲ್ಲಿ ಇಪ್ಪತ್ತೈದು ಗ್ರಂಥಗಳನ್ನು ರಚಿಸಿದ್ದು, ಕನ್ನಡದಲ್ಲಿ ಶಿವನ ಸೋಲು, ಪಕ್ಷ್ಮಲಾಕ್ಷಿ, ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿ, ಇಷ್ಟಲಿಂಗ ವಿಜ್ಞಾನ ಇತ್ಯಾದಿಯಾಗಿ ಐವತ್ತಕ್ಕೂ ಹೆಚ್ಚು ಜೀವನ ಚರಿತ್ರೆ, ಗೇಯ ಪದ್ಯಗಳಲ್ಲಿಯೂ ಏಳೆಂಟು ಪಠ್ಯಪುಸ್ತಕಗಳನ್ನು ರಚಿಸಿದ್ದಾರೆ. ಆರಾಧ್ಯರಿಗೆ ಅರಮನೆಯಿಂದ 'ಆಸ್ಥಾನ ವಿದ್ವಾನ್' ಪ್ರಶಸ್ತಿಯಲ್ಲದೆ ರಾಜ್ಯ ಪ್ರಶಸ್ತಿ, ಶಿವಾದ್ವೈತ ಭೂಷಣ, ಸಾಹಿತ್ಯ ರತ್ನ, ಶಿವತತ್ವ ಚಿಂತಾರತ್ನ, ವಿದ್ಯಾವಾರಿಧಿ, ವ್ಯಾಖ್ಯಾನ ವಿಭೂಷಣ ಇತ್ಯಾದಿ ಪ್ರಶಸ್ತಿಗಳು ಬಂದಿದ್ದವು.

ಇಪ್ಪತ್ತನೇ ಶತಮಾನದ ಆರಂಭದಲ್ಲಿ ಜಿಲ್ಲೆಯಲ್ಲಿ ಜನಿಸಿದವರೆಂದರೆ ಪ್ರಗತಿಶೀಲ ಸಾಹಿತ್ಯ ಚಳವಳಿಯ ಹರಿಕಾರ, ಅ.ನ.ಕೃಷ್ಣರಾಯರು (೧೯೦೮–೧೯೭೧) ನಂತರ ಅವರ ಬರವಣಿಗೆ ಕಾರ್ಯಕ್ಷೇತ್ರ ಬೆಂಗಳೂರು ನಗರವಾಯಿತಾದರೂ ಕೋಲಾರ ಜಿಲ್ಲೆಯ ಸಾಹಿತಿ ಕಲಾವಿದರೊಂದಿಗೆ ಸಂಪರ್ಕವಿರಿಸಿಕೊಂಡಿದ್ದವರು.

ಇದೇ ಸುಮಾರಿಗೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಅಂಬಡಗಟ್ಟಿಯಲ್ಲಿ ಜನಿಸಿದ ಜ.ಚ.ನಿ (ಜ ೧೯೦೯) ಬಾದಾಮಿ ಬಳಿಯ ಶಿವಯೋಗಿ ಮಂದಿರದಲ್ಲಿ ಆಧ್ಯಾತ್ಮ ಶಿಕ್ಷಣ ಪಡೆದು, ಬಾಗೇಪಲ್ಲಿ ಬಳಿಯ ಗೂಳೂರಿನ ನಿಡುಮಾಮಿಡಿ ಪೀಠಕ್ಕೆ ಅಧಿಪತಿಯಾಗಿ ಆಯ್ಕೆಯಾದರು. ಜಗದ್ಗುರು ಚನ್ನಬಸವರಾಜ ದೇಶಿಕೇಂದ್ರ ನಿಡುಮಾಮಿಡಿ ಸ್ವಾಮಿಯಾಗಿ 'ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯ ಸಿಂಹಾಸನಾಧೀಶ್ವರ' ಎಂಬ ಅಂಕಿತದಲ್ಲಿ ಸುಮಾರು ೪೦೦೦ ವಚನಗಳನ್ನು ರಚಿಸಿದ್ದು 'ವಚನಾಂಜಲಿ, ವಚನಮಂಜರಿ, ವಚನವಲ್ಲರಿ, ಮಣಿ ವಚನಗಳು ಇತ್ಯಾದಿ ಸಂಗ್ರಹಗಳಲ್ಲಿ ಪ್ರಕಟಿಸಿದ್ದಾರೆ. ಆದಿ ರೇಣುಕರ 'ಸಿದ್ಧಾಂತ ಶಿಖಾಮಣಿ' ಸಂಸ್ಕೃತ ಗ್ರಂಥವನ್ನು 'ಮಣಿಕಾಂತಿ' ಎಂಬ ಹೆಸರಿನಿಂದ ಗದ್ಯದಲ್ಲೂ, 'ಮಣಿ ಮುಕುರ' ಎಂಬ ಹೆಸರಿನಿಂದ ಪದ್ಯ ರೂಪದಲ್ಲೂ ಅನುವಾದಿಸಿದ್ದಾರೆ. ವಚನ ರೂಪದಲ್ಲಿಯೂ ರಚಿಸಿದ್ದಾರೆ. ಸುಮಾರು ೧೪೦ ಕೃತಿಗಳು ರಚಿಸಿರುವುದಾಗಿ ತಿಳಿದುಬರುತ್ತದೆ. ಶಿವಾರಪಟ್ಟಣದಲ್ಲಿ ೧೯೯೯ರಲ್ಲಿ ನಡೆದ ೪ನೇ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ನಿಡುಮಾಮಿಡಿ ಪೀಠಕ್ಕೆ ಮುಂದಿನ ಅಧಿಪತಿಯಾದ ವೀರಭದ್ರ ಚನ್ನಮಲ್ಲ ಸ್ವಾಮಿಗಳು ಸಹ ಆಧ್ಯಾತ್ಮ ಸಾಹಿತ್ಯ ರಚನೆ ಮಾಡಿದ್ದಾರೆ.

ಕೊತ್ತಮಂಗಲದ ಡಿ.ಶೇಷಗಿರಿರಾವ್ (ಜ ೧೯೦೭) ಕೃಷಿ ಇಲಾಖೆಯಲ್ಲಿ ಮುಖ್ಯಸ್ಥರಾಗಿದ್ದು ಶ್ರೀಗಂಧ, ಜೇನುಸಾಕಣೆ, ಸಸ್ಯ ಸಂರಕ್ಷಣೆ ಕೈಪಿಡಿ ಇತ್ಯಾದಿ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ಸಿ.ಕೆ.ನಾಗರಾಜಾರಾವ್ (ಜ ೧೯೧೫) ಚಿತ್ರದುರ್ಗದ ಚಳ್ಳಕೆರೆಯಲ್ಲಿ ಜನಿಸಿದರಾದರೂ ಇವರ ತಂದೆ ಚಿಕ್ಕಬಳ್ಳಾಪುರದವರು. ನಾಟಕ, ಚಲನಚಿತ್ರಕಥೆಗಳಲ್ಲಿ ಪರಿಶ್ರಮವಿದ್ದರೂ 'ಪಟ್ಟ ಮಹಾದೇವಿ ಶಾಂತಲಾದೇವಿ' ಎಂಬ ಹೆಸರಿನಲ್ಲಿ ಶಾಂತಲೆ ಕುರಿತ ಬೃಹತ್ ಕಾದಂಬರಿ ರಚಿಸಿದ್ದು ಅದಕ್ಕೆ ಜ್ಞಾನಪೀಠ ಪ್ರಶಸ್ತಿಗೆ ಸಮನಾದ ಮೂರ್ತಿದೇವಿ ಪ್ರಶಸ್ತಿ ಲಭ್ಯವಾಗಿದೆ (೧೯೭೮). 'ಮಹಾಕವಿಲಕ್ಷ್ಮೀಶನ ಸ್ಥಳ ಮತ್ತು ಕಾವ್ಯ' ಕುರಿತ ಸಂಶೋಧನಾ ಪುಸ್ತಕಕ್ಕೆ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿದೆ. ಕಾಡುಮಲ್ಲಿಗೆ ಕಥಾ ಸಂಕಲನ ಸೇರಿದಂತೆ ಹಲವಾರು ನಾಟಕ, ವಿಮರ್ಶೆ, ವಿಡಂಬನೆಗಳನ್ನು ಬರೆದಿದ್ದಾರೆ. ೬ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಶಿಕ್ಷಣ ಕ್ಷೇತ್ರದಲ್ಲಿ ತಜ್ಞರೆನಿಸಿದ್ದ ಹೊಸ ಹಾದಿಯನ್ನೇ ಹಾಕಿಕೊಟ್ಟ ಗೌರಿಬಿದನೂರಿನ ಹೊಸೂರಿನಲ್ಲಿ ಜನಿಸಿದ ಎಚ್.ನರಸಿಂಹಯ್ಯ (೧೯೨೦–೨೦೦೫) ಅವರು ಬಡಕುಟುಂಬದಲ್ಲಿ ಜನಿಸಿ, ಬೆಂಗಳೂರಿಗೆ ಬರಿಗಾಲಿನಲ್ಲಿ ನಡೆದುಬಂದು, ಅತ್ಯಂತ ಹೆಚ್ಚಿನ ಶಿಕ್ಷಣ ಪಡೆದು ಅಮೆರಿಕೆಯ ಓಹಿಯೋ ಸ್ಟೇಟ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದವರು. ಬರಹಗಾರರಾಗಿ ಪತ್ರಿಕೆಗಳಿಗೆ ಅನೇಕ ಲೇಖನಗಳನ್ನು ಬರೆದಿದ್ದು ಆಯ್ದ ಲೇಖನಗಳು 'ತೆರೆದ ಮನ' ಎಂಬ ಹೆಸರಿನಲ್ಲಿ ಪ್ರಕಟವಾಗಿವೆ. 'ಹೋರಾಟದ ಹಾದಿ' ಅವರ ಆತ್ಮಚರಿತ್ರೆ ಈ ಎರಡೂ ಪುಸ್ತಕಗಳಿಗೆ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಬಂದಿದೆ. ಹಲವಾರು ಕಡೆಗಳಲ್ಲಿ ವಿದ್ಯಾಸಂಸ್ಥೆಗಳನ್ನು ಆರಂಭಿಸಿದ್ದ ಎಚ್.ಎನ್. ಒಂದು ಅವಧಿಗೆ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಲ್ಲದೆ, ಹಲವಾರು ಸಂಘಸಂಸ್ಥೆಗಳಲ್ಲಿ ವಿವಿಧ ಹುದ್ದೆಯಲ್ಲಿದ್ದರು. ಅವರಿಗೆ ರಾಜ್ಯ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ನಾಟಕ ಅಕಾಡಮಿಯಿಂದ ಫೆಲೋಶಿಪ್ ಹಾಗೂ ರಾಜ್ಯ ಸರ್ಕಾರ ಕೊಡಮಾಡುವ 'ಬಸವ ಪುರಸ್ಕಾರ'ವು ೨೦೦೧ರಲ್ಲಿಯೂ ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿಯೂ ದೊರೆತಿತ್ತು. ಎಚ್.ಎನ್. ಅವರು ವಿಧಾನಪರಿಷತ್ತಿನ ಸದಸ್ಯ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ

ಶ್ರೀಯುತರು ಪವಾಡ, ದೇವರುಗಳ ಬಗ್ಗೆ ವೈಜ್ಞಾನಿಕ ಶೋಧನಾ ಸಮಿತಿ ಸ್ಥಾಪಿಸಿ ಜನರ ಮೂಢ ನಂಬಿಕೆಗಳನ್ನು ನಿವಾರಿಸುವ ಕಾರ್ಯವನ್ನು ಯಶಸ್ವಿಯಾಗಿ ಕೈಗೊಂಡಿದ್ದರು. ಗೌರಿಬಿದನೂರಿನ ಇಡಗೂರಿನವರಾದ ಎಲ್.ಬಸವರಾಜು (ಜ ೧೯೧೯) ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದು ಸಂಶೋಧನಾ ಕ್ಷೇತ್ರದಲ್ಲಿ ಹೆಸರುವಾಸಿಯಾಗಿದ್ದಾರೆ. ಅವರ 'ಅಲ್ಲಮನ ವಚನ ಚಂದ್ರಿಕೆ' ಹಾಗೂ 'ಶಿವದಾಸ ಗೀತಾಂಜಲಿ'ಗಳಿಗೆ ಡಿ.ಲಿಟ್ ಪದವಿ ದೊರಕಿದೆ. ಇದೂ ಸೇರಿದಂತೆ ಪ್ರಸಾದಿ ಮಹದೇವಯ್ಯನ 'ಶೂನ್ಯ ಸಂಪಾದನೆ', ಸಂಶೋಧನಾ ಕ್ಷೇತ್ರದ ಮೈಲಿಗಲ್ಲುಗಳೆನಿಸಿವೆ. ಬಸವಣ್ಣ, ಅಲ್ಲಮ, ಅಕ್ಕಮಹಾದೇವಿಯರ ವಚನಗಳು ಹಾಗೂ ಸರ್ವಜ್ಞನ ತ್ರಿಪದಿಗಳನ್ನೂ, ಪಂಪನ ಆದಿಪುರಾಣ, ಕೇಶಿರಾಜನ ಶಬ್ದಮಣಿ ದರ್ಪಣವನ್ನೂ ಸಂಪಾದಿಸಿದ್ದಾರೆ. 'ಠಾಣಾಂತರ' ಹಾಗೂ 'ಜಾಲರಿ'ಗಳು ಕವನ ಸಂಗ್ರಹಗಳು. 'ಬುದ್ಧಚರಿತೆ' ಹಾಗೂ 'ಸೌಂದರಾನಂದ' ಬೌದ್ಧಧರ್ಮ ಕುರಿತ ಗ್ರಂಥಗಳ ಅನುವಾದಗಳು. ಎಲ್.ಬಸವರಾಜು ಅವರಿಗೆ ಪ್ರತಿಷ್ಠಿತ ಪಂಪ ಪ್ರಶಸ್ತಿಯೂ ಸೇರಿದಂತೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಚಾವುಂಡರಾಯ ಪ್ರಶಸ್ತಿ ಇತ್ಯಾದಿ ಹಲವಾರು ಗೌರವಗಳು ಸಂದಾಯವಾಗಿವೆ. ಬಸವರಾಜು ಅವರ ಹೆಸರಿನಲ್ಲಿ ಕೋಲಾರದಲ್ಲಿ ಪ್ರತಿಷ್ಠಾನವೊಂದಿದ್ದು ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿವೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಎನ್.ಬಸವಾರಾಧ್ಯರವರು ಗೌರಿಬಿದನೂರು ತಾಲೂಕಿನ ನಾಮಗೊಂಡ್ಲು ಹಳ್ಳಿಯಲ್ಲಿ ೧೯೨೬ರಲ್ಲಿ ಜನಿಸಿದರು. ರಾಘವಾಂಕನ 'ಹರಿಶ್ಚಂದ್ರ ಕಾವ್ಯ' ಕುಮಾರ ವಾಲ್ಮೀಕಿಯ 'ತೊರವೆ ರಾಮಾಯಣ' ಹಾಗೂ ದೇವಲಾಪುರದ ನಂಜುಂಡ ಕವಿಯ ಕೃತಿಗಳನ್ನು ಸಂಪಾದಿಸಿದ್ದಾರೆ. 'ತೊರವೆ ರಾಮಾಯಣ' ಹಾಗೂ 'ರಾಮನಾಥ ಪುರಾಣ'ಗಳಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಹಳಗನ್ನಡ ನಿಘಂಟಿಗೆ ತೀ.ನಂ.ಶ್ರೀ ಪ್ರಶಸ್ತಿ ಲಭ್ಯವಾಗಿದೆ. ಹಲವಾರು ಸಂಸ್ಥೆ, ಸಮಿತಿಗಳಲ್ಲಿ ಅಧ್ಯಕ್ಷ, ಸದಸ್ಯ ಇತ್ಯಾದಿ ಕಾರ್ಯನಿರ್ವಹಿಸಿರುವ ಬಸವಾರಾಧ್ಯರಿಗೆ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಕೆಲವು ಪ್ರಶಸ್ತಿ, ಬಹುಮಾನ, ಗೌರವಗಳು ಬಂದಿವೆ. ಬಂಗಾರಪೇಟೆಯಲ್ಲಿ ೧೯೮೮ರಲ್ಲಿ ನಡೆದ ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಚಿಕ್ಕಬಳ್ಳಾಪುರದಲ್ಲಿ ೧೯೨೨ರಲ್ಲಿ ಜನಿಸಿದ ರಘುಸುತ ಅವರದು ಸಾಂಸ್ಕೃತಿಕ ಕ್ಷೇತ್ರದಲ್ಲಿ ಬಹುಮುಖಿ ವ್ಯಕ್ತಿತ್ವ. ಮೊದಲಿಗೆ ನಾಟಕಗಳಲ್ಲಿ ಭಾಗವಹಿಸಿ, ಚಲನಚಿತ್ರ ಕ್ಷೇತ್ರದಲ್ಲಿ ಚಿತ್ರಕಥೆ, ದಿಗ್ದರ್ಶನ ಇತ್ಯಾದಿಗಳಲ್ಲಿ ತರಬೇತಿ ಪಡೆದು, ಪತ್ರಿಕೆಗಳಲ್ಲಿ ಉಪಸಂಪಾದಕ, ಲೇಖಕರಾಗಿ ದುಡಿದು, ಶಿಕ್ಷಣ, ನೃತ್ಯ, ಸಂಗೀತಗಳಲ್ಲಿ ಹೆಸರುಮಾಡಿದವರು. ಸಾಹಿತ್ಯಕ್ಷೇತ್ರದಲ್ಲಿ ಶಿಶುಸಾಹಿತ್ಯದಿಂದ ಹಿಡಿದು ಆಧ್ಯಾತ್ಮಿಕ ವೈಚಾರಿಕ ಸಾಹಿತ್ಯದವರೆಗೆ ಅನೇಕ ವಿಭಾಗಗಳಲ್ಲಿ ಕೃಷಿ ನಡೆಸಿದವರು. ಆದರೆ ಭೂಗೋಳ ಶಾಸ್ತ್ರಕ್ಷೇತ್ರದಲ್ಲಿ ಮೊದಲಿಗೆಂಬಂತೆ ಅನೇಕ ಲೇಖನ, ಪುಸ್ತಕ, ಪ್ರಚಾರೋಪನ್ಯಾಸ ನೀಡಿ ಸಾಹಿತ್ಯದ ಮೂಲಕವೂ ಭೂಗೋಳ ಶಾಸ್ತ್ರವನ್ನು ವೈಜ್ಞಾನಿಕವಾಗಿ ನೋಡುವಂತೆ ಮಾಡಿದವರು. ನಾಟಕ ಸಂಸ್ಥೆಗಳ ಬಗ್ಗೆ, ಕೋಲಾರ ಜಿಲ್ಲೆಯ ಲೇಖಕರ ಬಗ್ಗೆ ಪುಸ್ತಕ ಬರೆದವರು. ಅವರ 'ಮೀರ್ ಸಾದಕ್' ಐತಿಹಾಸಿಕ ಧಾರವಾಹಿ, ವೈಜ್ಞಾನಿಕ ಕಾದಂಬರಿ 'ಗಗನ ಕುಸುಮ', ನಗೆಕಾದಂಬರಿ 'ಮೇಸ್ತ್ರಿಚೇಲ', ಮುಂತಾದವು ಆಯಾ ಪ್ರಕಾರಗಳಲ್ಲಿ ಪ್ರಥಮವೆನಿಸಿವೆ. ಒಟ್ಟಾರೆಯಾಗಿ ೨೨೦ ಪುಸ್ತಕಗಳನ್ನು ರಚಿಸಿರುವ ರಘುಸುತರವರಿಗೆ ಹವ್ಯಾಸಿ ರಂಗಭೂಮಿಯ ಕೃತಿಗಳಿಗೆ ಕೇಂದ್ರ ಸರ್ಕಾರದ ಬಹುಮಾನ, ಉತ್ತಮ ಶಿಕ್ಷಕ ಪ್ರಶಸ್ತಿ, ವೇದ ವಿದ್ಯಾಸಂಸ್ಥೆಯಿಂದ 'ವಿದ್ವಾನ್' ಪ್ರಶಸ್ತಿಗಳಲ್ಲದೆ ಅನೇಕ ಅಭಿಮಾನಿಗಳು ಸನ್ಮಾನಿಸಿ ಗೌರವಿಸಿದ್ದಾರೆ. ಗೊರೂರು ಪ್ರಶಸ್ತಿ, ಸಾಹಿತ್ಯ ಮಹೋಪಾಧ್ಯಾಯ ಪ್ರಶಸ್ತಿಗಳಿಸಿದ ಶ್ರೀಯುತರು ಕೋಲಾರ ಜಿಲ್ಲಾ ಸಾಹಿತ್ಯ ಸಮ್ಮೇಳನಗಳಲ್ಲಿ ವಿವಿಧ ಗೌರವ ಪಡೆದಿದ್ದು ೨೦೦೦ದಲ್ಲಿ ಕೆಜಿಎಫ್‌ನಲ್ಲಿ ನಡೆದ ೬ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಚಿಕ್ಕಬಳ್ಳಾಪುರದಲ್ಲಿ ಜನಿಸಿದ ಬಾಲಕೃಷ್ಣ ರಾಜಗೋಪಾಲ್ (ಬಾ.ರಾ.ಗೋಪಾಲ್–೧೯೩೦–೧೯೯೭) ಉದಕಮಂಡಲ, ಧಾರವಾಡ, ಅನಂತಪುರ ಇತ್ಯಾದಿ ಕಡೆಗಳಲ್ಲಿ ಶಾಸನ ತಜ್ಞರಾಗಿದ್ದು, ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದಿಂದ ಈ ಹಿಂದೆ ಬಿ.ಎಲ್.ರೈಸ್ ಅವರು ಸಂಪಾದಿಸಿದ್ದ ಎಪಿಗ್ರಾಫಿಯಾ ಕರ್ನಾಟಿಕಾ ಗ್ರಂಥ ಮಾಲೆಯನ್ನು ಪರಿಶೀಲಿಸಿ ವ್ಯಾಖ್ಯಾನಗಳೊಂದಿಗೆ ಒಂಬತ್ತು ಸಂಪುಟಗಳನ್ನು ಪುನರ್ ಮುದ್ರಿಸಿದರು. ಬನವಾಸಿಯ ಕದಂಬರು, ಕರ್ನಾಟಕದಲ್ಲಿ ರಾಮಾನುಜರು, ಕರ್ನಾಟಕದ ಕಲೆಗಳು–ವಾಸ್ತು, ಇತಿಹಾಸ–ತತ್ವ ಮತ್ತು ಶಾಸ್ತ್ರ, ತಮಿಳುನಾಡಿನ ಕನ್ನಡ ಶಾಸನಗಳು ಇತ್ಯಾದಿಯಾಗಿ ೧೭ ಗ್ರಂಥಗಳನ್ನು ೭೮ ಲೇಖನಗಳನ್ನು ಬರೆದಿದ್ದಾರೆ. ಭಾರತೀಯ ಶಾಸನ ತಜ್ಞರ ಸಮ್ಮೇಳನ, ಇತಿಹಾಸ ಅಕಾಡೆಮಿ ವಾರ್ಷಿಕ ಸಮ್ಮೇಳನ, ಆಂಧ್ರಪ್ರದೇಶ ಇತಿಹಾಸ ಸಮ್ಮೇಳನ ಇತ್ಯಾದಿ ಹಲವಾರು ಸಮ್ಮೇಳನಗಳಲ್ಲಿ ಅಧ್ಯಕ್ಷತೆ ವಹಿಸಿದ್ದರು.

ಮೂಲತಃ ಆನೇಕಲ್ಲಿನವರಾದ ವೈ.ಎಸ್. ಗುಂಡಪ್ಪನವರು (೧೯೦೫–೧೯೯೮) ಸಾಹಿತಿ, ನಾಟಕಕಾರ, ಸಂಘಟಕ ಇತ್ಯಾದಿ ಬಹುಮುಖ ಪ್ರತಿಭೆಯುಳ್ಳವರು. ಪ್ರೌಢಶಾಲೆಯಲ್ಲಿ ಓದುತ್ತಿರುವಾಗಲೇ 'ಶ್ರೀ ಚಂಪಕಧಾಮ ಸ್ವಾಮಿ ಸೇವಾ ಸಂಘ ಆರಂಭಿಸಿ, ಸಂಘದ ವತಿಯಿಂದ ನಾಟಕ ಪ್ರದರ್ಶನ 'ಚಂಪಕಧಾಮ' ಅಂಕಿತದಲ್ಲಿ ಭಕ್ತಿಗೀತೆ ರಚನೆ, 'ಗಾನರಸಾಯನ', 'ಕರ್ಮಶೇಷ' ಪುಸ್ತಕ ಪ್ರಕಟಿಸಿದ್ದರು. ಮಕ್ಕಳಿಗಾಗಿಯೇ ಅಹಿಂಸಾ ಪರಮೋಧರ್ಮ, ತೋಳರಾಯನ ಸಭೆ, ಕಾಸಿನಗಂಟು ಮುಂತಾದ ಅನೇಕ ಕೃತಿಗಳನ್ನೂ, ಭಾಮಿನಿ ಷಟ್ಪದಿಯಲ್ಲಿ 'ಭಗವಾನ್ ಬುದ್ಧ'ವನ್ನು ರಚಿಸಿದ್ದಾರೆ. ಶ್ರೀಯುತರ ಸಮಗ್ರಕೃತಿಗಳ ಸಂಕಲನ ೧೯೮೪ರಲ್ಲಿ 'ಬಂಗಾರದಂಗಾಲು' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. 'ಕೋಲಾರದ ಕರ್ನಾಟಕ ಸಂಘ', 'ಮಕ್ಕಳಕೂಟ', 'ಸೋದರಿ ಸಮಾಜ'ಗಳ ಕಾರ್ಯದರ್ಶಿಗಳಾಗಿಯೂ ಸೇವೆಸಲ್ಲಿಸಿದ್ದರು. ಗುಂಡಪ್ಪನವರಿಗೆ 'ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ಪುರಸ್ಕಾರ, ರಾಷ್ಟ್ರಪ್ರಶಸ್ತಿ ಇತ್ಯಾದಿಗಳು ಬಂದಿದ್ದವು. ಇವರ ಪುಸ್ತಕವೊಂದು ತಮಿಳುನಾಡಿನ ಪ್ರಾಥಮಿಕ ಶಾಲೆಗಳಿಗೆ ಪಠ್ಯಪುಸ್ತಕವಾಗಿತ್ತು. ಗುಂಡಪ್ಪನವರಿಗೆ ೬೦ ವರ್ಷವಾದಾಗ ಸನ್ಮಾನಿಸಿ ಗೌರವಗ್ರಂಥ ನೀಡಲಾಯಿತು.

ಜಿಲ್ಲೆಯ ಇನ್ನೊಂದು ಮೇರು ಕೊಡುಗೆಯೆಂದರೆ ಹಂಪ.ನಾಗರಾಜಯ್ಯ. ಗೌರಿಬಿದನೂರು ತಾಲೂಕಿನ ಹಂಪಸಂದ್ರದಲ್ಲಿ ೧೯೩೬ರಲ್ಲಿ ಜನಿಸಿದ ಹಂಪನಾ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಸೇವೆಸಲ್ಲಿಸಿ ಪರಿಷತ್ತು ಜನಸಾಮಾನ್ಯರ ಕೈಗೆ ಎಟುಕುವಂತೆ, ಅದಕ್ಕೊಂದು ಅಸ್ತಿತ್ವ ನೀಡಿದವರು. ಕೇಂದ್ರಸ್ಥಾನದಿಂದ ಹೊರಬಂದು ಜಿಲ್ಲಾ ಹಾಗೂ ತಾಲೂಕುಮಟ್ಟಗಳಲ್ಲಿ ಸಾಹಿತ್ಯ ಸಮ್ಮೇಳನಗಳಲ್ಲದೆ ವಿವಿಧ ಸಾಹಿತ್ಯ ಪ್ರಕಾರಗಳಿಗೆ ಸಮ್ಮೇಳನಗಳು ನಡೆಯುವಂತಾಯಿತು. ಸ್ವತಃ ಪುಸ್ತಕ ಪ್ರೇಮಿಯಾದ ಹಂಪನಾ ಅವರು ಪರಿಷತ್ತಿನ ಅಧ್ಯಕ್ಷತೆಯ ಅವಧಿಯಲ್ಲಿ ೪೦೦ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಲ್ಲದೆ, ನಂಬಲಿಕ್ಕೂ ಸಾಧ್ಯವಿಲ್ಲದಷ್ಟೂ ಕಡಿಮೆ ದರದಲ್ಲಿ ಮಾರಾಟಕ್ಕಿರಿಸಿದ್ದರು. ವೈಯುಕ್ತಿಕವಾಗಿ ಹಂಪನಾ ಅವರು ವಿದ್ವಾಂಸ, ಸಂಶೋಧಕ, ವಾಗ್ಮಿ, ಭಾಷಾವಿಜ್ಞಾನಿ, ಪ್ರಾಧ್ಯಾಪಕ ಇತ್ಯಾದಿ ಎನಿಸಿಕೊಂಡಿದ್ದು ಆಯಾ ಕ್ಷೇತ್ರಗಳಲ್ಲಿ ಪ್ರೌಢವಾದ ಗ್ರಂಥಗಳನ್ನು ರಚಿಸಿದ್ದಾರೆ. ಜಯಾನೃಪಕಾವ್ಯ, ಭರತೇಶವೈಭವ, ಸಾಳ್ವಭಾರತ, ಶಾಂತಿ ಪುರಾಣ ಇತ್ಯಾದಿಗಳನ್ನು ಸಂಪಾದಿಸಿದ್ದಾರೆ. ನಾಲ್ಕು ಮುದ್ರಣ ಕಂಡಿರುವ ದ್ರಾವಿಡ ಭಾಷಾ ವಿಜ್ಞಾನವಲ್ಲದೆ ದ್ರಾವಿಡ ಸಂಖ್ಯಾವಾಚಕಗಳು, ಭಾಷೆ, ಭಾಷಾ ವಿಜ್ಞಾನ ಕುರಿತು ಗ್ರಂಥ ರಚಿಸಿದ್ದಾರೆ. ಜನಪದ ಕ್ಷೇತ್ರಕ್ಕೆ ನಾಡಿನ ಜನಪದ ಕಲಾವಿದರ ಪರಿಚಯಾವಳಿ, ಜಾತ್ರೆಗಳು ಇತ್ಯಾದಿ ಪುಸ್ತಕಗಳ ಕೊಡುಗೆ ನೀಡಿದ್ದಾರೆ. ಮೊದಲಿನಿಂದಲೂ ಜೈನ ಧರ್ಮದ ಕಲೆ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಪಾರ ಒಲವು ಇದ್ದು ಆ ಕುರಿತೇ ಅನೇಕ ಪ್ರೌಢಗ್ರಂಥಗಳನ್ನು ಕನ್ನಡ ಹಾಗೂ ಇಂಗ್ಲೀಷ್‌ನಲ್ಲಿ ರಚಿಸಿದ್ದಾರೆ. ಕರ್ನಾಟಕ ಮತ್ತು ಜೈನಧರ್ಮ, ನೋಂಪಿಯ ಕಥೆಗಳು, ಯಕ್ಷಯಕ್ಷಿಯರು, ಸಾಂತರು ಒಂದು ಅಧ್ಯಯನ, ಹುಂಬುಜ ಕ್ಷೇತ್ರದರ್ಶನ ಇತ್ಯಾದಿ ಹಲವಾರು ಗ್ರಂಥಗಳು ವಿದ್ವಾಂಸರುಗಳಿಂದ ಮೆಚ್ಚುಗೆಗಳಿಸಿವೆ. 'ಚಾರುವಸಂತ' ಒಂದು ಗೀತ ನಾಟಕ. ಹಂಪನಾ ಅವರಿಗೆ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಅನೇಕ ಗೌರವಾರ್ಪಣೆಗಳು, ಸಮಾರಂಭಗಳು ನಡೆದಿದ್ದು ಗೌರವಗ್ರಂಥಗಳ ಸಮರ್ಪಣೆಯೂ ಆಗಿದೆ. ಹಂಪನಾ ಚಿಕ್ಕಬಳ್ಳಾಪುರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಚಿಕ್ಕಬಳ್ಳಾಪುರದವರೇ ಆದ ಪ್ರಧಾನ್ ಗುರುದತ್ತ (ಜ ೧೯೩೮) ಅವರು ಮೈಸೂರು, ಕಾಶಿಗಳಲ್ಲಿ ವಿದ್ಯಾಭ್ಯಾಸ ಮಾಡಿ ಅನುವಾದ ಕ್ಷೇತ್ರಕ್ಕೆ ತಮ್ಮನ್ನು ತೊಡಗಿಸಿಕೊಂಡವರು. ಕುವೆಂಪು ಅವರ ರಾಮಾಯಣ ದರ್ಶನವನ್ನು ಹಿಂದಿಗೆ ಅನುವಾದಿಸಿದ್ದು, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದಿಂದ ರಾಷ್ಟ್ರೀಯ ಪ್ರಶಸ್ತಿ ದೊರಕಿದೆ. ರಸ ಸಿದ್ಧಾಂತ, ಶ್ರೇಷ್ಠ ಪ್ರಬಂಧಗಳು, (ಮೂಲ ನಗೇಂದ್ರ) ದಿವ್ಯ, ಅಮಿತ, ದಾದಾ ಕಾಮ್ರೇಡ್, ದೇಶದ್ರೋಹಿ, ಗಾಂಧೀವಾದದ ಶವಪರೀಕ್ಷೆ (ಮೂಲ: ಯಶಪಾಲ) ಜಯಯೌಧೇಯ, ದಿವೋದಾಸ್ ಇತ್ಯಾದಿಗಳಲ್ಲದೆ ಲೋಕದೇವ ನೆಹರು, ಭಾರತೀಯ ಸಮಾಜ ಒಂದು ಐತಿಹಾಸಿಕ ವಿಶ್ಲೇಷಣೆ, ಗಾಂಧೀಜಿ ನಾನು ಕಂಡಂತೆ ಇವೇ ಮುಂತಾದ ಗ್ರಂಥಗಳನ್ನು ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಅಲ್ಲದೆ ಕನ್ನಡದಿಂದ ಹಿಂದಿಗೆ ಬಸವೇಶ್ವರರ ವಚನ, ಚದುರಂಗದ 'ವೈಶಾಖ' ಸೇರಿದಂತೆ ಹಲವಾರು ಕೃತಿಗಳು ಅನುವಾದಗೊಂಡಿವೆ. ಆಡಳಿತಭಾಷೆ ಕುರಿತು 'ಕನ್ನಡಕ್ಕಾಗಿ ಆಡಳಿತಭಾಷೆ ಕೆಲವು ವಿಚಾರಗಳು', 'ಕಚೇರಿ ಕೈಪಿಡಿ' ರಚಿಸಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿಗಳು, ಮೈಸೂರು ವಿಶ್ವವಿದ್ಯಾಲಯ ಸುವರ್ಣ ಮಹೋತ್ಸವ ಸಂಶೋಧನಾ ಪ್ರಶಸ್ತಿ, ತೀ.ನಂ.ಶ್ರೀ ಸಂಶೋಧನಾ ಪ್ರಶಸ್ತಿ, ರಾಜ್ಯಸರ್ಕಾರದ ಕಲ್ಪಶ್ರೀ ಪ್ರಶಸ್ತಿಗಳು ಇವರಿಗೆ ದೊರೆತಿವೆ.

ಕೈವಾರದಲ್ಲಿ ೧೯೪೦ರಲ್ಲಿ ಜನಿಸಿದ ಕೈಪು ಲಕ್ಷ್ಮೀನರಸಿಂಹ ಶಾಸ್ತ್ರಿಗಳದು ಬಹುಮುಖ ಸಾಹಿತ್ಯ, ಸಾಂಸ್ಕೃತಿಕ ಸೇವೆ. ಮೈಸೂರು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಪಡೆದಿರುವ ಕೈಪು ಅವರು ಸಂಶೋಧನಾ ಕೃತಿಯಾದ 'ಕೈವಾರ ಕ್ಷೇತ್ರ'ಗಳಲ್ಲದೆ, 'ಅರಳಿದ ಹೂ' ಕಾದಂಬರಿ ಮಕ್ಕಳಿಗಾಗಿ ಜನಮೇಜಯ, ನಚಿಕೇತ, ಭಾರದ್ವಜ ಇತ್ಯಾದಿಗಳನ್ನು 'ಬಿಲ್ಲುಹಿಡಿದ ಬ್ರಾಹ್ಮಣ' ಕಥೆ. ರಸಿಕ ಸಮಾಜದ ಚಿತ್ರಣವಾದ 'ಅಂಗನೆಯರ ಇಂಗಿತ' ಧಾರಾವಾಹಿ ಕಾದಂಬರಿಗಳನ್ನು ಬರೆದಿದ್ದಾರೆ. ಪ್ರಬುದ್ಧ ಕರ್ನಾಟಕ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆ ಮಾಡಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಆಂಧ್ರ ಮಹಾಭಾರತವನ್ನು ಮೂಲ ಪಾಠದ ಸಮೇತ ಸರಳಗನ್ನಡ ಗದ್ಯಾನುವಾದ ಮಾಡಿಕೊಟ್ಟಿದ್ದಾರೆ. ಕನ್ನಡ ವರ್ಧಮಾನ ಪುರಾಣಗಳ ತೌಲನಿಕ ಅಧ್ಯಯನ ಕೈಗೊಂಡಿದ್ದಾರೆ. ಸಂಗೀತ, ಕೀರ್ತನೆಗಳಲ್ಲೂ ಪ್ರೌಢಿಮೆ ಸಾಧಿಸಿರುವ ಕೈಪು ಲಕ್ಷ್ಮೀನರಸಿಂಹ ಶಾಸ್ತ್ರಿಗಳಿಗೆ ಅನೇಕ ಪ್ರಶಸ್ತಿ ಗೌರವಗಳು ಬಂದಿದೆ. ಪ್ರಸ್ತುತ ಬೆಂಗಳೂರಿನ ಶ್ರೀ ಯೋಗಿ ನಾರಾಯಣ ಇನ್ಸಿಟ್ಯೂಟ್ ಆಫ್ ಇಂಡಾಲಜಿ ಸಂಶೋಧನಾ ಕೇಂದ್ರದಲ್ಲಿ ಸೇವೆಸಲ್ಲಿಸುತ್ತಿದ್ದಾರೆ.

ಚಿಂತಾಮಣಿಯ ಬೊಮ್ಮಸಂದ್ರದ ಬಿ.ಜಿ.ಸತ್ಯಮೂರ್ತಿ (ಜ ೧೯೩೭) ಆರಂಭದಲ್ಲಿ ಪತ್ರಿಕೆಗಳಿಗೆ ಬರೆಯುತ್ತಿದ್ದು ನಂತರ ಕಥೆ, ಕಾದಂಬರಿಗಳನ್ನು ರಚಿಸಿದ್ದಾರೆ. ಪ್ರೇಮದ ಬಾಳು, ಹೃದಯವೀಣೆ ಒಲವಿನ ಒಸರು ಇತ್ಯಾದಿ ಇಪ್ಪತ್ತೂ ಹೆಚ್ಚು ಕಾದಂಬರಿ, ಹತ್ತಕ್ಕೂ ಹೆಚ್ಚು ಕಥಾಸಂಕಲನ ಹಾಗೂ ಹಲವಾರು ನಾಟಕಗಳನ್ನು ತಂದಿರುವ ಸತ್ಯಮೂರ್ತಿಯವರು ಕೋಲಾರದ ವಾಸ್ತುಗಳನ್ನು ಹಾಗೂ ಶಿವಾರಪಟ್ಟಣದ ಶಿಲ್ಪಿಗಳನ್ನು ಕುರಿತು ಸಚಿತ್ರ ಲೇಖನಗಳನ್ನು ಬರೆದಿದ್ದಾರೆ. ಶ್ರೀಯುತರಿಗೆ ಅತ್ತಿಮಬ್ಬೆ ಪ್ರಶಸ್ತಿ, ಆರ್ಯಭಟಪ್ರಶಸ್ತಿ ಇತ್ಯಾದಿಗಳು ಬಂದಿವೆ.

ಜಿಲ್ಲೆಯ ಡಿ.ಪಾಳ್ಯದಲ್ಲಿ ೧೯೩೮ರಲ್ಲಿ ಜನಿಸಿದ ವಿ.ಗೋಪಾಲಕೃಷ್ಣ ಅವರು ಜಿಲ್ಲೆಯ ಸ್ಥಳನಾಮಗಳ ಬಗ್ಗೆ ಅಧ್ಯಯನ ಮಾಡಿ, ಪಿಎಚ್.ಡಿ ಪದವಿ ಪಡೆದಿದ್ದು ಚೆನ್ನೈನ ಏಷಿಯನ್ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥರಾಗಿದ್ದವರು. ಪ್ರಸ್ತುತ ಕುಪ್ಪಂನ ಭಾಷಾ ಅಧ್ಯಯನ ಕೇಂದ್ರದಲ್ಲಿದ್ದು ಸ್ಥಳನಾಮಗಳಿಗೆ ಸಂಬಂಧಿಸಿದಂತೆ ಲೇಖನಗಳನ್ನು ಬರೆದಿದ್ದಾರೆ. ಮಲೆಯಾಳಂ ಕಥೆಗಳ ಅನುವಾದ 'ಕಂದರ' ಹಾಗೂ ತಮಿಳು ಮೂಲದ ಅನುವಾದ ನಾಮಕ್ಕಲ್ ರಾಮಲಿಂಗಪಿಳ್ಳೆ ಅವರ ಕಾದಂಬರಿ 'ತತ್ವಮಸಿ' ಗಳನ್ನು ಉದಾಹರಿಸಬಹುದು. ಚನ್ನೈನಿಂದ ಹೊರಬರುತ್ತಿರುವ 'ಲಹರಿ' ಕನ್ನಡ ನಿಯತಕಾಲಿಕೆಯ ಸಂಪಾದಕರಲ್ಲದೆ, ಏಷಿಯನ್ ಅಧ್ಯಯನ ಸಂಸ್ಥೆಯಿಂದ ಹೊರಬರುತ್ತಿರುವ ಕನ್ನಡ–ಜಪಾನ್–ತಮಿಳು–ಇಂಗ್ಲೀಷ್ ನಿಘಂಟು, ಹಾಗೂ ಜನಪದ ವಿಶ್ವಕೋಶಗಳ ಸಂಪಾದಕ ಮಂಡಳಿಯಲ್ಲಿದ್ದಾರೆ.

ಶಿಲ್ಪಶಾಸ್ತ್ರದಲ್ಲಿ ಪಾಂಡಿತ್ಯವುಳ್ಳ ಜಿ. ಜ್ಞಾನಾನಂದರವರು (ಜ ೧೯೪೦) ನಂದಿ ಗ್ರಾಮದವರು. ಮಾಧ್ಯಮಿಕ ಶಾಲೆಯಲ್ಲಿದ್ದಾಗಲೇ ಬರೆಯಲಾರಂಭಿಸಿದ ಶ್ರೀಯುತರ ಕೃತಿಗಳು ಒಂದು ಅಂದಾಜಿನಂತೆ ಹೀಗಿವೆ. ಶಾಸ್ತ್ರ ಸಾಹಿತ್ಯಗಳು (೧೩), ಸಂಶೋಧನಾ ಗ್ರಂಥಗಳು (೫), ಸಂಪಾದನಾ ಗ್ರಂಥಗಳು (೭), ಜೀವನ ಚರಿತ್ರೆಗಳು (೨), ಮಕ್ಕಳ ಪುಸ್ತಕ (೭), ವಿಜ್ಞಾನ ಸಾಹಿತ್ಯ (೨), ಸಣ್ಣ ಕಥೆಗಳ ಸಂಗ್ರಹ(೧), ಕಾದಂಬರಿಗಳು (೭), ವಿವಿಧ ಭಾಷೆಗಳಿಂದ ಅನುವಾದಗಳು (೧೨), ಮುದ್ರಣದ ಹಂತದಲ್ಲಿರುವವು (೫) – ಇವು ಕೆಲವರ್ಷಗಳ ಹಿಂದಿನ ಪಟ್ಟಿಯಾಗಿದ್ದು ಈಗ ಇನ್ನಷ್ಟು ಪುಸ್ತಕಗಳು ಬೆಳಕುಕಂಡಿವೆ. ನಿರಂತರವಾಗಿ ಓದು, ಅಧ್ಯಯನ ಮಾಡುತ್ತಿರುವ ಜ್ಞಾನಾನಂದರವರ ಬಿಡಿ ಲೇಖನಗಳು, ಕಥೆಗಳು, ವೈಚಾರಿಕ ಸಾಹಿತ್ಯ ಇತ್ಯಾದಿಗಳು ಅನೇಕವಿವೆ. ಕಾಶ್ಯಪಶಿಲ್ಪ ಶಾಸ್ತ್ರಂ, ಶ್ರೀ ಬ್ರಾಹ್ಮೀಯ ಚಿತ್ರ ಕರ್ಮಶಾಸ್ತ್ರಂ, ಜ್ಞಾನಾನಂದರ ಮಹತ್ವದ ಕೊಡುಗೆಗಳು. ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾಗಿ (೩ ಅವಧಿಗಳಿಗೆ) ಮೂರು ಜಿಲ್ಲಾ ಸಾಹಿತ್ಯ ಸಮ್ಮೇಳನ ಸಂಘಟಿಸಿದ್ದಲ್ಲದೆ ಜಿಲ್ಲೆಯಾದ್ಯಂತ ಕನ್ನಡ ಪರವಾದ ನೂರಾರು ಕಾರ್ಯಕ್ರಮ ನಡೆಸಲು ಪ್ರೇರಣೆ ನೀಡಿದವರು. ೨೦೦೩ರಲ್ಲಿ ಜ್ಞಾನಾನಂದ ದಂಪತಿಗಳಿಗೆ ಅಭಿನಂದಿಸಿ 'ಸುಜ್ಞಾನ' ಎಂಬ ಸನ್ಮಾನ ಗ್ರಂಥ ನೀಡಲಾಯಿತು.

ಚಿಕ್ಕಬಳ್ಳಾಪುರದಲ್ಲಿ ಜನಿಸಿದ ಚಿ. ಶ್ರೀನಿವಾಸರಾಜು (೧೯೪೨) ಅವರದು ವಿಶಿಷ್ಟವಾದ ಕನ್ನಡದ ಕೈಂಕರ್ಯ. ಕನ್ನಡದ ಪರಿಚಾರಕ ಎಂದು ಕರೆದುಕೊಂಡಿರುವ ಶ್ರೀಯುತರು ಬೆಂಗಳೂರಿನ ಕ್ರೈಸ್ಟ್ ಕಾಲೇಜ್‌ನಲ್ಲಿ ೩೦ ವರ್ಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದು, ಕಾಲೇಜಿನ ಕನ್ನಡ ಸಂಘದ ವತಿಯಿಂದ ಅವರು ನಿವೃತ್ತರಾಗುವವರೆಗೆ ೧೮೫ ಕೃತಿಗಳನ್ನು ವಿವಿಧ ಲೇಖಕರಿಂದ ಬರೆಸಿ

ಪ್ರಕಟಿಸಿದ್ದರು. ಖ್ಯಾತ ನಾಮರಲ್ಲದೆ ಅನೇಕ ಉದಯೋನ್ಮುಖರ ಕೃತಿಗಳು ಪ್ರಥಮ ಬಾರಿಗೆಂಬಂತೆ ಪ್ರಕಟಿಸಿ ಪ್ರೋತ್ಸಾಹಿಸಿದರು. ಕಥೆ ಕಾದಂಬರಿಗಳಿಗಿಂತ ವೈಚಾರಿಕ ಸಾಹಿತ್ಯ, ಕವಿತೆಗಳು, ವಿಮರ್ಶೆ, ಪ್ರಬಂಧ ಇತ್ಯಾದಿಗಳೇ ಅಧಿಕ. ಅಲ್ಲದೆ ಅನಕೃ ಹಾಗೂ ಬೇಂದ್ರೆಯವರ ಹೆಸರಿನಲ್ಲಿ ವಾರ್ಷಿಕ ಪ್ರಬಂಧ ಸ್ಪರ್ಧೆ ನಡೆಸಿದವರು. ಸ್ವತ: ಸಾಹಿತಿಯಾಗಿ ಶ್ರೀನಿವಾಸರಾಜು ಅವರು ಹಳಿಯ ಮೇಲಿನ ಸದ್ದು, ನಿಷ್ಕ್ರಮಣ (ನಾಟಕ) ಚಸನಾಲ ಬಂಧು (ಕವನ ಸಂಗ್ರಹ) ಬಾವಿಕಟ್ಟೆಯ ಬಳಿ (ಕಥಾನುವಾದ), 'ರಾಜರತ್ನಂ ಮತ್ತು ಕರ್ನಾಟಕ ಸಂಘ', 'ಆಗಾಗ' ಎಂಬ ವಿಮರ್ಶಾ ಸಂಗ್ರಹಗಳನ್ನು ಹೊರತಂದಿದ್ದಾರೆ. ಗೌರಿಬಿದನೂರಿನ ಹೊಸೂರಿನಲ್ಲಿ ೨೦೦೨ರಲ್ಲಿ ನಡೆದ ಕೋಲಾರ ಜಿಲ್ಲಾ ಏಳನೇ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು.

ಮುಳಬಾಗಿಲಿನ ಬೈರಕೂರು ವೆಂಕಟೇಶ್ ಅವರು ಪತ್ತೆದಾರಿ ಕಾದಂಬರಿಗಳಿಗೆ ಹೆಸರುವಾಸಿಯಾಗಿದ್ದರೂ ಪೌರಾಣಿಕ ಕಥೆಗಳು, ನೀತಿಕಥೆಗಳು, ಟಾಲ್‌ಸ್ಟಾಯ್ ಅವರ ಕಥೆಗಳ ಅನುವಾದ ಇತ್ಯಾದಿಗಳನ್ನು ರಚಿಸಿದ್ದಾರೆ.

ಜಿಲ್ಲೆಯಲ್ಲೇ ಜನಿಸಿ ಅಲ್ಲಿಯೇ ನೆಲೆನಿಂತು ಕ್ರಿಯಾಶೀಲರಾಗಿ ಅಭಿವ್ಯಕ್ತಿಸಿ ಇಡೀ ರಾಜ್ಯ, ಹೊರರಾಜ್ಯಗಳಲ್ಲಿ ಹೆಸರು ಪಡೆದವರು ಬಹಳ ಕಡಿಮೆ. ಅಂತಹ ವಿರಳರಲ್ಲಿ ಒಬ್ಬರಾದ ಬಿ.ಆರ್.ಲಕ್ಷ್ಮಣರಾವ್ (೧೯೪೬) ಶಿಡ್ಲಘಟ್ಟದ ಚೀಮಂಗಲದಲ್ಲಿ ಜನಿಸಿದ್ದು, ತಮ್ಮದೇ ಆದ ವಿಶಿಷ್ಟ ಪದಪ್ರಯೋಗಗಳಿಂದ ಕೂಡಿದ ಕವಿತೆ, ಹನಿಗವನಗಳಿಂದ ಜನಪ್ರಿಯರಾಗಿದ್ದಾರೆ. ಕನ್ನಡದ ಶಬ್ಧ ಸಂಪತ್ತನ್ನು ಎಷ್ಟುಮಟ್ಟಿಗೆ ಯಶಸ್ವಿಯಾಗಿ, ವೈವಿಧ್ಯವಾಗಿ ಬಳಸಬಹುದೆಂಬ ಒಂದು ಪರಂಪರೆಗೆ ಲಕ್ಷ್ಮಣರಾವ್ ಅವರು ಮಾರ್ಗ ಹಾಕಿಕೊಟ್ಟರು ಎಂದೇ ಹೇಳಬಹುದು. ಮೊದಲ ಕವನ ಸಂಕಲನ 'ಗೋಪಿ ಮತ್ತು ಗಾಂಡಲೀನ' ಸೇರಿದಂತೆ ಏಳು ಕವನಸಂಗ್ರಹಗಳು. ಕೊಲಂಬಸ್, ಮಧ್ಯಸ್ಥ (ಆಯ್ದಕವಿತೆಗಳು), ನನ್ನ ಗೀತೆ (ಭಾವಗೀತೆ) ಭಾರತ ಬಿಂದು ರಶ್ಮಿ (ಹನಿಗವಿತೆಗಳು), ನ–ನಗು–ನಿ–ನಗು (ವಿನೋದ ಕವಿತೆಗಳು) ಗೆಸ್ಚರ್, ಕಬ್ಬೆಕ್ಕು (ಕಥಾ ಸಂಕಲನ) ಹೀಗೊಂದು ಪ್ರೇಮಕಥೆ (ಕಾದಂಬರಿ) ರಜನೀಶ್ ನಿಜರೂಪ (ಅನುವಾದ) ಇತ್ಯಾದಿ (ಲೇಖನಗಳ ಸಂಗ್ರಹ) ಕವಿತೆ ೧೯೮೮ (ಸಂಪಾದನೆ) ಗಳು ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆಗಳು. ಸ.ರಘುನಾಥ ಅವರೊಡನೆ ಸೇರಿ ಕನ್ನಡ ಕಾವ್ಯ ಸಂಪದವನ್ನು ತೆಲುಗಿಗೆ ಅನುವಾದ ಮಾಡಿದ್ದಾರೆ. ಲಕ್ಷ್ಮಣರಾಯರ ಸಮಗ್ರ ಕಾವ್ಯ ಸಂಗ್ರಹ 'ಕ್ಯಾಮರ ಕಣ್ಣು' ಎಂಬ ಹೆಸರಿನಲ್ಲಿ ಈಚೆಗೆ ಪ್ರಕಟವಾಯಿತು. 'ಇವಳು ನದಿಯಲ್ಲ' ಎಂಬ ಹೆಸರಿನಲ್ಲಿ ಇವರ ಪದ್ಯಗಳ ಧ್ವನಿ ಸುರುಳಿ ಹೊರಬಂದಿದೆ. 'ಲಿಲ್ಲಿಪುಟ್ಟಿಯ ಹಂಬಲ'ಕ್ಕೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಲ್ಲದೆ ಶ್ರೀಯುತರಿಗೆ ಗೊರೂರು ಸಾಹಿತ್ಯ ಪ್ರಶಸ್ತಿ, ಚುಟುಕು ರತ್ನಪ್ರಶಸ್ತಿ, ವಿಶ್ವೇಶ್ವರಯ್ಯ ಸಾಹಿತ್ಯ ಪ್ರಶಸ್ತಿ ಇತ್ಯಾದಿಗಳು ದೊರೆತಿವೆ.

ಕೈವಾರ ಬಳಿಯ ಕಾಡಹಳ್ಳಿಯ ಎಸ್.ವೆಂಕಟೇಶಪ್ಪ (೧೯೪೭) ಅವರು ಸೂಕ್ತಿಸುಧಾರಸ (ಆಧ್ಯಾತ್ಮಿಕ ವಚನ) ಕುಣಿಯೋಣ ಬಾರ, ನಮ್ಮ ತಾಯಿ ಭಾರತಿ (ಮಕ್ಕಳ ಪದ್ಯ) ಮಾಸೂರಿನ ದಾರಿಯಲ್ಲಿ, ಆಲಂಬಗಿರಿ ದರ್ಶನ (ಪ್ರವಾಸ, ಸ್ಥಳ ವೈಶಿಷ್ಟ್ಯ) ಹಾಗೂ ವಿವೇಕ ಚಿಂತಾಮಣಿಗಳನ್ನು ಬರೆದಿದ್ದಾರೆ. ಜನಪದ ಸಾಹಿತ್ಯ ಇತ್ಯಾದಿ ಸಂಗ್ರಹಣೆ ಮಾಡಿರುವ ವೆಂಕಟೇಶಪ್ಪ ಅವರಿಗೆ ಜಾನಪದ ಪರಿಷತ್ತು ಸನ್ಮಾನಿಸಿದೆ.

ಪ್ರಸ್ತುತ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಉನ್ನತಾಧಿಕಾರಿಯಾಗಿರುವ ಮಾರ್ಕಂಡಪುರಂ ಶ್ರೀನಿವಾಸ (೧೯೪೮) ಅವರು ವಕ್ಕಲೇರಿ ಸಮೀಪದ ಮಾರ್ಕಂಡಪುರದವರಾಗಿದ್ದು ಕವಿತೆ, ಕಾವ್ಯಗಳ ಕ್ಷೇತ್ರದಲ್ಲಿ ಸಾಕಷ್ಟು ಕಾರ್ಯನಿರ್ವಹಿಸಿದ್ದಾರೆ. ಇಣಕುನೋಟ, ಆದಿ ಅಂತ್ಯಗಳ ನಡುವೆ, ಕತ್ತಲು ಬೆಳಕುಗಳಾಚೆ, ಬದುಕು ಚಿತ್ತಾರ, ನಮ್ಮನಮ್ಮಲ್ಲಿ ಮಾತ್ರ, ನಿಗೂಢ ಇತ್ಯಾದಿ ಕವನ ಸಂಕಲನಗಳಲ್ಲದೆ, ತೆಲುಗಿನಿಂದ ವಿವಿಧ ಲೇಖಕರ ಹೊಸಮುಖ ತೊಟ್ಟುಕೊ, ಮಹಾಪ್ರಸ್ಥಾನ, ವಿಶ್ವಂಭರಾ, ಅಮೀನಾ, ಜ್ವಾಲೆಗಳು ಮತ್ತು ಮಾನವ ಸಮನ್ವಯ, ಮಣ್ಣು, ಮನುಷ್ಯ ಮತ್ತು ಆಕಾಶಗಳಲ್ಲದೆ ರಾಜ್ಯಪಾಲೆ ರಮಾದೇವಿಯವರ 'ಅಂದರೂ ಮನುಷಲೇ' (ಎಲ್ಲರೂ ಮನುಷ್ಯರೆ) ಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಪಿ.ಎಸ್.ರಾಮಾನುಜಂ ಅವರ ಆಯ್ದ ಕನ್ನಡ ಕವಿತೆಗಳನ್ನು ತೆಲುಗಿಗೆ 'ನದಿತೋ ಪ್ರವಹಿಂಚಿನಪ್ಪುಡು' (ನದಿಯೊಡನೆ ಹರಿದಾಗ) ಅನುವಾದಿಸಿದ್ದಾರೆ. ಶ್ರೀನಿವಾಸನ್ ಅವರಿಗೆ ಪದ್ಮಶ್ರೀ ಕಲಾಕೇಸರಿ, ಕವಿರತ್ನ, ಕವಿ ತಿಲಕ, ಕರ್ನಾಟಕ ವಿಕಾಸ ರತ್ನ, ಸಾಹಿತ್ಯ ಕಲಾ ರತ್ನ, ವಿಶ್ವಶಾಂತಿ ಪ್ರಿಯ ಗೊಮ್ಮಟ, ವಿಶ್ವಮಾನವ, ಕುವೆಂಪುಶ್ರೀ ಇವೇ ಮುಂತಾದ ಪ್ರಶಸ್ತಿಗಳು ಬಂದಿವೆ. ಆಕಾಶವಾಣಿ, ದೂರದರ್ಶನಗಳಲ್ಲಿ ಕವಿತಾವಾಚನ ಮಾಡಿರುವ ಶ್ರೀಯುತರು ೨೦೦೨ರಲ್ಲಿ ಅಮೆರಿಕೆಯ ಡೆಟ್ರಾಯಿಟ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಕವಿಗೋಷ್ಠಿಗೆ ಅಧ್ಯಕ್ಷರಾಗಿದ್ದರು.

ಹಾಸ್ಯಸಾಹಿತ್ಯದಿಂದ ನಾಡಿನಾದ್ಯಂತ ಹೆಸರು ಮಾಡಿರುವವರು ಮಾಲೂರಿನ ಎಂ.ಎಸ್.ನರಸಿಂಹಮೂರ್ತಿ ಅವರು. ಒಂದು ಅಂದಾಜಿನಂತೆ ೧೫೦೦ ನಗೆಲೇಖನ ಬರೆದಿದ್ದಾರೆಂದು ತಿಳಿದುಬರುತ್ತದೆ. (ಅಂದಿನವರೆಗೆ ಪ್ರಕಟವಾಗಿದ್ದ) ತಮ್ಮ 'ಸಮಗ್ರ ಹಾಸ್ಯ ಸಂಗ್ರಹ' ೧೯೭೮ರಲ್ಲಿ ಹೊರತಂದಿದ್ದಾರೆ. ಅಂಕಣಕಾರರಾಗಿ ಉದಯವಾಣಿ, ಸುಧಾ, ಮಂಗಳ, ತುಷಾರಗಳಲ್ಲಿ ವರ್ಷಾನುಗಟ್ಟಲೆ ನಿರಂತರವಾಗಿ ಬರೆದಿದ್ದಾರೆ. ಪ್ರಕಟವಾಗಿರುವ ಟೈರ್ ಪ್ರಶಸ್ತಿ ವಿಜೇತ, ಶ್ರಮದಾನ, ಕಂಡಕ್ಟರ್ ಕರಿಯಪ್ಪ, ವಿದ್ಯಾವತಿದೇವಿ, ಭಾರತದ ರಾಷ್ಟ್ರೀಯತೆ, ಮಂದಸ್ಮಿತ ಇತ್ಯಾದಿ ೨೬ ಪುಸ್ತಕಗಳಲ್ಲಿ ನಗೆಸಾಹಿತ್ಯವಲ್ಲದೆ ಕಾದಂಬರಿ (ಹಾಸ್ಯಾಂಬರಿ) ಮಕ್ಕಳ ಸಾಹಿತ್ಯ, ಜೀವನಚರಿತ್ರೆ, ಅನುವಾದ, ಪರಿಚಯ, ಸಂಪಾದನೆಗಳು ಒಳಗೊಂಡಿವೆ. ಮೂರ್ತಿ ಅವರ ಪುಸ್ತಕಗಳಿಗೆ ಎರಡು ಬಾರಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳಲ್ಲದೆ ಬೀಚಿ ಪ್ರಶಸ್ತಿ, ತರಂಗರಂಗ ಪ್ರಶಸ್ತಿ, ಇಂದಿರಾಪ್ರಿಯದರ್ಶಿನಿ ಪ್ರಶಸ್ತಿ ಹಾಗೂ ನವರತ್ನ ರಾಂ ಪ್ರಶಸ್ತಿಗಳು ದೊರೆತಿವೆ.

ಕೈವಾರದಲ್ಲಿ ೧೯೭೦ರಲ್ಲಿ ನಡೆದ ಪ್ರಥಮ ಸಾಹಿತ್ಯ ಸಮ್ಮೇಳನದ ಸಂಚಿಕೆಯಲ್ಲಿ ರಘುಸುತರವರು ಅಂದಿಗೆ ಲಭ್ಯವಿದ್ದ ಮಾಹಿತಿ ಆಧರಿಸಿ ಜಿಲ್ಲೆಯ ಸಾಹಿತಿ/ಸಾಹಿತ್ಯಗಳ ಪರಿಚಯ ನೀಡಿದ್ದಾರೆ. ಅನ್ಯತ ಉದಾಹರಿಸಿರುವುದರ ವಿನಾ ಉಳಿದಂತೆ ಮುಂದೆ ಪಟ್ಟಿಮಾಡಿದೆ.

ಶಿಡ್ಲಘಟ್ಟದವರಾದ ಜಾಗೆ ಕೃಷ್ಣಮೂರ್ತಿ ಅವರು ತಮಿಳುನಾಡು, ಕರ್ನಾಟಕಗಳಲ್ಲಿ ವಾಸ್ತು ಸಂರಕ್ಷಣಾ ಇಲಾಖೆಯಲ್ಲಿ ಮುಖ್ಯ ಸಂಶೋಧಕರಾಗಿದ್ದು ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ ಇತ್ಯಾದಿಗಳಲ್ಲಿ ಲೇಖನಗಳನ್ನು ಪ್ರಕಟಿಸಿದ್ದಾರೆ. ಬುರುಡುಗುಂಟ ಶ್ರೀನಿವಾಸಾಚಾರ್ಯರು ಬೆಂಜಮಿನ್ ಲೂಯಿರೈಸ್ ಅವರಲ್ಲಿ ಶಾಸನ ಸಂಶೋಧನಾ ಸಹಾಯಕರಾಗಿದ್ದು ಪಿಹೆಚ್.ಡಿ.ಗಾಗಿ ಮಹಾಪ್ರಬಂಧ ರಚಿಸಿದ್ದರು. ಕೆ.ಎಸ್.ರಾಘವೇಂದ್ರರಾವ್ 'ಕರ್ನಾಟಕ ರತ್ನ ಸಿಂಹಾಸನ' ಎಂಬ ಹಾಗೂ ವಿ.ಎನ್. ದಾಸ್ ಅವರು 'ವಿಶ್ವಮಿತ್ರ' ಎಂಬ ಚಂಪೂಕಾವ್ಯಗಳನ್ನು ಬರೆದಿದ್ದಾರೆ. ಬಂಗಾರಪೇಟೆಯ ಪಿ. ವಿಠಲರಾವ್ (೧೯೨೩) ಅವರು 'ಸಾಹಿತ್ಯ ಮಂದಿರದಲ್ಲಿ' ಹಾಗೂ 'ರವೀಂದ್ರ' ಕಾದಂಬರಿಗಳನ್ನು ರಘುಸುತರು ಸುಳಿಗಾಳಿ, ಕಾಗೆಹೊಕ್ಕಮನೆ, ಗಗನಕುಸುಮಗಳನ್ನು, 'ಉಮಾಪ್ರಿಯರು' ಮೈಸೂರು ಹುಡುಗಿ, ಪಂಚಕನ್ಯೆ, ಸರಸ್ವತಿ ಅವತಾರ, ಗೌರಿಯೋ ಗೋರಿಯೋ ಕಾದಂಬರಿಗಳನ್ನು, ನಾದಲಿಯ ತೀ.ನಾ.ಸ್ವಾಮಿಯವರ ಚಿತ್ತಚಿತ್ತಾರ ಹಾಗೂ ಸಂಗಮ, ಚಿಕ್ಕಬಳ್ಳಾಪುರದ ಕೆ. ನಾರಾಯಣಮೂರ್ತಿಯವರ ಪವಿತ್ರವಾದ ಹೆಣ್ಣು, ಭಲೆಸುರಮ ಇತ್ಯಾದಿ ಉದಾಹರಿಸಬಹುದು. ಮಾಸ್ತಿಯ ರಂಗಸ್ವಾಮಿ ಅಯ್ಯಂಗಾರ್ (೧೯೧೧) ಪುಷ್ಪಮಾಲೆ, ಮೋಡಗಳು ಕಥಾಸಂಕಲನ, ಎಸ್. ಸುಬ್ಬರಾಮಯ್ಯ 'ಇಸ್ಟೇಟ್ ರಾಣಿ' ಎಂಬ ಕಥಾಸಂಕಲನ ರಷ್ಯನ್ ಭಾಷೆಯಿಂದ ಅನುವಾದಿಸಿದ್ದು, ದ್ವಿಶ್ರೀ. ವೆಂಕಟೇಶ್ ಅವರ 'ಬಾಂಬೆ ಮದುವೆ' ಉಮಾಪ್ರಿಯರ ಅನುಗ್ರಹ, ನಿ.ರಾ.ಸು. ಅವರ 'ಪ್ರೇಮಸುಧಾ' ಇನ್ನಿತರ ಕಥಾಸಂಗ್ರಹಗಳು. ಗೌರಿಬಿದನೂರು ಅಪ್ಪಯ್ಯಶಾಸ್ತ್ರಿ (೧೮೫೯–೧೯೫೭) ವೇದಾಂತಸಾರ, ಶಂಕರಚರಿತ್ರ, ಚಿಕ್ಕಬಳ್ಳಾಪುರದ ಬಚ್ಚಪಲ್ಲಿ ವೆಂಕಟೇಶಾಚಾರ್ 'ತತ್ವವಾದ', ಮಾಧ್ವ ಸಂಪ್ರದಾಯಗಳ ಬಗ್ಗೆ, ಹೊಸೂರಿನ ಸು. ವೆಂಕಟಾಚಲಯ್ಯ (೧೮೯೮) 'ಆಸ್ತಿಕವಾದ, ಜೀವಾತ್ಮ' ಹಿಂದೂ ಸಂಘಟನೆ ಇತ್ಯಾದಿ, ಜಿ. ರುದ್ರಪ್ಪ ಲಲ್ಲಯೋಗೀಶ್ವರಿ, ಶಿವಸ್ತೋತ್ರ ಇತ್ಯಾದಿ ಧಾರ್ಮಿಕ ಶಾಸ್ತ್ರಸಾಹಿತ್ಯ ರಚಿಸಿದ್ದಾರೆ. ನಾಗೇಶಾಚಾರ್ಯ ಮುತ್ತೂರವರು ಭಾರತೀಯರ ಅಭಿನಯಶಾಸ್ತ್ರ, ಚಂಡಕೌಶಿಕ ನಾಟಕ ಇತ್ಯಾದಿ, ಎಲ್.ಎಸ್. ಶೇಷಗಿರಿರಾವ್ ವಿಶ್ವಕವಿ ರವೀಂದ್ರರು, ಕಾದಂಬರಿ ಸಾಮಾನ್ಯಮನುಷ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಬಗ್ಗೆ ವಿಮರ್ಶಾತ್ಮಕ ಕೃತಿಗಳು ಬರೆದಿದ್ದಾರೆ. ಕೋಲಾರದ ನಾಗರಾಜಶಾಸ್ತ್ರಿಗಳು ಶಂಕರಗುರು ವಿಲಾಸತರಂಗಿಣಿ, ಶ್ರೀ ಶಾರದಾ ಸುಪ್ರಭಾತಗಳನ್ನು ಬರೆದಿದ್ದಾರೆ. ಚಿಕ್ಕಬಳ್ಳಾಪುರದ ಬ.ನ.ಗುಂಡುರಾವ್ (೧೯೩೦–೧೯೯೩) ಅವರು ಕುವೆಂಪು ಅವರ ರಾಮಾಯಣ ದರ್ಶನಂ ಪ್ರಕಟವಾದ ತರುಣದಲ್ಲಿ ವಿಶ್ವಕರ್ನಾಟಕ ಪತ್ರಿಕೆಯಲ್ಲಿ ವಿಮರ್ಶಾ ಲೇಖನಮಾಲೆ ಬರೆದು, ಓದುಗರ ಹಾಗೂ ಸ್ವತಃ ಕುವೆಂಪು ಅವರ ಪ್ರಶಂಸೆಗೆ ಪಾತ್ರರಾಗಿದ್ದರು. ವಿ.ಕೃ. ಗೋಕಾಕರ ಭಾರತ ಸಿಂಧುರಶ್ಮಿ ಬಗ್ಗೆಯೂ ಲೇಖನಮಾಲೆ ಬರೆದಿದ್ದಾರಲ್ಲದೆ ಸಪ್ತಗಿರಿ, ರಾಮರಾಜ್ಯ, ವಿಶ್ವಕರ್ನಾಟಕ ಮುಂತಾದ ಅನೇಕ ಪತ್ರಿಕೆಗಳಲ್ಲಿ ಆಧ್ಯಾತ್ಮ ಕುರಿತು ಬರೆದಿದ್ದರು. ಇವರ ಕೆಲವು ಲೇಖನಗಳನ್ನು ಶುಭತಾಂಬೂಲ, ಶ್ರೀನಿವಾಸ ವೈಭವ ಎಂಬೆರಡು ಸಂಗ್ರಹಗಳಲ್ಲಿ ಪ್ರಕಟಿಸಲಾಗಿದೆ.

ಇಪ್ಪತ್ತನೆ ಶತಮಾನದ ಆರಂಭಕಾಲದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಕಾರ್ಯನಿರ್ವಹಿಸಿದ ಅನೇಕ ಗಣ್ಯರ ಹೆಸರು ಕೃತಿಗಳನ್ನು ಎಸ್.ಎಲ್.ಶ್ರೀನಿವಾಸಮೂರ್ತಿ ಅವರು ಕೊಡುತ್ತಾರೆ. ಮಾದನಹಳ್ಳಿಯ ಚೆನ್ನಕೃಷ್ಣಯ್ಯ (ಜ ೧೮೮೩–೧೯೫೪)

ಶ್ರೀ ಚೆನ್ನಕೇಶವ ಶತಕಂ, ಕರ್ನಾಟಕ ರಘುವಂಶ, ಲಲಿತಾ ಮಾರ್ಕಂಡೇಯ ಕಥಾ ಕಂದಮಾಲೆ, ಹಾಡಿನ ಬೀಡುಗಳನ್ನು ರಚಿಸಿದ್ದಾರೆ. ಚಿಕ್ಕಬಳ್ಳಾಪುರದ ಸುಬ್ಬರಾಯರು ಪದವೀಧರರಾಗಿ ಮೈಸೂರು ಮಹಾರಾಣಿ ಕಾಲೇಜಿನಲ್ಲಿ ವಿಜ್ಞಾನದ ಅಧ್ಯಾಪಕರಾಗಿ ಹಾಗೂ ಸರ್ಕಾರದ ಭಾಷಾಂತರಕಾರರಾಗಿ ದುಡಿದಿದ್ದು ಶೂರಸೇನಚರಿತ್ರೆ, ಆಹಾರ ವಿಷಯೋಪನ್ಯಾಸ ಮಂಜರಿ, ಪ್ರಜ್ಞಾವತಿ ವಿಜಯ, ಶ್ರೀತಿರುಪತಿ ವೆಂಕಟೇಶ, ಯುವರಾಜ ಕಲ್ಯಾಣ, ವಲ್ಮಿಮುಖ ಮೀಸಾ ರಚಿಸಿದ್ದಾರೆ. ಚಿಕ್ಕಬಳ್ಳಾಪುರದ ವೆಂಕಟಾಚಾರ್ಯರು ಅನುಸೂಯ, ಕಲಾನಾಥ, ಕೃಷ್ಣಲೀಲೆ, ಗಾನ ರಾಮಾಯಣ, ಚಂದ್ರಾವಳಿ, ಪ್ರಹ್ಲಾದ ಚರಿತ್ರೆ ಬರೆದಿದ್ದಾರೆ. ಗೌರೀಬಿದನೂರು, ಹಲಗೂರಿನ ಶ್ಯಾನುಭೋಗ ವೆಂಕಟರಮಣಯ್ಯ (೧೮೭೬–೧೯೨೯) ಕರ್ನಾಟಕ ವಚನಸುಶೀಲಾ ಚರಿತ್ರಂ, ಕರ್ನಾಟಕ ಶ್ರೀ ವಿಶ್ವರೂಪಸುದರ್ಶನಂ, ಚಂದ್ರಹಾಸ, ಕಲ್ಯಾಣಿ ನಾಟಕಂ, ವರದಕ್ಷಿಣಾ ನಾಟಕಂ ಇತ್ಯಾದಿ ಇಪ್ಪತ್ತು ನಾಟಕಗಳನ್ನೂ ಮೈಸೂರು ರಾಜರ ಚರಿತ್ರೆಯನ್ನು ರಚಿಸಿದ್ದಾರೆ. ಚಿಕ್ಕಬಳ್ಳಾಪುರದ ಎ. ಕೇಶವಯ್ಯ ಅವರು ಗರ್ವಾಪಹಾರ, ಬೃತಹರಿ ನಿರ್ವೇದನಾಟಕ, ಭೀಮ ವಿಜಯ, ರಾಮಮೋಹನ ನಾಟಕ, ವಿವೇಕ ವಿಜಯ ನಾಟಕಗಳನ್ನೂ, ಅರೇಬಿಯನ್ ನೈಟ್ಸ್‌ನ್ನು 'ಯುವನ ಯಾಮಿನಿ ಸ್ವಪ್ನ ಚಮತ್ಕಾರ' ಎಂಬ ಹೆಸರಿನಲ್ಲಿ ಅನುವಾದವನ್ನು, ವಿಚಿತ್ರ ಕಥಾಪ್ರಪಂಚ, ರಾಧಾಕೃಷ್ಣ ಎಂಬ ಕಥಾ ಸಂಕಲನವನ್ನೂ, ದಯಾನಂದ ಸರಸ್ವತಿಯವರ ಜೀವನಚರಿತ್ರೆಯನ್ನೂ ಕರ್ನಾಟಕ ಸಮೃದ್ಧಿ ಶತಕಂ, ಪರಾಶರ ಸ್ಮೃತಿ ವಾಖ್ಯಾ, ಪಾತಿವ್ರತ್ಯಧರ್ಮ ಇತ್ಯಾದಿ ಸಾಹಿತ್ಯದ ಹಲವಾರು ಕ್ಷೇತ್ರಗಳಲ್ಲಿ ಅನೇಕ ಪುಸ್ತಕಗಳನ್ನು ರಚಿಸಿದ್ದಾರೆ. ಕೋಲಾರದ ಕೆ.ಆರ್.ನರಸಿಂಹಯ್ಯ ಅವರು ಕುಲವಧೂ ಚರಿತಂ, ಸಂಗ್ರಹ ರಾಮಾಯಣ, ರಾಮಾಯಣಗಳ ಸಂಕ್ಷಿಪ್ತ ಹಾಗೂ ಸಂಗ್ರಹರೂಪಗಳನ್ನೂ , ಕುಮಾರೋದಯಂ, ರಘುಪತಿಚರಿತಂಗಳನ್ನು ರಚಿಸಿದ್ದಾರೆ. ಮಾಲೂರಿನ ಶ್ರೀನಿವಾಸಯ್ಯಂಗಾರ್ಯರು ಪೋತನನ ಭಾಗವತ ಆಧರಿಸಿ ರುಕ್ಮಿಣಿ ಪರಿಣಯ ಕೃತಿಯನ್ನು ೧೮೯೫ರಲ್ಲಿ ಬರೆದಿದ್ದಾರೆ. ಜಂಗಮಕೋಟೆಯ ಶ್ರೀನಿವಾಸರಾಯರು ಥಿಯಾಸಫಿಕಲ್ ಸೊಸೈಟಿಯ ಪ್ರಭಾವಕ್ಕೆ ಒಳಗಾಗಿ ೧೯೦೮ರಲ್ಲಿಯೇ 'ಕರ್ಮ' ಎಂಬ ಹಿಂದೂ ಧರ್ಮ ಪರಿಚಯಿಸುವ ಕೃತಿ ರಚಿಸಿದ್ದು ಚೆನ್ನೈನ ಥಿಯಾಸಫಿ ಸಂಸ್ಥೆ ತನ್ನ ದೇಶೀಯ ಭಾಷೆಯ ಧಾರ್ಮಿಕ ಕೃತಿ ಪ್ರಕಟಣೆಯಲ್ಲಿ ಮೊಟ್ಟಮೊದಲ ಕೃತಿಯಾಗಿ ಪ್ರಕಟಿಸಿತು. ಅವರ 'ಧರ್ಮ' ಕೃತಿ ೧೯೧೦ರಲ್ಲಿ ಮೈಸೂರಿನಿಂದ ಪ್ರಕಟವಾಯಿತು. ಕರ್ಮ ಸಿದ್ಧಾಂತ ಕುರಿತ ಇನ್ನೊಂದು ಕೃತಿ ಹಾಗೂ 'ಥಿಯಾಸಫಿ ಸಂದೇಶ' ಇನ್ನಿತರ ಬರಹಗಳು. ಸುಮಾರು ಇದೇ ಕಾಲದಲ್ಲಿ ಜಂಗಮಕೋಟೆಯ ಕೃಷ್ಣಶಾಸ್ತ್ರಿಗಳು ಬದಲಾಗುತ್ತಿದ್ದ ಸಾಮಾಜಿಕ ಸ್ಥಿತಿಯ ಬಗ್ಗೆ ಕಾದಂಬರಿಗಳನ್ನು ಬರೆದಿದ್ದು ಕೀರ್ತಿಕುಮಾರ (೧೯೧೫), ರಾಮಚಂದ್ರ (೧೯೨೮), ಉತ್ತಮ, ಉನ್ಮತ್ತೆಗಳನ್ನಲ್ಲದೆ ಕನ್ನಡ ಗಾದೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಬಂಗಾಲಿಯಿಂದ ಕನ್ನಡಕ್ಕೆ ಅನುವಾದಕಾರ್ಯ ಮಾಡಿದ ವೆಂಕಟಾದ್ರಿ ಶಾಸ್ತ್ರಿಗಳು (೧೮೯೩–೧೯೩೭) ಕೋಲಾರದವರಾಗಿದ್ದು ಬಿಂಡಿಗನವಿಲೆ ವೆಂಕಟಾಚಾರ್ಯರಂತೆ ಪ್ರಸಿದ್ಧಿಗೆ ಬರಲಿಲ್ಲ. ವೆಂಕಟಾದ್ರಿ ಶಾಸ್ತ್ರಿಗಳು ದಾಮಿನಿ, ನಿರ್ಮಲೆ, ಪ್ರತೀಕಾರ, ಮಾಯಾವಿ, ಮುತ್ತಿನಸರ, ವಿಜಯಮಾಲೆ, ವಿಷಮವಿವಾಹ, ಸರಳ, ಸೌದಾಮಿನಿ ಇತ್ಯಾದಿಗಳನ್ನೂ ಅನುವಾದ ಮಾಡಿದರು. ಮತ್ತೊಬ್ಬ ಬಂಗಾಲಿ ಅನುವಾದಕರಾದ ಚಿಂತಾಮಣಿಯ ಕೆ.ವಿ.ವೆಂಕಟೇಶಯ್ಯ ಅವರು ಬಂಕಿಮಚಂದ್ರರ ಅನಂದಮಠವನ್ನಲ್ಲದೆ ಮೈಕೇಲ್ ಮಧುಸೂಧನ ದತ್ತರ ಮೇಘ ವಿಧ ಕಾವ್ಯಂ ಎನ್ನುವ ಚಂದೋಬದ್ಧ ಕೃತಿಯನ್ನೂ ಹಾಗೂ ಸ್ವಂತ ಕೃತಿಗಳನ್ನೂ ರಚಿಸಿದ್ದಾರೆ. ವ್ಯಾಸರಾವ್ ರಾಮಹಳ್ಳಿಯವರು ಬಂಗಾಳದ ಡಿ.ಎಲ್.ರಾಯ್, ಬಂಕಿಂಚಂದ್ರ, ಶರತ್‌ಚಂದ್ರ ಮುಂತಾದವರ ಕಾದಂಬರಿಗಳನ್ನು ಅನುವಾದಿಸಿದ್ದಾರೆ. ಚಿಂತಾಮಣಿಯ ತೀ.ಶೇ.ಮಣಿಯವರು (ಜ. ೧೯೧೨) ಪತ್ತೆದಾರನಿಲ್ಲದ ಕಾದಂಬರಿ, ಕಾಣದಾದ ಹುಡುಗಿ, ಪುರುಷಸಿಂಹ, ಮಣಿಮುತ್ತುಗಳು ಕಥಾ ಸಂಕಲನ (ಇದು ಶಿವರಾಮಕಾರಂತರ ಹರ್ಷ ಮುದ್ರಣಾಲಯದಿಂದ ಪ್ರಕಾಶಿತವಾಯಿತು) ಬರೆದಿದ್ದಾರೆ. ಹರಿಕಥಾ ವಿದ್ವಾನ್ ಅಶ್ವತ್ಥನಾರಾಯಣ ಅವರು ಮಕ್ಕಳ ಸಾಹಿತ್ಯವನ್ನು ಬರೆದು ಪ್ರಕಟಿಸಿದ್ದಾರೆ.

ಉಳಿದಂತೆ ನಮ್ಮ ಕಥೆಗಳು, ಭಾರತೀಯ ಲಲಿತ ಕಲೆಗಳು, ಶ್ರೀಶೈಲ ಇತ್ಯಾದಿ ರಚಿಸಿದ ಕಲ್ಲೂರು ವೆಂಕಟೇಶಯ್ಯ, ಭಲೇ ಅಳಿಯ (ನಾಟಕ) ಬುದ್ಧ ಚರಿತಾಮೃತ (ಪದ್ಯ) ಪ್ರದೇಶ ಪರಿಚಯ (ಭೂಗೋಳ) ಬರೆದ ಕೆ.ಪಟ್ಟಾಭಿರಾಮಯ್ಯ, ಸಾಹಿತ್ಯ ಮಂದಾಕಿನಿ, ಶಂಕರಾನಂದ ಲಹರಿ, ಶ್ರೀರಾಮನ ಪೂಜೆ, ವಂದನಾ ಗೀತೆಗಳು ಬರೆದ ಗಂಜಿಗುಂಟೆ ನರಸಪ್ಪ, ಹೊಸಗನ್ನಡ ವ್ಯಾಕರಣ ಕೈಪಿಡಿ, ಹೊಸಗನ್ನಡ ಗದ್ಯ ಪದ್ಯ ಮಂಜರಿ ಬರೆದ ಗುಡಿಬಂಡೆ ಆದಿಶೇಷಪ್ಪ ಮುಂತಾದವರನ್ನು ಹೆಸರಿಸಬಹುದು. ಆಧುನಿಕ ಕಾಲದಲ್ಲಿ ವ್ರತಾಚರಣೆಗಳ ಬಗ್ಗೆ ಸಾಕಷ್ಟು ಪುಸ್ತಕಗಳು ಬಂದಿವೆಯಾದರೂ ಸ್ವಾತಂತ್ರ್ಯಪೂರ್ವದ ಕೆಲವು ಪ್ರಮುಖ ಉದಾಹರಣೆ ನೋಡಬಹುದೆನಿಸುತ್ತದೆ. ಶಮಂತಕೋಪಾಖ್ಯಾನಂ ರಚಿಸಿದ ಕೋಲಾರದ ನಾರಾಯಣ ಶಾಸ್ತ್ರಿಗಳ ಇನ್ನೊಂದು

ಪುಸ್ತಕ ವಿನಾಯಕ ವ್ರತ ಕಥಾ ಬೆಂಗಳೂರಿನ ವಿಚಾರ ದರ್ಪಣ ಮುದ್ರಾಕ್ಷರ ಶಾಲೆ ಪ್ರಕಟಿಸಿದ್ದು ೧೮೯೦ರಲ್ಲೇ ಮೂರನೇ ಮುದ್ರಣ ಕಂಡಿತ್ತು. ಕೋಲಾರದ ನಾಗರಾಜನ್ ಅವರ ಶ್ರೀಸ್ತೋತ್ರ ಮುಕ್ತಾಫಲ, ಮಾಲೂರಿನ ನಂಜಪುರ ಸಂಕ್ಷಿಪ್ತಲಿಂಗ ಪೂಜಾವಿಧಿ, ಆರು ವ್ರತಗಳು, ಶ್ರೀಮಂಗಳಗೌರೀವ್ರತ ಇವೇ ಮುಂತಾದುವನ್ನೂ, ಮಂಡಿಕಲ್ ವರದಾಚಾರ್ಯರ ಆಂಜನೇಯ ದಂಡಕ, ಘೋಷಗಿರಿಶತಕ; ಶ್ರೀನಿವಾಸಪುರದ ಹರಿಕಥಾ ವಿದ್ವಾನ್ ಎಸ್.ಶೇಷಶರ್ಮಾ ಅವರ ಗುರುವಿಲಾಸ ತರಂಗಿಣಿ, ಮುಳಬಾಗಿಲಿನ ಪಂಡಿತರತ್ನಂ ಅ. ವೆಂಕಟರಮಣ ದೀಕ್ಷಿತರ ಮುಳಬಾಗಿಲು ಸ್ಥಳಪುರಾಣ ಮುಂತಾದ ಕೆಲವನ್ನು ಉದಾಹರಿಸಬಹುದು.

ಇವರಲ್ಲದೆ ಲೋಕನಾಥ ಕವೀಶ್ವರರ ಗೃಹವಾಸ್ತು ದರ್ಪಣ ಟೀಕೆ, ಧ್ರುವ ಚರಿತ್ರೆ, ಸಂತಾನದೀಪಿಕೆ, ಸ್ತ್ರೀಹತ್ಯೆ, ಶಿಶುಹತ್ಯೆಗಳನ್ನೂ, ನಿನ್ನ ಬೆನ್ನತ್ತಿ ಬಂತಲ್ಲೋ ಅಪ್ಪಾಜಿಗೌಡ ಎಂದು ಜಿಲ್ಲಾಧಿಕಾರಿಯನ್ನು ಛೇಡಿಸುವ ವಿದುರಾಶ್ವತ್ಥದ ಲಾವಣಿ ಬರೆದ ತುಮ್ಮನಹಳ್ಳಿ ಅಶ್ವತ್ಥಗೌಡರನ್ನೂ, ಕೈವಾರ ನಾರಣಪ್ಪರ ಪರಂಪರೆ ಮುಂದುವರಿಸಿದ ನಾಗರಾರ್ಯ–ಕೊಂಡಾರ್ಯರನ್ನೂ ಹೆಸರಿಸಬಹುದು. 'ಕ್ರೈಸ್ತ ಸಭೆಯನ್ನು ಸೇರಿದ ಸಾಧು ಚಂದ್ರಲೀಲ'ವನ್ನು ೧೯೧೩ರಲ್ಲೇ ಬರೆದವರು ಕೋಲಾರದ ಬಿ.ಗೋವಿಂದಾಚಾರ್ಯರು. ಬೀಚಗಾನಹಳ್ಳಿಯ ನಾರಾಯಣಪ್ಪರವರು ಅವಧೂತರಾಗಿದ್ದವರು.

ಗೌರಿಬಿದನೂರಿನ ಜರಬಂಡಹಳ್ಳಿಯ ಅನಂತ ಪದ್ಮನಾಭರಾವ್ ಅವರು (ಜ ೧೯೫೧) ಬೆಂಗಳೂರಿನ ವಿಜಯ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿದ್ದು '೧೯ನೇ ಶತಮಾನದ ಹರಿದಾಸ ಸಾಹಿತ್ಯ' ಕುರಿತು ರಚಿಸಿದ ಪ್ರೌಢ ಪ್ರಬಂಧಕ್ಕಾಗಿ ಪಿಎಚ್.ಡಿ ಪದವಿ ಪಡೆದಿದ್ದಾರೆ. ಶ್ರೀಪಾದರಾಜರ ಜೀವನ ಮತ್ತು ಕೃತಿಗಳು ಸೇರಿದಂತೆ ಆರು ಲೇಖನಗಳು; ಕೋಲಾರ ಜಿಲ್ಲೆಯ ಶಿಶುಪ್ರಾಸಗಳು, ಅಂಬಾಬಾಯಿ ಅವರ ಜೀವನ ಮತ್ತು ಕೃತಿಗಳು ಸೇರಿದಂತೆ ೧೬ ಸಂಶೋಧನಾ ಲೇಖನಗಳು ರಚಿಸಿರುವರಲ್ಲದೆ ಆಕಾಶವಾಣಿಯಲ್ಲಿಯೂ ಇವರ ಹಲವಾರು ರೂಪಕಗಳು, ಭಾಷಣಗಳು ಪ್ರಸಾರವಾಗಿವೆ. ಸಾಂಗತ್ಯ, ಜಾನಪದ, ನೀತಿಶತಕಗಳನ್ನು ಕುರಿತ ಹಲವು ರಚನೆಗಳನ್ನು ಪ್ರೌಢ ಪತ್ರಿಕೆಗಳಿಗೆ ಸಂಪಾದಿಸಿ ಕೊಟ್ಟಿದ್ದಾರಲ್ಲದೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರು ಹೊರತಂದಿರುವ ಹರಿದಾಸ ಸಾಹಿತ್ಯ ಮಾಲಿಕೆಯಲ್ಲಿ 'ವಿದ್ಯಾಪ್ರಸನ್ನ ತೀರ್ಥರು ಹಾಗೂ ಇತರ ಯತಿಗಳ ಕೀರ್ತನೆಗಳು', 'ಅಂಬಾಬಾಯಿ ಅವರ ಕೀರ್ತನೆಗಳು', 'ವಿಜಯರಾಮಚಂದ್ರ ವಿಠಲ ಮತ್ತು ಇತರ ಹರಿದಾಸರ ಕೀರ್ತನೆಗಳು' ಹಾಗೂ 'ಗುರು ರಾಮವಿಠಲರ ಕೀರ್ತನೆಗಳು' ಕುರಿತ ಸಂಪುಟಗಳನ್ನು ಸಂಪಾದಿಸಿ ಕೊಟ್ಟಿದ್ದು ಪ್ರಕಟವಾಗಿವೆ.

ಕೋಲಾರದಲ್ಲಿ ಜನಿಸಿದ ಶತಾವಧಾನಿ ಆರ್. ಗಣೇಶ್ (೧೯೬೨) ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿದರಾದರೂ ಸ್ನಾತಕೋತ್ತರ (ಸಂಸ್ಕೃತ) ಹಾಗೂ ಡಿ.ಲಿಟ್ ಪದವಿ (ಕನ್ನಡ) ಪಡೆದು ಸ್ವಸಾಮರ್ಥ್ಯದಿಂದ ಅಷ್ಟಾವಧಾನ ಕಲೆಯನ್ನು ರೂಢಿಸಿಕೊಂಡವರು. ನೆರೆಯ ಆಂಧ್ರದಲ್ಲಿ ಅಷ್ಟಾವಧಾನ ಕಲೆ ಅತ್ಯಂತ ಜನಪ್ರಿಯ ಹಾಗೂ ವಿದ್ವತ್ ಸಮೂಹದಲ್ಲಿ ಬಳಕೆಯಲ್ಲಿದೆಯಾದರೂ ಕನ್ನಡದಲ್ಲಿ ಅಷ್ಟಾವಧಾನಿಗಳು ಬಹಳ ಕಡಿಮೆ. ಸುಮಾರು ೪೦೦ ಅಷ್ಟಾವಧಾನ ಹಾಗೂ ಮೂರು ಶತಾವಧಾನ ಕಾರ್ಯಕ್ರಮಗಳನ್ನು ಅಮೆರಿಕಾ ಸೇರಿದಂತೆ ರಾಜ್ಯ, ರಾಷ್ಟ್ರಗಳ ಆದ್ಯಂತ ನೀಡಿರುವ ಗಣೇಶ್ ಅವರು ದಕ್ಷಿಣ ಭಾರತೀಯ ಭಾಷೆಗಳಲ್ಲದೆ ಪಾಳಿ, ಪ್ರಾಕೃತ, ಗ್ರೀಕ್, ಲ್ಯಾಟಿನ್ ಸೇರಿದಂತೆ ಇಂಗ್ಲೀಷ್, ಹಿಂದಿ ಭಾಷೆಗಳಲ್ಲೂ ಪರಿಣಿತರಿದ್ದು ತಮ್ಮ ಅವಧಾನ ಕಲೆಗೆ ಪೂರಕವಾಗಿ ಬಳಸಿಕೊಂಡಿರುವುದುಂಟು. ಕಲೆ, ವಿಜ್ಞಾನ, ತತ್ವಶಾಸ್ತ್ರ ಪುರಾತತ್ವಶಾಸ್ತ್ರ ಇತಿಹಾಸ, ಸೌಂದರ್ಯ ಶಾಸ್ತ್ರ ಇವೇ ಮುಂತಾದ ಹತ್ತಾರು ವಿದ್ವತ್ ಕ್ಷೇತ್ರದಲ್ಲಿ ಅಪಾರ ಜ್ಞಾನ ಪಡೆದಿರುವ, ಎಡಬಿಡದೆ ಇಪ್ಪತ್ತನಾಲ್ಕು ತಾಸುಗಳು ಅವಧಾನ ನಡೆಸಿಕೊಟ್ಟ, ಒಂದೇ ದಿನದಲ್ಲಿ ಶತಾವಧಾನ ನಡೆಸಿಕೊಟ್ಟಿರುವ ಉದಾಹರಣೆಗಳಿವೆ. ಇವರ 'ಕನ್ನಡದಲ್ಲಿ ಅವಧಾನ ಕಲೆ' ಕುರಿತ ಮಹಾಪ್ರಬಂಧಕ್ಕೆ ಕನ್ನಡ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪದವಿ ದೊರೆತಿದೆ. ಇದೂ ಸೇರಿದಂತೆ ಮಧುಪದ್ಮ, ವಿತಾನ, ಷಡ್ದರ್ಶನ ಸಂಗ್ರಹ ಇತ್ಯಾದಿ ೧೯ ಕೃತಿಗಳು ಪ್ರಕಟವಾಗಿವೆ. ನಾಟಕ, ಸುದೀರ್ಘ ಕಾವ್ಯ, ಕಾದಂಬರಿ, ವೈಚಾರಿಕ ಸಾಹಿತ್ಯ ಅನುವಾದ ಇತ್ಯಾದಿ ಕುರಿತ ಸುಮಾರು ೬೦ ಕೃತಿಗಳು, ೨೦ ನೃತ್ಯ ರೂಪಕಗಳು, ಸುಮಾರು ೩೦೦ ಸಂಗೀತ ಕೃತಿಗಳು, ೧೦೫ ಸಂಶೋಧನಾ ಲೇಖನಗಳು ಶ್ರೀಯುತರು ಸಾಹಿತ್ಯ ಕಲಾಲೋಕಕ್ಕೆ ನೀಡಿರುವ ಕಾಣಿಕೆಗಳು. ಇವರ 'ಕಾವ್ಯ–ಚಿತ್ರ–ಗೀತ–ನೃತ್ಯ' ಒಂದು ವಿನೂತನ ಕಾರ್ಯಕ್ರಮ. ಗಣೇಶ್ ಅವರಿಗೆ ರಾಜ್ಯೋತ್ಸವ ಪ್ರಶಸ್ತಿಯು ಸೇರಿದಂತೆ, ಉತ್ತಮ ವೈಜ್ಞಾನಿಕ ಬರಹಗಾರ, ಉತ್ತಮ ಕಥಾ ಲೇಖಕ ಇತ್ಯಾದಿ ಪ್ರಶಸ್ತಿಗಳು ಅನೇಕ ಸನ್ಮಾನಗಳು ಸಂದಿವೆ.

ಜಿಲ್ಲೆಯಲ್ಲಿ ಕೂಲಿ, ಕಾರ್ಮಿಕರಾದಿಯಾಗಿ ದುಡಿಯುವ ವರ್ಗದವರೇ ಹೆಚ್ಚಾಗಿರುವುದರಿಂದ, ತಮ್ಮ ನೋವುಗಳನ್ನು ಮರೆಯಲು ಹಾಡುಗಳ ಮೊರೆ ಹೋಗುವರೆಂದು ಹೇಳುವ ರಂಗಾರೆಡ್ಡಿ ಕೋಡಿರಾಂಪುರ ಅವರು ಜಿಲ್ಲೆಯ ಜನಪದಗೀತೆಗಳಲ್ಲಿ ಹಾಗೂ ಕೈವಾರ ನಾರಾಯಣರ ಬದುಕು ಕೃತಿಗಳಲ್ಲಿ ನೋವಿನ, ಪ್ರತಿಭಟನೆಯ ಧ್ವನಿಗಳನ್ನು ಗುರುತಿಸಿದ್ದಾರೆ. ಅಲ್ಲದೆ ಬಂಡಾಯ ಸಾಹಿತ್ಯ ಜಿಲ್ಲೆಯಲ್ಲಿ ಬೆಳೆದು ಬಂದ ಬಗೆಯನ್ನು ವಿವರಿಸುತ್ತಾರೆ. ಕೋಲಾರ ಜಿಲ್ಲೆ ಆಂಧ್ರಕ್ಕೆ ಹೊಂದಿಕೊಂಡಿರುವುದರಿಂದ ಅಲ್ಲಿಯ ಸಾಹಿತ್ಯದ ಪ್ರಭಾವ ಇಲ್ಲಿಯೂ ಆಗಿದೆ. ಎಪ್ಪತ್ತರ ದಶಕದಲ್ಲಿ ಆಂಧ್ರದ ವಿಪ್ಲವ ಸಾಹಿತ್ಯವನ್ನು ಕೆ.ನಾರಾಯಣಸ್ವಾಮಿ, ಆರ್ವಿಯಸ್ ಸುಂದರಂ ಅವರು ಅನುವಾದಿಸುವ ಕಾರ್ಯ ಮಾಡತೊಡಗಿದರು. ಕೆ.ನಾರಾಯಣಸ್ವಾಮಿ ಅವರು ಅನುವಾದಿಸಿದ 'ನರಬಲಿ' ಗದ್ಯಕಾವ್ಯ ರಾಜ್ಯ ಪ್ರಗತಿಪರ ಸಾಹಿತಿಗಳ ಮೇಲೆ ಪರಿಣಾಮ ಬೀರಿದ್ದು ಪುರಾಣಗಳನ್ನು ನೋಡುವ ಹೊಸ ದೃಷ್ಟಿಕೋನವೊಂದು ಒದಗಿ ಬಂತು. ೧೯೭೯ರಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ರೂಪುಗೊಂಡ ಮೇಲೆ ಜಿಲ್ಲೆಯವರಾದ ಕೆ.ರಾಮಯ್ಯ, ಹ.ಸೋಮಶೇಖರ, ಗಂಗಾಧರಮೂರ್ತಿ, ರಂಗಾರೆಡ್ಡಿ ಕೋಡಿರಾಂಪುರ, ವಿ.ಮುನಿವೆಂಕಟಪ್ಪ, ಗಂಗಾರಾಂ ಚಂಡಾಳ ಮುಂತಾದವರು ಸಂಘಟನೆ ಕಟ್ಟುವುದಲ್ಲದೆ ಸಾಹಿತ್ಯ ಕೃಷಿಯಲ್ಲಿಯೂ ತೊಡಗಿಕೊಂಡರು. 'ಸಮುದಾಯ' ನಾಟಕ ಸಂಘಟನೆಯೂ ಜನಗಳ ಹತ್ತಿರಕ್ಕೆ ನಾಟಕಗಳನ್ನು ಕೊಂಡೊಯ್ಯುವ ಕಾರ್ಯ ಮಾಡಿದ್ದು ಜಿಲ್ಲೆಯಲ್ಲಿಯೂ 'ಸಮುದಾಯ'ದ ಘಟಕಗಳು ಆರಂಭವಾಗಿ ಅನ್ಯಾಯಗಳ ವಿರುದ್ಧ (ನಾಟಕಗಳ ಮೂಲಕ) ಹೋರಾಟಕ್ಕೆ ತೊಡಗಿದರು. ದಲಿತ ಸಂಘರ್ಷ ಸಮಿತಿಯ 'ದಲಿತ ಕಲಾ ಮಂಡಲಿ' ಗೆಳೆಯರು ಬಂಡಾಯ ಕವಿಗಳ ಕವನ ಹಾಡುವ ಹಾಗೂ ಅಭಿನಯಿಸುವ ಮೂಲಕ ಬಂಡಾಯ ಸಾಹಿತ್ಯಕ್ಕೆ ಒತ್ತಾಸೆಯಾಗಿ ನಿಂತು, ಆ ಕುರಿತ ವಾತಾವರಣ ಕಂಡು ಬಂದು ೧೯೮೮ರಲ್ಲಿ ರಾಜ್ಯಮಟ್ಟದ ನಾಲ್ಕನೇ ಬಂಡಾಯ ಸಾಹಿತ್ಯ ಸಮ್ಮೇಳನ ಕೋಲಾರ ಜಿಲ್ಲೆಯಲ್ಲಿ ನಡೆದಿದ್ದು 'ಕೆಂಪು ಮಣ್ಣಿನ ಒಕ್ಕಲು' ಎಂಬ ಕವನ ಸಂಕಲನ ಹೊರತರಲಾಯಿತು.

ಸ.ರಘುನಾಥ ಅವರು ಕವಿ ಹಾಗೂ ಅನುವಾದಕರಾಗಿದ್ದು 'ಅಭಿಮುಖ' ಎಂಬ ಸಂಕಲನ ಪ್ರಕಟಿಸಿರುವುದಲ್ಲದೆ ವಿಪ್ಲವ ಕವನಗಳನ್ನು, ನಕ್ಸಲೈಟರ ಕವನಗಳನ್ನು, ಕೈವಾರ ತಾತಯ್ಯರ ಪದ್ಯಗಳನ್ನು ಅನುವಾದಿಸಿದ್ದಾರೆ. ತಮ್ಮ 'ಗತಿ' ಕವನ ಸಂಕಲನಕ್ಕೆ ಪುರಸ್ಕಾರ ಪಡೆದಿದ್ದಾರೆ. ಗೌನಪಲ್ಲಿ ಸ್ವಾಮಿನಾಥನ್, ಆರ್.ವಿಜಯ ರಾಘವನ್ ಅವರಲ್ಲಿ ಯಥಾಸ್ಥಿತಿಯನ್ನು ಮೀರುವ ಗುಣ ಕಂಡುಬರುತ್ತದೆ. ಕೆ.ರಾಮಯ್ಯ ಅವರ ಕವಿತೆಗಳಲ್ಲಿ ದಲಿತ ಲೋಕದ ವಿವರಗಳಲ್ಲದೆ, ಆ ಸ್ಥಿತಿಗೆ ಕಾರಣರವರ ಮೇಲೆ ಆಕ್ರೋಶ ಕಂಡುಬರುತ್ತದೆ. ಗಂಗಾರಾಂ ಚಂಡಾಳರ ಕವಿತೆಗಳಲ್ಲಿ ಜಾತಿ ವ್ಯವಸ್ಥೆಯಿಂದ ಆದ ಅನಾಹುತಗಳು, ಅದರಿಂದಾದ ದಲಿತರ ಅಸಹಾಯಕ ಸ್ಥಿತಿಯ ಚಿತ್ರಣಗಳೂ ಇವೆ. 'ಕೆಂಡದ ಮಳೆ' ರಚಿಸಿದ ವಿ.ಮುನಿವೆಂಕಟಪ್ಪರವರ ಕೃತಿಗಳಲ್ಲಿ ಜಾತಿಯ ಅಸಮಾನತೆ ಜೊತೆಗೆ ಅಧಿಕಾರಶಾಹಿಯ ಹಾಗೂ ರಾಜಕೀಯ ವ್ಯಕ್ತಿಗಳ ಕುತಂತ್ರವನ್ನು ಬಯಲಿಗೆಳೆಯುವ ಪರಿಯಿದೆ. ಹ.ಸೋಮಶೇಖರ್, ಎಚ್.ಎನ್.ಸೋಮಶೇಖರಗೌಡ, ಗೋ.ರಂಗಪ್ಪರವರ ಕವಿತೆಗಳಲ್ಲಿ ವ್ಯವಸ್ಥೆಯ ಕ್ರೂರಹಿಡಿತ, ಅಧಿಕಾರಶಾಹಿ, ಪುರೋಹಿತಶಾಹಿಗಳ ಅನ್ಯಾಯ, ಕ್ರೌರ್ಯ ಬಯಲಿಗೆಳೆಯುವಂತಿರುತ್ತದೆ. ಎನ್.ವೆಂಕಟಕೃಷ್ಣಯ್ಯ, ಜಿ.ಬಾಲಕೃಷ್ಣ, ಎಚ್.ರಾಮಕೃಷ್ಣ, ಬಿ.ಆರ್.ಲಕ್ಷ್ಮಣರಾವ್, ಚಿ.ಶ್ರೀನಿವಾಸರಾಜು, ಎಚ್.ಪಿ. ಅನಿಲ್ ಕುಮಾರ್‌ರವರಲ್ಲಿ ಬಂಡಾಯ ಮನೋಧರ್ಮವಿದೆ.

ವಿ.ಚಂದ್ರಶೇಖರ ನಂಗಲಿಯವರ ಲೇಖನಗಳು ಸಾಹಿತ್ಯದಲ್ಲಿ ಅದರಲ್ಲೂ ವಚನಸಾಹಿತ್ಯದಲ್ಲಿ ಕಂಡುಬರುವ ಬಂಡಾಯದ ದನಿಗಳ ವಿಮರ್ಶೆ, ಪುನರ್ ವಿಮರ್ಶೆಗಳಲ್ಲದೆ, ಈಚಿನ ಬರಹಗಳು ವಚನಗಳನ್ನೂ ಬಳಸಿಕೊಂಡಂತೆ ಪರಿಸರ ಪ್ರೀತಿ ಹಾಗೂ ಮಾಲಿನ್ಯಗಳ ಬಗ್ಗೆ, ಜಾಗತೀಕರಣದ ವಿಶ್ವಮಾರುಕಟ್ಟೆಯ ಅಪಾಯಗಳ ಬಗ್ಗೆ ಅಂಕಿ ಅಂಶ ಹಾಗೂ ಛಾಯಾಚಿತ್ರಗಳೊಂದಿಗೆ ದಾಖಲಿಸಿರುವಂತಹವು. ನಂಗಲಿಯವರು ಸಹೋದರ ವಿ.ಅಮರನಾರಾಯಣ ನಂಗಲಿ ಮತ್ತು 'ಅಗನಾಗ್' ಗೆಳೆಯರೊಂದಿಗೆ ನಡೆಸಿದ ಚಾರಣಗಳು, ಕಾಡುಮೇಡುಗಳ ಸಾಹಸಯಾತ್ರೆ ಕುರಿತ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು 'ಕಾಡು ಮತ್ತು ತೋಪು' ಹೆಸರಿನಲ್ಲಿ ಸಂಗ್ರಹಿತವಾಗಿವೆ. ಅದರಲ್ಲಿಯೂ ಕೋಲಾರ ಜಿಲ್ಲೆಯ ಪರಿಸರದ ಸವಾಲುಗಳು, ಅಣುಸಂಸ್ಕೃತಿಯ ಅಪಾಯಗಳು, ಟೇಕಲ್ ಗುಹೆಗಳ ನೋಡಿ ಬನ್ನಿ, ಅಂತರಗಂಗೆಯ ಅಂತರ್‌ಲೋಕ, ಕೋಲಾರ ಬೆಟ್ಟದಲ್ಲಿ ಅಬ್ಬಿಗುಹೆಯ ಮಜ್ಜನ ಮುಂತಾದವುಗಳಲ್ಲಿ ಹಸಿರು ಕಾಳಜಿ ಹಸಿರು ಅನುಭವ ಕಾಣಬಹುದು. ಇದಲ್ಲದೆ ನಂಗಲಿಯವರು ಮಾರ್ಕ್ಸ್‌ವಾದಿ ವಿಮರ್ಶೆ, ನಾ ನಿಲ್ಲುವವಳಲ್ಲ, ನಿರ್‌ಬೀಜೀಕರಣದ ವಿರಾಟ್ ಸ್ವರೂಪ, ನಾ ನಿಮ್ಮೊಳಗು, ಹೊಗೆ ಹಗೆಯಾದಾಗ, ಕುವೆಂಪು

ಕಾದಂಬರಿಯಲ್ಲಿ ಜೈವಿಕ ಜಾಲ, ತಿಟ್ಟತ್ತಿ ತಿರುಗಿ ಇತ್ಯಾದಿ ರಚಿಸಿದ್ದಾರೆ. ನಂಗಲಿಯವರ ವಿಮರ್ಶಾ ಲೇಖನಗಳ ಸಂಗ್ರಹ 'ನಡೆದುದೆ ದಾರಿ' ಇತ್ತೀಚೆಗೆ ಪ್ರಕಟವಾಯಿತು. ನಂಗಲಿಯವರು ಎಲ್.ಬಸವರಾಜು ಟ್ರಸ್ಟ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇತ್ಯಾದಿ ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿದ್ದಾರೆ. ವನ್ಯಜೀವಿ ಹಾಗೂ ಪರಿಸರ ಸಂರಕ್ಷಣೆಗಳಲ್ಲಿ ತೊಡಗಿಸಿಕೊಂಡಿರುವ ನಂಗಲಿಯವರು ಚಾರಣ, ಪರ್ವತಾರೋಹಣ ಇತ್ಯಾದಿ ಸಾಹಸ ಕಾರ್ಯಾಚರಣೆಯ ತಂಡದಲ್ಲಿ ಸಕ್ರಿಯ ಪಾತ್ರವಹಿಸುತ್ತಿದ್ದಾರೆ.

ಪ್ರಸ್ತುತ ಕೋಲಾರದ ಪದವಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿರುವ ಕೆ.ಆರ್.ನರಸಿಂಹನ್ ಅವರು ಕುರುಡುಮಲೆಯಲ್ಲಿ ಜನಿಸಿದ್ದು ಜಿಲ್ಲೆಯ ಶಾಸನ, ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಅನೇಕ ಶೋಧನೆಗಳನ್ನು ಮಾಡಿದ್ದಾರೆ. ಪುರಾತನ ಶಾಸನ, ಶಿಲ್ಪಗಳನ್ನು, ವೀರಗಲ್ಲು–ಮಾಸ್ತಿಗಲ್ಲುಗಳನ್ನು ಪತ್ತೆ ಹಚ್ಚಿ, ಅಭ್ಯಾಸಪೂರ್ಣ, ಪ್ರೌಢ ಲೇಖನಗಳನ್ನು ಬರೆದಿದ್ದಾರೆ. ಭಾರತದ ನರಸಿಂಹ ಕ್ಷೇತ್ರಗಳನ್ನು ಕುರಿತು 'ನರಸಿಂಹ ಪದಾರ್ಥ' ಎಂಬ ಹೆಸರಿನಲ್ಲಿ ಎರಡು ಸಂಪುಟಗಳನ್ನೂ, ಕೋಲಾರ ಜಿಲ್ಲೆಯ ವೈಷ್ಣವ ಕ್ಷೇತ್ರಗಳನ್ನು ಕುರಿತು ಪುಸ್ತಕವೊಂದನ್ನು ಹೊರತಂದಿದ್ದಾರೆ. ಹಲವಾರು ಸ್ಮರಣ ಸಂಚಿಕೆಗಳನ್ನು ಸಂಪಾದಿಸಿದರಲ್ಲದೆ, ಜಿಲ್ಲೆಯಿಂದ ಪ್ರಕಟವಾಗಿರುವ ಬಹುತೇಕ ಸ್ಮರಣ ಸಂಚಿಕೆ, ಅದಕ್ಕೆ ಸಂಬಂಧಿಸಿದ ಕಾರ್ಯಕ್ರಮ, ಉತ್ಸವ, ವಿಚಾರ ಸಂಕಿರಣ ಇವೇ ಮುಂತಾದುವಲ್ಲಿ ನರಸಿಂಹನ್ ಅವರು ಕಳೆದ ೨೫ ವರ್ಷಗಳಿಂದ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದಾರೆ. ಈ ಎಲ್ಲದರ ಬಗ್ಗೆ ಅಧಿಕಾರಯುತವಾಗಿ ಮಾತಾಡಬಲ್ಲವರಾಗಿದ್ದಾರೆ.

ಲಕ್ಷ್ಮೀಪತಿ ಕೋಲಾರ ಅವರ 'ನವಿಲು ಕಿನ್ನರಿ'ಯಲ್ಲಿ ವಚನಕಾರರ, ಅನುಭವಿ ಕವಿಗಳ ಪ್ರಭಾವವಿದ್ದು ವಸ್ತುಸ್ಥಿತಿಯನ್ನು ಸಾಮಾಜಿಕ ನೆಲೆಯಲ್ಲಿ ಗುರುತಿಸಿ, ಅದರಾಚೆಯ ನಿಗೂಢತೆಯತ್ತ ಮುಖ ಮಾಡುವ, ಸಂತೋಷಕ್ಕಿಂತ ವಿಷಾದ ಕಂಡುಬರುವ, ನವ್ಯರ ಸಂಕೀರ್ಣತೆ ಬಂಡಾಯದ ಆಶಯ ಬೆಸೆಯುವ ರೀತಿ ಕಂಡುಬರುತ್ತದೆ. ಉಪ ಸಂಸ್ಕೃತಿ ಕುರಿತು ರಚಿಸಿದ 'ಮಾಸ್ತಿಕರು' ಅವರ ಇನ್ನೊಂದು ಕೃತಿ. ಲಕ್ಷ್ಮೀಪತಿಯವರ ಇನ್ನೊಂದು ಕವನ ಸಂಕಲನ 'ಮಾಯಾ ಉಯ್ಯಾಲೆ' ಹಸ್ತಪ್ರತಿಗೆ ಕಾಸರಗೋಡಿನ ಪೆರ್ಲಕೃಷ್ಣಭಟ್ಟ ಕಾವ್ಯಪ್ರಶಸ್ತಿ ೨೦೦೦ದಲ್ಲಿ ಬಂದಿದೆ. ಈ ಹಿಂದೆಯೇ 'ಹೂ ಅರಳುವಂಥ ಮಣ್ಣು' ಸಂಕಲನ ಪ್ರಕಟಿಸಿದ ಗಂಗಾಧರಮೂರ್ತಿ ಅವರ ಈಚಿನ ಕವಿತೆಗಳಲ್ಲಿ ಸಾಮಾಜಿಕ ವಿಷಮತೆಯನ್ನು ವರ್ಗದ ನೆಲೆಯಲ್ಲಿ ಪರಿಭಾವಿಸಿದೆ. ಮೂಲತಃ ತುಮಕೂರಿನವರಾದ ರಂಗಾರೆಡ್ಡಿ ಕೋಡಿರಾಂಪುರ ಅವರು ಹಲವಾರು ವರ್ಷಗಳಿಂದ ಜಿಲ್ಲೆಯಲ್ಲಿ ನೆಲೆಸಿದ್ದು ಇಲ್ಲಿಯ ಸಾಹಿತ್ಯ ಪರಂಪರೆಯಲ್ಲಿ ಒಂದಾಗಿದ್ದಾರೆ. ಲಿಖಿತ ಜಾನಪದ, ನನ್ನೂರ ಹಾಡು, ಸಾಧನೆಗಳು ಯೋಜನೆಗಳು, ಶ್ರೀಶ್ರೀ ಬಂಡಾಯ ಜಾನಪದ, ತೇರುಹರಿದಾವು, ಗಂಧದ ಮಡುವ ಕಲಕೂತ, ಒಣಭೂಮಿ ಭತ್ತ ನಗುಮುಖದ ಕ್ಯಾದಿಗಿ ಮುಂತಾದ ಕೃತಿಗಳು ಹೊರಬಂದಿದ್ದು ಅವರ ಪಿಎಚ್.ಡಿ.ಯ ಪ್ರೌಢ ಪ್ರಬಂಧ 'ಕೋಲಾರ ಜಿಲ್ಲೆಯ ಜನಪದ ಕಲೆಗಳ ಅಧ್ಯಯನ' ಪ್ರಕಟಣೆಯ ಹಂತದಲ್ಲಿದೆ. ರಂಗಾರೆಡ್ಡಿಯವರು ಶಿಕ್ಷಣ ಮತ್ತು ವೈಚಾರಿಕತೆ, ಕಮಲಾಭಿನಂದನ ಇತ್ಯಾದಿ ಹತ್ತು ಕೃತಿಗಳನ್ನೂ ಹತ್ತಾರು ನಿಯತಕಾಲಿಕೆಗಳನ್ನೂ ಸಂಪಾದಿಸಿ ಕೊಟ್ಟಿದ್ದಾರೆ. ಜನಪದ, ಬಂಡಾಯ ಹಾಗೂ ಸಾಹಿತ್ಯ ಕ್ಷೇತ್ರಗಳ ಅನೇಕ ಕಾರ್ಯಾಗಾರ, ಶಿಬಿರ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ವೈಚಾರಿಕ ಲೇಖನಗಳನ್ನು ಮಂಡಿಸಿದ್ದಾರೆ. ಈ ಎಲ್ಲ ಕ್ಷೇತ್ರಗಳ ಸಂಪನ್ಮೂಲ ವ್ಯಕ್ತಿಯಾಗಿದ್ದು, ಸಂಘಸಂಸ್ಥೆಗಳಲ್ಲಿ ಸದಸ್ಯ ಸಲಹೆಗಾರರಾಗಿದ್ದಾರೆ. ಶ್ರೀಯುತರಿಗೆ ಮೈಸೂರು ವಿಶ್ವವಿದ್ಯಾಲಯದ ಹೊನ್ನಶೆಟ್ಟಿ ಪ್ರಶಸ್ತಿ, 'ಬಂಡಾಯ ಜಾನಪದ' ಕೃತಿಗೆ ಗುಂಡ್ಮಿ ಜಾನಪದ ಪ್ರಶಸ್ತಿ, ದೆಹಲಿಯ 'ಸೆಕ್ಯೂಲರ್ ಇಂಡಿಯಾ ಹಾರ್ಮೋನಿ ಪ್ರಶಸ್ತಿ' ಸಮಗ್ರ ಸಾಧನೆಗಾಗಿ ಬಯಲುಸೀಮೆ ಜಾನಪದ ಪ್ರಶಸ್ತಿ, ಪಾಣಿಪತ್‌ನ 'ಸುಭದ್ರ ಕುಮಾರಿ ಚೌಹಾನ್ ಜನ್ಮಶತಾಬ್ದಿ ಸಮ್ಮಾನ್'ಗಳು ದೊರೆತಿವೆ. ನಾಟಕ ರಚನೆ ನಿರ್ದೇಶನಗಳಲ್ಲೂ ಪರಿಶ್ರಮವಿದೆ.

ವರ್ಣಾಶ್ರಮ, ಅಸಮಾನತೆ, ಬಂಡವಾಳಶಾಹಿಗಳ ವಿರುದ್ಧ ದನಿ ಎತ್ತುವ ಉತ್ತನೂರು ರಾಜಮ್ಮ ಅವರು 'ಮೂಡಲ ಸೀಮೆ ಬ್ಯಾಗೆ' ಗೊಂಗಡಿ ಇತ್ಯಾದಿ ಸಂಕಲನ ಪ್ರಕಟಿಸಿದ್ದು, ಜಿಲ್ಲೆಯ ಒಬ್ಬ ಬಂಡಾಯ ಕವಯಿತ್ರಿ, ಸಾಮಾಜಿಕ ಸ್ಥಾನಮಾನಗಳ ಬಗ್ಗೆ, ಹೆಣ್ಣಿನ ಮೇಲಿನ ದೌರ್ಜನ್ಯಗಳ ಬಗ್ಗೆ ಬರೆಯುತ್ತಿರುವ ಇನ್ನೊರ್ವ ಕವಯಿತ್ರಿ ಎಂದರೆ ಗುಡಿಬಂಡೆ ಪೂರ್ಣಿಮಾ ಅವರು. ಕೆಲಕಾಲ ಜಿಲ್ಲೆಯಲ್ಲಿ ನೆಲೆಸಿದ್ದ ಇಲ್ಲಿಯ ಸಾಹಿತ್ಯ ವಾತಾವರಣಕ್ಕೆ ಸ್ಪಂದಿಸಿದ ಜಿ.ಆರ್.ತಿಪ್ಪೇಸ್ವಾಮಿ ಅವರು 'ಅಗ್ನಿಸಾಕ್ಷಿ' ಎಂಬ ಕವನ ಸಂಕಲನ ತಂದಿದ್ದು ಅದರಲ್ಲಿ ಸ್ತ್ರೀ ಶೋಷಣೆಯ ವಿವಿಧ ಮುಖಗಳನ್ನು ಕಾಣಬಹುದು. ಅವರು ರಚಿಸಿದ ಇನ್ನೊಂದು ಕೃತಿ 'ಕೋಲಾರಮ್ಮ' ಗ್ರಾಮದೇವತೆಯ ಅಧ್ಯಯನ. ಜಿ.ಆರ್.ತಿಪ್ಪೇಸ್ವಾಮಿ ಅವರೊಂದಿಗೆ ಟಿ.ಗಂಗಾಧರಯ್ಯ ಸೇರಿ ಹೊರತಂದಿರುವ

'ಬಂಗಾರದ ಕುಡಿ' ಕವನ ಸಂಗ್ರಹದಲ್ಲಿ ಹಲವಾರು ಬಗೆಯ ಕವಿತೆಗಳಿವೆ. ಕ.ಚ.ಕೃಷ್ಣಪ್ಪ ಮೈ.ಸತೀಶ್ ಕುಮಾರ್, ಅನುರಾಧ ಕಟ್ಟಿ ಸಿ.ಕವಿತ, ತಿಮ್ಮರಾಜನಹಳ್ಳಿ ಗಂಗಾಧರಯ್ಯ, ಎಚ್.ಎನ್.ಶ್ರೀನಿವಾಸ್, ಮಾಕಾರಹಳ್ಳಿ ಮಂಜುನಾಥ, ಸಿ.ಹನುಮಂತರಾಯಪ್ಪ ಅರಳುಮಲ್ಲಿಗೆ ಗಂಗಾಧರ, ಎಸ್.ವಿ.ಮನ್ಸಾಚಾರ್, ಕೆ.ಎಚ್.ಶಿವಣ್ಣ ಎಚ್.ಎಸ್.ಶೈಲಜ, ಎಂ.ಎನ್.ವೆಂಕಟರಮಣಪ್ಪ ಮುಂತಾದವರ ಕವನಗಳಲ್ಲಿಯ ವಸ್ತು ಹಾಗೂ ಅಭಿವ್ಯಕ್ತಿ ವಿಧಾನಗಳಲ್ಲಿ ಹೊಸತನ ಕಂಡುಬರುತ್ತದೆ. ಕೋಲಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮೂಲತ: ದಾವಣಗೆರೆಯವರಾದ ವೈ.ಶಾಂತಪ್ಪನವರು ಪ್ರೇಮದ ಮೊಗ್ಗು ಎಂಬ ಕವಿತಾ ಸಂಕಲನವನ್ನು ಪ್ರಕಟಿಸಿದ್ದಾರೆ. ಉಪಾಧ್ಯಾಯರಾಗಿರುವ ಪನಸಮಾಕನಹಳ್ಳಿ ಚೌಡರೆಡ್ಡಿಯವರು ಮಕ್ಕಳ ಸಾಹಿತ್ಯ – ನಾಟಕ – ಕಥೆಗಳನ್ನು ರಚಿಸಿದ್ದಾರೆ. ಜರಗನ ಹಳ್ಳಿ ಶಿವಶಂಕರ ಅವರು ಅನೇಕ ಬಂಡಾಯ ಸಾಹಿತಿಗಳ ಕವನಗಳನ್ನು ಆರಿಸಿ, ಅದಕ್ಕೆ ಬೇರೆಯವರಿಂದ ವಿಮರ್ಶೆಗಳನ್ನು ಬರೆಸಿ ಒಟ್ಟಿಗೆ ಸೇರಿಸಿ 'ಜೊತೆಯಾದವರು' ಎಂಬ ಹೆಸರಿನಲ್ಲಿ ಸಂಕಲನವೊಂದನ್ನು ತಂದಿದ್ದು ಇದರಲ್ಲಿ ಜಿಲ್ಲೆಯ ಕವಿಗಳೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಜಿಲ್ಲೆಯ ಹುದತಿ, ನಾಗಸಂದ್ರ ಗ್ರಾಮದಲ್ಲಿ ೧೯೮೪ರಲ್ಲಿ ದಲಿತ ವರ್ಗಕ್ಕೆ ಸೇರಿದ ಜೀತದಾಳುಗಳು ಭೂ ಮಾಲಿಕರ ಏಕಸ್ವಾಮ್ಯದ ವಿರುದ್ಧ ಬಂಡೆದಿದ್ದು ಚಳವಳಿಯ ರೂಪ ತಾಳಿತು. ಇದರಲ್ಲಿ ಸಕ್ರಿಯವಾಗಿ ಪಾತ್ರವಹಿಸಿದ್ದ, ಸ್ಥಳೀಯವಾಗಿ ತುಳಿತಕ್ಕೊಳಗಾದವರನ್ನು ಸಂದರ್ಶಿಸಿ, ಸಂಪರ್ಕಿಸಿ, ಅಧ್ಯಯನ ಮಾಡಿ ಬಿ. ಗಂಗಾಧರ ಮೂರ್ತಿ ಅವರು 'ನಾಗಸಂದ್ರ ಭೂ ಆಕ್ರಮಣ ಚಳವಳಿ' ಕೃತಿ ರಚಿಸಿದ್ದಾರೆ. ಇದರಲ್ಲಿ "ಜಮೀನ್ದಾರರ ಕ್ರೌರ್ಯವನ್ನು ಬಿತ್ತರಿಸುತ್ತಾ, ದಲಿತರ ನೋವು ಸಂಕಟವನ್ನು ಪರಿಚಯಸುವುದರ ಜೊತೆಗೆ ಸಾಮಾಜಿಕ ಬಹಿಷ್ಕಾರದ ನಡುವೆಯೂ ಅಧಿಕಾರಶಾಹಿಗಳ, ಪುಡಾರಿ ರಾಜಕಾರಣಿಗಳ ಕಿರುಕುಳ ಸಹಿಸಿಯೂ ಗೆದ್ದ ದಲಿತರ ದಾರುಣ ಕಥೆಯೇ ಇಲ್ಲಿ ಮೈದಳೆದು ನಿಂತಿದೆ" ಎಂದು ವಿಮರ್ಶಕರ ಅಭಿಪ್ರಾಯ. ಇದಲ್ಲದೆ ದಲಿತ ಸಂಘರ್ಷ ಸಮಿತಿಯಿಂದ, ನಗರಗೆರೆ ರಮೇಶ್, ಕೆ.ನಾರಾಯಣಸ್ವಾಮಿ, ಗಂಗಾಧರಮೂರ್ತಿ ಅವರುಗಳು ಅನುವಾದ ಮಾಡಿದ ವಿ.ಆರ್.ನಾರ್ಲ, ನೆಲ್ಸನ್ ಮಂಡೇಲ, ಎಸ್.ಕೆ.ಥೋರಟ್, ಬಾಬಾಸಾಹೇಬ್ ಅಂಬೇಡ್ಕರ್ ಮುಂತಾದವರ ಕೃತಿಗಳನ್ನು ಪ್ರಕಟಿಸಿದೆ. ಅಲ್ಲದೆ ಗೌರಿಬಿದನೂರಿನ ಶಂಬೂಕ ಪ್ರಕಾಶನ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದಿಂದಲೂ ಜಿಲ್ಲೆಯ ಕೃತಿಕಾರರ ವೈಚಾರಿಕ ಸಾಹಿತ್ಯಗಳು ಪ್ರಕಟವಾಗಿವೆ. ಸಿ.ವಿ. (ಬಾಬು) ಕೃಷ್ಣಮೂರ್ತಿ ಅವರು ಇಲ್ಲಿಯವರೇ ಆಗಿದ್ದು ಅಜೇಯ, ಅದಮ್ಯ, ಮಿಲ್ಟ್ರಿ ತಾತ ಕಥೆ ಹೇಳ್ತಾರೆ. ಕ್ರಾಂತಿವೀರ ಅಜಾದ್ ಮದನ್‌ಲಾಲ್ ಧಿಂಗ್ರ, ರುಧಿರಾಭಿಷೇಕ ಇತ್ಯಾದಿ ಕೃತಿಗಳನ್ನು ರಚಿಸಿದ್ದು ಅಜೇಯ, ಅದಮ್ಯಗಳಿಗೆ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ ಬಂದಿದೆ. ಅಜೇಯ ಮಲಯಾಳಂಗೆ ಅನುವಾದಗೊಂಡಿದೆ. ನಂದಿಬಳಿಯ ಹೆಗ್ಗಡಹಳ್ಳಿಯಲ್ಲಿ ಜನಿಸಿದ ಎಚ್.ಎಸ್. ರಾಘವೇಂದ್ರರಾವ್ ಅವರು ಬೇಂದ್ರೆ, ಕುವೆಂಪು 'ಪುತಿನ' ರವರ ಕಾವ್ಯಗಳ ತೌಲಾನಿಕ ಅಧ್ಯಯನ ಮಾಡಿ ಪಿಎಚ್.ಡಿ. ಪದವಿ ಪಡೆದಿದ್ದು ಮಹಾಪ್ರಬಂಧ ಹಾಡೆಹಾದಿಯ ತೋರಿತು ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. 'ಜನಗಣಮನ', 'ತರುತಳೆದ ಪುಷ್ಪ' ಗಳಲ್ಲದೆ ಶತಮಾನದ ಸಾಹಿತ್ಯ, ಅನುವಾದ ಕಥೆಗಳು, ವಿಮರ್ಶೆಗಳು ಇತ್ಯಾದಿ ಸಂಪಾದಿಸಿದ್ದಾರೆ. ಅಧ್ಯಾಪಕರಾಗಿದ್ದ ಎಂ.ಎಸ್. ಪ್ರಭಾಕರ್ ಅವರು ದ ಹಿಂದು, ಅಸ್ಸಾಂ ಈಸ್ಟರ್ನ್ ಇಂಡಿಯಾ ಇತ್ಯಾದಿ ಪತ್ರಿಕೆಗೆ ಬರಹಗಾರರಾಗಿದ್ದು ಕಾಮರೂಪಿ ಎಂಬ ಕಾವ್ಯನಾಮದಲ್ಲಿ ಕುದುರೆಮೊಟ್ಟೆ ಅಂಜಿಕಿನ್ಯಾತಕಯ್ಯ ಕೃತಿಗಳನ್ನು ರಚಿಸಿದ್ದಾರೆ.

ಗೌರಿಬಿದನೂರಿನ ವೆಂಕಟಾಪುರದ ವಿ.ಟಿ.ಎಸ್. ರಾವ್ ಅವರು (೧೯೩೫) ಅಂಚೆ ಮತ್ತು ತಂತಿ ಇಲಾಖೆಯ ಕನ್ನಡ ಸಂಘದಿಂದ 'ಪೂರ್ಣಿಮಾ' ಎಂಬ ಕೈಬರಹದ ಪತ್ರಿಕೆ ತರುತ್ತಿದ್ದು ಸಂಘದಿಂದ ಕಳೆದುಕೊಂಡವರು 'ಬಿಟ್ಟೆ ಬಿಟ್ಟೆ ಬೆಳಗಾಯಿತು' ನಾಟಕಗಳನ್ನು 'ಅಹಲ್ಯೆ' ಕವನ ಸಂಕಲನ, 'ವ್ಯಂಗ್ಯಲಹರಿ' ವ್ಯಂಗ್ಯಚಿತ್ರಕಲೆಗಳ ಪುಸ್ತಕಗಳನ್ನು ಹೊರತಂದಿದ್ದಾರೆ. ರಾಜ್ಯ ಲಲಿತಕಲಾ ಅಕಾಡಮಿಗೆ ಕಲಾವಿದ ಎಸ್.ಎಸ್. ಕುಕ್ಕೆ ಅವರನ್ನು ಕುರಿತ ಪುಸ್ತಕ ರಚಿಸಿ ನೀಡಿದ್ದಾರೆ. ಅಲ್ಲದೆ ಮಣಿಹ, ಇತಿಹಾಸ ದರ್ಶನ, ಕಲಾವಾರ್ತೆ, ತರಂಗ ಇತ್ಯಾದಿಗಳಲ್ಲಿ ಕಲೆಕಲಾವಿದರು ಕುರಿತು ಲೇಖನಗಳನ್ನು ಬರೆದಿದ್ದಾರೆ. ವಿನಾಯಕ ವಿಭೂತಿ, ವಿನಾಯಕದರ್ಶನ, ಸ್ಮರಣಸಂಚಿಕೆಗಳನ್ನು ಸಂಪಾದಿಸಿದ್ದಾರೆ. ವಿದೇಶಗಳಲ್ಲಿರುವ ಗಣಪತಿಯ ಶಿಲ್ಪಗಳನ್ನು ಕುರಿತು ಇಂಗ್ಲೀಷ್‌ನಲ್ಲಿ ಬರೆದಿದ್ದಾರೆ.

ಸಂತೆಕಲ್ಲಹಳ್ಳಿಯ ಆರ್. ಶೇಷಶಾಸ್ತ್ರಿ ಅವರು ಶಾಸನ ಪರಿಚಯ, ವೀರಬ್ರಹ್ಮಯ್ಯ ಕೃತಿ ಬರೆದಿದ್ದಾರೆ. ಶಾಸನ ಸಂಗ್ರಹ, ಮಾತು ನನ್ನವೆಲ್ಲೆ, ಮಣಿಹ, ಕಮ್ಮಟಿಗಗಳನ್ನು ಇತರರೊಂದಿಗೆ ಸೇರಿ ಸಂಪಾದಿಸಿದ್ದಾರೆ. ಕರ್ನಾಟಕದ ವೀರಗಲ್ಲುಗಳು ಅವರಿಗೆ ಡಾಕ್ಟರೇಟ್ ತಂದುಕೊಟ್ಟಿರುವ ಅಪೂರ್ವ ಕೃತಿ. ಶೇಷಶಾಸ್ತ್ರಿಯವರು ಕೆಲವು ಸಣ್ಣಕಥೆಗಳನ್ನು ಬರೆದಿರುವುದಲ್ಲದೆ ತೆಲುಗಿನಿಂದ ಅನುವಾದಿಸಿದ್ದಾರೆ. ವಿದ್ವತ್ ಪತ್ರಿಕೆಗಳಲ್ಲಿ, ವಿಮರ್ಶನಾ ಲೇಖನಗಳನ್ನು ಪ್ರಕಟಿಸಿದ್ದಾರೆ.

ಚಿಂತಾಮಣಿಯಲ್ಲಿ ಅಧ್ಯಾಪಕರಾಗಿದ್ದ ವೆಲ್ಲಾಲಸತ್ಯಂ (ಸತ್ಯ ನಾರಾಯಣ) (೧೯೩೦–೧೯೯೦) ಹಲವಾರು ಭಾಷೆಗಳಲ್ಲಿ ತಜ್ಞರಿದ್ದು ಅಗ್ನಿವರ್ಷ, ನೀಲಾಂಬರಿ, ಶಾಪದ ವಜ್ರ ಇತ್ಯಾದಿ ಕಾದಂಬರಿಗಳಲ್ಲದೆ ಇಂಗ್ಲೀಷ್‌ನಿಂದ ಷೆರ್ಲಾಕ್ ಹೊಮ್ಸ್, ಎಡ್ಗರ್ ಅಲೆನ್ ಪೊ ಮುಂತಾದವರ ಕಥೆ, ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಶೃಂಗಾರ ರಸರಾತ್ರಿ ಸಂಸ್ಕೃತ ಪದ್ಯಗಳ ಸಂಗ್ರಹ. ಸತ್ಯಂ ಅವರು ಪಠ್ಯ ಪುಸ್ತಕ ರಚನೆಯಲ್ಲಿಯೂ ಹೆಸರು ಮಾಡಿದ್ದರು. ಗೋಪಾಲಗೌಡ ಕಲ್ಪಮಂಜರಿಯವರು ಕನ್ನ, ಸೀತಮ್ಮನ ಬಯಕೆ ಕಥಾ ಸಂಕಲನ ಪ್ರಕಟಿಸಿದ್ದು ನೂರಾರು ಕವಿತೆ, ಲೇಖನಗಳನ್ನು ಬರೆದಿದ್ದಾರೆ. ಸಾಹಿತ್ಯದಲ್ಲಿ ಕೃಷಿ ಮಾಡಿರುವ ಸರ್ಕಾರಿ ಅಧಿಕಾರಿಯಾದ ಎಚ್.ಸಿ. ನಾಗೇಂದ್ರ ಅವರು ಗೌರಿಬಿದನೂರಿನ ಹೊಸೂರಿನವರು. ಶಾಸನ ಶಾಸ್ತ್ರ ಸಾಹಿತ್ಯದಲ್ಲಿ ಹಾಗೂ ಚಿತ್ರವಿಚಿತ್ರ ಜಗತ್ತು, ವಿಜ್ಞಾನ ವಿಸ್ಮಯ, ಶಿವಾಜಿ, ಚಾಳುಕ್ಯ, ಪಾ.ಪೆಂ. ಆಚಾರ್ಯರ ಕೃತಿ ಸಂಗ್ರಹ ಇತ್ಯಾದಿ ಲೇಖನ ಬರೆದಿರುವ ಪ್ರಸ್ತುತ ಬಿ.ಎಲ್. ರೈಸ್ ಅವರ ಬಗ್ಗೆ ಪ್ರೌಢಪ್ರಬಂಧ ರಚಿಸುತ್ತಿರುವ (ಅದಕ್ಕಾಗಿ ಇಂಗ್ಲೆಂಡಿಗೆ ಹೋಗಿ ಕ್ಷೇತ್ರಕಾರ್ಯ ನಿರ್ವಹಿಸಿದ) ಎಸ್.ಎಲ್. ಶ್ರೀನಿವಾಸ ಮೂರ್ತಿ; ಸೂರ್ಯನ ಆರಾಧನೆ, ಪ್ರತಿಮಾಶಾಸ್ತ್ರ ಕುರಿತು ಎರಡು ಪಿಎಚ್.ಡಿ. ಪಡೆದ ಇತಿಹಾಸ ಅಕಾಡಮಿಯ ಬೆಂಗಳೂರು ಘಟಕದ ಕಾರ್ಯದರ್ಶಿ ಕೆ.ಬಿ. ಸುದರ್ಶನ್ ಮುಂತಾದ ಅನೇಕರನ್ನು ಜಿಲ್ಲೆಯ ಬರಹಗಾರರೆಂದು ಉದಾಹರಿಸಬಹುದು.

ವೇಮಗಲ್ಲಿನವರಾದ ವೆ.ಬು. ಸೋಮಶೇಖರ್ ಶಾಸನ ಶಾಸ್ತ್ರ ಅಭ್ಯಸಿಸಿ ಇತಿಹಾಸದ ಬಗ್ಗೆ ಕುತೂಹಲವುಳ್ಳವರಾಗಿ ಮರೆತುಹೋದ ಐತಿಹಾಸಿಕ ಸಂಗತಿಗಳನ್ನು ಹಲವಾರು ಮೂಲಗಳಿಂದ ಹುಡುಕಿ, ಛಾಯಾಚಿತ್ರಗಳೊಂದಿಗೆ ನೂರಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ನಂದಿಗಿರಿಧಾಮದಲ್ಲಿ ಮಹಾತ್ಮ ಗಾಂಧಿ, ಬೆಂಗಳೂರಿನಲ್ಲಿ ಗಾಂಧಿ, ಗಾಂಧಿ ಮತ್ತು ಅಸ್ಪೃಶ್ಯತೆ ಹಾಗೂ ಕೋಲಾರ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ಪುಸ್ತಕಗಳು ಪ್ರಕಟವಾಗಿದ್ದು ಬೆಂಗಳೂರು ಹೋಟೆಲ್ ಉದ್ಯಮ ಕುರಿತು ಬರೆದ ಗ್ರಂಥ ಪ್ರಕಟವಾಗಬೇಕಿದೆ. ವೈಜ್ಞಾನಿಕ ಲೇಖನಗಳನ್ನು ಬರೆದು ಹೊತ್ತಿಗೆಗಳನ್ನು ಪ್ರಕಟಿಸಿದವರಲ್ಲಿ ಮೊದಲನೆಯವರು ಶಿವಶಂಕರ ಶಾಸ್ತ್ರಿ ಗಣಿತದ ಸಮಸ್ಯೆಗಳನ್ನು ಕಾಗದವನ್ನು ಮಡಿಚುವ ಮೂಲಕ ಬಿಡಿಸಬಹುದಾದ ಕಲೆಯ (ಒರಿಗಾಮಿ) ಬಗ್ಗೆ ಪುಸ್ತಕಗಳನ್ನು ಬರೆದಿದ್ದಾರೆ. ಪತ್ರಿಕೆಗಳಲ್ಲಿ ಚಿತ್ರಸಹಿತ ಪರಿಚಯ ಮಾಡಿಕೊಡುತ್ತಿದ್ದಾರೆ. ಮತ್ತೊಬ್ಬ ವೈಜ್ಞಾನಿಕ ಬರಹಗಾರರಾದ ಎಚ್.ಎ.ಪುರುಷೋತ್ತಮರಾವ್ "ಕಿವುಡನ ಮಾಡಯ್ಯ ತಂದೆ", "ಭೂರಮೆಗೆ ಸ್ಟೆಥಾಸ್ಕೋಪ್" ಮುಂತಾದ ಹೊತ್ತಿಗೆಗಳನ್ನು ಪ್ರಕಟಿಸಿದ್ದಾರೆ. ಜಿಲ್ಲೆಯ ಅನೇಕರು ಪಠ್ಯಪುಸ್ತಕಗಳನ್ನು ರಚಿಸಿದ್ದು ಅವರಲ್ಲಿ ಬಿ.ಕೆ. ಮಾಧವ ಮೂರ್ತಿ (ಚರಿತ್ರೆ), ಎಸ್. ಸುಬ್ಬರಾಮಯ್ಯ (ಬೀಜಗಣಿತ) ಕೆ.ಆರ್. ಕೃಷ್ಣಮೂರ್ತಿ (ಗಣಿತ), ಕೆ.ಎಸ್. ಸತ್ಯನಾರಾಯಣ (ಭೌತಶಾಸ್ತ್ರ), ನಂದಿವೆಂಕಟಸ್ವಾಮಿ (ಸಮಾಜಶಾಸ್ತ್ರ ನಂದಿಕ್ಷೇತ್ರ ಇತ್ಯಾದಿ), ಜಿ.ಎಸ್. ಆದಿಶೇಷಯ್ಯ (ಹೊಸಗನ್ನಡ ವ್ಯಾಕರಣ ಕೈಪಿಡಿ, ಆದರ್ಶ ತ್ಯಾಗವೀರ), ಎಚ್.ವಿ. ರಾಮಚಂದ್ರರಾವ್ (ಸಮಾಜಶಾಸ್ತ್ರ), ಎಂ.ಎಸ್. ವೆಂಕಟರಮಣಪ್ಪ (ಇತಿಹಾಸ) ಇತ್ಯಾದಿ ಉದಾಹರಿಸಬಹುದು.

**ಇಂಗ್ಲೀಷ್ ಸಾಹಿತ್ಯ**

ಕೋಲಾರ ಜಿಲ್ಲೆ ಜಗತ್ತಿನಲ್ಲಿಯೇ ಹೆಸರು ಮಾಡಿದ್ದು ಅಲ್ಲಿಯ ಚಿನ್ನದ ಗಣಿಯಿಂದಾದುದು ಒಂದಾದರೆ ಇನ್ನೊಂದು ಸರ್.ಎಂ.ವಿಶ್ವೇಶ್ವರಯ್ಯನವರಿಂದಾದು. ಒಂದು ಶತಮಾನಕ್ಕೂ ಹೆಚ್ಚು ಕಾಲ ಬದುಕಿ ಬಾಳಿದ ಎಂ.ವಿಶ್ವೇಶ್ವರಯ್ಯನವರು (೧೮೬೧–೧೯೬೨) ಪ್ರಗತಿ ಪರವಾದ ಅನೇಕ ಕಾರ್ಯಗಳನ್ನು ಕೈಗೊಂಡಿದ್ದಲ್ಲದೆ ತಮ್ಮ ಯೋಜನೆಗಳು, ಸಲಹೆಗಳು, ಕೈಗೊಂಡ ಕಾರ್ಯಕ್ರಮಗಳು, ಭಾಷಣಗಳು, ಆರ್ಥಿಕ ಹಾಗೂ ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಕೆಲವು ಪುಸ್ತಕ ರೂಪಗಳಲ್ಲೂ ಸಂಗ್ರಹಿತಗೊಂಡಿವೆ. ಮುಖ್ಯವಾಗಿ 'Speeches of Sir M. Visvesvaraya (Deewan of Mysore) (1917); planned Economy for India (1934), A.I.M.O Rapid Development of Industries (1947), Memoirs of My Working Life (Bombay 1951) Sayings-Wise or Witty (1957). A brief Memoir of my Complete Working Life (1959) ಬರೆದಿದ್ದಾರೆ ಹಾಗೂ Reconstructing Indiaವನ್ನು ೧೯೨೦ರಲ್ಲಿ ಲಂಡನ್‌ನ ಪಿ.ಎಸ್.ಕಿಂಗ್ ಅಂಡ್ ಸನ್ಸ್ ಲಿಮಿಟೆಡ್ ಅವರು ಪ್ರಕಟಿಸಿದ್ದಾರೆ. ಇದಲ್ಲದೆ Technical and Industrial Education Committee (Report 1921) City of Bombay – Municipal and Reform (Reports 1924, 25) Disturbances in Bangalore City – in July 1928

(Report 1928-29) ಇವೇ ಮುಂತಾದ ಹನ್ನೆರಡಕ್ಕೂ ಹೆಚ್ಚು ಸಮಿತಿಗಳ ಮುಖ್ಯಸ್ಥರಾಗಿ ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ಸುದೀರ್ಘವಾದ ವರದಿಯನ್ನು ನೀಡಿದ್ದು ಮುದ್ರಣವಾಗಿವೆ. ಕೈಪಿಡಿ (Pamphlets) ಗಳ ರೂಪದಲ್ಲಿ Village Industries Handbook, Rural Industrialization scheme in Mysore ಇತ್ಯಾದಿ ಕುರಿತು ಹಲವಾರು ಲೇಖನಗಳು ಪ್ರಕಟವಾಗಿವೆ. ಇವಲ್ಲದೆ ಮೋಟಾರು ಗಾಡಿಗಳನ್ನು (Automobile Industry) ಕುರಿತೇ ಮುಂಬಯಿ, ಮೈಸೂರುಗಳಲ್ಲಿ ನೀಡಿದ ಯೋಜನಾ ವರದಿಗಳು ಪ್ರಕಟವಾಗಿವೆ. ಕೈಗಾರಿಕೀಕರಣದ ಬಗ್ಗೆ ಆ ಮೂಲಕ ಆರ್ಥಿಕ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಚಿಂತನೆ ನಡೆಸಿದ ಎಂ.ವಿಶ್ವೇಶ್ವರಯ್ಯನವರು Prosperity through Industry, Iron and Steel Industry in India, District Industrialization Drive (Measures for rapid promotion of Industries and Industrial pursuits in rural areas), Reconstruction in Post war India. A plan of development all round, Nation building plan for India. ಇವೇ ಮುಂತಾದ ವಿಷಯಗಳ ಬಗ್ಗೆ ಹಾಗೂ Unemployment in India, District Development Scheme ಇತ್ಯಾದಿ ಕುರಿತ ಸುಮಾರು ೧೬ ಚಿಂತನಗಳು ಕಿರುಪುಸ್ತಕದ ರೂಪದಲ್ಲಿ ಪ್ರಕಟವಾಗಿವೆ.

ಉಳಿದಂತೆ ಜಿಲ್ಲೆಯ ಹಲವಾರು ಲೇಖಕರು ಇಂಗ್ಲೀಷ್‌ನಲ್ಲಿ ಬರೆದಿರುವುದನ್ನು ಉದಾಹರಿಸಬಹುದು. ಕೆ.ಸಂಪದ್ಗಿರಿರಾಯರು Swarajya, Gandhi in Karnataka, Dr N.S.Hardikar ಇತ್ಯಾದಿ ರಚಿಸಿ ಪ್ರಕಟಿಸಿದ್ದಾರೆ. ಡಿವಿಜಿ ಅವರ ಮಂಕುತಿಮ್ಮನ ಕಗ್ಗವನ್ನು ಇಂಗ್ಲೀಷ್‌ಗೆ ಅನುವಾದಿಸಿದ್ದಾರೆ ಅಲ್ಲದೆ ರಾಮಕೋಟೇಶ್ವರ ರಾವ್ ಅವರು ನಡೆಸುತ್ತಿದ್ದ ಇಂಗ್ಲೀಷ್ ಪತ್ರಿಕೆ 'ತ್ರಿವೇಣಿ'ಗೆ ಕೆಲಕಾಲ ಸಂಪಾದಕರಾಗಿದ್ದರು. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು. ಕನ್ನಡದಂತೆ ಇಂಗ್ಲೀಷ್‌ನಲ್ಲಿಯೂ ಬರೆದಿದ್ದಾರೆ. Popular Culture in Karnataka, The Poetry of Valmiki, Subbanna, Short Stories (in five volumes), Ravindranatha Tagore, Channabasava Nayaka, Essays and Addresses, Rajaji (in two volumes), Kalidasa, Thoughts of Religion, Thinking of My Life, ಇವೇ ಮುಂತಾದುವನ್ನು ಉದಾಹರಿಸಬಹುದು. ಕೋಲಾರದಲ್ಲಿ ೧೯೧೮ರಲ್ಲಿ ಹುಟ್ಟಿದ ಎಸ್.ಸುಬ್ರಹ್ಮಣ್ಯ ಅಯ್ಯರ್ ಅವರ ಬರಹಗಳೆಲ್ಲ ಇಂಗ್ಲೀಷ್‌ನಲ್ಲೆ ಇದ್ದು ಅವು ಬಾಳ ನಿಯಮ, ದೈವೀಶಾಸನ, ಭಾರತ ಚಿಂತನೆ, ಆತ್ಮದ ಕರೆ, ಬಾಳಿನ ಅರ್ಥ, ಜಾಗತಿಕ ಆಡಳಿತ ಸಂಕ್ಷೋಭೆ, ವಿಜ್ಞಾನ ಲಹರಿ, ವಿಶ್ವಾಂತರ್ಗತಲಯ, ಜಾಗತಿಕ ಸಾಮಾಜಿಕ ಚಾಲನೆ, ಪ್ರಸನ್ನ ಜೀವನ ರಹಸ್ಯ ಇವೇ ಮುಂತಾದ ವಿಷಯಗಳನ್ನು ಕುರಿತಾಗಿವೆ. ಮುಖ್ಯವಾಗಿ Studies in Transcendental knowledge and Esoteric wisdom; Cosmic guidance for man; Auto Biography of a Free Thinkar ಇತ್ಯಾದಿ ಹೆಸರಿಸಬಹುದು. ಬಂಗಾರದ ಗಣಿಪ್ರದೇಶದಲಿದ್ದ ಇ.ಎಂ.ಜೋನ್ಸ್ ಎಂಬ ಕವಿ ೧೯೪೦ರ ವೇಳೆಯಲ್ಲಿ ಬರೆದ Poems of South Indiaದಲ್ಲಿ ಬೂದಿಕೋಟೆಯೂ ಸೇರಿದಂತೆ ಕೋಲಾರದ ಹಲವಾರು ಕಡೆಗಳ ಪ್ರಕೃತಿ ದೃಶ್ಯ ಕುರಿತು ಪದ್ಯ ಬರೆದಿದ್ದು ಪಿ.ಜೆ.ಕ್ರೊಲೆ ಎಂಬಾತ ಚಿತ್ರ ರಚಿಸಿದ್ದಾನೆ. ಮಾಲೂರಿನ ಎಸ್.ವಿಶ್ವನಾಥಶಾಸ್ತ್ರಿ ಅವರು (ಜ ೧೯೦೪) ಸರ್ಕಾರಿ ಉದ್ಯೋಗದಲ್ಲಿದ್ದರೂ ದೈಹಿಕ ಶಿಕ್ಷಣ, ನಾಟಕ, ಚಿತ್ರಕಲೆ, ಅಧ್ಯಾತ್ಮಗಳಲ್ಲಿ ಒಲವಿದ್ದು (ಬೆಂಗಳೂರಿನ ಮಲ್ಲೇಶ್ವರದಲ್ಲಿ ಉಚಿತ ದೈಹಿಕ ವ್ಯಾಯಾಮಶಾಲೆಯನ್ನು ೩೦ ವರ್ಷ ನಡೆಸಿದರು. ಕ್ರೀಡಾಕೂಟ, ಉತ್ಸವ ನಡೆಸಿದ್ದಾರೆ). 'Guidelines for an aspirant with rational and practical approach for realization of Divine Bliss, The goal of Human life' ಮತ್ತು 'Guidelines for Yogic way of life for beginners for physical, mental, intellectual moral and spiritual development' ಬರೆದಿದ್ದಾರೆ. (ಶಾಸ್ತ್ರಿಗಳು ವಿದೇಶಗಳಲ್ಲಿ ವ್ಯಾಪಕವಾಗಿ ಸಂಚರಿಸಿದ್ದು ದೈಹಿಕ ವ್ಯಾಯಾಮ ಸಂಬಂಧದ ಅನೇಕ ಸಂಘ, ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿದ್ದರು). ಇವಲ್ಲದೆ ಕೆ.ವಿ. ಅಯ್ಯರ್ ಅವರ Perfect Physique ಸಿ.ವಿ. ಚಿನ್ನಪ್ಪರವರ Great Lives and Thoughts Pt I & III, ಜಿ. ರುದ್ರಪ್ಪ ಅವರ Kashmir Shaivism, ರಘುಸುತ ಅವರ Stray Thoughts on Education (ಸಂಪಾದನೆ), ಕೇಶವರಾವ್ ಅವರ English Grammer, ಎಂ.ಎನ್. ವೆಂಕಟರಮಣಪ್ಪರವರ Is English a Sin, Phylosophy of History, The Forgotten Hero ಇತ್ಯಾದಿ ಉದಾಹರಿಸಬಹುದು.

ಶಾಸನ ಹಾಗೂ ವಾಸ್ತುಶಿಲ್ಪಶಾಸ್ತ್ರಗಳಲ್ಲಿ ವಿದ್ವಾಂಸರಾಗಿದ್ದ ಬಾ.ರಾ.ಗೋಪಾಲ್ ಅವರ Hisotry of Andhra Pradesh (in two volumes), Corpus of Kadamba Inscriptions, Sri Ramanuja in Karnataka, Kalyana Chalukyas and Kalachuris, A History of Karnataka, Minor dynasties of South India ಇವೇ ಮುಂತಾದುವನ್ನು ಹೆಸರಿಸಬಹುದು. ಬಾ.ರಾ.ಗೋಪಾಲ್ ಅವರು ಇತರ ವಿದ್ವಾಂಸರ ಜೊತೆಗೂಡಿ ಇಂಗ್ಲೀಷ್ ಭಾಷೆಯಲ್ಲಿ ಹಲವಾರು ಗ್ರಂಥಗಳನ್ನು ಸಂಪಾದಿಸಿದ್ದಾರೆ. ಅವುಗಳಲ್ಲಿ South Indian Studies, Sheshachandrika, Epigraphical studies, Rashtrakutas of Malkhed, Studies in Indian History and Culture, Kadambas ಇತ್ಯಾದಿ ಗ್ರಂಥಗಳನ್ನು ಉದಾಹರಿಸಬಹುದು. ಶಾಸನ ಸಂಪುಟಗಳು ಪುನರ್ ಮುದ್ರಿತವಾದಾಗ ಅವುಗಳಿಗೆ ಸುದೀರ್ಘವಾದ, ವಿಚಾರ ಪೂರ್ಣವಾದ ಮುನ್ನುಡಿಯನ್ನು ಕನ್ನಡ, ಇಂಗ್ಲೀಷ್ ಎರಡೂ ಭಾಷೆಯಲ್ಲಿ ಬರೆದಿದ್ದಾರೆ. ಪ್ರಧಾನ ಗುರುದತ್ತರು ಚಿತ್ರದುರ್ಗದ ಶ್ರೀಮಠದ ಮುರುಘರಾಜೇಂದ್ರ ಮಹಾಸ್ವಾಮಿಗಳ ಪ್ರಬಂಧಗಳು ಹಾಗೂ ಭಾಷಣಗಳನ್ನು ನಾಲ್ಕು ಸಂಪುಟಗಳಲ್ಲಿ ಇಂಗ್ಲೀಷ್‌ಗೆ ಅನುವಾದಿಸಿದ್ದಾರೆ. Tanjavur to Vijayarajagiridurga ಬರೆದಿರುವ ವಿ. ಗೋಪಾಲಕೃಷ್ಣ ಅವರು 'Encyclopaedia of the Folk culture of Karnataka' ಹಾಗೂ 'A Multilingual Dictionary of Kannada-Kannada-English-Timal-Japanese' ಗಳಿಗೆ ಸಹ ಸಂಪಾದಕ, ಸಂಪಾದಕರಾಗಿದ್ದಾರೆ. ಅಂತರರಾಷ್ಟ್ರೀಯ ಖ್ಯಾತ ವಿಜ್ಞಾನಿ ಕೋಲಾರದ ಆರ್.ನಟರಾಜನ್ 'The challenge of continuing Engineering Education' ಸೇರಿದಂತೆ ಅಂತರರಾಷ್ಟ್ರೀಯ ವಿದ್ವತ್ ಸಮಾವೇಶಗಳಲ್ಲಿ ಸುಮಾರು ೩೫೦ ಪ್ರಬಂಧಗಳನ್ನು ಮಂಡಿಸಿದ್ದು ಅನೇಕವು ಪ್ರಕಟವಾಗಿವೆ. ಯೋಗಪಟು ಬಿ.ಕೆ.ಎಸ್.ಅಯ್ಯಂಗಾರ್ (೧೯೧೮) 'Light on Yoga', 'Light on Pranayama', 'Yoga Deepika' ಇತ್ಯಾದಿ ಬರೆದಿದ್ದಾರೆ. ಹಂಪ ನಾಗರಾಜಯ್ಯ ಅವರು 'A History of the Rastrakutas of Malkhed and Jainism', Indra in Jaina Iconography, Opulent Candragiri, Manastamba, A History of Early Ganga Monarchy and Jainism, Jaina Parshva temples in Karnataka ಇತ್ಯಾದಿ ರಚಿಸಿದ್ದಾರೆ. ಶತಾವಧಾನಿ ಆರ್. ಗಣೇಶ್ ಅವರು 'Human values in the code of Kautilya, Human values in Manusutra, Human values in Ramayana, Human values in Telugu litarature, Subhashita Samputa' ಬರೆದಿದ್ದಾರೆ.

ಇವರುಗಳಲ್ಲದೆ ಎಲ್.ಬಸವರಾಜು, ಡಿ.ಶೇಷಗಿರಿರಾವ್ ಮುಂತಾದ ಅನೇಕರು ಇಂಗ್ಲೀಷ್‌ನಲ್ಲಿ ಬರವಣಿಗೆ ಮಾಡಿದ್ದಾರೆ. ಕೆ.ಜಿ.ಎಫ್‌ನ ಹಜನ್ ಇಂಗ್ಲೀಷ್ ಕವನಗಳನ್ನು ಬರೆದಿದ್ದು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಕವನಸಂಕಲನಗಳಲ್ಲಿ ಇವರ ಕವನಗಳು ಪ್ರಕಟಗೊಂಡಿವೆ.

**ಮಹಿಳಾ ಸಾಹಿತಿಗಳು**

ಜಿಲ್ಲೆಯಲ್ಲಿ ಸಾಕಷ್ಟು ಮಹಿಳಾ ಸಾಹಿತಿಗಳಿದ್ದು, ಕಥೆ, ಕಾದಂಬರಿ, ಕವನ, ವೈಚಾರಿಕ ಕ್ಷೇತ್ರಗಳಿಗೆ ತಮ್ಮದೇ ಆದ ಕಾಣಿಕೆ ನೀಡಿರುವುದನ್ನು ಇಲ್ಲಿ ನೋಡಲಾಗಿದೆ. ವಿಜಯನಗರದ ಅರಸರಿಗೂ ಕೋಲಾರ ಜಿಲ್ಲೆಗೂ ಸಾಂಸ್ಕೃತಿಕವಾಗಿಯೂ ಸಹಸಂಬಂಧವಿತ್ತು. ಮೊದಲನೇ ಬುಕ್ಕರಾಯ ೧೩೫೭ರಲ್ಲಿ ಪಟ್ಟವೇರಿದ್ದು ಈತನ ಮಗ ಎರಡನೇಯ ಕಂಪಿಲಕುಮಾರರಾಮ ಮುಳಬಾಗಿಲು ಪ್ರದೇಶದಲ್ಲಿ ರಾಜ್ಯಾಡಳಿತ ನಡೆಸುತ್ತಿದ್ದ. ಸಾಮ್ರಾಜ್ಯದ ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿ ಸುಲ್ತಾನರುಗಳ ಧಾಳಿ ನಡೆಯುತ್ತಿದ್ದು, ಪಾಂಡ್ಯ ನಾಡದೇವಿ ಕಂಪಿಲರಾಯನ ಕನಸಿನಲ್ಲಿ ಬಂದು ಖಡ್ಗವನ್ನು ನೀಡಿ ಶುಭ ಹಾರೈಸಿದ್ದನ್ನೇ ಆಧರಿಸಿ ಆತನ ಮಡದಿ ಗಂಗಾದೇವಿ 'ಮಧುರಾಜವಿಜಯ' ಅಥವ 'ವೀರಕಂಪರಾಯಚರಿತ' ಎಂಬ ಕಾವ್ಯವನ್ನು ಸಂಸ್ಕೃತದಲ್ಲಿ ರಚಿಸಿದ್ದಾಳೆ. ಕಾವ್ಯದಲ್ಲಿಯೂ ಮಳಬಾಗಿಲನ್ನು ಹೆಸರಿಸುವ ಈಕೆ ಈ ಪ್ರದೇಶದವಳೆಂದು ತಿಳಿಯಲಾಗಿದೆ. ಪ್ರಾಯಶಃ ಯುದ್ಧ ೧೩೬೫–೧೩೭೦ರ ಸುಮಾರಿನಲ್ಲಿ ನಡೆದಿದ್ದು ಕಂಪಿಲರಾಯನೊಂದಿಗೆ ಮಡದಿ ಗಂಗಾದೇವಿಯೂ ಸಮರದಲ್ಲಿ ಪಾಲ್ಗೊಂಡಿದ್ದಂತೆ ತೋರುತ್ತದೆ. ಯುದ್ಧದ ವರ್ಣನೆ ರಾಜ್ಯಕ್ಕೆ ಆದ ಹಾನಿ, ಜನರ ಕಷ್ಟನಷ್ಟಗಳನ್ನು, ಶತ್ರುಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿದ್ದಕ್ಕೆ ಪ್ರಜೆಗಳು, ಪಂಡಿತರುಗಳಿಂದ ಅರಸನಿಗೆ ಮೆಚ್ಚುಗೆ ನುಡಿಗಳು ಇತ್ಯಾದಿಗಳಿಂದ ಕೂಡಿದ ಕಾವ್ಯ, ಗಮನಾರ್ಹ ಕೊಡುಗೆಯೆಂದು ವಿದ್ವಾಂಸರ ಅಭಿಪ್ರಾಯ.

ಚಿಂತಾಮಣಿಯ ನಿಡಗುರಕಿಯಲ್ಲಿ ೧೮೭೭ರಲ್ಲಿ ಜನಿಸಿದ ಜೀವೂಬಾಯಿ ಅವರು ಚಿಕ್ಕವಯಸ್ಸಿನಲ್ಲಿ ಪತಿಯನ್ನು ಕಳೆದುಕೊಂಡು ಆಧ್ಯಾತ್ಮ ಜೀವನ ಕೈಗೊಂಡು ಕಮಲನಾಭ ವಿಠಲ ಎಂಬ ಅಂಕಿತದಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಅಲ್ಲದೆ ಹರಿಕಥೆಯ ರೂಪದಲ್ಲಿರುವ 'ರಾಧಾ ಮಾಧವ ವಿಲಾಸ', ಕೃಷ್ಣನನ್ನು ಕುರಿತ ಶ್ರೀ ಕೃಷ್ಣಲೀಲ, ಶ್ರೀಹರಿಲೀಲಾ, ಇತ್ಯಾದಿ ಬರೆದಿದ್ದಾರೆ. ಅವುಗಳಲ್ಲಿ ಗದ್ಯ, ಪದ್ಯ, ಹಾಡುಗಳಿದ್ದು ಕಥಾವಸ್ತುವಿನಲ್ಲಿ ಭಕ್ತಿರಸ ಪ್ರಧಾನವಾಗಿ ಕಂಡುಬರುತ್ತದೆ. ಜೀವೂಬಾಯಿ ಅವರು ೧೯೬೩ರಲ್ಲಿ ನಿಧನ ಹೊಂದಿದರು.

ಆಧುನಿಕ ಕಾಲದ ಮಹಿಳಾ ಸಾಹಿತ್ಯವನ್ನು ಉತ್ತನೂರು ರಾಜಮ್ಮ ಅವರಿಂದ ಆರಂಭಿಸಬಹುದಾಗಿದೆ. ಮುಳಬಾಗಿಲು ತಾಲೂಕಿನ ಉತ್ತನೂರಿನಲ್ಲಿ ಜನಿಸಿ ಚಿಂತಾಮಣಿಯಲ್ಲಿ ವಾಸ್ತವ್ಯವಿರುವ ರಾಜಮ್ಮ ಅವರು (ಜ ೧೯೪೩) ಹಿಂದಿ ಭಾಷೆಯಲ್ಲಿ ಪದವಿ ಪಡೆದಿದ್ದು, ತಡವಾಗಿ ಬರಹ ಆರಂಭಿಸಿದರು. ಮೊದಲಿಗೆ ಕೋಲಾರ ಪತ್ರಿಕೆ, ಲಂಕೇಶ್ ಪತ್ರಿಕೆ, ಶೂದ್ರ, ಸಲ್ಲಾಪ ಪತ್ರಿಕೆಗಳಿಗೆ ಬರೆಯುತ್ತಿದ್ದು, ನಂತರ ಸಾಹಿತ್ಯಕ್ಷೇತ್ರವನ್ನು ವಿಸ್ತರಿಸಿಕೊಂಡರು. ಕೋಲಾರ ಪತ್ರಿಕೆ, ಹೊನ್ನುಡಿ, ಕೋಲಾರವಾಣಿ, ಸಂಚಿಕೆ, ಪ್ರಿಯಪತ್ರಿಕೆ ಮುಂತಾದ ಜಿಲ್ಲಾ ಪತ್ರಿಕೆಗಳಿಗೆ ವರದಿಗಾರರಾಗಿ ಕೆಲಸ ಮಾಡಿದ್ದಾರೆ. ಮೂಡಲಸೀಮೆಯ ಬ್ಯಾಸಗಿ ಹಾಗೂ ಕಳ್ಳುಬಳ್ಳಿ (ಕವನ ಸಂಕಲನಗಳು) ಗೊಂಗಡಿ (ಕಾದಂಬರಿ) ದ್ಯಾವರೂಗಳು (ಜನಪದ ಲೇಖನಗಳು) ನೆನಪಿನಬುಳ್ಳಿ (ಪ್ರವಾಸಕಥನ) ಗಳಲ್ಲದೆ ಕೋಲಾರ ಜಿಲ್ಲೆಯ ಪ್ರತಿಭಾವಂತರು, ಕೋಲಾರ ಜಿಲ್ಲೆಯ ಜಾತ್ರೆಗಳು ಇತ್ಯಾದಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ರಾಜಮ್ಮ ಅವರು ರಾಜ್ಯ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದಲ್ಲದೆ ಕರ್ನಾಟಕ ರಾಜ್ಯ ಗ್ರಾಹಕರ ಹಿತರಕ್ಷಣಾ ಸಮಿತಿ, ಕೋಲಾರ ಜಿಲ್ಲಾ ಕನ್ನಡ ಜಾಗೃತ ಸಮಿತಿ, ರಾಜ್ಯ ಸಾಕ್ಷರತಾ ಮಿಷನ್ ಇತ್ಯಾದಿಗಳಿಗೆ ಸದಸ್ಯರಾಗಿದ್ದರು. ಚಿಂತಾಮಣಿಯ ನಗರಸಭೆಗೂ ಸದಸ್ಯರಾಗಿದ್ದರು. ಮುಳಬಾಗಿಲಿನಲ್ಲಿ ೨೦೦೩ರಲ್ಲಿ ನಡೆದ ಕೋಲಾರ ಜಿಲ್ಲಾ ಎಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದು ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಸದಾ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ರಾಜಮ್ಮ ಅವರು ಕೆಳವರ್ಗದವರ ಏಳಿಗೆಗಾಗಿ ಹೋರಾಡುವ, ಕೋಲಾರ ಜಿಲ್ಲೆಯ ಬಂಡಾಯ ಸಾಹಿತ್ಯದ ಗಟ್ಟಿ ಧ್ವನಿಯಾಗಿದ್ದಾರೆ.

ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಹಲವಾರು ವರ್ಷಗಳು ನೆಲೆಸಿದ್ದು ಜಿಲ್ಲೆಯಾದ್ಯಂತ ಸಾಹಿತ್ಯ ಕಾರ್ಯಗಳಿಂದ ಚಿರಪರಿಚಿತರಾದ ಸರಿತಾ ಜ್ಞಾನನಂದ ಅವರು ರಾಜ್ಯದ ಮಹಿಳಾ ಬರಹಗಾರ್ತಿಯರಲ್ಲೇ ಪ್ರಮುಖವಾಗಿ ಪರಿಗಣಿಸಬೇಕಾದವರು. ಅವರು ಕಥೆಕಾದಂಬರಿಗಳನ್ನು ಬರೆದಿರುವರಾದರೂ ವೈಚಾರಿಕ ಸಾಹಿತ್ಯ, ಶಿಲ್ಪಶಾಸ್ತ್ರ ಶಿಲ್ಪಕಲೆಗೆ ಸಂಬಂಧಿಸಿದ ಅಭ್ಯಾಸಪೂರ್ಣ ಸಂಶೋಧನಾ ಸಾಹಿತ್ಯಗ್ರಂಥಗಳು ಆ ಕ್ಷೇತ್ರದ ಗ್ರಂಥ ಮೌಲ್ಯವನ್ನು ಹೆಚ್ಚಿಸಿದೆ. ಒಟ್ಟಾರೆಯಾಗಿ ಅವರ ಬರಹಗಳಲ್ಲಿ, ಒಂದೂರಲ್ಲಿ ಒಬ್ಬ ನಿರ್ಮಲ, ಬೆಂಕಿಹೂ ಇತ್ಯಾದಿ ೧೮ ಕಾದಂಬರಿಗಳು; ಹೆಣ್ಣೇ ಹೆಚ್ಚು ಮೋಡಗಳು ಇತ್ಯಾದಿ ಏಳು ನಾಟಕಗಳು; ಮುನ್ನೂರು ಸಣ್ಣಕಥೆಗಳನ್ನು ಪ್ರಕಟಿಸಿದ್ದು ಆಯ್ದ ಕೆಲವು ಕಥೆಗಳು 'ಬೃಂದಾವನ' ಹಾಗೂ 'ತುಳಸಿಕಟ್ಟೆ' ಎಂಬ ಎರಡು ಕಥಾಸಂಕಲನಗಳಲ್ಲಿ ಪ್ರಕಟವಾಗಿವೆ. ಮಕ್ಕಳಿಗಾಗಿ 'ಗಾಳಿ', 'ಮೀರಾಬಾಯಿ' ಇತ್ಯಾದಿ ಏಳು ಮಕ್ಕಳ ಪುಸ್ತಕಗಳು, ಅಲ್ಲದೆ ಶಿವಾರಪಟ್ಟಣದ ಶಿಲ್ಪಿಗಳು. ಕ್ರೈಸ್ತರ ಪರ್ವದಿನಗಳು ಸೇರಿದಂತೆ ಆರು ಪ್ರಬಂಧ ಸಂಕಲನಗಳು ಹೊರಬಂದಿವೆ. ಇವರ 'ಭಕ್ತಿ ಸುಮಾನ' (ಭಕ್ತಿಗೀತೆಗಳು) 'ದೇವರಮಕ್ಕಳು' (ಕವನ ಸಂಕಲನ) 'ಹರಿದಾಸಸಾಹಿತ್ಯ' (ಆಯ್ದ ದೇವನಾಮಗಳು) ಪ್ರಕಟಗೊಂಡಿದ್ದು ಕೆಲವು ಗೀತೆಗಳು ಧ್ವನಿಸುರಳಿ ರೂಪದಲ್ಲಿಯೂ ಬಂದಿವೆ. ಸರಿತಾ ಜ್ಞಾನಾನಂದ ಅವರ ಇನ್ನೊಂದು ಸಾಹಿತ್ಯದ ಕಾಣಿಕೆಯೆಂದರೆ ಅನುವಾದ ಸಾಹಿತ್ಯ. ತೆಲುಗು, ತಮಿಳು, ಹಿಂದಿ, ಮರಾಠಿ, ಮಲೆಯಾಳಂ, ಇಂಗ್ಲೀಷ್ ಹಾಗೂ ಉರ್ದು ಭಾಷೆಗಳಿಂದ ಕನ್ನಡಕ್ಕೆ ತಂದ ಸುಮಾರು ೪೦ ಕಾದಂಬರಿಗಳು, ಶಿಲಪ್ಪಧಿಕಾರಂ, ನಟನಾಶಿಲ್ಪ, ಸಂಕೃತಿ ಸಂಶೋಧನೆ ಇವೇ ಮುಂತಾದವು ಪ್ರಕಟವಾಗಿವೆ. 'ಆಚಾರ್ಯಾಭಿವಂದನೆ', ಬಾ.ರಾ.ಗೋಪಾಲ್ ಅವರ ಕನ್ನಡ ಲೇಖನಗಳು ಸೇರಿದಂತೆ ಆರು ಕೃತಿಗಳನ್ನು ಸಂಪಾದಿಸಿದ್ದಾರೆ. ಗಾಯತ್ರಿ–ವಿಶ್ವಕರ್ಮ ಕುರಿತ ಭಕ್ತಿಗೀತೆಗಳು 'ಭಕ್ತಿನಮನ' ಹಾಗೂ ಕೃಷ್ಣನ ಕುರಿತ ಹರಿದಾಸರ ದೇವರನಾಮಗಳು 'ಬಾರೆಗೋಪಮ್ಮ' ಎಂಬ ಹೆಸರಿನಲ್ಲಿ ಧ್ವನಿಸುರುಳಿಯಾಗಿ ಬಂದಿವೆ. ಸ್ವತ: ಸಂಗೀತಗಾರರೂ ಆಗಿರುವ ಸರಿತಾಜ್ಞಾನಾನಂದ ಅವರು ಕೆ.ಜಿ.ಎಫ್, ಬೆಂಗಳೂರು, ಮೈಸೂರು, ದೆಹಲಿಗಳಲ್ಲಿ ನಡೆದ ಅನೇಕ ನಾಟಕಗಳಿಗೆ ಸಂಗೀತ ನಿರ್ದೇಶನ ಹಾಗೂ ಹಾಡುಗಾರಿಕೆಯನ್ನೂ ನೀಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಜಿಲ್ಲೆಯಾದ್ಯಂತ ಅನೇಕ ಕನ್ನಡಪರ ಕಾರ್ಯಕ್ರಮಗಳನ್ನು ನಡೆಸಿ ಕನ್ನಡದ ಕಂಪನ್ನು ಹರಡಿದ್ದಾರೆ.

ಗುಡಿಬಂಡೆ ಪೂರ್ಣಿಮಾ ಅವರು (ಜ ೧೯೫೧) ಗುಡಿಬಂಡೆಯಲ್ಲಿಯೇ ಜನಿಸಿ ಅಲ್ಲಿಯೇ ವಾಸ್ತವ್ಯವಿದ್ದು, ರಾಜ್ಯಮಟ್ಟದಲ್ಲಿ ಗಮನಾರ್ಹವಾದ ಕೃತಿಗಳ ರಚನೆ ಮಾಡುತ್ತಿದ್ದಾರೆ. ಜೈನಧರ್ಮಕ್ಕೆ ಸಂಬಂಧಿಸಿದಂತೆ ಪಾರ್ಶ್ವನಾಥ ತೀರ್ಥಂಕರ ಕುರಿತ ಸಮಗ್ರ ಅಧ್ಯಯನವಾದ ಬಂಧಮುಕ್ತ, ಪರಾಗಗಳು ಪ್ರಕಟವಾಗಿವೆ. ಬಾಹುಬಲಿ, ಚಾವುಂಡರಾಯರ ಮತ್ತು ರನ್ನರ ಸಹಸಂಬಂಧ ಆಧರಿಸಿ ಮಾಗಿದ ಫಲ, ಮುಗಿಲಿಗೂ ಹೆಚ್ಚು ಕೃತಿಗಳನ್ನೂ ಧರ್ಮಾಮೃತ ಆಧರಿಸಿ 'ಸುಬಂಧುಶ್ರೀ', ಮಲ್ಲಿನಾಥ ಪುರಾಣ ಆಧರಿಸಿ 'ಮಲ್ಲಿನಾಥ' ಕೃತಿಗಳು ಬೆಳಕು ಕಂಡಿವೆ. ಜೈನ ಸಿದ್ಧಾಂತಗಳನ್ನು ತಳಹದಿಯಾಗಿ ಇರಿಸಿ 'ಅಲೆಯಾಳ', ಜನ್ನನ ಯಶೋಧರ ಚರಿತೆ ಆಧಾರದಿಂದ 'ಕಾಮಪ್ರೇಮ' ರಚನೆಯಾಗಿದ್ದು ಇವುಗಳಲ್ಲಿ ಜೈನಧರ್ಮದ ತಿರುಳು ಹಾಸುಹೊಕ್ಕಾಗಿದೆ ಎಂದು ವಿಮರ್ಶಕರ ಅಭಿಪ್ರಾಯ. ಪೂರ್ಣಿಮಾ ಅವರು ಮೂರು ಕಾದಂಬರಿಗಳನ್ನು ರಚಿಸಿದ್ದು ಅವುಗಳಲ್ಲಿ 'ಭ್ರಮೆ' ಕಾದಂಬರಿ ಆ ವರ್ಷದ ಉತ್ತಮ ಕಾದಂಬರಿ ಎಂದು ಪರಿಗಣಿತವಾಗಿದೆ. ಸಾಹಿತ್ಯ ಸಮ್ಮೇಳನ ವಿಚಾರಸಂಕಿರಣಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಇವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಅಲ್ಲದೆ ಸಮಾಜ ಸೇವಕರೂ ಹೌದು. ಇವರ ಸಾಹಿತ್ಯ ಸಮಾಜಸೇವೆಯನ್ನು ಗುರುತಿಸಿ ಕರ್ನಾಟಕ ಲೇಖಕಿಯರ ಸಂಘವು ಸನ್ಮಾನಿಸಿದೆ. ದೆಹಲಿಯ ಇಂಡಿಯಾ ಇಂಟರ್ ನ್ಯಾಷನಲ್ ಫ್ರೆಂಡ್‌ಶಿಪ್ ಸೊಸೈಟಿಯವರ 'ವಿಜಯಶ್ರೀ' ಪ್ರಶಸ್ತಿ ಲಭಿಸಿದೆ. ಪ್ರತಿಭಾವಂತರನ್ನು ಪರಿಚಯಿಸುವ 'ರೆಫೆರೆನ್ಸ್ ಏಷಿಯಾ'ದಲ್ಲಿ ಇವರ ಹೆಸರು ದಾಖಲಾಗಿದೆ. ಇವರ ಕವನ ಸಂಕಲನ 'ನನಗನಿಸಿದ್ದು'ಗೆ ಮಲ್ಲಿಕಾ ಪ್ರಶಸ್ತಿ ಬಂದಿದೆ. ಜೈನ ಸಾಹಿತ್ಯ, ಸಂಸ್ಕೃತಿ, ಕ್ಷೇತ್ರಕಾರ್ಯ, ಸಂಶೋಧನೆ ಇತ್ಯಾದಿಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಪೂರ್ಣಿಮಾ ಅವರಿಗೆ 'ಶ್ರೀ ಗೊಮ್ಮಟೇಶ್ವರ ವಿದ್ಯಾಪೀಠ ಪುರಸ್ಕಾರ' ದೊರೆತಿದೆ.

ಕೆ.ಜಿ.ಎಫ್‌ನ (ಈಗ ಕೋಲಾರ) ಅನುರಾಧ ಅರವಿಂದಕಟ್ಟಿ ಅವರು ಸಣ್ಣಕಥೆಗಳ ರಚನಕಾರರಾಗಿದ್ದು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಸವಿತಾ ದೇಜಗೌ ಪ್ರತಿಷ್ಠಾನ'ದ ಕಥಾಸ್ಪರ್ಧೆಯಲ್ಲಿ ಬಹುಮಾನಿತರಾಗಿದ್ದಾರೆ. ಕವಿತೆ ರಚನೆಯಲ್ಲೂ ಆಸಕ್ತಿ ಇದ್ದು ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ನೃತ್ಯ ಸಂಯೋಜನೆಗಳನ್ನು ರೂಪಿಸಿದ್ದಲ್ಲದೆ ನಾಟಕಗಳಲ್ಲಿ ಅಭಿನಯ ಮಾಡಿದ್ದಾರೆ. ಕನ್ನಡಪರ ಸಂಘಟನೆಗಳಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಕೋಲಾರದ ಎಸ್.ವಿ.ಹೇಮಾವತಿ ಅವರು (ಜ.೧೯೫೪) ಎರಡು ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಕೋಲಾರ ತಾಲೂಕಿನ ತಿಮ್ಮಸಂದ್ರ ಗ್ರಾಮದ ಕಮಲಮ್ಮರಾಜು ಅವರು (ಜ.೧೯೩೪) ಮಕ್ಕಳಿಗಾಗಿ ಸಾಮಾಜಿಕ, ಪೌರಾಣಿಕ ಕಥೆಗಳನ್ನು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ದಾಸಸಾಹಿತ್ಯದಿಂದ ಪ್ರೇರಿತರಾಗಿ ಭಕ್ತಿಗೀತೆಗಳನ್ನು ಬರೆದಿದ್ದಾರೆ. ತೆಲುಗು ಭಾಷೆಯಲ್ಲಿಯೂ ಪರಿಣಿತರಿದ್ದು ತಮ್ಮ ಅನುಭವಗಳ ಸಾರವನ್ನು 'ಶ್ರೀ ಕಮಲನಾಭ ಶತಕಂ'ನಲ್ಲಿ ಅಭಿವ್ಯಕ್ತಿಸಿದ್ದಾರೆ. ಹಲವಾರು ಬಾರಿ ವಿದೇಶಗಳಿಗೆ ಹೋಗಿ ಬಂದಿರುವ ಇವರು ಅಲ್ಲಿ ಹಾಗೂ ಇಲ್ಲಿಯ ಸಾಮಾಜಿಕ ಪರಿಸರವನ್ನು ತುಲನೆ ಮಾಡಿ ಲೇಖನಗಳನ್ನು ಬರೆದಿದ್ದಾರೆ. ಹನಿಗವನಗಳಿಗೆ ಜಿಲ್ಲೆಯಲ್ಲಿ ವಿಶೇಷ ಪ್ರಾತಿನಿಧ್ಯವಿದ್ದು ಕೆ.ಜಿ.ಎಫ್‌ನ ರಾಧಾ ಪ್ರಕಾಶ್ ಅವರು ಹನಿಗವನ ಹಾಗೂ ಕವನಗಳಿಂದ ಗಮನಾರ್ಹರಾಗಿದ್ದಾರೆ.

ಎಸ್. ಸುಶೀಲ (ಜ.೧೯೬೮) ಅವರು ವೃತ್ತಿಯಲ್ಲಿ ವಕೀಲರಾಗಿದ್ದರೂ ಚಿಂತಾಮಣಿಯ ಎಲ್ಲ ಸಾಹಿತ್ಯ, ಸಾಂಸ್ಕೃತಿಕ ಕಾರ್ಯಗಳಲ್ಲಿ ಸಕ್ರಿಯ ಪಾಲುದಾರರಾಗಿದ್ದರೆ. ಸಾಕಷ್ಟು ಮೊದಲೇ ಸಾಹಿತ್ಯದ ಕೃಷಿ ಆರಂಭಿಸಿದ್ದು ರಾಜ್ಯ ಪ್ರಮುಖ ಪತ್ರಿಕೆಗಳಲ್ಲಿ ಸುಮಾರು ೩೦ ನೀಳ್ಗತೆಗಳು, ೨೫ ಸಣ್ಣಕಥೆಗಳು, ೬೦ ಕವನಗಳು ಪ್ರಕಟವಾಗಿವೆ. ಹಾಸ್ಯ, ಚಿಂತನೆ, ಕೇಳುಗರನ್ನು ಬೆರಗಾಗಿಸುವ ಅರ್ಥಸ್ಫೋಟಗುಣಗಳಿಂದ ಕೂಡಿರುವ ಇವರ ಚುಟುಕಗಳು ವೈಶಿಷ್ಟ್ಯ ಪೂರ್ಣವಾದುದೆಂದು ಅಭಿಪ್ರಾಯಪಡಲಾಗಿದೆ. ತುಮಕೂರಿನಲ್ಲಿ ನೆಲೆಸಿರುವವರಾದರೂ ಜಿಲ್ಲೆಯಲ್ಲಿ ಜನಿಸಿದ ಸಾಯಿಸುತೆ (೧೯೪೨) ಅವರು ರಾಜ್ಯದ ಕಾದಂಬರಿ ಕ್ಷೇತ್ರದಲ್ಲೇ ಚಿರಪರಿಚಿತರಾದವರು. ೬೦ಕ್ಕೂ ಹೆಚ್ಚು ಕಾದಂಬರಿ ಬರೆದಿರುವ 'ಸಾಯಿಸುತೆ' ಅವರ ಕಾವ್ಯನಾಮವಾಗಿದ್ದು ಮೂಲದ ಹೆಸರು ರತ್ನ ಅಶ್ವತ್ಥನಾರಾಯಣ ಎಂದು.

ಜಿಲ್ಲೆಯಲ್ಲಿ ಜನಿಸಿ ರಾಯಚೂರಿನಲ್ಲಿ ನೆಲೆಸಿರುವ ಇನ್ನೊಬ್ಬ ಖ್ಯಾತ ಕಾದಂಬರಿಗಾರ್ತಿ ಎಚ್.ಜಿ.ರಾಧಾದೇವಿ ಅವರು ತಮ್ಮೆಲ್ಲ ಕಾದಂಬರಿಗಳನ್ನು ಕೋಲಾರದ ಶ್ರೀ ವೆಂಕಟರಮಣಸ್ವಾಮಿಗೆ ಅರ್ಪಿಸುತ್ತಿದ್ದು ಹುಟ್ಟಿದ ಜಿಲ್ಲೆಯ ಬಗ್ಗೆ ಇರಿಸಿಕೊಂಡಿರುವ ಅಭಿಮಾನದ ಸಂಕೇತವಾಗಿದೆ. ಇವರ ಮೊದಲ ಕಾದಂಬರಿ ೧೯೬೪ರಲ್ಲಿ ಪ್ರಕಟವಾಗಿದ್ದು ಈವರೆಗೆ ಅದರ ಸಂಖ್ಯೆ ೧೨೨ ಮೀರಿದೆ. ಸಾಮಾನ್ಯ ಮಧ್ಯಮವರ್ಗದ ಗೃಹಿಣಿಯರಿಗೆ ಅಚ್ಚುಮೆಚ್ಚಿನ ಕಾದಂಬರಿಗಳಾಗಿದ್ದು ಅತ್ಯಂತ ಜನಪ್ರಿಯವಾಗಿವೆ.

ಆರಂಭದ ಕೃತಿ 'ಸುವರ್ಣಸೇತುವೆ' ಪ್ರಜಾಮತ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದಿದ್ದು ಅದೇ ವರ್ಷದ ಎರಡನೇ ಕಾದಂಬರಿ 'ಭ್ರಮರ ಬಂಧನ' ಕ್ಕೆ ಅನಕೃ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಲಭಿಸಿತು. ಇನ್ನೊಂದು ಕಾದಂಬರಿ 'ಮಿಂಚಿನ ಮೋಹನಾಂಗಿ'ಗೆ ರತ್ನಮ್ಮ ಹೆಗ್ಗಡೆ ಪ್ರಶಸ್ತಿಯ ಪ್ರಥಮ ಬಹುಮಾನ ದೊರೆಕಿದೆ. ೧೯೯೫ರಲ್ಲಿ ಅತ್ತಿಮಬ್ಬೆ ಪ್ರಶಸ್ತಿ, ೧೯೯೬ರಲ್ಲಿ ವಿಶ್ವೇಶ್ವರಯ್ಯ ಪ್ರಶಸ್ತಿ ರಾಧಾದೇವಿಯವರಿಗೆ ಸಂದಿವೆ. ಕೋಲಾರ ಪತ್ರಿಕೆಯ ಸಹ ಸಂಪಾದಕಿ ಹಾಗೂ ಕೋಲಾರದ ವನಿತಾ ಮೈತ್ರಿಕೂಟದ ಅಧ್ಯಕ್ಷರಾಗಿರುವ ಶ್ರೀವಾಣಿ ಪ್ರಹ್ಲಾದರಾವ್ ಅವರು ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಪರಿಚಿತರಾಗಿದ್ದು ಪ್ರಮುಖ ಪತ್ರಿಕೆಗಳಲ್ಲಿ, ಕನ್ನಡ ಸಾಹಿತ್ಯ ಸಮ್ಮೇಳನ ವಿಶೇಷಾಂಕಗಳಲ್ಲಿ , ಸಾಹಿತ್ಯಕ ಹಾಗೂ ವೈಚಾರಿಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಅವರ 'ಜಿಲ್ಲೆಯ ಗ್ರಾಮದೇವತೆಗಳು' ಒಂದು ವೈಶಿಷ್ಟ್ಯಪೂರ್ಣ ಬರಹ. ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತೆ ಕೃಷ್ಣಾರ್ಪಣ, ಚಾಣಕ್ಯ, ಗೋಕರ್ಣ ಮಹಾತ್ಮೆ, ಊರುಭಂಗ ಇತ್ಯಾದಿ ನಾಟಕಗಳನ್ನು ಬರೆದು, ತಾವೇ ನಿರ್ದೇಶಿಸಿ, ಯಶಸ್ವಿಯಾಗಿ ಪ್ರಯೋಗಿಸಿದ್ದಾರೆ. ಮಕ್ಕಳಿಗಾಗಿ ಹಲವಾರು ಕಥೆಗಳನ್ನು ಬರೆದಿದ್ದಾರೆ. 'ವಿದ್ಯಾಧಿದೇವತೆ ಗಣೇಶ' ಶ್ರೀವಾಣಿಪ್ರಹ್ಲಾದರಾವ್‌ರವರು ರಚಿಸಿರುವ ಕೋಮು ಸೌಹಾರ್ದತೆ ಬಿಂಬಿಸುವ ಮಕ್ಕಳ ನಾಟಕ ಆಕಾಶವಾಣಿಯಲ್ಲಿ ಬಿತ್ತರಗೊಂಡು ಅಪಾರ ಜನಮನ್ನಣೆ ಗಳಿಸಿದೆ. ಕರ್ನಾಟಕ ಸರ್ಕಾರದ ಜಿಲ್ಲಾ ಗ್ರಾಹಕರ ದೂರು ಪರಿಹಾರ ವೇದಿಕೆಯ ನ್ಯಾಯಾಂಗ ಸದಸ್ಯರಾಗಿ ಪೂರ್ಣಾವಧಿಯ ಸೇವೆ ಸಲ್ಲಿಸಿದ್ದು ಪ್ರಸ್ತುತ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಸದಸ್ಯೆಯಾಗಿ ಇರುವರು.

ಬೆಂಗಳೂರಿನ ಎನ್.ಎಂ.ಕೆಆರ್.ವಿ. ಪ್ರಥಮ ದರ್ಜೆ ಕಾಲೇಜಿನಲ್ಲಿ ಸಂಸ್ಕೃತ ವಿಭಾಗದ ಮುಖ್ಯಸ್ಥರಾಗಿರುವ ಎಸ್.ಆರ್.ಲೀಲ ಅವರು ಮಾಲೂರಿನ ಸಂಪಂಗೆರೆಯವರು. ಸಂಸ್ಕೃತ ಕವಯಿತ್ರಿಯರ ಬಗ್ಗೆ ವಿಶೇಷ ಅಧ್ಯಯನ ಮಾಡಿ ಡಾಕ್ಟರೇಟ್ ಪಡೆದಿದ್ದು, ಜಿಲ್ಲೆಯ ಗಂಗಾದೇವಿಯ ಬಗ್ಗೆಯೂ ಅದರಲ್ಲಿ ಚರ್ಚಿಸಿದ್ದಾರೆ. ವರಾಹ ಮಿಹಿರ, ಬಾಣಭಟ್ಟರ ಕೃತಿಗಳನ್ನು ಆಧರಿಸಿಕೊಂಡು ಲೇಖನಗಳನ್ನು ಬರೆದಿದ್ದಾರೆ. ಜಿಲ್ಲೆಯವರೇ ಆದ ಮಂಡಿಕಲ್ ರಾಮಾಶಾಸ್ತ್ರಿಗಳ 'ಮೇಘ ಪ್ರತಿ ಸಂದೇಶ' ವನ್ನು ಇಂಗ್ಲೀಷ್ ಹಾಗೂ ಕನ್ನಡಗಳಿಗೆ ವಿವರಗಳೊಂದಿಗೆ ಅನುವಾದಿಸಿದ್ದಾರೆ. ಅಂತೆಯೇ ಗಣಪತಿ ಮುನಿಗಳ ಜೀವನ ಚರಿತ್ರೆಯನ್ನು ಸಂಸ್ಕೃತದಿಂದ ಇಂಗ್ಲೀಷ್‌ಗೆ ಭಾಷಾಂತರಿಸಿದ್ದಾರೆ. ಸಂಸ್ಕೃತ ನಾಟಕಗಳ ಬಗ್ಗೆ ಅಪಾರ ಅಧ್ಯಯನ ಮಾಡಿರುವ ಲೀಲಾ ಅವರು 'ಅಮರ ನಾಯಕಂ' ಹಾಗೂ 'ಗಾಂಧೀ ಸ್ಮರಣ'ಗಳನ್ನು ಇಂಗ್ಲೀಷ್‌ನಿಂದ ಭಾವಾನುವಾದ ಮಾಡಿದ್ದಾರೆ. ಈಚೆಗೆ 'ಸ್ವಪ್ನ ವಾಸವದತ್ತೆ' ವನ್ನು ಮೂಲ ಸಂಸ್ಕೃತದಲ್ಲಿಯೇ ರಂಗ ಮಂದಿರಕ್ಕೆ ತಂದು ನಿರ್ದೇಶಿಸಿ ಹಲವಾರು ಪ್ರಯೋಗ ಮಾಡಿದ್ದು ಸಿ.ಡಿ. ರೂಪದಲ್ಲಿಯೂ ಪ್ರಕಟವಾಗಿದ್ದು ದೂರದರ್ಶನದಿಂದ ಪ್ರಸಾರಗೊಂಡಿದೆ.

**ಭಾಷಾ ಪ್ರಭೇದ**

ಪ್ರತಿಯೊಂದು ಭಾಷೆಯೂ ಕಾಲ ಹಾಗೂ ಪ್ರದೇಶವನ್ನು ಅನುಸರಿಸಿ ಭಿನ್ನವಾಗುತ್ತವೆ. ಅಲ್ಲದೆ ಆಡು ಭಾಷೆ ಮತ್ತು ಗ್ರಾಂಥಿಕ ಭಾಷೆಗಳ ಎರಡೂ ರೂಪ ಹೊಂದಿರುತ್ತವೆ. ಕೋಲಾರ ಜಿಲ್ಲೆಯಲ್ಲೂ ಕನ್ನಡ ಭಾಷಿಗರೇ ಅಧಿಕವಾಗಿದ್ದರೂ ಅದನ್ನು ಉಳಿದ ಪ್ರದೇಶಗಳಂತೆ ಕನ್ನಡದ ಒಂದು ಉಪಭಾಷೆಯನ್ನಾಗಿಸಿ ಅಧ್ಯಯನ ಮಾಡಿದೆ. ಉಳಿದಂತೆ ಇಲ್ಲಿಯೂ ಭೌಗೋಳಿಕ, ಸಾಮಾಜಿಕ ಸ್ಥಾನ–ಮಾನ, ಅಂತಸ್ತು, ರಾಜಕೀಯ ವಿಭಾಗಗಳು, ಹೊರಗಿನವರ ಪ್ರಭಾವ, ಬಹಳ ಕಾಲ ನಮ್ಮನ್ನು ಆಳಿದ ಮುಸ್ಲಿಂ, ಬ್ರಿಟಿಷರ ಭಾಷೆಗಳ ಪದಗಳ ಸೇರ್ಪಡೆ ಇವೇ ಮುಂತಾದ ಹಲವಾರು ಕಾರಣಗಳನ್ನು ಗುರುತಿಸಲಾಗಿದೆ. ಕೋಲಾರ ಜಿಲ್ಲೆ ಆಂಧ್ರಪ್ರದೇಶಕ್ಕೆ ಹೊಂದಿಕೊಂಡಿರುವುದರಿಂದ ಇಲ್ಲಿ ತೆಲುಗಿನ ಪ್ರಭಾವ ಹೆಚ್ಚಾಗಿದೆ ಎಂಬ ಅಭಿಪ್ರಾಯವಿದೆ. ವ್ಯಾವಹಾರಿಕವಾಗಿ ತೆಲುಗು ಭಾಷೆಯನ್ನೇ ಮಾತಾಡುವವರು ಅಧಿಕವಾಗಿದ್ದು, ಕನ್ನಡ ಭಾಷೆಯಲ್ಲಿಯೂ ತೆಲುಗು ಶಬ್ಧಗಳು ಸೇರ್ಪಡೆಯಾಗಿರುವುದನ್ನು ಕಾಣಬಹುದು. ಚದುವು (ಓದು), ರಾಗಿಮಾನು (ಅರಳಿಮರ), ಅಗ್ಗಿ (ಬೆಂಕಿ), ಓಚ್ (ಅಧ್ಯಾಪಕ), ಎರ್ರಗಡ್ಡ (ಈರುಳ್ಳಿ), ಎಕ್ಕು (ಹತ್ತು, ಏರುವಿಕೆ) (ಉದಾ: ಬಸ್ಸು ಎಕ್ಕು = ಬಸ್ಸು ಹತ್ತು, ಇತ್ಯಾದಿ) ಮುಂತಾದುವನ್ನು ಉದಾಹರಿಸಬಹುದು. ಅಲ್ಲದೆ ಶಬ್ಧ ಉತ್ಪತ್ತಿಯಾಗುವ ಬಾಯಿಯ ಗಂಟಲು, ನಾಲಿಗೆ, ದಂತಪಂಕ್ತಿಗಳು, ತುಟಿ ಇತ್ಯಾದಿ ವಿವಿಧ ಭಾಗಗಳಲ್ಲಿ ನೀಡುವ ಒತ್ತು, ದೀರ್ಘ ಉಚ್ಛಾರಗಳನ್ನು ಅನುಸರಿಸಿ ಪ್ರಭೇದಗಳನ್ನು ಗುರುತಿಸಬಹುದು. 'ಕೋಲಾರ ಜಿಲ್ಲೆಯ ಕನ್ನಡ' ಕುರಿತು ಈ ಹಿಂದೆ ಕೆ.ನಾರಾಯಣ ಅವರು ಬರೆದ ಲೇಖನವನ್ನು (ಕರ್ನಾಟಕ ಭಾರತಿ ಸಂ.೬; ಸಂ.೧–೨), ಆಧರಿಸಿ ಕೆಲವು ಉದಾಹರಣೆಗಳನ್ನು ನೋಡಬಹುದು. (ಲೇಖನ ವೈಜ್ಞಾನಿಕ, ಸಂಶೋಧನಾ ರೂಪದಲ್ಲಿದ್ದು ಆ ಅಂಶಗಳನ್ನು ಕೈಬಿಡಲಾಗಿದೆ. ಆವರಣದಲ್ಲಿರುವುದು ಗ್ರಾಂಥಿಕ

ರೂಪಗಳು). ಸ್ವರಗಳಲ್ಲಿ ಸಿಕೆ (ಶಿಖೆ), ಸೀಕೆ (ಸೀಗೇಕಾಯಿ), ಏಳೆ (ಏಳು) (ಸ್ತ್ರೀ); ಬ್ಯರೆ (ಬೆರೆ) ಬ್ಯಾರೆ (ಬೇರೆ) ಕೂರಿ (ಕುಳಿತುಕೊಳ್ಳಿ), ಕೋರೆ (ಡೊಂಕು) ಇತ್ಯಾದಿಗಳು.

ಎಲ್ಲ ಹೃಸ್ವ ಸ್ವರಗಳು ಪದಾಂತ್ಯದಲ್ಲಿ ಸ್ವಲ್ಪ ದೀರ್ಘವಾಗುತ್ತವೆ. ಸ್ವರಗಳಿಂದ ಆದಿಯಾಗುವ ಕೆಲವು ಪದಗಳು 'ಯ್' ಅಥವಾ 'ವ್' ಕಾರದ ಒತ್ತನ್ನು ಪಡೆಯುತ್ತದೆ. ಉದಾ: ಯ್‌ಇಲಿ (ಇಲಿ); ವ್‌ಒಂದು (ಒಂದು).

ವ್ಯಂಜನಗಳಲ್ಲಿ ಅಲ್ಪಪ್ರಾಣ ವ್ಯಂಜನಗಳಿವೆ. ಮಹಾಪ್ರಾಣ ವ್ಯಂಜನಗಳಿಲ್ಲ. ಸ, ಶ, ಷ ವ್ಯಂಜನ ಭೇದವಿಲ್ಲ. ಶ, ಷ ಗಳು 'ಸ' ಆಗುತ್ತವೆ. 'ಹ' ವ್ಯಂಜನ ಕಂಡುಬರುವುದಿಲ್ಲ.

ಪಟ (ಪೋಟೋ)=ಫೋಟೋ; ಕಾಪಿ=ಕಾಫಿ, ಟಗ್ರು=ಟಗರು, ಕಲ್ಪ=ಕರಟ, ತಂಬು (ತುಂಬು), ಅಬ್ಬ (ಹಬ್ಬ), ಅಂಡೆ (ಹಂಡೆ), ಸುಮ್ನೆ (ಸುಮ್ಮನೆ), ಅಗ್ಗ (ಹಗ್ಗ), ನಾಕು(ನಾಲ್ಕು), ಅದ್‌ನೇಳು (ಹದಿನೇಳು), ಎಂಞಚು (ಹೆಂಚು) ಗಞಜಿ (ಗಂಜಿ), ಮೆಣಸಿಜಕಾಯಿ (ಮೆಣಸಿನಕಾಯಿ), ಕಾಣ್‌ಸು (ಕಾಣಿಸು), ಸಕ್ತಿ (ಶಕ್ತಿ), ಬಸ್‌ರಿ (ಬಸುರಿ), ರಾತ್ರೆ (ರಾತ್ರಿ), ಕರ್‌ಗೆ (ಕ್ರಗೆ), ಬಿಳ್‌ಪು (ಬಿಳುಪು), ಅವ್ರೆ (ಇದ್ದಾರೆ), ಕಾಯ್‌ಲಿ (ಕಾಯಿಲೆ), ಅಯ್ಯ (ಅಜ್ಜ)

ವಚನ, ವಿಭಕ್ತಿ, ಲಿಂಗ ಇತ್ಯಾದಿ ಆಕೃತಿಮಾಗಳಲ್ಲಿ ಮನ್‌ಸ (ಮನುಷ್ಯ)>ಮನುಸ್ರು (ಮನುಷ್ಯರು)

ಆಯ್‌ದ (ಹೈದ, ಹುಡುಗ) > ಆಯ್‌ದ್ರು (ಹುಡುಗರು)

ಅತ್ತೆ (ಅತ್ತೆ) > ಅತ್ತೇರು (ಅತ್ತೆಯರು)

ಮಾವ (ಮಾವ) >ಮಾವ್ರ (ಮಾವಂದಿರು)

ಮನೆ (ಮನೆ) > ಮನೆಗ್ಳು (ಮನೆಗಳು)

ಹೊಲ (ಹೊಲ) > ಹೊಲಗ್ಳು (ಹೊಲಗಳು)

ಅಸೇವು (ಹಸುಗಳು) ಕರೇವು (ಕರುಗಳು) ಕುದ್ರೇವು (ಕುದರೆಗಳು) ಇತ್ಯಾದಿಯಾಗುತ್ತವೆ.

ಕಿವ್‌ಡ (ಕಿವುಡ), ಕಿವ್‌ಡಿ (ಕಿವುಡಿ), ಬುದ್‌ಮಂತ (ಬುದ್ಧಿವಂತ), ಬುದ್‌ಮಂತೆ (ಬುದ್ಧಿವಂತೆ), ಅಗ್‌ಸ (ಅಗಸ), ಅಗಸ್‌ರೋಳು (ಅಗಸಗಿತ್ತಿ), ಆಚಾರಿ (ಆಚಾರಿ) ಆಚಾರೋಳು (ಆಚಾರಗಿತ್ತಿ), ಬ್ರಾರ್ಮಣ (ಬ್ರಾಹ್ಮಣ), ಬ್ರಾರ್ಮ್ರೋಳು (ಬ್ರಾಹ್ಮಣಿತಿ), ಬೀಗ್‌ತಿ (ಬೀಗಿತ್ತಿ), ಮಗ್‌ಳು (ಮಗಳು) ಎಂಬಂತಾಗುತ್ತದೆ.

ದರ್ಶಕ ಸರ್ವನಾಮಗಳಲ್ಲಿ ಅಲ್ಲಿ, ಆಸು, ಆಗ (ದೂರಸೂಚಿಗಳು) ಇಲ್ಲಿ, ಈಸು, ಈಗ (ಸಮೀಪ ಸೂಚಿಗಳು) ಎಲ್ಲಿ (ಸ್ಥಾನ), ಏಸು (ಪ್ರಮಾಣ), ಯಾವಾಗ (ಕಾಲ) ಎಂಬಂತೆ ಪ್ರಶ್ನಾರ್ಥಕ ಸೂಚಿಗಳಾಗುತ್ತವೆ.

ಪದಗಳಿಗೆ ವಿಭಕ್ತ ಪ್ರತ್ಯಯಗಳು ಹತ್ತುವಾಗ ಪದಾಂತ್ಯವನ್ನು ಅನುಸರಿಸುತ್ತದೆ. ಮಾವ್‌ನು (ಮಾವ) ತಮ್‌ನು (ತಮ್ಮ) ಕುರಿನ್ (ಕುರಿಯನ್ನು), ಊರುನ್ (ಊರನ್ನು), ಕೆರೆನ್ (ಕೆರೆಯನ್ನು), ಕತೆನ್ (ಕತೆಯನ್ನು), ಕುರ್‌ಲ್ಯಗಿಂದ್ (ಕುರಿಯಿಂದ), ಮರ್‌ಲ್ಯಗಿಂದ್ (ಮರಿಯಿಂದ), ಊರ್ ಲ್ಯಕ್ (ಊರಿಗೆ), ಊಟ್‌ಲ್ಯಕ್ (ಊಟಕ್ಕೆ), ಗಲ್‌ಲ್ಯಕ್ (ಗಲ್ಲಕ್ಕೆ), ಮರದ್ (ಮರದ), ಮನ್‌ಸನ್ (ಮನುಷ್ಯನು), ಮನ್‌ಲ್ಯಗ್ (ಮನೆಯಲ್ಲಿ), ಕುರ್‌ಲ್ಯಗ್ (ಕುರಿಯಲ್ಲಿ) ಇತ್ಯಾದಿ ಉದಾಹರಿಸಬಹುದು.

ಕ್ರಿಯಾಪದಗಳಲ್ಲಿ ವರ್ತಮಾನ ಹಾಗೂ ಭವಿಷ್ಯತ್ ಕಾಲಗಳಲ್ಲಿ ಯಾವ ಭೇದವೂ ಇರುವುದಿಲ್ಲ (ಅಭೂತಕಾಲ) ಉದಾಹರಣೆಗೆ ಮಾಡ್ (ಧಾತು) + ತ್ (ಅಭೂತಕಾಲ ಪ್ರತ್ಯಯ) + ಈನಿ (ಆಖ್ಯಾತ ಪ್ರತ್ಯಯ) = ಮಾಡ್ತೀನಿ;

ನಾನ್ ಮಾಡ್ತೀನಿ, (ಏಕವಚನ) ನಾವ್ ಮಾಡ್ತೀವಿ (ಬಹುವಚನ)

| | ಏಕವಚನ | ಬಹುವಚನ |
|---|---|---|
| ಉತ್ತಮ ಪುರುಷ | ನಾನ್ ಮಾಡ್ತೀನಿ | ನಾವ್ ಮಾಡ್ತೇವಿ |
| ಮಧ್ಯಮ ಪುರುಷ | ನೀನ್ ಮಾಡ್ತಿ | ನೀವ್ ಮಾಡ್‌ತೀರಿ |
| ಪ್ರಥಮ ಪುರುಷ (ಪುಲ್ಲಿಂಗ) | ಅವನ್ ಮಾಡ್ತಾನೆ } | ಅವರ್ ಮಾಡ್ತಾರೆ |
| (ಸ್ತ್ರೀಲಿಂಗ) | ಅವಳ್ ಮಾಡ್ತಾಳೆ } | |
| (ನಪುಂಸಕ ಲಿಂಗ) | ಅದ್ ಮಾಡ್ತದೆ | ಅವು ಮಾಡ್ತವೆ |

ನಪುಂಸಕ ಪ್ರಾಣಿಜೀವಿಗಳಿಗೆ ಕೋಲಾರ ಜಿಲ್ಲೆಯ ಕನ್ನಡದಲ್ಲಿ ಮಾತ್ರ '–ಏವು' ಬಹುವಚನ ಪ್ರತ್ಯಯ ಹತ್ತುತ್ತದೆ.

ಭೂತಕಾಲದಲ್ಲಿ

ಕುಡ್+ದ್+ನಿ > ಕುಡ್ ದ್ನಿ (ಕುಡಿದೆ)

ಕೂರ್+ತ್+ನಿ > ಕೂತ್ನಿ (ಕೂತೆ)

ಉಣ್+ಡ್+ನಿ > ಉಂಡ್ನಿ (ಊಟ ಮಾಡಿದೆ)

ಕೊ(ಡು)+ಟ್+ನಿ > ಕೊಟ್ನಿ (ಕೊಟ್ಟೆ)

ತಿನ್+ತು+ > ತಿಂತು (ತಿಂದಿತು)

ಉಣ್+ತು>ಉಣ್ತು (ಉಂಡಿತು)

ನಾನ್‌ತಿಂದ್ನಿ (ಏಕವಚನ) ನಾವ್ ತಿಂದ್‌ವ್ರು (ಬಹುವಚನ)
ಅದ್ ತಿಂತು (ಏಕವಚನ) ಅದ್ ತಿಂದ್ವು (ಬಹುವಚನ)

ವಿಧ್ಯರ್ಥಗಳು ಪುರುಷ, ವಚನಗಳನ್ನು ಅನುಸರಿಸಿ ಹತ್ತುತ್ತವೆ. ನಾವ್ ಮಾಡೋಮ (ನಾವು ಮಾಡೋಣ); ಅವನ್ ತಿನ್ಲಿ (ಅವನು ತಿನ್ನಲಿ), ಅವಳ್ ಮಾಡ್ಲಿ (ಅವಳು ಮಾಡಲಿ), ಅದ್ ತಿನ್ನಿ (ಅದು ತಿನ್ನಲಿ)

ಭೂತ ಕಾಲದ ಧಾತುವಿಗೆ '–ರೆ' ಸೇರಿಸಿದರೆ ಪಕ್ಷಾರ್ಥ ಉಂಟಾಗುತ್ತದೆ.

ಅಳು–ಅತ್‌ರೆ (ಅತ್ತರೆ)
ನಗು–ನಕ್‌ರೆ (ನಕ್ಕರೆ)
ಬೀಳು–ಬಿದ್‌ರೆ (ಬಿದ್ದರೆ)

ಕೊಡ್ (ಭೂತಕಾಲ ಧಾತು) +ದೆ (ನಿಷೇಧ ಧಾತು)+ ಇದ್ + ರೆ (ಆಖ್ಯಾತ ಪ್ರತ್ಯಯ) = ಕೊಡ್‌ದೆ ಇದ್ರೆ (ಕೊಡದೆ ಇದ್ದರೆ)

ಕೃದಂತಗಳಲ್ಲಿ
ಅಳ್+ಅದ್+ಉ = ಅಳದು (ಆಳುವುದು)
ಅತ್+ಇದ್+ಉ = ಅತ್ತಿದು (ಅತ್ತಿದ್ದು)
ಅತ್+ಇಲ್+ದ್+ಉ = ಅತ್ತಿಲ್‌ದು (ಅತ್ತಿಲ್ಲದ್ದು)

**ಸಂಬಂಧಾರ್ಥಕ ಸರ್ವನಾಮಗಳಲ್ಲಿ**

ಮಾಡೋನು (ಮಾಡುವವನು), ಮಾಡ್ದೋನು (ಮಾಡಿದವನು), ಓಯ್ (ಧಾತು) + ತ್ (ಅಪೂರ್ಣ ವರ್ತಮಾನ ಪ್ರತ್ಯಯ) + ಅವ್‌ನೆ = ಓಯ್ತುವ್‌ನೆ (ಹೋಗುತ್ತಾ ಇದ್ದಾನೆ)

ಓಯ್+ತ್+ಇದ್+ನು=ಓಯ್ ತಿದ್ನು (ಹೋಗುತ್ತಿದ್ದ)

ಒಯ್+ತ್+ಇಲ್ಲ = ಓಯ್‌ತಿಲ್ಲ (ಹೋಗುತ್ತಾ ಇಲ್ಲ)

ಓಯ್+ತ್+ಇತ್+ಇಲ್ಲ= ಓಯ್‌ತಿತ್ತಲ್ಲ (ಹೋಗುತ್ತಿರಲಿಲ್ಲ)

ಅಂತೆಯೇ ಕೊಟ್ಟಿನ್ನಿ (ಕೊಟ್ಟಿದ್ದೀನಿ), ಕೊಟ್ಟಿದ್ನು (ಕೊಟ್ಟಿದ್ದೀನಿ), ಕೊಡೋದ್ (ಕೊಡುವುದು) ಇವೇ ಮುಂತಾದುವನ್ನು ಉದಾಹರಿಸಬಹುದು.

ಕೆಲವೊಮ್ಮೆ 'ರ್' = 'ಲ್' ಆಗುವುದುಂಟು.

ಶ್+ಅ+ರ್+ಅ+ಟ್+ಉ – ಸ್+ಅ+ಲ್+ಟ್+ಉ (ಶೆರ್ಟು)

ಕ್+ಓ+ರ್+ಟ್+ಉ – ಕೋ+ಲ್+ಟ್+ಉ (ಕೋಟು)

**ಸ್ಥಳನಾಮಗಳು**

ಕೋಲಾರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನವೇ ಕುತೂಹಲಕಾರಿಯಾದುದು. ಕಾಲಕಾಲಕ್ಕೆ ದೊರೆಯುವ ಶಾಸನಗಳಲ್ಲಿ ಉಕ್ತವಾಗಿರುವ ಗ್ರಾಮಗಳ ಹೆಸರುಗಳು ಅಂತೆಯೇ ಉಳಿದುಬಂದಿರುವುದು, ಹಲವಾರು ವ್ಯತ್ಯಾಸಗಳಾಗಿರುವುದು, ಸಂಸ್ಕೃತ, ತೆಲುಗು, ತಮಿಳು ಭಾಷೆಗೆ ಅನುವಾದಗೊಂಡಿರುವುದು. ಹಲವಾರು ಬಿರುದುಗಳನ್ನು ಹೊಂದಿರುವುದು ಇತ್ಯಾದಿಯಾಗಿ ಅನೇಕ ಅಂಶಗಳನ್ನು ಗುರುತಿಸಲಾಗಿದೆ (ವಿ.ಗೋಪಾಲಕೃಷ್ಣ 'ಸ್ಥಳನಾಮ ಅಧ್ಯಯನಗಳು').

ಉಚ್ಚಾರಣೆ ಅಥವಾ ಧ್ವನಿ ಬದಲಾವಣೆಗಳಿಂದ ಹೆಸರುಗಳಲ್ಲಿ ಪಲ್ಲಟವಾಗುವುದೇ ಅಧಿಕ. ಕ್ರಿ.ಶ.೯೪೩ ಶಾಸನದಲ್ಲಿರುವ ವಿಜಯಾದಿತ್ಯಮಂಗಲ, ೧೪೭೦ರಲ್ಲಿ ಭಿಜಯಾದಿತ್ಯಮಂಗಲವಾಗಿ ನಂತರ ಬಿಜ್ಜೈತಮಂಗಲದಿಂದ ಈಗ 'ಬೇತಮಂಗಲ' ರೂಪಕ್ಕೆ ಬಂದಿದೆ. ಅಂತೆಯೇ ಶಿವಮಾರಪಟ್ಟಣ>ಶಿವಾರಪಟ್ಟಣ, ಕೇಶವಪರ್ವತಂ>ಕ್ಯಾಸಂಬಳ್ಳಿ, ಅರಸುಪಾಳ್ಯಂ>ಆಚಂಬಳ್ಳಿ ಇತ್ಯಾದಿ ಉದಾಹರಿಸಬಹುದು. ಸ್ಥಳನಾಮಗಳನ್ನು ನೈಸರ್ಗಿಕ, ಸಾಮಾಜಿಕ, ವರ್ಣನಾತ್ಮಕ, ಐತಿಹಾಸಿಕ, ಪುರಾಣ–ಜನಪದ ಕಥೆ ಆಧರಿಸಿದ ಎಂಬಿತ್ಯಾದಿಯಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ. ನೈಸರ್ಗಿಕ ವಿಭಾಗದಲ್ಲಿ ಜಲ, ಪರ್ವತ, ಅಡವಿ, ಭೂಸ್ಥಿತಿ, ಪ್ರಾಣಿಗಳು, ಶಿಲೆ ಇತ್ಯಾದಿಗಳನ್ನು ಒಳಗೊಂಡ ಹಲವಾರು ಸ್ಥಳಗಳಿವೆ. ಉದಾಹರಣೆಗೆ, ನಂದಿದುರ್ಗ, ತಲಕಾಯಲಬೆಟ್ಟ, ಮರಳುಕುಂಟೆ, ವೇಮಗಲ್, ತಾವರೆಕೆರೆ, ಕೋಗಿಲಹಳ್ಳಿ, ಗುರ್ರಾಲದಿನ್ನೆ, ಗುಡಿಬಂಡೆ, ಕಲ್ಲಹಳ್ಳಿ ಇತ್ಯಾದಿ ಉದಾಹರಿಸಬಹುದು. ನೀರಿಗೆ ಅಭಾವವಿರುವ ಕೋಲಾರ ಜಿಲ್ಲೆಯ ಒಟ್ಟು ಸ್ಥಳನಾಮಗಳ ಪೈಕಿ ಸುಮಾರು ೪೦೦ ಗ್ರಾಮಗಳು ಮೂವತ್ತಕ್ಕೂ ಹೆಚ್ಚು ಜಲ ಸಂಬಂಧಿ ಹೆಸರುಗಳೊಂದಿಗೆ ಇರುವುದು ಕಂಡುಬರುತ್ತದೆ. ಅಂಬುದಿ, ಸಂದ್ರ (ಸಮುದ್ರ) ಸಾಗರ, ಏರಿ, ಸಿಡ್ಡು, ಕಡವು, ಕುಂಟೆ, ಕೊಳ, ಕೋಡಿ, ಚೆರವು, ದೊಣೆ, ಮಡವು ಮುಂತಾದ ಪದಗಳನ್ನು ಹೊಂದಿರುವುದನ್ನು ವಿಶ್ಲೇಷಿಸಲಾಗಿದೆ. ಇವುಗಳಲ್ಲಿ ಸುಮಾರು ೧೦೦ ಸ್ಥಳಗಳು 'ಸಂದ್ರ' (<ಸಮುದ್ರ)ದಿಂದ ಅಂತ್ಯಗೊಳ್ಳುವುದು ಕುತೂಹಲಕಾರಿಯಾಗಿವೆ. ಸಾಮಾಜಿಕ ಅಂಶಗಳಲ್ಲಿ ವ್ಯಕ್ತಿನಾಮ, ಜಾತಿ, ಬುಡಕಟ್ಟು, ಮತ, ವಾಸ್ತು, ಘಟನೆ, ಬಿರುದು, ದೇವತೆ, ವೃತ್ತಿ ಸಾದೃಶ್ಯಗಳನ್ನು ಸ್ಥಳನಾಮಗಳಲ್ಲಿ ಗುರುತಿಸಿದೆ. ವರ್ಣನಾತ್ಮಕದಲ್ಲಿ ಸ್ಥಳ, ದಿಕ್ಕು, ಗ್ರಾಮನಾಮ, ವರ್ಣ, ಸಂಖ್ಯೆ, ಪೌರ್ವಾಪರ್ಯ, ಪರಿಮಾಣ, ಪೂಜಾರ್ಥಕ, ಸಾದೃಶ್ಯ ವಸ್ತುಗಳನ್ನು ಹೊಂದಿರುವ ಹಲವಾರು ಗ್ರಾಮಗಳಿವೆ.

ಸ್ಥಳೀಯ ಹೆಸರುಗಳನ್ನು ರಾಜನ ಅಥವಾ ರಾಜ ಪರಿವಾರದ ಬಿರುದಿನೊಂದಿಗೆ ಸೇರಿಸಿ ಹೊಸ ಹೆಸರು ನೀಡಿರುವುದು ಈ ಜಿಲ್ಲೆಯಲ್ಲಿಯೂ ಕಂಡುಬರುತ್ತದೆ. (ಆವರಣದಲ್ಲಿರುವುದು ಈಗ ಬಳಕೆಯಲ್ಲಿರುವ ಹೆಸರುಗಳು) ನಿಖರಿಲಿ ಚೋಳಮಂಡಲ (ಕುವಳಾಲ ನಾಡು), ಕೇರಳಾಂತಕ ಚತುರ್ವೇದಿಮಂಗಲಂ (ಅಮಣಕುಕಡಿ) ಅಮರನಾರಾಯಣ ಚತುರ್ವೇದಿ ಮಂಗಲಂ (ಕೈವಾರ) ಕೂತ್ತಾಂಡದೇವ ನಲ್ಲೂರ್ (ಕುರುಡಮಲೆ) ಅಯೋಧ್ಯಾಪುರ (ರಾಯಕುಂಟೆ), ಲಕ್ಷ್ಮೀಪುರ (ಏರುಕಾಲುವೆ),

ಮರಮೂಟ್ಲು>ಬೌರಿಂಗ್‌ಪೇಟೆ>ಬಂಗಾರಪೇಟೆ, ತಪಸಗಿರಿ (ರಹಮಾನ್‌ಗಡ) ದಾಸರಹಳ್ಳಿ (ರಾಬರ್ಟ್‌ಸನ್‌ಪೇಟೆ) ಇತ್ಯಾದಿ ಉದಾಹರಿಸಬಹುದು.

ಜನಾಂಗಿಕ ಅಂಶಗಳುಳ್ಳ ಸುಮಾರು ಇನ್ನೂರು ಸ್ಥಳಗಳನ್ನು ಗುರುತಿಸಲಾಗಿದೆ. ಉದಾಹರಣೆಗೆ 'ಅಂದರೆ' (ಕುರುಬರಲ್ಲಿ ಒಂದು ಪಂಗಡ=ಅಂದಾರಲಹಳ್ಳಿ) ಅಗಿನಿ (ಅಗ್ನಿ – ಕುರುಬ, ಗೊಲ್ಲ, ಬೋಯ ಇವರಲ್ಲಿ ಒಂದು ಪಂಗಡ=ಅಗಿನಿಹಳ್ಳಿ) ಗಣಾಚಾರಿ (ಕಿಳ್ಳಿಕ್ಯಾತರಲ್ಲಿ ಬೊಂಬೆ ಪಂಗಡದವರು=ಗಣಾಚಾರಿಪುರ) ನಟುವರು (ದೇವಸ್ಥಾನ, ಅರಮನೆಗಳಲ್ಲಿ ನೃತ್ಯ, ನಾಟಕ, ಸಂಗೀತ ವೃತ್ತಿಯಲ್ಲಿದ್ದವರು= ನಟುವರಹಳ್ಳಿ) ಬಿಂಗಿ (ನಾಟಕಗಳನ್ನಾಡುವ ಒಂದು ಬಗೆಯ ಭಿಕ್ಷುಕರು=ಬಿಂಗೀಪುರ) ಇತ್ಯಾದಿ ಉದಾಹರಿಸಬಹುದು. ಸಂಸ್ಕೃತೀಕರಣಗೊಂಡಿರುವ ಹಲವಾರು ಸ್ಥಳಗಳು ಜಿಲ್ಲೆಯಲ್ಲಿವೆ. ಮುಡಿಯನೂರು>ಚೂಡಾಗ್ರಾಮ, ಕೈವಾರ>ಕೈವಲ್ಯಪುರ, ಬಾಗೇಪಲ್ಲಿ>ಭಾಗ್ಯವಲ್ಲೀ ಇತ್ಯಾದಿ ಉದಾಹರಿಸಬಹುದು. ಕೆಲವು ಶಾಸನಗಳಲ್ಲಿ ಮುಳಬಾಗಿಲಿಗೆ – ಮೂಡಲ ಬಾಗಿಲು ಎಂಬ ಅರ್ಥಗ್ರಹಿಸದೆ ಮುಳ್ಳು ಎಂದು ತಪ್ಪಾಗಿ ತಿಳಿದು 'ಕಂಟಕಪುರಿ' ಎಂದು ಸಂಸ್ಕೃತೀಕರಣಗೊಂಡಿದೆ. ತಿ.ತಾ.ಶರ್ಮ ಅವರು ಶಾಸನ ಹಾಗೂ ಇನ್ನಿತರ ಆಧಾರದ ಮೇಲೆ ಕೋಲಾರ ಜಿಲ್ಲೆಯ ಕೆಲವು ಅಪರೂಪವೆಂಬಂತಹ ಹೆಸರುಳ್ಳ ಸ್ಥಳಗಳ ಪಟ್ಟಿ ನೀಡುತ್ತಾರೆ. ಉದಾಹರಣೆಗೆ ನೊಣಮಂಗಲ, ಗುರಗಂಜಿಗುಟ್ಟಿ, ಕೈಲಂಚ, ಬಾಣಂತನಹಳ್ಳಿ, ತಿಗಣೆ, ಗಬ್ಬೂರು, ಚಲುವನಹಳ್ಳಿ, ಹೂಹಳ್ಳಿ, ತೋರಣಕಂಬ, ವಿಕಟಕವಿ, ಕರ್ಪೂರ, ಭಾರತೀಪುರ ಇತ್ಯಾದಿ. ಕಲ್ಲಂದೂರಿನ ೧೫೬೫ರ ಶಾಸನ 'ಕನ್ನಡ ಭಾರತಿ'ಎಂಬ ಅಗ್ರಹಾರವನ್ನು ಉಲ್ಲೇಖಿಸುತ್ತದೆ.

ಉಳಿದಂತೆ ಕೋಲಾರ ಜಿಲ್ಲೆಯಲ್ಲಿಯೂ ಸಮಾನಾರ್ಥಕ ಸ್ಥಳನಾಮಗಳಿವೆ. ಒಂದೇ ಹೆಸರಿನ ಸ್ಥಳಗಳು ಸಮೀಪದಲ್ಲಿದ್ದರೆ ವ್ಯತ್ಯಾಸ ಸೂಚಕವಾಗಿ ಪೂರ್ವಪದ ಜೋಡಿಸುವುದುಂಟು. ಹಳೇ–ಹೊಸ, ಹಿರಿಯ–ಕಿರಯ, ಮೇಲಿನ–ಕೆಳಗಿನ ಇತ್ಯಾದಿ ಉದಾಹರಿಸಬಹುದು. ಕೆಲವೊಮ್ಮೆ ವಿಶೇಷವಾದ ಪದ ಬಳಕೆಯಾಗಬಹುದು. ಕೋಟಾಲ–ಮಣಿವಾಲಗಳಲ್ಲಿ ಕೋಟಾಲ ಕೋಟೆಯಿಂದ ಆವೃತವಾದ ಹಾಗೂ ಮಣಿವಾಲ–ಮಣಿ/ಮಡಿ>ಮಡುವು ಇಂದ ಆವೃತವಾದ ಎಂದು ಪ್ರತ್ಯೇಕಿಸಿದೆ. ಗೌರಿಬಿದನೂರಿನ ವದ್ದೇನಹಳ್ಳಿ (ಒಂದು ಬಗೆಯ ವೃಕ್ಷ) ಈಗ ಪಾಳು ಬಿದ್ದಿದ್ದು (ಈಗ ಪಾತೂರು–ಹಳೇ ಊರು ಎಂದು ಕರೆಯುತ್ತಾರೆ ಶಾಸನದಲ್ಲಿ ರಾಮಚಂದ್ರಪುರ ಎಂಬ ಪ್ರತಿನಾಮವಿತ್ತು). ಅಲ್ಲಿಂದ ವಲಸೆ ಹೋದವರು ದಾರಿನಾಯ್ಕನಪಾಳ್ಯ ಹೋಬಳಿಯಲ್ಲಿ ಬೇರೆಬೇರೆಯಾಗಿ ನೆಲೆಸಿದ್ದು ಅದನ್ನು ವದ್ದೇನಹಳ್ಳಿ ಎಂದು ಒಂದು ಗುಂಪಿನವರು ಕರೆದುಕೊಂಡರೆ ಪ್ರತ್ಯೇಕವಾಗಿ ನೆಲೆಸಿದವರು ತಮ್ಮ ಗ್ರಾಮವನ್ನು ಮಜರಾ ವದ್ದೇನಹಳ್ಳಿ ಎಂದು ಕರೆದುಕೊಂಡರು. ನೀರಿನ ಹರಿವು 'ವೇಣಿ' ಎಂದು ಸೂಚಿಸುವ ಪದವಾಗಿದ್ದು ಕಾದಲವೇಣಿ, ವೇದಲವೇಣಿ, ಏರವೇಣಿ ಎಂಬಿತ್ಯಾದಿಯಾಗಿ ಪ್ರತ್ಯೇಕ ಅಸ್ತಿತ್ವ ಪಡೆದಿದೆ. ಅಂತೆಯೇ ಗೊಲ್ಲಹಳ್ಳಿ, ಊಚನಗೊಲ್ಲಹಳ್ಳಿ, ಮಾಟರ ಗೊಲ್ಲಹಳ್ಳಿ ಇತ್ಯಾದಿ ಉದಾಹರಿಸಬಹುದು. ಭಾಷಾದೃಷ್ಟಿಯಿಂದ ಅಧ್ಯಯನ ಯೋಗ್ಯವಾಗಿರುವ ಗ್ರಾಮಗಳೆಂದರೆ ಬ್ಯಾಲ, ಕುದುರೆ ಬ್ಯಾಲಗಳು. 'ಬ್ಯಾಲ' ಗ್ರಾಮ ಮಧುಗಿರಿ ತಾಲೂಕಿನಲ್ಲಿದೆ. ಅದಕ್ಕೆ ಹೊಂದಿಕೊಂಡಂತೆ ಗೌರಿಬಿದನೂರು ತಾಲೂಕಿನ ಹೊಸೂರು ಹೋಬಳಿಯಲ್ಲಿ 'ಕುದುರೆ ಬ್ಯಾಲ' ಗ್ರಾಮವಿದೆ. ಮಧುಗಿರಿಯ ಬ್ಯಾಲವನ್ನು ದೊಡ್ಡ ಬ್ಯಾಲ ಎಂದೂ ಕರೆಯುತ್ತಾರೆ. ಹಾಗಾಗಿ ಹೊಸೂರಿನ ಬ್ಯಾಲ ಚಿಕ್ಕಬ್ಯಾಲ ಆಗಬೇಕಿತ್ತು. ತೆಲುಗು ಪ್ರಭಾವದಿಂದಾಗಿ ಚಿಕ್ಕ ಎಂಬುದಕ್ಕೆ ಸಮನಾರ್ಥವಾಗಿ 'ಕುರ್ರ' ಎಂಬ ಪದ ಬಳಕೆಯಲ್ಲಿದ್ದು ಅದು 'ಗುರ್ರ' ಎಂಬುದಾಗಿ ಭಾವಿಸಿ, 'ಕುದುರೆ' ಎಂದು ಕನ್ನಡಕ್ಕೆ ಭಾಷಾಂತರವಾಗಿ 'ಕುದುರೆ ಬ್ಯಾಲ' ಎಂದಾಗಿದೆ.

(ಪ್ರಸ್ತುತ ಗ್ಯಾಸೆಟಿಯರ್ ಗ್ರಂಥದ ಅಂತ್ಯದಲ್ಲಿ ಜಿಲ್ಲೆಯ ಗ್ರಾಮಸೂಚಿಯನ್ನು ನೀಡಲಾಗಿದೆ).

**ಕನ್ನಡ ಸಾಹಿತ್ಯ ಪರಿಷತ್ತು**

ಅಖಿಲ ಭಾರತ ಮಟ್ಟದ ಎರಡು ಸಾಹಿತ್ಯ ಸಮ್ಮೇಳನಗಳು ಕೋಲಾರದಲ್ಲಿ ನಡೆದಿವೆ. ೧೯೨೪ರಲ್ಲಿ ಎಚ್.ಕೃಷ್ಣಶಾಸ್ತ್ರಿ ಅವರ ಅಧ್ಯಕ್ಷತೆಯಲ್ಲಿ ೧೦ನೇ ಕನ್ನಡ ಸಾಹಿತ್ಯ ಸಮ್ಮೇಳನ ಕೋಲಾರದಲ್ಲಿ ನಡೆಯಿತು. ಅಂತೆಯೇ ೧೯೮೪ರ ಮಾರ್ಚಿ ೨೩ ರಿಂದ ೨೫ರವರೆಗೆ ಕೈವಾರದಲ್ಲಿ ೫೬ನೇ ಕನ್ನಡ ಸಾಹಿತ್ಯ ಸಮ್ಮೇಳನ ಎ.ಎನ್.ಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಜನಪ್ರಿಯ ಸಾಹಿತ್ಯ ಮತ್ತು ಅಭಿರುಚಿ, ಹೊಸದೃಷ್ಟಿ, ನಾನು ಮತ್ತು ನನ್ನ ಸಾಹಿತ್ಯ, ಸಾಹಿತ್ಯ ಮತ್ತು ಇತರ ಜ್ಞಾನ ಕ್ಷೇತ್ರಗಳು ಇತ್ಯಾದಿ

ವಿಷಯಗಳ ಬಗ್ಗೆ ಗೋಷ್ಠಿಗಳಿದ್ದುವಲ್ಲದೆ ಕವಿಗೋಷ್ಠಿ ಸಹ ನಡೆಯಿತು. ಸಮ್ಮೇಳನಾಧ್ಯಕ್ಷರ ಭಾಷಣವೂ ಸೇರಿದಂತೆ ಎಲ್ಲ ಗೋಷ್ಠಿಗಳಲ್ಲಿ ಮಂಡಿತವಾದ ಪ್ರಬಂಧಗಳು, ಪರಿಷತ್ತಿನ ಅಧ್ಯಕ್ಷರ, ಉದ್ಘಾಟಕರ ಮಾತುಗಳು, ನಿರ್ಣಯಗಳು ಇತ್ಯಾದಿ ಸಮಗ್ರ ಕಾರ್ಯಕ್ರಮಗಳನ್ನು ನಂತರ 'ಕೈವಾರ ಸಾಹಿತ್ಯ ಸಮ್ಮೇಳನ ೧೯೮೪' ಎಂಬ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಹೊರತರಲಾಯಿತು. ಸಮ್ಮೇಳನದ ಸಂದರ್ಭದಲ್ಲಿ 'ಕೋಲಾರ ಪತ್ರಿಕೆ'ಯಿಂದ 'ಪ್ರಬುದ್ಧ' ಎಂಬ ವಿಶೇಷಾಂಕವೊಂದು ಪ್ರಕಟವಾಯಿತು.

## ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ

ಬೆಂಗಳೂರಿನಲ್ಲಿರುವ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ೧೯೬೯ರಲ್ಲಿಯೇ ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನಗಳ ಅಗತ್ಯ ಕಂಡುಕೊಂಡು ಹಲವಾರು ಯೋಜನೆಗಳನ್ನು ರೂಪಿಸಿತು. ಅಂತೆಯೇ ಕೋಲಾರ ಜಿಲ್ಲೆಯಲ್ಲಿಯೂ ೧೯೭೦ ರಿಂದ ೨೦೦೩ರದವರೆಗೆ ಎಂಟು ಜಿಲ್ಲಾ ಸಾಹಿತ್ಯ ಸಮ್ಮೇಳನಗಳು ನಡೆದಿವೆ. ೧೯೭೦ರ ಜೂನ್‌ನಲ್ಲಿ ಪ್ರಥಮ ಜಿಲ್ಲಾ ಸಾಹಿತ್ಯ ಸಮ್ಮೇಳನ ಅ.ನ.ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಬಂಗಾರಪೇಟೆಯಲ್ಲಿ ಜರುಗಿತು. ಸಾಹಿತ್ಯ, ಮಹಿಳೆ ಹಾಗೂ ಧರ್ಮಕ್ಕೆ ಸಂಬಂಧಿಸಿದಂತಹ ಗೋಷ್ಠಿಗಳು ನಡೆದಿದ್ದು ನೆನಪಿನ ಸಂಚಿಕೆ ಹಾಗೂ ಕೋಲಾರ ಜಿಲ್ಲೆಯ ಬರಹಗಾರರು ಪುಸ್ತಕ ಪ್ರಕಟಿಸಲಾಯಿತು. ೧೯೬೯ರ ಮೇ ತಿಂಗಳಲ್ಲಿ ಎರಡನೇ ಜಿಲ್ಲಾ ಸಾಹಿತ್ಯ ಸಮ್ಮೇಳನ ಗೌರಿಬಿದನೂರಿನಲ್ಲಿ ಚಂದ್ರಶೇಖರ ಕಂಬಾರರ ಅಧ್ಯಕ್ಷತೆಯಲ್ಲಿ ನಡೆದಿದ್ದು, ಪುಸ್ತಕ ಕಲೆ, ಶಾಸನಗಳ ಕುರಿತು ಪ್ರದರ್ಶನಗಳು ಹಾಗೂ ಮಕ್ಕಳ ವರ್ಷವಾದದ್ದರಿಂದ ಮಕ್ಕಳ ಪುಸ್ತಕ ಪ್ರದರ್ಶನಕ್ಕೆ ಆದ್ಯತೆ ನೀಡಲಾಗಿತ್ತು. ಜಿಲ್ಲೆಯ ಮೂರನೆಯ ಸಾಹಿತ್ಯ ಸಮ್ಮೇಳನ ೧೯೯೨ರ ಜನವರಿಯಲ್ಲಿ ಚಿಕ್ಕಬಳ್ಳಾಪುರದಲ್ಲಿ ಹಂ.ಪ.ನಾಗರಾಜಯ್ಯ ಅವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿದ್ದು ಕನ್ನಡ ಸಾಹಿತ್ಯಕ್ಕೆ ಕೋಲಾರ ಜಿಲ್ಲೆಯ ಕೊಡುಗೆ, ಆಡಳಿತದಲ್ಲಿ ಕನ್ನಡ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಇತ್ಯಾದಿ ಕುರಿತ ವಿಚಾರ ಸಂಕಿರಣಗಳಿದ್ದವು. ಮಾಲೂರು ತಾಲೂಕಿನ ಶಿವಾರಪಟ್ಟಣದಲ್ಲಿ ಮೇ ೧೯೯೩ರಲ್ಲಿ ನಾಲ್ಕನೇ ಜಿಲ್ಲಾ ಸಾಹಿತ್ಯ ಸಮ್ಮೇಳನ ಜ.ಚ.ನಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಾಹಿತ್ಯ, ಕಲೆ ಇತ್ಯಾದಿ ಕುರಿತ ಗೋಷ್ಠಿಗಳಿದ್ದವು.

ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಐದನೇ ಜಿಲ್ಲಾ ಸಾಹಿತ್ಯ ಸಮ್ಮೇಳನ ೧೯೯೫ರ ಮೇ ತಿಂಗಳಲ್ಲಿ ಸಂಘಟಿತವಾಗಿದ್ದು ಸಿ.ಕೆ.ನಾಗರಾಜಾರಾಯರು ಅಧ್ಯಕ್ಷತೆ ವಹಿಸಿದ್ದರು. ಕೋಲಾರ ಜಿಲ್ಲೆಯ ನೀಲಿನಕ್ಷೆ, ಜಿಲ್ಲೆಯ ಬರಹಗಾರರು, ಭಾಷಾಬಾಂಧವ್ಯ ಸೇರಿದಂತೆ ಹಲವಾರು ವಿಷಯಗಳು ಮಂಡಿತವಾದುವು. ಇದೇ ಪ್ರದೇಶದಲ್ಲಿ (ಕೆ.ಜಿ.ಎಫ್) ಆರನೆಯ ಸಮ್ಮೇಳನ ರಘುಸುತ ಅವರ ಅಧ್ಯಕ್ಷತೆಯಲ್ಲಿ ೨೦೦೦ದ ಡಿಸೆಂಬರ್‌ನಲ್ಲಿ ಜರುಗಿತು. ಜಿಲ್ಲೆಯ ಪ್ರಗತಿ, ಕಲಾ ಪರಂಪರೆಗಳಲ್ಲದೆ ಸಾಹಿತ್ಯ ಸಂಬಂಧಿ ಗೋಷ್ಠಿಗಳಿದ್ದುವು. ೨೦೦೨ರ ಜನವರಿಯಲ್ಲಿ ಗೌರಿಬಿದನೂರು ತಾಲೂಕಿನ ಹೊಸೂರಿನಲ್ಲಿ ಚಿ. ಶ್ರೀನಿವಾಸರಾಜು ಅವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಏಳನೆಯ ಸಾಹಿತ್ಯ ಸಮ್ಮೇಳನ ನಡೆದು ಹಲವಾರು ವಿಚಾರ ಸಂಕಿರಣಗಳು ಕವಿ ಸಮ್ಮೇಳನಗಳು ನಡೆದವು. ನಂತರ ಜಿಲ್ಲೆಯ ಎಂಟನೇ ಸಾಹಿತ್ಯ ಸಮ್ಮೇಳನ ಉತ್ತನೂರು ರಾಜಮ್ಮ ಅವರ ಅಧ್ಯಕ್ಷತೆಯಲ್ಲಿ ೨೦೦೩ರ ಫೆಬ್ರವರಿ ತಿಂಗಳಲ್ಲಿ ಮುಳಬಾಗಿಲಿನಲ್ಲಿ ಸಮಾವೇಶಗೊಂಡಿತು. ಪ್ರತಿ ಸಮ್ಮೇಳನಗಳಲ್ಲೂ ಹಲವಾರು ಗೋಷ್ಠಿಗಳಲ್ಲದೆ ಚಿತ್ರ ಶಿಲ್ಪ ಪ್ರದರ್ಶನ, ಪುಸ್ತಕ ಪ್ರದರ್ಶನ ಮಾರಾಟಗಳು ನಡೆದವು. ವಿವಿಧ ಕ್ಷೇತ್ರದ ಹಲವಾರು ಗಣ್ಯರನ್ನು ಸನ್ಮಾನಿಸಲಾಯಿತು. ನೆನಪಿನ ಸಂಚಿಕೆ ಹೊರತರಲಾಯಿತು. ಕವಿಗೋಷ್ಠಿಗಳಲ್ಲದೆ ಜಾನಪದವೂ ಸೇರಿದಂತೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

## ಸಾಂಸ್ಕೃತಿಕ ಸಂಸ್ಥೆಗಳು

ಡಿ.ವಿ.ಜಿ ಪ್ರತಿಷ್ಠಾನ ಕೋಲಾರದಲ್ಲಿ ೧೯೮೬ರಲ್ಲಿ ಸ್ಥಾಪಿತವಾಗಿದ್ದು, ನಾಡಿನ ಸಾರಸ್ವತ ಲೋಕದ ಮಹಾ ತಪಸ್ವಿ ಡಿ.ವಿ.ಗುಂಡಪ್ಪನವರ ನೆನಪಿಗಾಗಿ ೧೯೮೭ರಲ್ಲಿ ಮುಳಬಾಗಿಲಿನಲ್ಲಿ ಜನ್ಮಶತಮಾನೋತ್ಸವ ಆಚರಣೆ ಅತ್ಯಂತ ಸಡಗರದಿಂದ ರಾಜ್ಯಮಟ್ಟದಲ್ಲಿ ನಡೆದಿದ್ದು ಈ ಸಮಾವೇಶದಲ್ಲಿ ಹಿರಿಯ ಚೇತನರಾದ ನಿಟ್ಟೂರು ಶ್ರೀನಿವಾಸರಾವ್, ಎಂ.ವಿ.ಸೀತಾರಾಮಯ್ಯ, ಜಿ.ನಾರಾಯಣ, ಹಾ.ಮಾ.ನಾಯಕ, ಪಾಲ್ಗೊಂಡಿದ್ದರು. ಡಿ.ವಿ.ಜಿ. ಸಮಗ್ರ ಕೃತಿ ಶ್ರೇಣಿ, ಡಿ.ವಿ.ಜಿ ಕವನ ಸಂಗ್ರಹ, 'ಚಿಗುರು' ಸ್ಮರಣ ಸಂಚಿಕೆ ಹಾಗೂ 'ಶ್ರೀಕರ' ರಾಮಕೃಷ್ಣ ಉಡುಪ ಸಂಭಾವನಾ ಗ್ರಂಥ ಮುಂತಾದ ಕೃತಿಗಳು ಪ್ರಕಾಶನಗೊಂಡವು. ಪ್ರತಿ ವರುಷ ಪಿ.ಯು.ಸಿ ದ್ವಿತೀಯ ಕನ್ನಡದಲ್ಲಿ ಹೆಚ್ಚಿನ ಅಂಕ ಪಡೆದವರಿಗೆ ಪ್ರತಿಭಾ ಪುರಸ್ಕಾರ ನೀಡುವುದು ಹಾಗೂ ಡಿ.ವಿ.ಜಿ ಕೃತಿ ಬದುಕು ಕುರಿತು ಚಿಂತನ, ಸಾಮಾಜಿಕ ಜವಾಬ್ದಾರಿ, ಸೇವಾಕ್ಷೇತ್ರ ಕುರಿತು ವಿಶೇಷ ಉಪನ್ಯಾಸ ಏರ್ಪಡಿಸುತ್ತಾ ಬಂದಿರುವರು.

ಎಲ್. ಬಸವರಾಜು ಪ್ರತಿಷ್ಠಾನ ಕೋಲಾರದಲ್ಲಿ ೨೦೦೦ರಲ್ಲಿ ಸ್ಥಾಪಿತವಾಗಿದ್ದು, ಜಿಲ್ಲೆಯ ಹಿರಿಯ ಸಾಹಿತ್ಯ ಸಂಶೋಧಕರಾದ ಎಲ್.ಬಸವರಾಜುರವರ ವಿಚಾರ, ಯೋಜನೆಗಳನ್ನೂ ಸಾಕಾರಗೊಳಿಸುವುದರತ್ತ ಶ್ರಮಿಸುತ್ತಿದೆ. ಪ್ರತಿಷ್ಠಾನವು ಪ್ರತಿ ವರುಷ ನಾಡಿನ ಧೀಮಂತ ಚೇತನರ ಕೃತಿ ಸಾಧನೆ ಕುರಿತು ಚಿಂತನ-ಚರ್ಚೆ ಹಾಗೂ ಎಲ್.ಬಸವರಾಜು ಪ್ರಶಸ್ತಿ ರೂ.ಹತ್ತು ಸಾವಿರ ನಗದು ಬಹುಮಾನದ ಗೌರವ ನೀಡುತ್ತಿದೆ. ಇದುವರೆಗೆ ಮುದೇನೂರ ಸಂಗಣ್ಣ (೨೦೦೧), ಕಿ.ರು.ನಾಗರಾಜ (೨೦೦೨), ಎಸ್.ಕೆ.ಕರೀಂಖಾನ್ (೨೦೦೩), ಕೆ.ರಾಮದಾಸ್ (೨೦೦೪) ಅವರಿಗೆ ಡಾ.ಎಲ್.ಬಸವರಾಜು ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಪ್ರತಿಷ್ಠಾನ, ಮಾಸ್ತಿಯಲ್ಲಿದ್ದು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಧಿಕಾರಿ ಕಾರ್ಯಾಲಯ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಇವರ ಸಂಯುಕ್ತ ಆಶ್ರಯದಲ್ಲಿ ಪ್ರತಿ ವರುಷ ಸಾಹಿತ್ಯ ಸಾಂಸ್ಕೃತಿಕ, ಚಿಂತನಶೀಲ ಉತ್ಸವಗಳನ್ನು ಜಿಲ್ಲೆಯಾದ್ಯಂತ ನಡೆಸುತ್ತಿದ್ದಾರೆ. ಜಿಲ್ಲೆಯಲ್ಲಿ ಸಾಹಿತ್ಯಪರ ಚಿಂತನಗಳ ಚಟುವಟಿಕೆಗಳನ್ನು ಹೆಚ್ಚಿಸುತ್ತಾ ಬಂದಿರುವ ಜಿಲ್ಲೆಯ ಪ್ರಮುಖ ಕಾರ್ಯ ಸಂಸ್ಥೆ ಇದಾಗಿದೆ.

ಕೋಲಾರ ಜಿಲ್ಲೆ ಚುಟುಕು ಸಾಹಿತ್ಯ ಪರಿಷತ್ತು, ಕೋಲಾರದಲ್ಲಿ ೧೯೯೪ರಲ್ಲಿ ಸ್ಥಾಪಿತವಾಗಿದ್ದು ಕೋಲಾರ ಜಿಲ್ಲೆಯಾದ್ಯಂತ 'ಚುಟುಕು' ಪ್ರಕಾರವನ್ನು ಜನಪ್ರಿಯಗೊಳಿಸುತ್ತಾ ತಾಲ್ಲೂಕು ಸಮಿತಿ, ಜಿಲ್ಲಾ ಸಮಿತಿ ರಚಿಸಿ ಸಕ್ರಿಯವಾಗಿ ಚುಟುಕು ರಚನೆಗೆ ಒತ್ತಾಸೆ ಮೂಡಿಸುತ್ತಾ ಬಂದಿದೆ. ಈಗಾಗಲೇ ಎರಡು ಜಿಲ್ಲಾಮಟ್ಟದ ಸಮ್ಮೇಳನ ನಡೆಸಿದ್ದು, ಚುಟುಕು ಚಿಂತನ, ಚುಟುಕು ವಸಂತ, ಚುಟುಕು ಚಿತ್ತಾರ, ಚುಟುಕು ಸಂಭ್ರಮ ಮುಂತಾದ ವೈವಿಧ್ಯಮಯ ಚಟುವಟಿಕೆಗಳಿಂದ ಎಲ್ಲರ ಅಭಿಮಾನಗಳಿಸಿರುತ್ತದೆ. ಚುಟುಕು ಕಾವ್ಯಾಂಜಲಿ ಎಂಬ ವಿಶೇಷಾಂಕ ಪ್ರಕಟಣೆ ಮಾಡಿದೆ.

ವನಿತಾ ಮೈತ್ರಿಕೂಟ (ರಿ) ೧೯೭೬ರಲ್ಲಿ ಸ್ಥಾಪಿತವಾಗಿದ್ದು ಮಹಿಳಾ ಸಂಘಟನೆ – ಮಹಿಳೆಯರ ಸುಪ್ತ ಪ್ರತಿಭೆಯನ್ನು ಬೆಳಕಿಗೆ ತರುವಲ್ಲಿ ವಿಶೇಷ ಆಸಕ್ತಿ ವಹಿಸಿದೆ. ಸಾಹಿತ್ಯ, ಕ್ರೀಡೆ, ಲಲಿತಕಲಾ ಕ್ಷೇತ್ರಗಳಲ್ಲಿ ನಿರಂತರ ಚಟುವಟಿಕೆ – ಶಿಕ್ಷಣ, ಸಾಮಾಜಿಕ ಸಾಂಸ್ಕೃತಿಕ ಕ್ಷೇತ್ರದಲ್ಲಿ ವಿಶೇಷ ಕಾರ್ಯಕ್ರಮ, ಆರೋಗ್ಯ-ಸಾಹಿತ್ಯಸಂಸ್ಕೃತಿಗಳ ಕುರಿತು ಶಿಬಿರ, ಸ್ಪರ್ಧೆಗಳನ್ನು ಏರ್ಪಡಿಸುತ್ತಿದೆ ಸಂಸ್ಥೆಯ ವಿಶಾಲ ಸುಂದರ ಸುಸಜ್ಜಿತ ಕಟ್ಟಡವು ನಗರದ ಹಳೇಬಡಾವಣೆಯಲ್ಲಿ ನಿರ್ಮಾಣಗೊಂಡಿದ್ದು ಜಿಲ್ಲಾ ಕೇಂದ್ರದ ಸಮಾಜದ ಪ್ರಮುಖ ಕೇಂದ್ರವಾಗಿ ಕ್ರಿಯಾಶೀಲವಾಗಿರುವುದು.

ಸಜ್ಜನ ಸೇವಾ ಪ್ರತಿಷ್ಠಾನ (ರಿ) ೨೦೦೨ರಲ್ಲಿ ಸ್ಥಾಪಿತವಾಗಿದ್ದು ಜಿಲ್ಲೆಯಾದ್ಯಂತ ಆರೋಗ್ಯ – ಚಿಕಿತ್ಸಾ – ಶಿಬಿರ, ಸಂಸ್ಕೃತಿ – ಪರಂಪರಾಗತ ಉತ್ಸವಗಳನ್ನು ನಡೆಸುವುದು ಈ ಸಂಸ್ಥೆಯ ಮುಖ್ಯ ಉದ್ದೇಶ. ಪ್ರತಿ ವರುಷ 'ಸಜ್ಜನ ಸೇವಾ ಭೂಷಣ' ಪ್ರಶಸ್ತಿ ಗೌರವವನ್ನು ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಿಗೆ ಪ್ರದಾನ ಮಾಡುತ್ತಿದೆ. ಶಿಕ್ಷಣ ರಂಗದಲ್ಲಿ ಸಾಂಸ್ಕೃತಿಕ ರಂಗದಲ್ಲಿ ಸಮಾಜ ಸೇವಾ ಕ್ಷೇತ್ರದಲ್ಲಿ ವಿಶೇಷ ಸ್ಥಾನಮನ ಹೊಂದಿರುತ್ತದೆ.

ಕೆ.ಜಿ.ಎಫ್.ನ ಕನ್ನಡ ಸಂಘ (ರಿ) ೧೯೭೨ರಲ್ಲಿ ನಾಲ್ಕು ವಿವಿಧ ಸಂಘ-ಸಂಸ್ಥೆಗಳು ಒಟ್ಟಾಗಿ ಕನ್ನಡ ಸಂಘವಾಗಿದ್ದು ನಿರಂತರ ಗಡಿನಾಡಿನಲ್ಲಿ ಕನ್ನಡ ಪರ ಚಟುವಟಿಕೆಗಳನ್ನು ನಡೆಸುತ್ತಾ ಬಂದಿರುವರು. ಸರಕಾರದಿಂದ ೧೦೦' x ೮೫' ವಿಸ್ತೀರ್ಣಗಳ ವಿಶಾಲ ನಿವೇಶನ ಹೊಂದಿದ್ದು ಸುಸಜ್ಜಿತ ಕಾರ್ಯಾಲಯ – ಗ್ರಂಥಾಲಯ ಹೊಂದಿದೆ. 'ಹೊಂಗಳಸ' 'ಪಲ್ಲವ' – ನೆನಪಿನ ಸಂಚಿಕೆಗಳನ್ನು ಪ್ರಕಟಿಸಿದ್ದು ನಾಟಕೋತ್ಸವ, ಸಾಹಿತ್ಯ ಚಟುವಟಿಕೆ, ಚಿತ್ರಕಲಾ ಮಹೋತ್ಸವ, ಸಂಗೀತೋತ್ಸವ, ರಾಜ್ಯೋತ್ಸವ ಮುಂತಾದ ಕಾರ್ಯಕ್ರಮಗಳಿಂದ ಗಡಿನಾಡಿನಲ್ಲಿ ಕನ್ನಡ ಉಳಿಸಿ ಬೆಳೆಸುತ್ತಲಿದೆ.

ಬೆಮೆಲ್ ನಗರ ಕೆ.ಜಿ.ಎಫ್.ನ ಕನ್ನಡ ಮಿತ್ರರು ಸಂಸ್ಥೆ, ಬಿ.ಎಂ.ಶ್ರೀ ಭವನ, ನಾಟಕ ರತ್ನ ಗುಬ್ಬಿ ವೀರಣ್ಣ ರಂಗಮಂದಿರ ಸೇರಿದಂತೆ ಸ್ವಂತ ಕಟ್ಟಡ ಹೊಂದಿದ್ದು ಸುಸಜ್ಜಿತ ಗ್ರಂಥ ಭಂಡಾರ ಉಚಿತ ವಾಚನಾಲಯವಿದೆ. ಹವ್ಯಾಸಿ ರಂಗಭೂಮಿಗೆ ಹೊಸ ಸ್ಫೂರ್ತಿ ನೀಡಿದ ಸಂಸ್ಥೆಯದು. ಮಹಿಳಾ ನಾಟಕೋತ್ಸವ. ಮಕ್ಕಳ ನಾಟಕೋತ್ಸವ, ದ್ವಾಶಾ.ವಂ. ನಾಟಕೋತ್ಸವ, ರಾಜ್ಯೋತ್ಸವ ವಿವಿಧ ಸ್ಪರ್ಧೆ ನಡೆಸುತ್ತಾ ನಾಡಿನಲ್ಲಿಯೇ ಹೆಸರುವಾಸಿಯಾಗಿದ್ದು, ಸಂಸ್ಥೆಯ ಸದಸ್ಯರು ರಾಷ್ಟ್ರೀಯ ಮಟ್ಟದಲ್ಲಿ ನಾಟಕ ಸ್ಪರ್ಧೆಗಳಲ್ಲಿ ಬಹುಮಾನಿತರಾಗಿದ್ದಾರೆ. 'ವಸುಂಧರ' ವಿಶೇಷ ಸಂಚಿಕೆಗಳನ್ನು ಪ್ರಕಟಿಸುತ್ತಾ ಬಂದಿರುವರು. ಗಡಿನಾಡ ಪ್ರದೇಶದ ಕನ್ನಡಿಗರ ಎರಡು ಕಣ್ಣುಗಳಿದ್ದಂತೆ ಈ ಸಂಸ್ಥೆಗಳು ತಲೆಎತ್ತಿವೆ.

ಚಾಲುಕ್ಯ ಕಲಾ ಕೇಂದ್ರ ೧೯೮೨ರಲ್ಲಿ ಸ್ಥಾಪಿತವಾಯಿತು. ವಾಸ್ತು ಮತ್ತು ಶಿಲ್ಪಕಲಾ ರಂಗದಲ್ಲಿ ಚಾಲುಕ್ಯರ ಕೊಡುಗೆ ಅಪಾರ. ಈ ಪರಂಪರೆಯ ಲಾಂಛನ ಹೆಸರನ್ನು ಹೊಂದಿರುವ ಚಾಲುಕ್ಯ ಕಲಾಕೇಂದ್ರ ಕೋಲಾರ ಜಿಲ್ಲೆಯ ಪ್ರಮುಖ ಏಕೈಕ ಚಿತ್ರಕಲಾವಿದರ, ಛಾಯಾಚಿತ್ರಕಾರರ ಒಕ್ಕೂಟ. ಪ್ರತಿ ವರುಷ ಕಲಾ ಮಹೋತ್ಸವ ನಡೆಸುತ್ತಾ ಬಂದಿದ್ದು – ಶಾಲಾ ಮಕ್ಕಳಿಗಾಗಿ ಸ್ಥಳದಲ್ಲಿ ಚಿತ್ರರಚನಾ ಸ್ಪರ್ಧೆ, ಸಂಸ್ಥೆ ಕಲಾವಿದರ ಕಲಾಕೃತಿಗಳ ಪ್ರದರ್ಶನ, ಛಾಯಾಚಿತ್ರ ಪ್ರದರ್ಶನ, ನಾಡಿನ ಹಿರಿಯ ಕಲಾವಿದರ – ಛಾಯಾಚಿತ್ರ ಕಲಾವಿದರನ್ನು ಕರೆದು ಅವರಿಂದ ಪ್ರಾತ್ಯಕ್ಷಿಕೆ – ಚಿಂತನ, ನಡೆಸುತ್ತಾ ಬಂದಿರುವರು.

ಕೆ.ಜಿ.ಎಫ್.ನ ಬೆಮೆಲ್ ನಗರದಲ್ಲಿ ಯಕ್ಷಗಾನ ಕಲಾವೃಂದ – ೧೯೮೦ರಲ್ಲಿ ಸ್ಥಾಪನೆಯಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದ ಬೆಮೆಲ್ ಕೆಲಸಗಾರರು ಒಂದಾಗಿ 'ಯಕ್ಷಗಾನ' ಕಲೆಯನ್ನು ಉಳಿಸಿ ಜಿಲ್ಲೆಯಲ್ಲಿ ಯಕ್ಷಗಾನ ಕಲೆಯನ್ನು ಸಮರ್ಥವಾಗಿ ಪರಿಚಯಿಸುತ್ತಾ ಬಂದಿರುವರು. ಧರ್ಮಸ್ಥಳ ಧರ್ಮಾಧಿಕಾರಿಯಿಂದ ಬೆಂಬಲ – ಪ್ರೋತ್ಸಾಹ ದೊರೆತು – ಸದಾ ಕ್ರಿಯಾಶೀಲರಾಗಿರುವರು.

ಗೌರಿಬಿದನೂರಿನ ಕನ್ನಡ ಯುವಕ ಸಂಘ ೧೯೭೪ರಲ್ಲಿ ಆರಂಭವಾಗಿದ್ದು ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕುರಿತು ಭಾಷಣಗಳು, ಪ್ರಶಸ್ತಿ ವಿಜೇತರಿಗೆ ಸನ್ಮಾನ, ಕೃತಿಗಳ ಬಗ್ಗೆ ವಿಚಾರ ಸಂಕಿರಣ, ಪುಸ್ತಕ ಪ್ರದರ್ಶನ, ಮಾರಾಟ ಮುಂತಾದ ಸಾಹಿತ್ಯಪರ ಕಾರ್ಯಗಳನ್ನು ಹಮ್ಮಿಕೊಳ್ಳುತ್ತಿದೆ. ೧೯೭೬ರ ಎರಡನೇ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಯುವಕ ಸಂಘ ಯಶಸ್ವಿಯಾಗಿ ನೆರವೇರಿಸಿತು. ನಾಟಕ ಕಲೆಗೂ ಸಂಸ್ಥೆ ಪ್ರೋತ್ಸಾಹಿಸುತ್ತಿದ್ದು, ಸ್ವತಃ ನಾಟಕ ಕಾರ್ಯಕ್ರಮ ನೀಡಿದೆಯಲ್ಲದೆ ರಾಜ್ಯಾದ್ಯಂತದ ಕಲಾವಿದರನ್ನು ಆಹ್ವಾನಿಸಿ ಕಾರ್ಯಕ್ರಮ ನೀಡಿದೆ. ಗೋಕಾಕ್ ಚಳವಳಿಯಲ್ಲಿಯೂ ಸಕ್ರಿಯ ಪಾತ್ರವಹಿಸಿದೆ. ಸಂಘದ ಸ್ಥಾಪಕರಲ್ಲಿ ಒಬ್ಬರಾದ ಕಾ.ನ. ಶ್ರೀನಿವಾಸ್ ಅವರಿಗೆ ರಾಜ್ಯ ನಾಟಕ ಅಕಾಡಮಿಯಿಂದ ಪ್ರಶಸ್ತಿ ಬಂದಿದೆಯಲ್ಲದೆ ಶ್ರೀಯುತರೇ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿದ್ದಾಗ ೨೦೦೨ರಲ್ಲಿ ಗೌರಿಬಿದನೂರಿನಲ್ಲಿ ಕೋಲಾರ ಜಿಲ್ಲಾ ಏಳನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸಂಘಟಿತವಾಗಿತ್ತು.

ಚಿಂತಾಮಣಿಯ "ಸಾಹಿತ್ಯಕೂಟ" ಕಾರ್ಯಕ್ರಮ ರಾಜ್ಯದಲ್ಲಿಯೇ ವಿಶಿಷ್ಟವಾದುದು ೧೯೪೮ರಲ್ಲಿ ಆರಂಭವಾದ ಸಂಸ್ಥೆ ನಿರಂತರವಾಗಿ ಪ್ರತಿವಾರವೂ (ಶನಿವಾರಗಳಂದು) ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದೆ. ಈ ಯೋಜನೆ ವೈ.ಎಸ್. ಗುಂಡಪ್ಪನವರದ್ದಾಗಿದ್ದು, ಅವರು ನಿಧನರಾಗುವವರೆಗೆ (ಜೂನ್ ೧೯೯೮) ೨೫೬೭ ಕಾರ್ಯಕ್ರಮಗಳನ್ನು ರೂಪಿಸಿ ನಡೆಸಿಕೊಟ್ಟಿದ್ದು ನಂತರವೂ ಮುಂದುವರೆದು ಬರುತ್ತಿದೆ. ಸ್ಥಳೀಯ ಪ್ರತಿಭೆಗೇ ಹೆಚ್ಚು ಪ್ರೋತ್ಸಾಹ ನೀಡಿದ್ದಾದರೂ ಗೋಪಾಲಕೃಷ್ಣ ಅಡಿಗರೂ ಸೇರಿದಂತೆ ರಾಜ್ಯದ ಅನೇಕ ಗಣ್ಯ ಸಾಹಿತಿ–ಕಲಾವಿದರು ಕಾರ್ಯಕ್ರಮದಲ್ಲಿ ಪಾಲುಗೊಂಡಿದ್ದಾರೆ. ಚಿಂತಾಮಣಿ ಗೆಳೆಯರ ಬಳಗ ಸಹ ಅನೇಕ ಸಾಂಸ್ಕೃತಿಕ, ಸಾಹಿತ್ಯ ಸಂಬಂಧೀ ಕಾರ್ಯಕ್ರಮ ನಡೆಸುತ್ತಿದೆ.

## ರಂಗಭೂಮಿ

ಬಂಗಾರಪೇಟೆಯ ಮಡಿವಾಳ ಗ್ರಾಮದ ೧೨೮೦ರ ಜಯಂಗೊಂಡ ಚೋಳ ಇಳವೆಂಗಿರಾಯನ ಶಾಸನ ಅಲ್ಲಿ ಜಯಾಂಬು ನಾಯ್ಕರ ದೇವಾಲಯದೊಂದಿಗೆ ನೃತ್ಯಮಂಟಪ ಕಟ್ಟಿಸಿದ್ದಲ್ಲದೆ ಹಲವಾರು ಕಲಾವಿದರೊಂದಿಗೆ ಪೌರಾಣಿಕ ನಾಟಕಗಳನ್ನು ಕಲಿಸುವ ರಂಗ ನಿರ್ದೇಶಕನನ್ನು ಹೆಸರಿಸಿ ಭೂದಾನ ನೀಡಿರುವುದನ್ನು ದಾಖಲಿಸುತ್ತದೆ. ಎಂದರೆ ಹದಿಮೂರನೇ ಶತಮಾನದ ವೇಳೆಗೆ ಜಿಲ್ಲೆಯಲ್ಲಿ ಪೌರಾಣಿಕ ನಾಟಕ ಆಡುತ್ತಿದ್ದ ಬಗ್ಗೆ ಪ್ರಥಮ ಉಲ್ಲೇಖವಾಗಿದೆ. ಶಾಸನ ತಮಿಳಿನಲ್ಲಿರುವುದರಿಂದ (ಬಂಗಾರಪೇಟೆ ೩೮೨) ಹಾಗೂ ಈ ಪ್ರದೇಶದಲ್ಲಿ ತಮಿಳು ಭಾಷಿಕರು ಇದ್ದುದರಿಂದ ನಾಟಕದ ಭಾಷೆಯೂ ತಮಿಳಾಗಿರಬಹುದು. ಆದರೆ ನಾಟಕದ ಸ್ವರೂಪ ತಿಳಿದು ಬರುವುದಿಲ್ಲ. ವಿಜಯನಗರದ ಅಂತಿಮಕಾಲದಲ್ಲಿ ಕವಿಗಳು 'ಯಕ್ಷಗಾನ' ಕೃತಿಗಳನ್ನು ಬರೆದಿರುವುದು ಕಂಡುಬರುವುದರಿಂದ ಮೇಲಿನ ಮಡಿವಾಳ ಗ್ರಾಮದಲ್ಲಿ ಕಟ್ಟಿಸಿದ ನೃತ್ಯಮಂಟಪದಲ್ಲಿ ಸ್ಥಳೀಯ ಭಾಷೆಯ 'ಯಕ್ಷಗಾನ'ದ ಮೊದಲ (ಅಥವಾ ಹಿಂದಿನ) ರೂಪದಲ್ಲಿ ನಾಟಕ ಆಡುತ್ತಿದ್ದಿರಬಹುದು. ಸುಗಟೂರು ಅರಸ ಮುಮ್ಮಡಿ ತಮ್ಮ ಭೂಪಾಲ (ಸುಮಾರು ೧೬೧೪ ಕ್ರಿಶ) ಒಂದು ಯಕ್ಷಗಾನ ಕೃತಿಯನ್ನು ಆಶುವಾಗಿ ಹೇಳಿದನೆಂದು ತಿಳಿದುಬರುತ್ತದೆ. ಆದರೆ ಕೃತಿ ಲಭ್ಯವಿಲ್ಲ. ಚಿಕ್ಕಬಳ್ಳಾಪುರದಲ್ಲಿ ೧೭೨೦ರಲ್ಲಿದ್ದ ಜೈನಕವಿ ಅಂತಪ್ಪ 'ಅಹಿಂಸಾ ಕಥೆ' ಎಂಬ ಯಕ್ಷಗಾನ ಕೃತಿ ರಚಿಸಿದ್ದಾನೆ. ನಂದಿ ಕ್ಷೇತ್ರದಲ್ಲಿದ್ದ ನಂದಿನಾಥ ೧೭೩೫ರ ವೇಳೆಗೆ ವಲ್ಲಿಕಂಠಾಭರಣವನ್ನು, ಕೋಲಾರ ತಾಲೂಕಿನ ಕುರಗಲ್ಲು ಗ್ರಾಮದ ಕಾಶೀರಾಮ

(೧೭೫೦) ಶ್ರೀಗಿರೀಶ್ವರವರ ಚರಿತ್ರೆಯನ್ನು, ಚಿಕ್ಕಬಳ್ಳಾಪುರದ ಬಾಡಾಲ ಸುಬ್ರಹ್ಮಣ್ಯ (೧೮೩೦) ತಾರಾಶಶಾಂಕವನ್ನು ರಚಿಸಿದ್ದು ಇವೆಲ್ಲವೂ ಯಕ್ಷಗಾನ ಕೃತಿಗಳಾಗಿವೆ. ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಶ್ರೀನಿವಾಸಪುರದ ಲೋಕನಾಥಕವಿ ಧ್ರುವ ಚರಿತ್ರೆ ಎಂಬ ಯಕ್ಷಗಾನ ಕೃತಿ ರಚಿಸಿದ್ದಾರೆ.

ಜಿಲ್ಲೆಯಲ್ಲಿ ೨೦ನೇ ಶತಮಾನ ಆರಂಭದಲ್ಲಿಯೂ ಪೌರಾಣಿಕ ನಾಟಕಗಳ ರಚನೆ, ಮೈಸೂರು ಅರಮನೆಯ ಕೃಪಾ ಪೋಷಣೆ ಇದ್ದಿತಾದರೂ ಜಿಲ್ಲೆಯ ಮುಳಬಾಗಿಲನವರೆಂದು ತಿಳಿದಿರುವ ಧೋಂಡೋ ನರಸಿಂಹ ಮುಳಬಾಗಿಲ ಅವರು ೧೮೮೫–೯೨ರ ವೇಳೆಯಲ್ಲಿ ವೇಣೀಸಂಹಾರ, ಮೃಚ್ಛಕಟಿಕ, ಉತ್ತರರಾಮಚರಿತ್ರೆ ಹಾಗೂ ಮಾಳವಿಕಾಗ್ನಿಮಿತ್ರಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರತಿ ಗ್ರಂಥಗಳಿಗೆ ವಿಸ್ತಾರವಾದ ಮುನ್ನುಡಿಯಿದ್ದು ಮೂಲ ನಾಟಕದ ಬಗ್ಗೆ, ಅನುವಾದದ ಬಗ್ಗೆ, ಕನ್ನಡ ಭಾಷೆ ದೇಶಗಳಿಗೆ ಒದಗಿದ ಸ್ಥಿತಿ ಬಗ್ಗೆ ಚರ್ಚಿಸಿದ್ದಾರೆ. ವೇಣಿಸಂಹಾರ ಜನಪ್ರಿಯವಾಗಿದ್ದು ಹಿಂದೆಯೇ ಐದು ಮುದ್ರಣಗಳನ್ನು ಕಂಡಿವೆ.

ಗೌರಿಬಿದನೂರು ತಾಲೂಕಿನ ಇಡಗೂರು ರುದ್ರಕವಿ ಜಿಲ್ಲೆಯ (೧೮೪೦ರ ಸುಮಾರು) ಆಧುನಿಕ ಕಾಲದ ನಾಟಕ ಕ್ಷೇತ್ರದ ಆದ್ಯನೆಂದು ಪರಿಗಣಿಸಬಹುದು. ಮೊದಲಿಗೆ ಗುಬ್ಬಿಯಲ್ಲಿ ಸಾಹಿತ್ಯ ವ್ಯಾಸಂಗ ಮಾಡಿ ಪುರಾತನ ಕಾವ್ಯಗಳ ವಾಚನ ಮಾಡುತ್ತಿದ್ದು ನಂತರ ಜಿಲ್ಲೆಗೆ ಮರಳಿ ಬಂದು ಇಡಗೂರಿನ ಬಳಿಯ ಹೊಸೂರು ಭಟ್ಟು ಮೂರ್ತಿಯಲ್ಲಿ ಇನ್ನಷ್ಟು ಪಾಂಡಿತ್ಯ ಪಡೆದು ಮೊದಲಿಗೆ 'ಶಿವನಾಟಕ' ಎಂಬ ಕನ್ನಡ ಕೃತಿ ರಚಿಸಿದ. ಇದರ ಕಾಲ ೧೮೪೧ ಆಗಿದ್ದು ರುದ್ರಕವಿ ನಾಟಕ ರಚನೆಯೊಂದಿಗೆ ರಂಗಭೂಮಿ ಕಲಾವಿದನಾಗಿಯೂ ರೂಪುಗೊಂಡು ೧೮೫೦ರ ಸುಮಾರಿನಲ್ಲಿ 'ಇಡಗೂರು ಭೀಮೇಶ್ವರ ಕೃಪಾ ಪೋಷಿತ ನಾಟಕ ಸಂಘ' ಸ್ಥಾಪಿಸಿ 'ಶಿವನಾಟಕ' ಕೃತಿಯನ್ನು ಪ್ರಯೋಗಿಸತೊಡಗಿದ. ಈ ನಾಟಕ ೧೮೫೦ರಲ್ಲಿ ಮೈಸೂರ ಅರಮನೆಯಲ್ಲಿ ಮುಮ್ಮಡಿಯವರ ಮುಂದೆ ಪ್ರದರ್ಶಿತವಾಗಿ ಪ್ರಸನ್ನರಾದ ರಾಜರಿಂದ 'ಕರ್ನಾಟಕಾಂದ್ರೋಭಯ ಭಾಷಾ ಕವಿತಾ ವಿಶಾರದ' ಎಂಬ ಬಿರುದು ಪಡೆದ. ತೆಲುಗು ಪ್ರದೇಶವಾದ ಕೋಲಾರದ ಈ ಭಾಗದಲ್ಲಿ ಕನ್ನಡದ 'ಶಿವನಾಟಕ' ಹೆಚ್ಚು ಪ್ರಚಾರವಾಗದೇ ೧೮೫೧ರಲ್ಲಿ ತೆಲುಗಿನಲ್ಲಿ 'ಆಂಧ್ರ ಯಕ್ಷಗಾನ ಮಾರ್ಕಂಡೇಯ ಚರಿತಂ' ಬರೆದ. ಆದರೆ ಇದರ ದೃಶ್ಯ ವೈಭವದಿಂದಾಗಿ ಕವಿಯ ಆಶ್ರಯದಾತ ಬೆಳ್ಳಾವೆ ಮುರಡಪ್ಪಶೆಟ್ಟರ ಇಷ್ಟದಂತೆ ಕನ್ನಡಕ್ಕೂ ಅನುವಾದಿಸಿ ಹಲವಾರು ಬಾರಿ ಪ್ರಯೋಗಿಸಿದ. 'ಶತನಾಟಕಂ ರುದ್ರಪ್ಪ' ಎಂದೇ ಜನ ಮನ್ನಣೆ ಪಡೆದಿದ್ದ ಈತ ಕರ್ನಾಟಕವಲ್ಲದೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳಲ್ಲೂ ತನ್ನ ನಾಟಕ ತಂಡವನ್ನು ಒಯ್ದು ಪ್ರದರ್ಶನಗಳನ್ನು ನೀಡಿದ. ಜೀವಿತಾವಧಿಯಲ್ಲಿ ಸಾಕಷ್ಟು ಕಷ್ಟನಷ್ಟ ಅನುಭವಿಸಿದ್ದು ಹೊನ್ನಾಪುರದ ಚಿಕ್ಕಹೊನ್ನೇಗೌಡ ಮುಂತಾದವರು ಸಕಾಲದಲ್ಲಿ ಆಶ್ರಯ ನೀಡಿದ್ದರು. ರುದ್ರಕವಿ ೧೮೮೭ರಲ್ಲಿ ನಿಧನನಾದ.

ಇದೇ ವೇಳೆಗೆ ಮಾಲೂರಿನಲ್ಲಿ ೧೯೦೫ರಲ್ಲಿ ನಾಟಕ ಕಂಪನಿಯೊಂದು ವೀರಭದ್ರಪ್ಪ ಎಂಬುವವರಿಂದ ಸ್ಥಾಪನೆಯಾಗಿ ಭಕ್ತಪ್ರಹ್ಲಾದ, ಭಕ್ತ ಮಾರ್ಕಂಡೇಯ, ಸದಾರಮೆ ಮುಂತಾದ ನಾಟಕಗಳನ್ನು ಆಡುತ್ತಿತ್ತೆಂದು ತಿಳಿದುಬರುತ್ತದೆ. ಇವರು ಅಂದಿಗೆ ಹೊಸದೆನ್ನಬಹುದಾದ, ಹಾಗೂ ಬೆಲೆಬಾಳುವ (ನಾಟಕ ಹಾಗೂ ಸ್ವಂತಕ್ಕೆ ಸಂಬಂಧಿಸಿದ) ವಸ್ತುಗಳನ್ನು ಇರಿಸಿಕೊಂಡಿದ್ದರು. ನೂರಾರು ಗ್ರಾಮಫೋನ್ ರೆಕಾರ್ಡುಗಳನ್ನು ಸಂಗ್ರಹಿಸಿದ್ದರು. ಮುಂದೆ ೧೯೧೯ರ ಸುಮಾರಿನಲ್ಲಿ ಮಾಲೂರಿನ ಎಚ್.ತಿಮ್ಮಯ್ಯ ಅವರು "ಶ್ರೀ ಮಾರ್ಕಂಡೇಯ ಸ್ವಾಮಿ ಕೃಪಾ ಪೋಷಿತ ನಾಟಕ ಮಂಡಳಿ" ಆರಂಭಿಸಿ ಆಡಿದ ನಾಟಕಗಳಲ್ಲಿ ಮನ್ಮಥ ವಿಜಯ, ಪಾಂಡವ ವಿಜಯ, ಭಕ್ತ ಮಾರ್ಕಂಡೇಯ, ಸದಾರಮೆ, ಭಕ್ತ ಕಬೀರ್‌ದಾಸ್ ಜನಪ್ರಿಯತೆಗಳಿಸಿತು. ಮಂಡಳಿಯಲ್ಲಿ ಬಿ.ಭದ್ರಯ್ಯ, ರಾಣಿಪಾತ್ರದ ಕೆ.ಪಿಳ್ಳಾಚಾರ್, ಪದ್ಮಶಾಲೆ ಕೃಷ್ಣಪ್ಪ ನೆಲಮಂಗಪ್ಪ ಬ್ಯಾಟರಾಯಪ್ಪ ವಿ.ಶ್ರೀನಿವಾಸಯ್ಯ, ಕೈಕಲುವೆಂಕಟಪ್ಪ ಮಾದಯ್ಯನವರ ಬಸಪ್ಪ ಶೆಟ್ಟಿ, ಶ್ರೀಕಂಠಪ್ಪ ಚಿನ್ನೋಜಿರಾವ್, ಬಿ.ಎನ್.ಲಿಂಗಪ್ಪ ಬಿ.ಚನ್ನಪ್ಪ ವಾಗಟದ ಪಾರ್ಥಸಾರಥಿ ಅಯ್ಯಂಗಾರ್, ಪೈಲ್ವಾನ್ ಸತ್ತಾರ್‌ಸಾಬ್, ಗೌರಿಬಿದನೂರು ಮುನಿಶಾಮಪ್ಪ ರಾಣಿ ಪಾರ್ಟು ಬಾಬು ಮುಂತಾದ ನಟರಿದ್ದರು. ೧೯೩೦ರ ಸುಮಾರಿಗೆ ನಾಟಕ ಮಂಡಲಿಯನ್ನು ಬಿ.ಭದ್ರಯ್ಯ ಅವರು ವಹಿಸಿಕೊಂಡು ಆವರೆಗೆ ಸರಳವಾಗಿದ್ದ ರಂಗ ಸಜ್ಜಿಕೆಗಳಿಗೆ ಬದಲು ಮುಂಬಯಿಯಿಂದ ಪ್ರಖ್ಯಾತ ಕಲಾವಿದರನ್ನು ಕರೆಸಿ ಪರದೆ, ತೆರೆಗಳನ್ನು ಭವ್ಯವಾಗಿ ರೂಪಿಸಿದರು. ಬೆಂಗಳೂರಿನ ಲಕ್ಷ್ಮಸಾನಿ ಎಂಬಾಕೆ ಈ ರಂಗಸಜ್ಜಿಕೆಗಳ ಚೆಲುವಿನಿಂದಾಗಿ ಚಿಕ್ಕಬಳ್ಳಾಪುರದ ತಮ್ಮ ಕಂಪನಿಗೆ ಬಾಡಿಗೆಗೆ ತೆಗೆದುಕೊಂಡುಹೋಗಿದ್ದು ಮರಳಿಕೊಡದೆ ಕಂಪನಿಯ ಮಾಲೀಕರಿಗೆ ನಷ್ಟವಾಗಿ 'ಶ್ರೀ ಮಾರ್ಕಂಡೇಯಸ್ವಾಮಿ ಕೃಪಾ ಪೋಷಿತ ನಾಟಕ ಮಂಡಲಿ' ಸ್ಥಗಿತವಾಯಿತೆಂದು ತಿಳಿದುಬರುತ್ತದೆ.

ಮಾಲೂರಿನಲ್ಲಿ ನಡೆದ ಇನ್ನಿತರ ಪ್ರಯತ್ನಗಳೆಂದರೆ ಕಾಮನ ಹಬ್ಬದ ಕಾಲದಲ್ಲಿ ಎಂ.ಬಿ.ಶಾಮಣ್ಣ, ಬಿ.ವೀರಾಶೆಟ್ಟಿ ಮುಂತಾದವರು 'ಸರಸೀ ವಿನೋದ ಮಿತ್ರ ಮಂಡಳಿ' ಸ್ಥಾಪಿಸಿ ಸದಾರಮೆ ಸೇರಿದಂತೆ ಹಲವಾರು ನಾಟಕಗಳನ್ನು ಪ್ರಯೋಗಿಸಿದ್ದುಂಟು. ೧೯೫೨-೫೩ರಲ್ಲೇ ಮಾಲೂರಿನ ಪ್ರೌಢಶಾಲಾ ಬಾಲಕಿಯರು ಕೇವಲ ಪುರಂದರದಾಸರ ಕೃತಿಗಳನ್ನು ಬಳಸಿ ಸಂಭಾಷಣೆ ಇಲ್ಲದಂತೆ 'ಕೃಷ್ಣನ ಕಾಟ' ಎಂಬ ಗೀತನಾಟಕ ಅಭಿನಯಿಸಿದ್ದರು. ಗ್ರಾಮಾಂತರ ಪ್ರದೇಶಗಳಲ್ಲೂ ನಾಟಕದ 'ಮೇಷ್ಟ್ರು'ಗಳನ್ನು ಕರೆಸಿಕೊಂಡು ನಾಟಕ ಅಭ್ಯಸಿಸಿ ಆಡುವ ಪದ್ಧತಿ ಮುಂದುವರಿದಿದ್ದು ಕುಡಿಯನೂರು ಬಿ.ರಾಮಯ್ಯರವರು ದೊಡ್ಡಕಲ್ಲಹಳ್ಳಿ, ರಾಜೇನಹಳ್ಳಿ ಮುಂತಾದ ಗ್ರಾಮಗಳಲ್ಲಿ ರಾಜಸೂಯಯಾಗ, ದಾನಶೂರಕರ್ಣ ಇತ್ಯಾದಿ ಆಡಿಸುತ್ತಿದ್ದರು. ಇದೇ ರೀತಿ ಹುಳದೇನಹಳ್ಳಿಯ ಎಚ್.ವೆಂಕಟಪ್ಪ, ಅಶ್ವತ್ಥನಾರಾಯಣರಾಯರು ನಾಟಕ ತರಬೇತು ನೀಡುವವರಾಗಿದ್ದರು. ಮಾಲೂರಿನ ಟಿ.ವೆಂಕಟಪ್ಪ ಸಹ ಕೆಲವು ನಾಟಕ ಬರೆದಿರುವರಲ್ಲದೆ ರಂಗಭೂಮಿಯೊಂದಿಗೆ ಸಂಬಂಧವುಳ್ಳವರಾಗಿದ್ದರು.

ಶಾಲಾಕಾಲೇಜುಗಳು ನಾಟಕ ಕಲೆಗೆ ಪ್ರೋತ್ಸಾಹ ನೀಡುತ್ತಿದ್ದು, ಮಾಧ್ಯಮಿಕ ಶಾಲೆಯ ಮುಖ್ಯ ಉಪಾಧ್ಯಾಯರಾಗಿದ್ದ ಪಾಪ್‌ಸಿಂಗ್ ಎಂಬುವವರು ಅನೇಕರನ್ನು ತಯಾರುಮಾಡಿದ್ದು ಅವರು ಮುಂದೆ ನಾಟಕ, ಸಿನಿಮಾಗಳಲ್ಲೂ ಅಭಿನಯಿಸಿರುವುದುಂಟು. ಮಾಲೂರು ಸೊಣ್ಣಪ್ಪ, ಮಾಲೂರು ಸಿದ್ಧಪ್ಪ ಮುಂತಾದವರು ಪಾಪ್‌ಸಿಂಗ್ ಅವರ ಪ್ರೋತ್ಸಾಹದಿಂದ ಮುಂದೆ ಬಂದವರು. ಮಾಲೂರಿನ 'ಶ್ರೀ ಭುವನೇಶ್ವರಿ ಕಲಾಸಂಘ' ೧೯೮೦ರಲ್ಲಿ ಅಖಿಲ ಕರ್ನಾಟಕ ರಂಗಭೂಮಿ ಕಲಾವಿದರ ಸಮ್ಮೇಳನ ಹಮ್ಮಿಕೊಂಡಿದ್ದು ಆ ಸಂದರ್ಭದಲ್ಲಿ ಸಂಘದ ಅಧ್ಯಕ್ಷರು ಎಂ.ವಿ.ಹನುಮಂತಯ್ಯ, ಉಪಾಧ್ಯಕ್ಷ ಕೆ.ಎಸ್.ಚಂದ್ರಶೇಖರ್, ಕಾರ್ಯದರ್ಶಿ ಪಿ.ರಾಮಚಂದ್ರ ಸಹಕಾರ್ಯದರ್ಶಿ ಶ್ರೀಧರ ಉಪಾಧ್ಯ ಹಾಗೂ ಎಂ.ಎಸ್.ಚಂದ್ರಶೇಖರ್ (ಖಜಾಂಚಿ) ಎಂ.ಎಲ್.ಜನಾರ್ಧನ (ಸಂಚಾಲಕ)ರಾಗಿದ್ದರು. ಸಮ್ಮೇಳನದ ಸಂದರ್ಭದಲ್ಲಿ ಸ್ಮರಣ ಸಂಚಿಕೆ ಹೊರತರಲಾಯಿತು. ಇದೇ ತಾಲೂಕಿನ ಮಾಸ್ತಿಯ ಪ್ರೈಮರಿಯ ಮುಖ್ಯೋಪಾಧ್ಯಾಯರಾಗಿದ್ದ ಸೀತಾರಾಮಶಾಸ್ತ್ರಿಯವರು ಹಲವಾರು ಸಾಮಾಜಿಕ ನಾಟಕಗಳನ್ನು ರಚಿಸಿದ್ದಾರೆ.

ಜಿಲ್ಲೆಯಲ್ಲಿ ರಂಗಭೂಮಿಗೆ ದುಡಿದ ಇನ್ನೂ ಅನೇಕ ಮಹನೀಯರಿದ್ದು ಸಂಕ್ಷಿಪ್ತವಾಗಿ ನೋಡಬಹುದು. ಹೊಳಲಿ ಸುಬ್ರಹ್ಮಣ್ಯ ಶಾಸ್ತ್ರಿಗಳು, (೧೯೦೦-೭೯) ಗೆಳೆಯ, ಕಲಾವಿದ ಹೊದಲಿ ನಾರಾಯಣರಾಯರ ನೆರವಿನಿಂದ ಗುಬ್ಬಿಕಂಪನಿಗೆ ಸೇರಿ ಅಲ್ಲಿ ಸಾಕಷ್ಟು ಹೆಸರುಮಾಡಿದರು. ಅದಕ್ಕೆ ಮೊದಲೇ ಪೀರ್ ಅವರ ಕಂಪನಿಯಲ್ಲಿದ್ದು ನಂತರವೂ ಬೇರೆಬೇರೆ ಖ್ಯಾತ ಕಂಪನಿಗಳಲ್ಲಿ ವಿವಿಧ ಪಾತ್ರವಹಿಸಿದ್ದರು. ಶಾಸ್ತ್ರಿಗಳು ನಟಿಸಿದ ಸ್ಮರಣೀಯ ಪಾತ್ರಗಳೆಂದರೆ ಕಾಳಿದಾಸ ನಾಟಕದಲ್ಲಿ ಭೋಜರಾಜ, ಲಂಕಾದಹನದಲ್ಲಿ ಆಂಜನೇಯ, ಸಂಸಾರ ನೌಕೆಯಲ್ಲಿ ಕಳ್ಳಪೂಜಾರಿಪಾತ್ರ ಇತ್ಯಾದಿಗಳು. ನೂರಕ್ಕೂ ಹೆಚ್ಚು ಪ್ರದರ್ಶನಕಂಡ 'ಸಂಸಾರ ನೌಕೆ' ಪಾತ್ರ ಶಾಸ್ತ್ರಿಗಳಿಗೆ ಹೆಸರು, ಜನಪ್ರಿಯತೆ, ಪ್ರಶಸ್ತಿಗಳನ್ನು ಗಳಿಸಿಕೊಟ್ಟಿತು. ಸಿನಿಮಾ ಕ್ಷೇತ್ರದಲ್ಲಿ ಹೆಸರು ಮಾಡಿದರೂ ಮೊದಲಿಗೆ ನಾಟಕ ಕಲಾವಿದರಾಗಿದ್ದ ಬಿ.ಆರ್.ಪಂತಲು ಅವರು (೧೯೧೧-೭೪) ಬಂಗಾರಪೇಟೆಯ ಬಡಗೂರಲ್ಲಿ ಜನಿಸಿದವರು. ಮದ್ರಾಸ್‌ನಲ್ಲಿ ಶಾಲಾಭ್ಯಾಸ ಕಲಿಯುತ್ತಿರುವಾಗಲೇ ನಾಟಕಗಳಲ್ಲಿ ಅಭಿನಯಿಸುತ್ತಿದ್ದ ಅವರಿಗೆ, ನಂತರ ಶಾಲೆಯೊಂದರ ಉಪಾಧ್ಯಾಯ ಕೆಲಸ ದೊರೆತಾಗಲೂ ವಿದ್ಯಾರ್ಥಿಗಳಿಗೆ ಶಾಲಾವೇಳೆಯಲ್ಲಿ ನಾಟಕ ಕಲಿಸುತ್ತಿದ್ದ ಕಾರಣ ಸೇವೆಯಿಂದ ವಜಾ ಆಗಿ, ಮಹಮದ್ ಪೀರ್ ಅವರ ಕಂಪನಿ ಪ್ರವೇಶಿಸಿದರು. ಮುಂದೆ ತಮ್ಮದೇ ಆದ "ಕಲಾ ಸೇವಾ ಮಂಡಲಿ" ಆರಂಭಿಸಿದ್ದು ಖ್ಯಾತರನೇಕರು ಈ ಕಂಪನಿಗೆ ಸೇರಿದರು. 'ಸಂಸಾರನೌಕೆ' ನಾಟಕ ಅವರನ್ನು ಹೆಚ್ಚು ಪ್ರಸಿದ್ಧಿಗೆ ತಂದಿದ್ದು ಮುಂದೆ ಅದೇ ಸಿನಿಮಾ ಆಗಿ ಆ ಮೂಲಕ ಅಲ್ಲಿ ಪ್ರಸಿದ್ಧರಾದರೂ ನಾಟಕದೊಂದಿಗಿನ ಸಹ ಸಂಬಂಧ ಮುಂದುವರಿದಿತ್ತು. ನಾಟಕ ರಚನೆಯಲ್ಲಿ ಕೈವಾರ ರಾಜರಾಯರದು ರಾಜ್ಯದಲ್ಲಿಯೇ ಗಣನೀಯವಾದ ಹೆಸರು. ರಾಜರಾಯರು (೧೯೧೨-೯೩) ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿ ವಿದ್ಯುತ್ ಇಲಾಖೆಗೆ ಸೇರಿದರೂ ಕನ್ನಡ ಸಾಹಿತ್ಯ ಕ್ಷೇತ್ರದ ಅನೇಕ ಹಿರಿಯರೊಂದಿಗೆ ಸಂಪರ್ಕವಿದ್ದು ಸಾಹಿತ್ಯದಲ್ಲಿಯೂ ಕೃಷಿ ಮಾಡತೊಡಗಿದರು. ಸಾಹಿತ್ಯ ಪರಿಷತ್ತಿನೊಂದಿಗೆ ನಿಕಟ ಸಂಬಂಧ ಇರಿಸಿಕೊಂಡಿದ್ದು ಅಲ್ಲಿ ಉಪಾಧ್ಯಕ್ಷರೂ ಆಗಿದ್ದರು. ಸಣ್ಣ ಕಥೆ, ಹಾಸ್ಯಲೇಖನ, ಭಾರತದ ಶ್ರೀ ಕೃಷ್ಣ ಇತ್ಯಾದಿ ಬರೆದರು. ಅವರು ರಚಿಸಿದ ಸುಮಾರು ೬೦ ನಾಟಕಗಳಲ್ಲಿ ಬಹಳಷ್ಟು ನಾಟಕಗಳು ಇಂದಿಗೂ ಅಲ್ಲಲ್ಲಿ ವಿಶೇಷವಾಗಿ ಶಾಲಾಕಾಲೇಜುಗಳ ಸಮಾರಂಭಗಳಲ್ಲಿ ರಂಗಪ್ರಯೋಗವಾಗುತ್ತಿದ್ದು ರಾಜರಾಯರ ಹೆಸರನ್ನು ಶಾಶ್ವತಗೊಳಿಸಿದೆ. ಕೆಲವು ನಾಟಕಗಳು ನೂರಾರು ಪ್ರಯೋಗಗಳನ್ನು ಕಂಡಿವೆ. 'ಬುಡುಬುಡಿಕೆ' ಅವುಗಳಲ್ಲಿ ಒಂದು. ಷೇಕ್ಸ್‌ಪಿಯರ್‌ನ ಮರ್ಚೆಂಟ್ ಆಫ್ ವೆನಿಸ್ 'ಸಾಧಕನ ಸೇಡಾಗಿ' ಅನುವಾದಗೊಂಡಿದೆ. 'ಕಡೇದಿನ' ಗಾಂಧಿ ಹತ್ಯೆಯನ್ನು

ಕುರಿತದ್ದು. ಅವರ 'The Accused' ಇಂಗ್ಲಿಷ್ ನಾಟಕಕ್ಕೆ ಭವಾನ್ಸ್ ಜರ್ನಲ್‌ನ ಬಹುಮಾನ ಬಂದಿದ್ದು ಅದೇ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅದರ ಕನ್ನಡ ರೂಪಾಂತರ 'ಒಂದು ದುರಂತ'. ಇವರ ಕೆಲವು ನಾಟಕಗಳು ಫ್ರೆಂಚ್ ನಾಟಕಕಾರ ಮೋಲಿಯರ್‌ನ ಕೃತಿಗಳನ್ನು ನೆನಪಿಸುತ್ತದೆ ಎಂದು ಹಿರಿಯ ಸಾಹಿತಿಗಳು ಹೇಳಿದ್ದುಂಟು. ರಾಜಾರಾಯರಂತೆ ಕಿರು ಅವಧಿಯ ನಾಟಕಗಳನ್ನು ಬರೆದವರಲ್ಲಿ ವೈ.ಎಸ್.ಗುಂಡಪ್ಪ ಅವರನ್ನು ಹೆಸರಿಸಬಹುದು. ಮೂಲತ: ಅನೇಕಲ್ಲಿನವರಾದ ಗುಂಡಪ್ಪ ಅವರು (೧೯೦೫–೯೮) ಚಿಂತಾಮಣಿಯಲ್ಲಿ ನೆಲೆನಿಂತು ಸಾಹಿತ್ಯ ರಚನೆಯಲ್ಲದೆ ಮಮತಾ ಮೋಕ್ಷ, ಅದೃಷ್ಟ, ವಿಧಿವಿಲಾಸ ಮುಂತಾದ ನಾಟಕ ರೂಪಿಸಿದ್ದು ಸಿ.ಬಿ.ಮಲ್ಲಪ್ಪರ 'ಚಂದ್ರ ಮೌಳೇಶ್ವರ ನಾಟಕ ಸಂಸ್ಥೆ'ಯವರು ರಾಜ್ಯಾದ್ಯಂತ ಅಭಿನಯಿಸಿದ್ದಾರೆ. ಅಲ್ಲದೆ ಗುಂಡಪ್ಪನವರು ಮಕ್ಕಳಿಗಾಗಿ ಪೌರಾಣಿಕ ಹಾಗೂ ಸಾಮಾಜಿಕ ವಿಷಯಗಳುಳ್ಳ ಅನೇಕ ಚಿಕ್ಕಪ್ರಮಾಣದ ನಾಟಕಗಳನ್ನು ರಚಿಸಿದ್ದಾರೆ. ಕೋಲಾರ ತಾಲೂಕಿನ ಚೀಕಮಾನ ಹಳ್ಳಿಯ ಜಿ.ವಿ.ವೆಂಕಟಗಿರಿಯಪ್ಪ (ಜ ೧೯೫೦) ಶಾಲಾವ್ಯಾಸಂಗದ ಕಾಲದಲ್ಲೇ ನಾಟಕದ ಗುರು ತಿಮ್ಮರಾಯಪ್ಪ ತರಬಳ್ಳಿ ಅವರು ನಿರ್ದೇಶಿಸಿದ ಸತ್ಯ ಹರಿಶ್ಚಂದ್ರ ನಾಟಕದ ಮೂಲಕ ರಂಗ ಪ್ರವೇಶ ಮಾಡಿದ್ದು ಮುಂದೆ, ಅನೇಕ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಿ ಹೆಸರು ಮಾಡಿದ್ದಾರೆ. ಹದಗೆಟ್ಟ ಸಂಸಾರ, ಆದರ್ಶ ಹುಚ್ಚ, ನಿರಾಶ್ರಿತರು, ವಿಮುಕ್ತಿ, ವಿದುರಾಶ್ವತ್ಥ ಆಂದೋಳನ ಇತ್ಯಾದಿ ನಾಟಕಗಳನ್ನು ಬರೆದಿರುವುದಲ್ಲದೆ ಕೆಲವು ಪ್ರಕಟವೂ ಆಗಿವೆ. 'ವಿಜಯಶೃಂಗ' ಎಂಬ ಕಲಾ ತಂಡ ಸ್ಥಾಪಿಸಿ ಹಲವಾರು ನಾಟಕಗಳನ್ನು ನಿರ್ದೇಶಿಸಿದ್ದು ಕೆಲವಕ್ಕೆ ಪ್ರಶಸ್ತಿಗಳೂ ಬಂದಿವೆ. ಕೋಲಾರ ನಗರದ ಕೋಟೆ ಪ್ರದೇಶದಲ್ಲಿ ಸದಾನಂದ ಥಿಯೇಟರ್ ಎಂಬ ಸುಸಜ್ಜಿತವಾದ ನಾಟಕ ಸಭಾಭವನವಿತ್ತು. ಸುಮಾರು ೫೦ ವರ್ಷಗಳ ಕಾಲ ಇಲ್ಲಿ ಕರ್ನಾಟಕ ರಾಜ್ಯವಲ್ಲದೆ ಆಂಧ್ರ, ತಮಿಳುನಾಡು ರಾಜ್ಯಗಳ ನಾಟಕ ತಂಡಗಳು ಕೂಡ ತಿಂಗಳುಗಟ್ಟಲೆ ಮೊಕ್ಕಾಂ ಹೂಡಿ ನಾಟಕಗಳಾಡುತ್ತಿದ್ದವು. ಕೋಲಾರದ ಕಲಾವಿದರೂ ಒಂದು ರಂಗತಂಡವನ್ನು ಕಟ್ಟಿ 'ದಾನಶೂರಕರ್ಣ' ಎಂಬ ಪೌರಾಣಿಕ ನಾಟಕವನ್ನು ಯಶಸ್ವಿಯಾಗಿ ಪ್ರದರ್ಶಿಸಿದ್ದರು. ಪಾಚಳ್ಳಿ ಶ್ರೀನಿವಾಸ ಅವರು ಮೊದಲಿಗೆ ಬಿ.ವಿ.ಕಾರಂತರೊಂದಿಗೆ ನಾಟಕ ಆಡುತ್ತಿದ್ದು ಚಿಕ್ಕತಿರುಪತಿಯಲ್ಲಿ 'ಸಾರಂಗರಂಗ' ಎಂಬ ನಾಟಕ ತಂಡ ಕಟ್ಟಿದವರು. ಕೋಟಗಾನಹಳ್ಳಿ ರಾಮಯ್ಯ ರಂಗಭೂಮಿಯವರು.

ಜಿಲ್ಲೆಯ ಖ್ಯಾತ ಸಾಹಿತಿಗಳಾದ ಡಿವಿಜಿ ಅವರು ವಿದ್ಯಾರಣ್ಯ ವಿಜಯ, ಪರಶುರಾಮ, ಕನಕಾಲುಕಾ, ತಿಲೋತ್ತಮೆ ನಾಟಕಗಳನ್ನೂ ಮಹಾ ಚುನಾವಣೆ, ಗಾರ್ಧಭ ವಿಜಯ, ಜಾಕ್‌ಕೇಡ್–ಹಾಸ್ಯ ಪ್ರಸಂಗಗಳನ್ನೂ ಹಾಗೂ ಮ್ಯಾಕ್‌ಬತ್‌ನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಾರೆ. ಮಾಸ್ತಿ ವೆಂಕಟೇಶ ಅಯ್ಯಂಗಾರರು ಶಾಂತಾ, ಸಾವಿತ್ರಿ, ಉಷಾ, ತಾಳೀಕೋಟೆ, ಮಂಜುಳ, ಶಿವಛತ್ರಪತಿ, ಯಶೋಧರಾ, ಕಾಕನಕೋಟೆ, ಕನಕಣ್ಣ, ಕಾಳಿದಾಸ, ಅಜ್ಜನದಾರಿ, ವಿಮಲ ಮರಿಯಾನ್ (ನಾಟಕಗಳು) ತಿರುವಾಣಿ, ಭಟ್ಟರ ಮಗಳು (ಕಾವ್ಯ ನಾಟಕ) ಮತ್ತು ಠಾಗೂರ್, ಷೇಕ್ಸ್‌ಪಿಯರ್ ನಾಟಕದ ಅನುವಾದಗಳು, ಬಾನುಲಿ ನಾಟಕಗಳನ್ನು ಬರೆದಿದ್ದಾರೆ. ಕಾಕನಕೋಟೆ ಹೆಚ್ಚು ರಂಗಪ್ರಯೋಗವಾಗಿ ಸಿನಿಮಾ ಸಹ ಆಗಿದೆ.

ಕಳೆದ ಶತಮಾನದ ಏಳು–ಎಂಟನೇ ದಶಕಗಳಲ್ಲಿ ಕೋಲಾರ ಜಿಲ್ಲೆಯ ದಕ್ಷಿಣ ಭಾಗದಲ್ಲಿ ರಂಗಭೂಮಿ ಚಟುವಟಿಕೆಗಳು ಅಧಿಕವಾಗಿದ್ದವು. ರಾಷ್ಟ್ರೀಯ ಉತ್ಸವಗಳು, ಶಾಲಾಕಾಲೇಜುಗಳ ವಾರ್ಷಿಕೋತ್ಸವಗಳಲ್ಲದೆ ಸಹಾಯಾರ್ಥವಾಗಿ ನಾಟಕಗಳು ಅಭಿನಯವಾಗುತ್ತಿದ್ದವು. ದೇವಾಲಯಗಳ ರಚನೆ, ಜೀರ್ಣೋದ್ಧಾರ, ರೈತ ಸಂಘಗಳ ವಾರ್ಷಿಕೋತ್ಸವ, ರಾಷ್ಟ್ರೀಯ ರಕ್ಷಣಾ ನಿಧಿ, ಸ್ವರ್ಗಸ್ಥರ ಆತ್ಮಶಾಂತಿಗಾಗಿ, ಪಶುವೈದ್ಯಶಾಲೆಯ ನಿರ್ಮಾಣಕ್ಕೆ (ಐಸಂದ್ರ ಮಿಟ್ಟೂರು ಗ್ರಾಮದಲ್ಲಿ ೧೯೮೭ರಲ್ಲಿ) ವಿದ್ಯುತ್‌ದೀಪ ಆರಂಭೋತ್ಸವ ಅಂಗವಾಗಿ, ಸಂಘಸಂಸ್ಥೆಗಳ ವಾರ್ಷಿಕೋತ್ಸವ ಹಾಗೂ ಅವುಗಳ ಸಹಾಯಾರ್ಥವಾಗಿ ನಾಟಕಗಳನ್ನು ಆಡಲಾಗುತ್ತಿತ್ತು. ರಥೋತ್ಸವ, ಜಾತ್ರೆಗಳ ವೇಳೆಯಲ್ಲಿ ಸಾಮಾನ್ಯವಾಗಿ ನಾಟಕಗಳ ಪ್ರಯೋಗವಾಗುತ್ತಿದ್ದವು. ಕೆಲವು ನಾಟಕ ಕಂಪನಿಗಳೂ ಜಿಲ್ಲೆಯಲ್ಲಿ ಮೊಕ್ಕಾಂ ಮಾಡುತ್ತಿದ್ದವು. ಇಲ್ಲೆಲ್ಲಾ ನಡೆಯುತ್ತಿದ್ದುದು ರಾಮಪಟ್ಟಾಭಿಷೇಕ, ಕೃಷ್ಣಾ–ಕರ್ಣ–ಕುಂತಿ, ಸೀತಾನ್ವೇಷಣ, ರಾಮಾಂಜನೇಯ ಸಂಗ್ರಾಮ, ಕೃಷ್ಣರಾಯಭಾರ, ಕೃಷ್ಣತುಲಾಭಾರ, ಕುರುಕ್ಷೇತ್ರ ಮುಂತಾದವು. ಐತಿಹಾಸಿಕ ನಾಟಕಗಳಾದ ಎಚ್ಚಮ್ಮನಾಯಕ, ಸಂಗೊಳ್ಳಿ ರಾಯಣ್ಣಗಳು ಪ್ರಯೋಗಗೊಂಡಿವೆ. ಸಹಾಯಾರ್ಥ ನಾಟಕಗಳಲ್ಲಿ ಸಾಮಾಜಿಕ ನಾಟಕಗಳು ೧೯೭೭ಕ್ಕೂ ಮೊದಲಿನಿಂದಲೇ ಕಾಣಿಸಿಕೊಂಡಿವೆ. ಬೇತಮಂಗಲದ ಗ್ರಾಮಾಂತರ ಶಾಲೆಯವರು ಶಾಲಾಭಿವೃದ್ಧಿಗೆ ಸಹಾಯಾರ್ಥವಾಗಿ ೧೯೭೭ರಲ್ಲಿ ಪಾದುಕಾ ಪಟ್ಟಾಭಿಷೇಕವಲ್ಲದೆ 'ಪ್ರೇಮಹಸ್ತ' ಮತ್ತು 'ಕಣ್ಣಿಗೆ ಮಣ್ಣು' ನಾಟಕಗಳನ್ನು ಅಭಿನಯಿಸಿದ್ದು ಒಂದರಿಂದ

ಐದು ರೂಪಾಯಿಗಳವರೆಗೆ ಪ್ರವೇಶ ಧನವಿತ್ತು. ಮುಂದೆ ವಿವಿಧ ಕಡೆಗಳಲ್ಲಿ ರಹಸ್ಯರಾತ್ರಿ, ಪಂಚಭೂತ, ತ್ಯಾಗಿ, ಟಿಂಗರ ಬುಡ್ಡಣ್ಣ ಮುಂತಾದ ಆಧುನಿಕ ನಾಟಕಗಳು ರಂಗ ಪ್ರವೇಶ ಮಾಡಿದವು. ಪೌರಾಣಿಕ ನಾಟಕಗಳ ಕ್ರಿಯಾಚೇತನವಾಗಿದ್ದ ನಂಗಲಿಯ ಎಂ.ಶಿವಾನಂದ ಅವರು (ಜ.೧೯೩೪) ಬಾಲನಟರಾಗಿ ರಂಗಭೂಮಿಗೆ ಪಾದಾರ್ಪಣೆ ಮಾಡಿದ್ದು ಮೊದಲಿಗೆ ಸ್ತ್ರೀಪಾತ್ರ ವಹಿಸುತ್ತಿದ್ದರು. ನಂತರ ಪೌರಾಣಿಕ ಪುರುಷಪಾತ್ರಗಳಲ್ಲಿ ಜನಪ್ರಿಯರಾಗಿ ಬಂಗಾರಪೇಟೆಯ ಕಾಮಸಮುದ್ರದ ಬಳಿ 'ತೊಪ್ಪನಹಳ್ಳಿ ಶ್ರೀಚಂದ್ರಮೌಳೇಶ್ವರ ಕಲಾ ತಂಡ' ಸ್ಥಾಪಿಸಿ 'ಸತಿ ಸಾವಿತ್ರಿ', 'ಸತ್ಯಹರಿಶ್ಚಂದ್ರ', 'ರಾಮಾಂಜನೇಯ ಯುದ್ಧ' ಇತ್ಯಾದಿ ಪೌರಾಣಿಕ ನಾಟಕಗಳನ್ನು ಜಿಲ್ಲೆಯಲ್ಲದೆ ನೆರೆಯ ತಮಿಳುನಾಡಿನ ಶಾಲಾಕಾಲೇಜುಗಳಲ್ಲಿ, ಜಾತ್ರೆ-ದೇವಾಲಯಗಳಲ್ಲಿ ಸಹಾಯಾರ್ಥವಾಗಿ ಪ್ರದರ್ಶಿಸಿ ಸಾಮಾಜಿಕ ಕಾರ್ಯಗಳಿಗೆ ನೆರವಾಗಿದ್ದಾರೆ. ಸ್ವತಃ ಕೆಲವು ಪೌರಾಣಿಕ, ಸಾಮಾಜಿಕ ನಾಟಕಗಳನ್ನು ಬರೆದು ಪ್ರದರ್ಶಿಸಿದ್ದಾರೆ. ಈ ಪ್ರದೇಶದಲ್ಲಿ ತೆಲುಗು ಭಾಷಿಕರೂ ಇದ್ದು ಪೌರಾಣಿಕ ನಾಟಕಗಳು ತೆಲುಗಿನಲ್ಲಿಯೂ ಅಭಿನಯಿಸುತ್ತಿದ್ದು, ಶಿವಾನಂದ ಅವರ ಪ್ರಯತ್ನಗಳಿಂದಾಗಿ ಕನ್ನಡದಲ್ಲಿಯೂ ಪೌರಾಣಿಕ ನಾಟಕಗಳು ಆಡುವಂತಾಗಿದ್ದು ಈ ಪ್ರದೇಶದಲ್ಲಿ ಕನ್ನಡ ನೆಲೆಯೂರುವಂತಾಯಿತು. ಶಿವಾನಂದ ಅವರು ಬಂಗಾರಪೇಟೆ ತಾಲೂಕಿನ ಸಾಹಿತ್ಯ ಪರಿಷತ್ತಿಗೆ ಎರಡು ಬಾರಿ ಕಾರ್ಯದರ್ಶಿಗಳಾಗಿದ್ದು ಆ ಮೂಲಕ ಗ್ರಾಮಾಂತರಪ್ರದೇಶಗಳಲ್ಲೂ ಕನ್ನಡ ಸಾಹಿತಿ, ಸಾಹಿತ್ಯಗಳ ಪರಿಚಯ ಮಾಡಿಸಿ ಜನರಲ್ಲಿ ಕನ್ನಡದ ಸ್ಫೂರ್ತಿ ತುಂಬಿದ್ದಾರೆ. ಶ್ರೀಯುತರಿಗೆ 'ಕಲಾಕೇಸರಿ, ನಟರತ್ನ, ದರ್ಶಕ ಬ್ರಹ್ಮ' ಇತ್ಯಾದಿ ಬಿರುದುಗಳಲ್ಲದೆ ಅನೇಕ ಸನ್ಮಾನ, ಗೌರವ ಸಮಾರಂಭಗಳು ನಡೆದಿವೆ. ಶಿವಾನಂದ ಅವರೊಂದಿಗೆ ತೊಪ್ಪನಹಳ್ಳಿ ರಾಮಮೂರ್ತಿ ಅವರು ನೆರವಾಗಿದ್ದು ಶ್ರೀ ಚಂದ್ರಮೌಳೇಶ್ವರ ನಾಟಕ ಕಂಪನಿ ನಾಲ್ಕು ದಶಕಗಳಿಂದಲೂ ಕ್ರಿಯಾಶೀಲವಾಗಿದೆ.

ಕೆ. ಗುಂಡಣ್ಣರವರು (ಜ. ೧೯೨೪) ಪಂಚಭೂತ, ಗಂಡಸ್ಲೆ ಗಂಡ್ಸು, ಹರಿದ್ರಾಕುಂಕುಮ, ಭಗವಾನ್ ಬುದ್ಧ ಮುಂತಾದ ನಲವತ್ತು ನಾಟಕಗಳನ್ನು, ಬೊಮ್ಮನ ಹಳ್ಳಿಯ ಬಿ.ಟಿ. ಅಶ್ವತ್ಥನಾರಾಯಣರಾವ್ (ಜ. ೧೯೩೩)ರವರ ಬೆಗ್-ಬಾರೊ ಆರ್ ಸ್ಟೀಲ್, ಮುವರು ಅವರೆ ಮತ್ತು ಸಂದೇಶಗಳನ್ನು ಬರೆದಿದ್ದಾರೆ. ರಘುಸುತ ಅವರು ಪ್ರಾಕ್ಟೀಸಿನ ಪರದಾಟ, ಮಾಡ್ರನ್ ಮಾರ್ಕಂಡೇಯ, ಎಡಬಿಡಂಗಿ, ಸ್ವಾತಂತ್ರ್ಯ ಸಮರ, ಸಪ್ತರ್ಷಿಗಳು ಮುಂತಾದ ನಾಟಕಗಳನ್ನು ಬರೆದಿದ್ದಾರೆ. ಅಲ್ಲದೆ ಕಲಾವಿಲಾಸಿ ನಾಟಕ ಸಾಹಿತ್ಯ ಪರಿಷತ್ತು ಸ್ಥಾಪಿಸಿ, ನಾಡಿನ ಸಮಗ್ರ ಕಲಾವಿಲಾಸಿ ನಾಟಕ ಸಂಸ್ಥೆಗಳ ಹುಟ್ಟುಬೆಳವಣಿಗೆ ಕುರಿತು ಸುದೀರ್ಘ ಲೇಖನಗಳನ್ನು ಬರೆದಿದ್ದಾರೆ. ಚಿಕ್ಕಬಳ್ಳಾಪುರದ ಎನ್.ಎಸ್. ಅಯ್ಯರ್ (೧೯೩೭) ತಪ್ಪಿದ ತಾಳಿ, ಪರಿವರ್ತನೆ ಬಾಳದಾರಿ, ಸಂಗಮ, ಮಂತ್ರವಾದಿ, ಬೇಡಾಂದ್ರೆ ಮಕ್ಕಳು ಇತ್ಯಾದಿ ಇಪ್ಪತ್ತು ನಾಟಕಗಳನ್ನು, ಕೆ.ವಿ. ನಾರಾಯಣ್ (೧೯೩೭) ಮಧ್ಯರಾತ್ರಿ, ಶಾಸ್ತ್ರನಿಷ್ಠೆ, ಶಾಮ್ರಾಯರುಗಳ ಅವಾಂತರ ನಾಟಕಗಳನ್ನು, ಶಾನುಭೋಗನ ಹಳ್ಳಿಯ ವಾಸುದೇವ ಅವರು 'ಎನ್.ಜಿ.ಓ.' 'ಕವಿಪುಂಗವ' ದಾಸೇಗೌಡರ 'ಪೂರಾಪಲ್ಟಿ' ಇತ್ಯಾದಿ ನಾಟಕಗಳನ್ನು ಉದಾಹರಿಸಬಹುದು.

ಉಳಿದಂತೆ ಹುಲಿಬೆಲೆಯ ಉತ್ಸಾಹಿ ನಾಟಕ ತಂಡವು ಹಲವಾರು ಪೌರಾಣಿಕ ನಾಟಕಗಳನ್ನೂ ಬೂದಿಕೋಟೆಯ ಯುವ ಸಂಘದವರು ಎಚ್ಚಮ್ಮನಾಯಕದ ಹಲವಾರು ಪ್ರದರ್ಶನಗಳನ್ನು ನೀಡಿದ್ದಾರೆ. ಕಾಮಸಮುದ್ರದ ಬಾಪೂಜಿ ಯುವಕ ರೈತ ಸಂಘದವರು ಉತ್ತರ ಕರ್ನಾಟಕದ ಹೆಚ್.ಎನ್.ಹೂಗಾರರ ಕಮಲಾಕ್ಷಿ, ಸೌಭಾಗ್ಯ, ಪುತ್ಥಳಿ, ಪ್ರೇಮಹಸ್ತ ಮುಂತಾದ ನಾಟಕಗಳನ್ನು ಪ್ರದರ್ಶಿಸಿ ಏಕೀಕೃತ ಕರ್ನಾಟಕವನ್ನು ಪ್ರತಿಬಿಂಬಿಸಿದ್ದಾರೆ. ಬೇತಮಂಗಲದ ಆನಂದ ಮಿತ್ರಮಂಡಲಿಯವರು ಶ್ರೀಕೃಷ್ಣ ಶೆಯ್ಯತಿಲ್ಲ, ಪಾದುಕ ಪಟ್ಟಾಭಿಷೇಕ ಇತ್ಯಾದಿ ಪೌರಾಣಿಕ ನಾಟಕ, 'ಎಚ್ಚಮ್ಮ ನಾಯಕ' ಐತಿಹಾಸಿಕ ನಾಟಕ ಹಾಗೂ 'ಪ್ರೇಮಹಸ್ತ, ಕಣ್ಣಿಗೆ ಮಣ್ಣು' ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಹುಣಸಿನಹಳ್ಳಿ, ಗುಟ್ಟಹಳ್ಳಿ, ರಾಮಸಾಗರಗಳ ಉತ್ಸಾಹೀ ಯುವಕರು ಪೌರಾಣಿಕ, ಚಾರಿತ್ರಿಕ ನಾಟಕಗಳನ್ನು ಆಡಿದ್ದಾರೆ. ಟೇಕಲ್ ಬಳಿಯ ಹುಳದೇವನಹಳ್ಳಿಯ 'ಶ್ರೀವೇಣುಗೋಪಾಲ ನಾಟಕ ಮಂಡಳಿ'ಯವರು ಕೃಷ್ಣಲೀಲಾ, ಸದಾರಮೆಗಳ ಪ್ರಯೋಗಗಳಿಂದ ಖ್ಯಾತರಾಗಿದ್ದಾರೆ. ಟೇಕಲ್, ಬನಹಳ್ಳಿ, ಚೊಕ್ಕಾಂಡಹಳ್ಳಿಯಲ್ಲಿ ರಂಗಪರಿಕರಗಳ ದೊಡ್ಡ ಸಂಗ್ರಹವಿದ್ದು ಬಾಡಿಗೆಗೆ ನೀಡುತ್ತಾರೆ. ಮಾಸ್ತಿಯಲ್ಲಿ ನೆಲೆಸಿರುವ 'ಪುಣ್ಯಕೋಟಿ' ಅವರು ಒಳ್ಳೆಯ ನಟರೆಂದೂ, ಟೇಕಲ್‌ನ 'ಜ್ಞಾನಾಂಬ' ಉತ್ತಮ ನಟಿಯೆಂದೂ ಹೆಸರು ಪಡೆದಿದ್ದಾರೆ.

ಮುಳಬಾಗಿಲು ತಾಲೂಕಿನಾದ್ಯಂತ ತೆಲುಗು ನಾಟಕ, ಕೇಳಿಕೆಗಳು ಹೆಚ್ಚಾಗಿ ಪ್ರಚಲಿತವಿದ್ದರೂ ವೆಂಕಟಸ್ವಾಮಿ ಬೋಯಿ ಹಾಗೂ ವೆಂಕಟಮುನಿಯವರು ಕೇಳಿಕೆ, ಬುರ್ರಕಥಾಗಳನ್ನು ಕನ್ನಡಿಸಿ ಪ್ರದರ್ಶಿಸಿ ಪ್ರಶಂಸೆ ಪಡೆದಿದ್ದಾರೆ. ನಾಟಕ ಅಕಾಡೆಮಿಯ

ಸದಸ್ಯರಾದ ಮುನಿರೆಡ್ಡಿಯವರು ವೇಮಗಲ್ ಬಳಿಯ ಮದ್ದೇರಿಯಲ್ಲಿ ಅನೇಕ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಮುಳಬಾಗಿಲು ತಾಲೂಕಿನ ಹೆಚ್.ಶೇಷಾಚಾರ್, ಯು.ವಿ.ನಾರಾಯಣಾಚಾರ್, ಗಡ್ಡೂರು ಸುಬ್ಬಣ್ಣ ಹಾಗೂ ನಂಗಲಿಯ ಹಳೆಯ ವಿದ್ಯಾರ್ಥಿಗಳ ಸಂಘದವರೂ ರಂಗಭೂಮಿಯಲ್ಲಿ ನಿರ್ದೇಶನ, ನಾಟಕ ಪ್ರದರ್ಶನಗಳನ್ನು ಕೈಗೊಂಡು ಕಲೆಯನ್ನು ಜೀವಂತವಿರಿಸಿದ್ದಾರೆ.

ಗೌರಿಬಿದನೂರು ಕನ್ನಡ ಯುವಕ ಸಂಘ ಹಾಗೂ ಸಮುದಾಯ ಮತ್ತು ಚಿಲುಮೆ ನಾಟಕ ತಂಡಗಳು ರಾಜ್ಯಮಟ್ಟದ ನಾಟಕೋತ್ಸವಗಳನ್ನು ನಡೆಸಿ ಗಮನಾರ್ಹ ಸಾಧನೆ ಮಾಡಿದ್ದಾರೆ. ಇವರ ಅನೇಕ ನಾಟಕಗಳು ರಾಜ್ಯಮಟ್ಟದಲ್ಲಿ ಹೆಸರುಮಾಡಿವೆ. ಇದೇ ತಾಲೂಕಿನ ಜರಬಂಡಹಳ್ಳಿಯ ಜೆ. ಸೂರ್ಯನಾರಾಯಣರಾಯರು ಖ್ಯಾತ ನಾಟಕ ತರಬೇತುದಾರರಾಗಿದ್ದಾರೆ. 'ಇಸ್ರೊ'ನ ಪಿ.ಕೆ.ಶ್ರೀನಿವಾಸಮೂರ್ತಿ ಅವರು ರಂಗಚಟುವಟಿಕೆಯಲ್ಲಿ ಅನೇಕ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ಶಿಡ್ಲಘಟ್ಟದ ಪಿಳ್ಳಪ್ಪನವರು, ಗುಡಿಬಂಡೆಯ ಸೂ.ಸು.ನಾಗೇಂದ್ರನಾಥ ಹಾಗೂ ನಾಗೇಂದ್ರ ಅವರುಗಳು ನಾಟಕ ಪ್ರಯೋಗಗಳಲ್ಲಿ ನಿರತರಾಗಿದ್ದಾರೆ. ಚಿಕ್ಕಬಳ್ಳಾಪುರದಲ್ಲಿ ರಾಜ್ಯೋತ್ಸವ ಇತ್ಯಾದಿ ವೇಳೆಗಳಲ್ಲಿ ನಾಟಕ ಪ್ರಯೋಗಗಳು ನಡೆಯುತ್ತವೆ. ಕೈವಾರದ ರಾಧಾ ಸಂಪತ್ ನಟನೆಗೆ ಹೆಸರು ಪಡೆದಿದ್ದಾರೆ. ಚಿಕ್ಕಬಳ್ಳಾಪುರದ ಮಹಿಳಾ ಮಂಡಳಿಯವರು ತಮ್ಮ ಮಹಿಳಾ ಸದಸ್ಯರಿಂದಲೇ ಹಲವಾರು ನಾಟಕಗಳನ್ನು ಆಡಿಸಿದ್ದಾರೆ. ಉಳಿದ ತಾಲೂಕುಗಳಾದ ಶ್ರೀನಿವಾಸಪುರ, ಗುಡಿಬಂಡೆ, ಬಾಗೇಪಲ್ಲಿ ತಾಲೂಕುಗಳು ಆಂಧ್ರದ ಪ್ರಭಾವಕ್ಕೆ ಸಿಲುಕಿದ್ದು ತೆಲುಗು ನಾಟಕಗಳು ಆಡುತ್ತಾರಾದರೂ ರಾಜ್ಯೋತ್ಸವ, ವಾರ್ಷಿಕೋತ್ಸವಗಳಲ್ಲಿ ಕನ್ನಡ ನಾಟಕಗಳನ್ನು ಪ್ರಯೋಗಿಸುತ್ತಾರೆ.

ಬಂಗಾರಪೇಟೆಯಲ್ಲಿ ೧೯೬೮ರಲ್ಲಿ ಆರಂಭವಾದ ಕನ್ನಡ ಸಂಘದವರು ಹಲವಾರು ನಾಟಕಗಳನ್ನು ರಂಗಭೂಮಿಗೆ ತಂದಿದ್ದು ಇವರ 'ದಿವ್ಯದರ್ಶನ' ಕೆ.ಜಿ.ಎಫ್‌ನಲ್ಲಿ ಎರಡನೇ ಪ್ರಶಸ್ತಿಯನ್ನು ಜಿಲ್ಲಾಮಟ್ಟದ ಸ್ಪರ್ಧೆಯಲ್ಲಿ ಮಧುಗಿರಿಯಲ್ಲಿ ಪ್ರಥಮ ಸ್ಥಾನವನ್ನೂ ಗಳಿಸಿದೆ. ಅಲ್ಲದೇ ೧೯೭೮ರಲ್ಲಿ ಯುವಜನ ಸೇವಾ ಸಮಿತಿಯ ಸಹಯೋಗದೊಂದಿಗೆ ತಾಲೂಕುಮಟ್ಟದ ನಾಟಕ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಿದೆ. ಚಿನ್ನದ ಗಣಿ ಪ್ರದೇಶದ 'ಕನ್ನಡ ಸಂಘ'ದವರು ಆಗಾಗ್ಗೆ ನಾಟಕಗಳನ್ನು ಪ್ರದರ್ಶಿಸುವುದಲ್ಲದೆ ೧೯೭೫, ೭೬, ೭೭ರಲ್ಲಿ ವಿಭಾಗೀಯ ಮಟ್ಟದ ನಾಟಕ ಸ್ಪರ್ಧೆಗಳನ್ನು ಏರ್ಪಡಿಸಿದ್ದರು. ಬೆಮೆಲ್ ಕಾರ್ಖಾನೆಯ ಕನ್ನಡಾಭಿಮಾನಿ ಉದ್ಯೋಗಿಗಳಿಂದ ೧೯೮೪ರಲ್ಲಿ ಆರಂಭವಾದ 'ಕನ್ನಡ ಮಿತ್ರರು' ರಂಗಭೂಮಿಯ ಚಟುವಟಿಕೆಗಳಲ್ಲಿ ಅನೇಕ ಸಾಧನೆಗಳನ್ನು ಮಾಡಿದ್ದಾರೆ. ಸ್ವತಃ ನಾಟಕ ಆಡುವುದಲ್ಲದೆ ಹಲವಾರು ಬಾರಿ ನಾಟಕ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನಗಳನ್ನು ನೀಡಿದ್ದಾರೆ. ಹೊರಜಿಲ್ಲೆ, ಹೊರರಾಜ್ಯಗಳಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿ, ಪಾರಿತೋಷಕಗಳನ್ನು ಪಡೆದುಬಂದಿದ್ದಾರೆ. ರಂಗಭೂಮಿಯ ಪಿತಾಮಹರಾದ ಕೈಲಾಸಂ, ಕುವೆಂಪು ಅವರ ನಾಟಕೋತ್ಸವಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ದೆಹಲಿಯಲ್ಲಿ ಪ್ರದರ್ಶಿಸಿದ 'ಚೋರ ಪುರಾಣಂ' ಖ್ಯಾತಿ ತಂದಿತಲ್ಲದೆ ಜಿಲ್ಲೆಯಿಂದ ರಾಜಧಾನಿಯಲ್ಲಿ ಅಭಿನಯಿಸಿದ ಪ್ರಥಮ ನಾಟಕವೆಂದು ಹೆಸರುಪಡೆಯಿತು. ಆಗಾಗ ರಂಗ ತರಬೇತಿ ಶಿಬಿರ ಏರ್ಪಡಿಸಿ ಹೆಸರಾಂತ ರಂಗಕರ್ಮಿಗಳಿಂದ ರಂಗಶಿಬಿರ ನಡೆಸಿದೆ. ಕೆ.ಜಿ.ಎಫ್.ನಲ್ಲಿ ಈ ಪ್ರದೇಶದಲ್ಲಿ ನಿರಂತರ ಚಟುವಟಿಕೆಯಲ್ಲಿರುವ ರಂಗವರ್ಷ, ಸ್ನೇಹಸಂಪದ, ಸಮುದಾಯ ಹಾಗೂ ಕೃತಿ ರಂಗ ತಂಡಗಳು ದಾಖಲಾರ್ಹವಾದ ಕಾರ್ಯಮಾಡಿದೆ. ಮೂಲತಃ ಚೆನ್ನರಾಯಪಟ್ಟಣದವರಾದ ದಿವಂಗತ ಚಂದ್ರಶೇಖರ್ ಮೊದಲಿಗೆ ಇಲ್ಲಿನ ಜನಕ್ಕೆ ಹವ್ಯಾಸಿ ರಂಗಭೂಮಿಯ ಪರಿಚಯ ಮಾಡಿಕೊಟ್ಟು, ಸ್ನೇಹಸಂಪದ ತಂಡವನ್ನು ಕಟ್ಟಿ ಸುಮಾರು ೫೦ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದಾರಲ್ಲದೆ ಅನೇಕ ನಾಟಕಗಳಲ್ಲಿ ಪಾತ್ರವಹಿಸಿದ್ದರು. ದೂರದ ನಾಗಪುರದಲ್ಲೂ ನಾಟಕಗಳನ್ನಾಡಿ ಅನೇಕ ರಾಜ್ಯ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದರು. 'ರಂಗವರ್ಷ' ಕಲಾ ತಂಡ ದೆಹಲಿಯಲ್ಲಿ ಪ್ರದರ್ಶಿಸಿದ 'ಪೋಸ್ಟರ್' ನಾಟಕಕ್ಕೆ ಪ್ರಥಮ ಬಹುಮಾನ ಬಂದಿದ್ದಲ್ಲದೆ, ಪಾತ್ರಧಾರಿ ಸ್ವರ್ಣಲತ ಅವರಿಗೆ ಶ್ರೇಷ್ಠನಟಿ ಪುರಸ್ಕಾರವೂ ದೊರೆಯಿತು. ರಮೇಶಚಂದ್ರ, ನಾ.ಕೃಷ್ಣಶೆಟ್ಟಿ, ಶಾರದಾಶೇಷಾದ್ರಿ, ಪುರುಷೋತ್ತಮರಾವ್, ಕಾ.ನಾ.ಶ್ರೀನಿವಾಸ ಅವರುಗಳನ್ನು ನಾಟಕ ಅಕಾಡೆಮಿ ಪುರಸ್ಕರಿಸಿದೆ. ಬೆಮೆಲ್‌ನ ರಮೇಶಚಂದ್ರ ಅವರು ನಟ ಹಾಗೂ ನಿರ್ದೇಶಕರಾಗಿದ್ದು ಹತ್ತು ನಾಟಕಗಳು, ಐದು ಕವನ ಸಂಕಲನ, ಎರಡು ಜೀವನ ಚರಿತ್ರೆಗಳನ್ನು ಪ್ರಕಟಿಸಿದ್ದಾರೆ. ತಿಪ್ಪೇಸ್ವಾಮಿ, ವಿ.ನಾರಾಯಣ, ತಿಪಟೂರು ತಿಮ್ಮೇಗೌಡರು, ಪಿ.ಟಿ.ಕೃಷ್ಣಮೂರ್ತಿ ರಾಜ್ಯ ಮಟ್ಟದ ಪ್ರಶಸ್ತಿ ಪಡೆದಿದ್ದಾರೆ. ರಮೇಶಚಂದ್ರರು ೩೦ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿ ನಿರ್ದೇಶಿಸಿದ್ದಾರಲ್ಲದೆ ಅನೇಕ ಕೃತಿಗಳನ್ನೂ ಪ್ರಕಟಿಸಿದ್ದಾರೆ. ಇವರು ಚುಟುಕು ಸಾಹಿತಿಗಳೂ ಕೂಡ. ಮತ್ತೊಬ್ಬ ಕಲಾವಿದ ಬಿ.ಎಸ್.ಪೀತಾಂಬರರಾವ್ ನೀನಾಸಂನಲ್ಲಿ ತರಬೇತಿ ಪಡೆದು ಅನೇಕ ಬೀದಿನಾಟಕಗಳನ್ನು ಪ್ರದರ್ಶಿಸಿದ್ದಾರೆ. ಕೋಲಾರದ ಗಿರಿಮಾಜಿರಾವ್ ಹಾಗೂ ಅವರ ವಂಶಸ್ಥರು ನಾಟಕ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ.

ಚಿತ್ರರಂಗದಲ್ಲಿ ಹೆಚ್ಚಿನ ಖ್ಯಾತಿಗಳಿಸಿದರಾದರೂ ಆ ಮೊದಲೇ ನಾಟಕರಂಗದಲ್ಲಿ ಹಲವಾರು ಪ್ರಯೋಗಗಳನ್ನು ಮಾಡಿದ ಎಂ. ಎನ್. ಲಕ್ಷ್ಮೀದೇವಿ ಅವರು ಚಿಂತಾಮಣಿಯವರು. ಹಲವಾರು ನಾಟಕ ಸಂಸ್ಥೆಗಳಲ್ಲಿದ್ದು ಗುಬ್ಬಿ ಕಂಪನಿಯಲ್ಲಿ ಪಾತ್ರ, ಸಂಗೀತ, ನೃತ್ಯ ನಿರ್ವಹಿಸುತ್ತಿದ್ದರು, ಎಚ್. ಎಂ. ವಿ. ಕಂಪನಿಯವರು ಇವರ ಹಾಡುಗಳನ್ನು ಧ್ವನಿ ಮುದ್ರಿಕೆಯಾಗಿ ಹೊರತಂದಿದ್ದಾರೆ. ಕರ್ನಾಟಕ ಚಲನಚಿತ್ರ ನಟರ ನಾಟಕ ಸಂಸ್ಥೆಯೊಂದು ಅಂದು ಕ್ರಿಯಾಶೀಲವಾಗಿದ್ದು, ಅದರಲ್ಲೂ ರಾಜ್ಯಾದ್ಯಂತ ಪ್ರದರ್ಶನಗಳನ್ನು ನೀಡಿದ್ದಾರೆ. 'ಲಕ್ಷ್ಮೀದೇವಿ ಎಂಡ್ ಪಾರ್ಟಿ' ಎಂಬ ಹೆಸರಿನಲ್ಲಿ ತಾವೇ ಒಂದು ನಾಟಕ ಸಂಸ್ಥೆ ರಚಿಸಿದ್ದು, ಅಂದಿನ ಹೆಸರಾಂತ ಕಲಾವಿದರು ಅದರಲ್ಲಿ ಅವಕಾಶ ಪಡೆದಿದ್ದರು. ಅಂದಿನ ಜನಪ್ರಿಯ ನಾಟಕ 'ಶಾಂತಿ ನಿವಾಸದ' ಬದಲಿಗೆ 'ಆರಾಧನಾ' ಎಂಬ ನಾಟಕವನ್ನು ಜನಪ್ರಿಯಗೊಳಿಸಿದ್ದರು.

ಕೆ.ಜಿ.ಎಫ್.ನಲ್ಲಿ ನೆಲೆಸಿರುವ ಊ.ಮ.ತಿಪ್ಪೇಸ್ವಾಮಿಯವರು ೬೦ಕ್ಕೂ ಹೆಚ್ಚು ನಾಟಕಗಳಲ್ಲಿ ವಿಭಿನ್ನ ಪಾತ್ರ ವಹಿಸಿದ್ದು ಸಿರಿಸಂಪಿಗೆ, ಪೋಸ್ಟರ್ ಮುಂತಾದ ನಾಟಕಗಳಲ್ಲಿ ಅಭಿನಯಕ್ಕಾಗಿ ಶ್ರೇಷ್ಠ ನಟ ಪುರಸ್ಕಾರ ಪಡೆದಿದ್ದಾರೆ. ದೂರದರ್ಶನದ ನಾಟಕಗಳಲ್ಲಿ ಪಾಲುಗೊಂಡಿದ್ದಾರೆ. ಇಲ್ಲಿಯೇ ನೆಲೆಸಿರುವ ಇನ್ನೊಬ್ಬ ನಟ ತಿಪಟೂರು ತಿಮ್ಮೆಗೌಡ ಅವರು ಸಿರಿಸಂಪಿಗೆ, ಮಹಾಚೈತ್ರ ಇತ್ಯಾದಿಗಳಲ್ಲಿ ಅಭಿನಯಿಸಿ ಸಮಾನ ಮನಸ್ಕರೊಂದಿಗೆ ಒಡಗೂಡಿ 'ಕೃತಿರಂಗ' ತಂಡ ಸ್ಥಾಪಿಸಿ, ನಾಟಕಗಳನ್ನು ನಿರ್ದೇಶಿಸಿ, ನಟಿಸಿದ್ದಲ್ಲದೆ ರಂಗ ರಚನೆ, ವಿಚಾರ ಸಂಕಿರಣ ಮುಂತಾದ ಕಾರ್ಯಕ್ರಮ ರೂಪಿಸಿದ್ದಾರೆ. ಸ್ನೇಹಸಂಪದದ ವಿ.ನಾರಾಯಣ, ಸಂಗ್ಯಾಬಾಳ್ಯ, ಜೋಕುಮಾರಸ್ವಾಮಿ, ಯಯಾತಿ, ನಟ ಮುಂತಾದ ನಾಟಕಗಳಲ್ಲಿ ನಟಿಸಿ ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುವರಲ್ಲದೆ ಅನೇಕ ವಿಚಾರಸಂಕೀರ್ಣಗಳಲ್ಲಿ ನಾಟಕರಂಗದ ಬಗ್ಗೆ ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡಿದ್ದಾರೆ. ದೂರದರ್ಶನ ಆಕಾಶವಾಣಿ ನಾಟಕಗಳಲ್ಲೂ ಭಾಗವಹಿಸಿದ್ದಾರೆ. ಕೆ.ಜಿ.ಎಫ್.ನ ನಾಟಕ ಚಟುವಟಿಕೆಗಳಲ್ಲಿ ಹೆಚ್ಚಿನ ಕ್ರಿಯಾಶೀಲರಾಗಿರುವ ಬಿ. ಆರ್. ಮಲ್ಲಿಕಾರ್ಜುನಯ್ಯ ಅವರು ಸಾಯೋಆಟ, ಸಂಗೊಳ್ಳಿರಾಯಣ್ಣ, ನೀಗಿಕೊಂಡ ಸಂಸ ಇತ್ಯಾದಿಯಾಗಿ ಹನ್ನೆರಡಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಇವರ ಒಥೆಲೋ ನಾಟಕಕ್ಕೆ ಶ್ರೇಷ್ಠ ನಟ ಹಾಗೂ ತೊಘಲಕ್ ನಾಟಕಕ್ಕೆ ಉತ್ತಮನಾಟಕ ಪ್ರಶಸ್ತಿ ಬಂದಿವೆ. ಈಡಿಪಸ್, ಸಂಕ್ರಾಂತಿ ಸೇರಿದಂತೆ ಹತ್ತಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಏಡ್ಸ್, ಕುಡಿತಗಳ ವಿರುದ್ಧ ಜನಜಾಗೃತಿ ಮೂಡಿಸುವಂತೆ ಬೀದಿ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಒಂದು ಅವಧಿಗೆ ರಾಜ್ಯ ನಾಟಕ ಅಕಾಡೆಮಿಯ ಸದಸ್ಯರಾಗಿದ್ದ ಮಲ್ಲಿಕಾರ್ಜುನಯ್ಯ ಅವರಿಗೆ ಅದೇ ಅಕಾಡೆಮಿಯಿಂದ ಪ್ರಶಸ್ತಿಯೂ ದೊರೆತಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಉತ್ಸಾಹಿ ಕಲಾವಿದರು ಹಲವಾರು ಚಾರಿತ್ರಿಕ, ಪೌರಾಣಿಕ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಸುಗಟೂರಿನ ಮಂಗಳ ಸಾಹಿತ್ಯ ವೇದಿಕೆಯವರು ಹಲವಾರು ನಾಟಕಗಳನ್ನು ಪ್ರಯೋಗಿಸಿದ್ದಾರೆ.

ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರಾದರೂ ಕಾರ್ಯಾರ್ಥವಾಗಿ ಕೆ.ಜಿ.ಎಫ್.ನಲ್ಲಿ ನೆಲೆಸಿರುವ ಅಚ್ಯುತ ಅವರು ಯಕ್ಷಗಾನದಲ್ಲಿ ಪರಿಶ್ರಮವಿದ್ದು, 'ಸಮುದಾಯ' ನಾಟಕ ಸಂಸ್ಥೆಯ ಸಂಪರ್ಕದಿಂದಾಗಿ ಕೆ.ಜಿ.ಎಫ್.ನಲ್ಲಿ ಅದರ ಶಾಖೆ ಸ್ಥಾಪಿಸಿದ್ದಲ್ಲದೆ ಸುಮಾರು ೨೦ ನಾಟಕಗಳು, ೧೫ ಬೀದಿ ನಾಟಕಗಳನ್ನು ನಿರ್ದೇಶಿಸಿದ್ದಾರೆ. ೫೦ಕ್ಕೂ ಹೆಚ್ಚು ನಾಟಕಗಳಿಗೆ ರಂಗವಿನ್ಯಾಸ, ಪ್ರಸಾಧನ ಇತ್ಯಾದಿ ಕಾರ್ಯನಿರ್ವಹಿಸಿದ್ದಾರೆ. ರಂಗ ತರಬೇತಿ ಶಿಬಿರ ಏರ್ಪಡಿಸಿದ್ದಾರೆ. ರಾಬರ್ಟ್‌ಸನ್ ಪೇಟೆಯಲ್ಲಿ 'ಬಹಿರಂಗ' ಎಂಬ ನಾಟಕ ತಂಡ ಸ್ಥಾಪಿಸಿದ್ದಾರೆ. ಇವರಂತೆಯೇ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ನ.ಕೃಷ್ಣಾಶೆಟ್ಟಿ ಅವರು ಹೊಳೆನರಸೀಪುರದವರಾಗಿದ್ದು, ಕೆ.ಜಿ.ಎಫ್.ನಲ್ಲಿದ್ದಾಗ, ಮೊದಲಿಗೆ ಹವ್ಯಾಸಿ ರಂಗಭೂಮಿಯಲ್ಲಿ ಕೆಲವು ನಾಟಕಗಳ್ನು ಅಭಿನಯಿಸಿ, ೧೯೭೭ರಲ್ಲಿ 'ರಂಗ ವರ್ಷ' ಎಂಬ ರಂಗ ತಂಡ ಸ್ಥಾಪಿಸಿ ಅಳಿಯದೇವರು, ಸಿರಿಸಂಪಿಗೆ, ಈಡಿಪಸ್ ಮುಂತಾದ ಹಲವಾರು ನಾಟಕಗಳನ್ನು ಪ್ರಯೋಗಿಸಿದ್ದಾರೆ. ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ನಾಟಕಗಳನ್ನು ಪ್ರಯೋಗಿಸಿ ಬಹುಮಾನಿತರಾಗಿದ್ದಾರೆ. ರಂಗ ತರಬೇತಿ ಶಿಬಿರ ಏರ್ಪಡಿಸಿದ್ದು, 'ನೀಗಿಕೊಂಡ ಸಂಸ' ನಾಟಕ ನಿರ್ದೇಶಿಸಿ ಪಾತ್ರ ವಹಿಸಿದ್ದಾರೆ. ಈ ನಾಟಕ ದೂರದರ್ಶನದಲ್ಲೂ ಹಲವಾರು ಬಾರಿ ಪ್ರಸಾರಗೊಂಡಿದೆ. ಕೋಲಾರ ತಾಲೂಕಿನ ಬೀರಮಾನಹಳ್ಳಿಯವರಾದ ವೆಂಕಗಿರಿಯಪ್ಪ (ಬಿ. ವಿ. ವಿ. ಗಿರಿ) ಅವರು ಹಲವಾರು ರಂಗ ಶಿಬಿರಗಳಲ್ಲಿ ತರಬೇತಿ ಪಡೆದು ಗುಣಮುಖ, ಸದಾರಮೆ ಇತ್ಯಾದಿ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಬೀದಿ ನಾಟಕಗಳಲ್ಲಿ ನಟರಾಗಿ ನಿರ್ದೇಶಕರಾಗಿ ಭಾಗವಹಿಸಿದ್ದಾರೆ. ೧೩ ನಾಟಕ, ಕವನ ಸಂಕಲನ, ಜನಪದ ಗೀತೆಗಳ ಸಂಕಲನ ರಚಿಸಿದ್ದು, ಕೆಲವು ಪ್ರಕಟಗೊಂಡಿವೆ. ಜಿಲ್ಲೆಯ ರಾಜ್ಯೋತ್ಸವ ಪ್ರಶಸ್ತಿ ಅಂಬೇಡ್ಕರ್ ಪ್ರಶಸ್ತಿ ಇತ್ಯಾದಿಗಳು ಲಭ್ಯವಾಗಿದೆ. ಕೋಲಾರ

ತಾಲೂಕಿನ ಚುಂಚದೇವನ ಹಳ್ಳಿ ಗ್ರಾಮದ ಸಿ. ಆರ್. ಚಿನ್ನಪ್ಪ, ಶ್ರೀಕೃಷ್ಣ ಗಾರುಡಿ, ಸಂಪೂರ್ಣ ರಾಮಾಯಣ ಇತ್ಯಾದಿ ನಾಟಕಗಳಲ್ಲಿ ಭಾಗವಹಿಸಿದ್ದು, ಈಚೆಗೆ ನಾಟಕ ಪ್ರದರ್ಶನಕ್ಕೆ ಬೇಕಾಗುವ ಪೂರಕ ವಸ್ತ್ರಾಭರಣ, ರಂಗ ಸಜ್ಜಿಕೆಗಳನ್ನು ಪೂರೈಸುವ ಕಾರ್ಯ ಕೈಗೊಂಡಿದ್ದಾರೆ. ಮಲೆನಾಡಿನವರಾದ ಫ್ಲೋರಾ ಅಚ್ಯುತ ಅವರು ಕೆ. ಜಿ. ಎಫ್.ನಲ್ಲಿ ನೆಲೆಸಿದ್ದು, 'ಕತ್ತಲೆ ದಾರಿ ದೂರ'ದಿಂದ ರಂಗಭೂಮಿ ಪ್ರವೇಶಿಸಿದ್ದು, ಕುರಿ, ತಾಮ್ರ ಪತ್ರ, ಹುತ್ತದ ಬಡಿದೊಡೆ, ಸೂರ್ಯಶಿಖಾರಿ ಇತ್ಯಾದಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸ್ವತಃ ಮಹಿಳಾ ಕಲಾವಿದರಾಗಿ ಮಹಿಳೆಯರಿಗಾಗಿಯೇ ಕೆರೆಗೆ ಹಾರ, ಚಾರ್ವಾಕ ಇತ್ಯಾದಿ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಬೀದಿ ನಾಟಕಗಳಲ್ಲೂ ಅಭಿನಯಿಸಿದ್ದಾರೆ. ವೇಮಗಲ್ ಬಳಿಯ ಸೀತಿ ಹೊಸೂರಿನ ಬಸವರಾಜಪ್ಪ ಅವರು ಗುಬ್ಬಿ ಹಾಗೂ ಮತ್ತಿತರ ಕಂಪನಿಗಳಲ್ಲಿ ನಟರಾಗಿದ್ದು, ನಂತರ ನಾಟಕದ 'ಮೇಷ್ಟ್ರು' ಆಗಿ ಅನೇಕ ತಂಡಗಳಿಗೆ ನಾಟಕ ಕಲಿಸಿ, ಆಡಿಸಿದ್ದಾರೆ. ಅದೇ ವೇಮಗಲ್ ಬಳಿಯ ಮದ್ದೇರಿಯವರಾದ ಪಿ.ಮುನಿರೆಡ್ಡಿ ಅವರು ಬಾಲ್ಯದಲ್ಲಿಯೇ ವೃತ್ತಿ ಕಲಾವಿದರಾಗಿ ರಾಮಾಯಣ, ಭಾರತಗಳಂತಹ ದೊಡ್ಡ ಪ್ರಮಾಣದ ನಾಟಕಗಳಲ್ಲಿ ಪಾತ್ರವಹಿಸಿದ್ದಲ್ಲದೆ ಬುದ್ಧ, ಭೀಮ ಮುಂತಾದ 'ಏಕಪಾತ್ರಾಭಿನಯ'ವನ್ನು ರಾಜ್ಯಾದ್ಯಂತ ಪ್ರದರ್ಶಿಸಿದ್ದಾರೆ. ನಾಟಕ ಅಕಾಡಮಿಯಿಂದ ೧೯೯೪ರಲ್ಲಿ ಪುರಸ್ಕೃತರಾಗಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಇನ್ನೊಬ್ಬ ಮಹಿಳಾ ಕಲಾವಿದೆ ಶಾರದಾ ಶೇಷಾದ್ರಿ 'ಕನ್ನಡ ಮಿತ್ರರು' 'ಸ್ನೇಹ ಸಂಪದ' ತಂಡಗಳ ಮೂಲಕ ೮೦ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದು, 'ಸ್ನೇಹ ಸಂಪದ ಮಹಿಳಾ ತಂಡದ' ಮುಖ್ಯಸ್ಥರಾಗಿ ನಾಟಕಗಳ ನಿರ್ದೇಶನ ಮಾಡಿದ್ದಾರೆ. ಕೆಲವು ನಾಟಕಗಳಲ್ಲಿ ಪುರುಷ ಪಾತ್ರವನ್ನು ವಹಿಸಿದ್ದಾರೆ. ಅನೇಕ ನಾಟಕಗಳಲ್ಲಿ ಶ್ರೇಷ್ಠ ನಟಿ ಪ್ರಶಸ್ತಿಗಳಲ್ಲದೆ ಹಲವಾರು ಸಂಘಸಂಸ್ಥೆಗಳೂ ಗೌರವಿಸಿವೆ. ಚಿಂತಾಮಣಿಯ ಹೈದರ್ ಬೇಗ್ ಅವರು ೩೫ಕ್ಕೂ ಹೆಚ್ಚು ವರ್ಷಗಳಿಂದ ಪ್ರಸಾಧನ ಕಲಾವಿದರಾಗಿ ಪ್ರಸಿದ್ಧಿ ಪಡೆದಿರುವುದಲ್ಲದೆ ಕೃಷ್ಣಲೀಲಾ, ಸಂಪೂರ್ಣ ರಾಮಾಯಣಗಳಲ್ಲಿ ಅಭಿನಯಿಸಿದ್ದಾರೆ. ಸಂಸ್ಥೆಗಳಿಂದ ಪುರಸ್ಕೃತರಾಗಿದ್ದಾರೆ.

ನಾಟಕ ರಚನಕಾರ, ನಟ, ನಿರ್ದೇಶಕ, ಅಂಕಣಕಾರ ಇತ್ಯಾದಿಗಳಿಂದ ಜನಪ್ರಿಯತೆ ಪಡೆದ ಟಿ. ಎನ್. ಸೀತಾರಾಂ ಅವರ ಸಮಕಾಲೀನ ವಸ್ತುಗಳುಳ್ಳ 'ಬದುಕ ಮನ್ನಿಸು ಪ್ರಭುವೆ', 'ಆಸ್ಫೋಟ', 'ನಮ್ಮೊಳಗೊಬ್ಬ ನಾಜೂಕಯ್ಯ' ನಾಟಕಗಳು ಮಹತ್ವದ ಕೊಡುಗೆಗಳು. ನಾಟಕ ಅಕಾದೆಮಿಯಿಂದ ೧೯೯೫ರಲ್ಲಿ ರಾಜ್ಯ ಪ್ರಶಸ್ತಿ ಪಡೆದ ಇವರ ನಾಟಕ 'ನಮ್ಮೊಳಗೊಬ್ಬ ನಾಜೂಕಯ್ಯ' ನಾಟಕ ಅಕಾಡೆಮಿಯಿಂದ ಪುರಸ್ಕೃತವಾಗಿದೆ. ರಂಗಭೂಮಿ, ಕಿರುತೆರೆ ಹಾಗೂ ಸಿನಿಮಾಗಳ ನಟರಾದ ಟಿ.ಜಿ.ನರಸಿಂಹಮೂರ್ತಿ ಅವರು ಮಾಸ್ತಿ ಬಳಿಯ ತೊಳಕನಹಳ್ಳಿಯವರು. 'ಜೋಕುಮಾರಸ್ವಾಮಿ', 'ಹುತ್ತವಬಡಿದರೆ', 'ಈಡಿಪಸ್', 'ಸೂರ್ಯ ಶಿಕಾರಿ' ಇತ್ಯಾದಿ ನಾಟಕಗಳಲ್ಲಿ ಭಾಗವಹಿಸಿದ್ದು, ಕನ್ನಡ ರಾಜ್ಯೋತ್ಸವದ ಅಂಗವಾಗಿ ಕೋಲ್ಕತ, ದೆಹಲಿ, ಹೈದರಾಬಾದ್‌ಗಳಲ್ಲಿ ಪ್ರದರ್ಶನ ನೀಡಿದ್ದಾರೆ.

ಗುಡಿಬಂಡೆಯ ಬೀಚಗಾನಹಳ್ಳಿಯ ಬಿ.ವಿಜಯಕುಮಾರ್ ಅವರು ಚಿಕ್ಕಂದಿನಲ್ಲಿಯೇ ನಾಟಕಗಳಲ್ಲಿ ಪಾತ್ರವಹಿಸಿದ್ದು ಚಿಕ್ಕಬಳ್ಳಾಪುರದಲ್ಲಿ ೧೯೯೨ರಲ್ಲಿ ಆರಂಭವಾದ ಇವರ ಐಶ್ವರ್ಯ ಕಲಾನಿಕೇತನದಿಂದ ಬೇಸಿಗೆಯ ರಜೆಯಲ್ಲಿ ಮಕ್ಕಳ ರಂಗ ಶಿಬಿರ ಏರ್ಪಡಿಸಿ 'ರಂಗ ಮುಖೇನ ಶಿಕ್ಷಣ' ನೀಡುವಂತೆ 'ಪಠ್ಯ ನಾಟಕ ಪ್ರದರ್ಶನ'ಗಳನ್ನು ರಾಜ್ಯಾದ್ಯಂತ 'ರಂಗ ತಿರುಗಾಟ'ದ ಮೂಲಕ ಮಾಡಿದೆ. ಇದರಿಂದಾಗಿ ಗದ್ಯ ಪದ್ಯಗಳನ್ನು ದೃಶ್ಯ ರೂಪದಲ್ಲಿ ಪ್ರದರ್ಶಿಸಿದಾಗ ಪರೀಕ್ಷೆಯಲ್ಲಿ ಆಯಾ ಪಠ್ಯದ ಪ್ರಶ್ನೆಗಳಿಗೆ ಉತ್ತರಿಸಲು ಸಹಾಯಕವಾಗುತ್ತದೆ ಎಂಬ ಉದ್ದೇಶದಿಂದ 'ಶಿಕ್ಷಣದಲ್ಲಿ ರಂಗ ಕಲೆ' ಎನ್ನುವುದು ಆವಿಷ್ಕಾರಗೊಂಡಿದೆ.

## ಜನಪದ

ಉಳಿದ ಜಿಲ್ಲೆಗಳಂತೆ ಕೋಲಾರ ಜಿಲ್ಲೆಯೂ ಜನಪದ ಕ್ಷೇತ್ರಕ್ಕೆ ತನ್ನ ಕಾಣಿಕೆಯನ್ನು ನೀಡಿದೆ. ಕೇಳಿಕೆ, ಬುರ್‍ರಕಥಾ ಕೋಲಾಟ, ಕಣಿ, ತೊಗಲು ಗೊಂಬೆಯಾಟ, ಕರಡಿ ಕುಣಿತ, ಗೊರವಯ್ಯನ ವೇಷ, ಕೊಂಡರಾಜರ ಶಾಸ್ತ್ರ ಶಕುನ, ಭವಿಷ್ಯದ ಪದ, ಜೋಗಿ ಜಂಗಾಲರ ಪದ, ಯಾಲುಪದ, ಹಲಗೆ, ತಮಟೆ ಮುಂತಾದ ಪ್ರಕಾರಗಳಲ್ಲದೆ ಹುಲಿವೇಷ, ಕೀಲುಕುದುರೆ, ಗಾರುಡಿಗೊಂಬೆಗಳಂತಹ ಮನರಂಜನೆಯ ಪ್ರಕಾರಗಳು ಕಾಣಬಹುದು. ಅಲ್ಲದೆ ಕೋಲಾಟದ ಹಾಡುಗಳಿವೆ. ಸಂಕ್ರಾಂತಿಯಲ್ಲಿ ಗೊಬ್ಬಿಳ್ಳು ಹಾಡುಗಳು ಹಾಡುತ್ತಾರೆ. ಇವುಗಳಲ್ಲಿ ಸ್ತ್ರೀಪರವಾದ ದೃಷ್ಟಿಕೋನ ಇದೆ. ಸ್ವಾತಂತ್ರ ಸಂಗ್ರಾಮ ಜಿಲ್ಲೆಯಲ್ಲಿ ನಡೆದದ್ದು ರಾಷ್ಟ್ರೀಯ ಮಟ್ಟದಲ್ಲಿ

ಪ್ರಸಿದ್ಧವಾಯಿತು. ವಿಶೇಷವಾಗಿ ವಿದುರಾಶ್ವತ್ಥದ ಹತ್ಯಾಕಾಂಡ–ಜಲಿಯನ್‌ವಾಲಾಬಾಗ್‌ನಂತೆ ಸಾವು ನೋವುಂಟು ಮಾಡಿದ್ದಾಗಿತ್ತು. ಇದೂ ಸೇರಿದಂತೆ 'ಸ್ವಾತಂತ್ರ್ಯ ಸಂಗ್ರಾಮದ ಗೀತೆಗಳು' ಜಿಲ್ಲೆಯಲ್ಲಿ ಕೇಳಸಿಗುತ್ತವೆ. ಕೆ.ಜಿ.ಎಫ್‌ನ ಗಣಿಗಾರಿಕೆ ಒಂದು ಹಳೆಯ ಉದ್ಯಮವಷ್ಟೇ ಅಲ್ಲ. ಅಲ್ಲಿಯ ಕಾರ್ಮಿಕ ಸಂಘ ಸ್ವಾತಂತ್ರ್ಯಪೂರ್ವದಲ್ಲಿ ಸಂಘಟಿತವಾಗಿ ಕಾರ್ಮಿಕರು, ಗಣಿಗಾರಿಕೆಯ ಪರಿಸ್ಥಿತಿ, ಕಾರ್ಮಿಕರ ಬವಣೆ, ಬ್ರಿಟಿಷರ ಕುಟಿಲತೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಪಾರವಾದ ಜನಪದ ಲಭ್ಯವಿದೆಯೆಂದು ಕೆಆರ್.ಸಂಧ್ಯಾರೆಡ್ಡಿ ಅವರು ತಿಳಿಸುತ್ತಾರೆ. ಜಿಲ್ಲೆಯಲ್ಲಿ ತೆಲುಗು ತಮಿಳು ಭಾಷಿಕರೂ ಇರುವುದರಿಂದ ಸಮ್ಮಿಶ್ರ ಜನಪದ ಸಂಸ್ಕೃತಿ ಕಂಡುಬರುತ್ತದೆ.

ಮಕ್ಕಳಿಗೆ ಕೂದಲು ತೆಗೆಸುವಾಗ ಹೊಲದಲ್ಲಿ ಚಪ್ಪರ ನಿರ್ಮಿಸಿ, ಕಲ್ಲು ಬೊಂಬೆಗಳನ್ನಿಟ್ಟು ಮುಂದೆ ಮಣ್ಣಿನಲ್ಲಿ 'ಮುನಿದೇವರ' ಚಿತ್ರ ಬಿಡಿಸಿ ಕುಂಕುಮ, ಅರಿಶಿಣ, ಇದ್ದಲುಗಳಿಂದ ಬಣ್ಣ ತುಂಬಿ, ಬಲಿ ನೀಡಿ ಆಚರಣೆ ಮಾಡುತ್ತಾರೆ. ಅಗ್ಗಾರ್ಲು (ಅಕ್ಕಗಾರಲು) ಆಚರಣೆಯಲ್ಲಿ ಆಲ, ಬೇವು ಇತ್ಯಾದಿ ಮರಗಳ ಕೆಳಗೆ ಬಲಿ ನೀಡಿ ಮಣ್ಣಿನ ಕುದುರೆಗಳನ್ನು ಹರಕೆಯಾಗಿ ಅರ್ಪಿಸಿ ಇಡುತ್ತಾರೆ. ಜಿಲ್ಲೆಯಲ್ಲಿ ಸಿಡೀರಣ್ಣ, ಏಕತಾರಿ, ಬುರ‍್ರಕಥಾ, ಡಿಕಾಂಬರಿ ವೇಷ, ಲಂಬಾಣಿ ಕುಣಿತ, ಸುಗ್ಗಿಯ ಕುಣಿತಗಳು ಕಂಡುಬರುತ್ತವೆ. ಜಿಲ್ಲೆಯಲ್ಲಿ ಹೆಚ್ಚು ಬಳಕೆಯಲ್ಲಿರುವುದು ಕರಗದ ಕುಣಿತ. ಪಂಡರಾಪುರಕ್ಕೆ ನಡೆದುಕೊಳ್ಳುವವರೂ ಅನೇಕರಿದ್ದು ಪಂಡರಿಭಜನೆಯೂ ಜಿಲ್ಲೆಯಾದ್ಯಂತ ಇವೆ. ನಂದಿಧ್ವಜ, ಬೀರೇದೇವರ ಡೋಲು, ಮರಗಾಲು ಕುಣಿತ, ಬುಡುಬುಡಿಕೆಯವರೂ ಇದ್ದಾರೆ.

ಮುಳಬಾಗಿಲು ತಾಲೂಕಿನ ಎಚ್.ಗೊಲ್ಲಹಳ್ಳಿಯ ವಿ.ವೆಂಕಟಮುನಿಯಪ್ಪ ಅವರು ಜನಪದ, ಕವಾಲಿ, ಬುರ‍್ರಕಥೆ, ಹಳ್ಳಿನಾಟಕಗಳಲ್ಲಿ ತೊಡಗಿಸಿಕೊಂಡವರು. ಕೆಲವು ರಚನೆಗಳನ್ನೂ ಮಾಡಿದ್ದಾರೆ. ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ೧೯೯೮ರಲ್ಲಿ ಪ್ರಶಸ್ತಿ ಪಡೆದಿದ್ದಾರೆ. ಶಿಡ್ಲಘಟ್ಟದ ಪಿಂಡಪಾಪನಹಳ್ಳಿಯ ಮುನಿವೆಂಕಟಪ್ಪ ತಮಟೆವಾದನದಲ್ಲಿ ರಾಜ್ಯಮಟ್ಟದ ಶ್ರೇಷ್ಠ ಕಲಾವಿದರೆಂದು ಗುರುತಿಸಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಪ್ರಶಸ್ತಿ ಹಾಗೂ ಅಂಬೇಡ್ಕರ್ ಪ್ರಶಸ್ತಿಗಳು ದೊರೆತಿವೆ. ಕೋಲಾರ ತಾಲೂಕಿನ ತುಡುಮು ಮುನಿವೆಂಕಟಪ್ಪ ಸಹ ತಮಟೆ ವಾದನದಲ್ಲಿ ಹಾಗೂ ಡೊಂಕಿಣಿ ಮುನಿಸ್ವಾಮಪ್ಪ ತಟಿಕೆ ಶೃತಿ ವಾದನದಲ್ಲಿ ಖ್ಯಾತರಿದ್ದಾರೆ. ಗುಡಿಬಂಡೆಯ ಕಡೇಹಳ್ಳಿಯ ಲಾವಣಿಕಾರ ನಂಜುಂಡರೆಡ್ಡಿ ಅವರು ೧೯೫೪ರಿಂದಲೂ ಹಲವಾರು ಕಡೆ ಲಾವಣಿ ಕಾರ್ಯಕ್ರಮ ನೀಡಿದ್ದಾರೆ. ಬಾಗೇಪಲ್ಲಿಯಲ್ಲಿ ಜನಿಸಿದ ಹಜರತ್ ಹುಸೇನ್ ಷಾವಲಿ (೧೮೮೩–೧೯೬೩) ದೀಕ್ಷೆ ಪಡೆದು ಹುಸೇನ್ ದಾಸ ಎಂದು ನಾಮಾಂಕಿತರಾಗಿ ತತ್ವ ಬೋಧನೆ ಮಾಡುತ್ತಿದ್ದು ಹಿಂದು–ಮುಸ್ಲಿಂ ಐಕ್ಯತೆ ತಂದಂತಹವರು. ಇವರನ್ನು ಕುರಿತು ಹಲವಾರು ಪದಗಳು ಕನ್ನಡ ಹಾಗೂ ಉರ್ದುವಿನಲ್ಲಿದೆ. ಗುಡಿಬಂಡೆಯ ಗವಿಗುಂಟನಹಳ್ಳಿಯ ಆಂಜಿನಪ್ಪ ಮುಖವೀಣೆಯಲ್ಲಿ ಪ್ರವೀಣರಿದ್ದು ಬಾಯಿ ಹಾಗೂ ಮೂಗುಗಳಿಂದಲೂ ಸ್ವರ ಮಾಧುರ್ಯ ಹೊರಡಿಸಬಲ್ಲವರು. ರಾಜ್ಯ ಜನಪದ ಯಕ್ಷಗಾನ ಅಕಾಡೆಮಿಯದೂ ಸೇರಿದಂತೆ ಹಲವು ಪ್ರಶಸ್ತಿಗಳು ಬಂದಿವೆ.

ಕೋಲಾರದ ಆಡುಮಾತೇ ಮಿಶ್ರವಾಗಿರುವುದರಿಂದ ಹಾಗೂ ಇನ್ನಿತರ ಕಾರಣಗಳಿಂದ ಜಿಲ್ಲೆಯ ಜನಪದ ಸಾಹಿತ್ಯ ಸಂಗ್ರಹಕಾರ್ಯ ಹೆಚ್ಚಾಗಿ ಆಗಿಲ್ಲ. ಇಂದಿಗೂ ಬಳಕೆಯಲ್ಲಿರುವ ಬುರ‍್ರಕಥಾ, ಪೆದ್ದಬೊಬ್ಬಲಿರಾಜ, ಮುಗ್ಗುರು ಮರಾಟಿಲು, ಕಾಟಮರಾಜ, ಕಾಂಭೋಜರಾಜ ಮುಂತಾದ ಕಥೆಗಳನ್ನು ದಿನದ ಮಟ್ಟಿಗಲ್ಲದೆ ಎರಡರಿಂದ ಏಳು ರಾತ್ರಿಗಳವರೆಗೂ ನೃತ್ಯ, ಅಭಿನಯಗಳ ಮೂಲಕ ನಡೆಸುವಂತಿದ್ದು ಅವು ಹೆಚ್ಚಾಗಿ ಮೌಖಿಕವಾಗಿಯೇ ಉಳಿದಿವೆ. ಈ ಹಿಂದೆ ಗಮನಿಸಿದಂತೆ ಜಿಲ್ಲೆಯ ತೆಲುಗು ಸಾಹಿತಿಗಳು ಬರೆದಿರುವ ಯಕ್ಷಗಾನ ನಾಟಕಗಳು ಜನಪದೀಯವೆನ್ನಬಹುದಾಗಿದೆ. ಪ್ರಾಯಶ: ಮಾಸ್ತಿ ವೆಂಕಟೇಶ ಅಯ್ಯಂಗಾರರು ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಿದ 'ಕರ್ನಾಟಕದ ಜನಪದ ಸಾಹಿತ್ಯ'ವೇ ಜಿಲ್ಲೆಯವರ ಮೊದಲ ಈ ಬಗೆಯ ಕಾರ್ಯವಾಗಿರಬಹುದು. ಭಾರತಿ (ತಿ.ತಾ.ಶರ್ಮ ಅವರ ಪತ್ನಿ) ಅವರು ಜಿಲ್ಲೆಯ ಜನಪದ ಸಾಹಿತ್ಯ ಕುರಿತು ಬರೆದಂತೆ ತಿಳಿದುಬರುತ್ತದೆ. ಅಂದನೂರು ಶೋಭ ಅವರ 'ಕೊಂಬೆ ರೆಂಬೆಲ್ಲ ಎಳೆಗಾಯಿ' ಒಂದು ಬೃಹತ್ ಸಂಗ್ರಹವಾಗಿದೆ. ಕ್ಯಾತನಹಳ್ಳಿರಾಮಣ್ಣ, ಆರ್.ಶೇಷಶಾಸ್ತ್ರಿ ಅವರು ಸಂತೆಕಲ್ಲಹಳ್ಳಿಯ ದಳಸಗೆರೆ ದ್ಯಾವಮ್ಮ ಅವರು ಹೇಳಿದ ಜನಪದ ಕಥೆಗಳನ್ನು ಸಂಗ್ರಹಿಸಿ, ಜನಪದ ತಜ್ಞ ಎ.ಕೆ.ರಾಮಾನುಜನ್ ಅವರಿಗೆ ಕಳಿಸಿಕೊಟ್ಟಿದ್ದು ಅದಕ್ಕೆ ಜಾಗತಿಕ ಸ್ಥಾನ ಸಿಗುವಂತಾಗಿದ್ದು ಸಂಗ್ರಹವನ್ನು ಅಂದನೂರು ಶೋಭ ಅವರು ಪ್ರಕಟಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಮುಳಬಾಗಿಲಿನಲ್ಲಿ ೧೯೭೦ರಲ್ಲಿ ಜನಪದ ಕಲಾ ಮಹೋತ್ಸವವೊಂದು ಏರ್ಪಾಡಾಗಿದ್ದು ಆ ಸಂದರ್ಭದಲ್ಲಿ 'ಮುಂಗೋಳಿ ಕೂಗಿತು' ಎಂಬ ಹೆಸರಿನಲ್ಲಿ ಸ್ಮರಣಸಂಚಿಕೆ ಹೊರತರಲಾಗಿದ್ದು ಜಿಲ್ಲೆಯ

ಜನಪದ ಕಲೆ–ಕಲಾವಿದರು, ಸಾಹಿತ್ಯ ಕಲಾಪ್ರಕಾರಗಳು ಇತ್ಯಾದಿ ಅನೇಕ ಲೇಖನಗಳನ್ನು ಒಳಗೊಂಡಿದೆ. ಜಿ.ಆರ್.ತಿಪ್ಪೇಸ್ವಾಮಿಯವರು ಜಿಲ್ಲೆಯ ಕೋಲಾರಮ್ಮ ಇತ್ಯಾದಿ ಗ್ರಾಮದೇವತೆಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಉತ್ತನೂರು ರಾಜಮ್ಮ ಅವರು ಜನಪದ ಹಾಗೂ ಜನಪದ ಸಂಸ್ಕೃತಿ ಕುರಿತು ಹಲವಾರು ಲೇಖನಗಳನ್ನು ಬರೆದಿದ್ದು ಸಂಗ್ರಹಕಾರ್ಯವನ್ನು ವ್ಯವಸ್ಥಿತವಾಗಿ ನಡೆಸುತ್ತಿದ್ದಾರೆ. ಜನಪದ ಹಾಡುಗಾರ್ತಿ ಅಕ್ಕಯಮ್ಮ ಮುಂತಾದವರನ್ನು ಪರಿಚಯಿಸಿದ್ದಾರೆ. ಮಾಲೂರಿನ ಸುಮಿತ್ರ ಅವರು ಆ ಪ್ರದೇಶದ ಜನಪದ ಸಾಹಿತ್ಯ ಪ್ರಕಾರಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿದ್ದು ಕೋಲಾರದಲ್ಲಿ ಪ್ರಸಿದ್ಧವಾದ ಕರಗದ ಆಚರಣೆಗಳನ್ನು ಕುರಿತು ಪುಸ್ತಕ ಪ್ರಕಟಿಸಿದ್ದಾರೆ. ಇವರಲ್ಲದೆ ಗಿರಿಜಾ ಶಾಂತಾರಾಂ, ಶ್ರೀವಾಣಿ ಪ್ರಹ್ಲಾದರಾವ್, ಎಚ್.ಕೆ.ರಾಘವೇಂದ್ರ, ಎಸ್.ಸುಬ್ರಾಯ, ಎಂ.ನಾಗರಾಜಮೂರ್ತಿ, ವಿ.ಪೆರುಮಾಳ್ ಮುಂತಾದ ಅನೇಕರು ಜಿಲ್ಲೆಯ ಜನಪದ ಸಾಹಿತ್ಯದ ಬಗ್ಗೆ ಸಂಶೋಧನೆ ಹಾಗೂ ಲೇಖನಗಳನ್ನು ಬರೆದಿದ್ದಾರೆ. ಈ ಜಿಲ್ಲೆಯ ತೆಲುಗು–ಕನ್ನಡ ಜನಪದ ಗೀತೆ, ಕಥೆಗಳನ್ನು ಕುರಿತು ಆರ್.ವಿ.ಎಸ್.ಸುಂದರಂ, ಪೆದ್ದಿರೆಡ್ಡಿ ಅವರು ತೆಲುಗಿನಲ್ಲಿ ಸಂಶೋಧನಾ ಲೇಖನಗಳನ್ನು ಬರೆದಿದ್ದಾರೆ. ಹೊಸೂರು ಮುನಿಸ್ವಾಮಪ್ಪ ನಟುವರನ್ನು ಕುರಿತು ಅಧ್ಯಯನ ಮಾಡಿ ಪುಸ್ತಕ ರಚಿಸಿದ್ದಾರೆ. ಸಂತೆಕಲ್ಲಹಳ್ಳಿಯ ಎನ್. ಚಂದ್ರಪ್ಪ ಅವರು ಮೊಂಡ ಸಂಸ್ಕೃತಿಯ ಬಗ್ಗೆ ಅಧ್ಯಯನ ಮಾಡಿ ಪುಸ್ತಕ ರಚಿಸಿರುವುದಲ್ಲದೆ ತಮ್ಮದೇ ಆದ ಮುಂಡ ಪ್ರಕಾಶನದಿಂದ ಜನಪದ ಅಧ್ಯಯನ ಕುರಿತ ಪುಸ್ತಕಗಳನ್ನು ಹೊರತಂದಿದ್ದಾರೆ. 'ಎಲ್ಲಮ್ಮ ಒಂದು ಜಾನಪದೀಯ ಅಧ್ಯಯನ' ವಲ್ಲದೆ 'ಕಾಲುಕಡಗ' ಎಂಬ ನಾಟಕ ಸಹ ಬರೆದಿದ್ದಾರೆ.

### ಜನಪದ ಕಲಾಪ್ರಕಾರಗಳು

ಮುಳಬಾಗಿಲಿನಲ್ಲಿ ಜನಪದ ಕಲಾಮಹೋತ್ಸವ ಏರ್ಪಡಿಸಿದಾಗ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಜಿಲ್ಲೆಯ ಜನಪದ ಕಲೆಗಳ ಬಗ್ಗೆ ಸರ್ವೇಕ್ಷಣೆಯೊಂದನ್ನು ನಡೆಸಿತು. ಕ್ಷೇತ್ರಕಾರ್ಯದಲ್ಲಿ ಜಿಲ್ಲೆಯದೆಂದೇ ಹೇಳಬಹುದಾದ ೫೭ ಕಲಾಪ್ರಕಾರಗಳನ್ನು ಗುರುತಿಸಲಾಗಿದ್ದು ಅವುಗಳಲ್ಲಿ ಆರಾಧನಾ ಕಲೆ ಹಾಗೂ ಮನೋರಂಜನಾ ಕಲೆಗಳೆಂದು ಬೇರ್ಪಡಿಸಿ ಕೆಲವು ಪ್ರಕಾರಗಳನ್ನು ವಿವರವಾಗಿ ಸ್ಮರಣ ಸಂಚಿಕೆ 'ಮುಂಗೋಳಿ ಕೂಗಿತು'ವಿನಲ್ಲಿ ಪ್ರಕಟಿಸಿದೆ. ಅವುಗಳ ಸಂಗ್ರಹ ರೂಪ ಮುಂದೆ ಕೊಟ್ಟಿದೆ.

ಸಿಡೀರಣ್ಣ ಎಂಬುದು ಗ್ರಾಮದೇವತೆಗಳ ಉತ್ಸವ, ಜಾತ್ರೆಗಳಲ್ಲಿ ಆಡುವ ಗಂಡು ದೇವತೆಯ ಆರಾಧನಾ ರೂಪ. ಮರದಿಂದ ರೂಪಿಸಿದ ಸಿಡೀರಣ್ಣನ ಮೂರ್ತಿಯನ್ನು ಉದ್ದನೆಯ ಕಂಬವೊಂದರ ಮೇಲೆ ಅಡ್ಡಲಾಗಿ ಅಳವಡಿಸಿದ ಕಂಬದ ಒಂದು ಬದಿಗೆ ಕಟ್ಟಿ ಇನ್ನೊಂದು ಬದಿಗೆ ಹೊಂದಿಸಿರುವ ಹಗ್ಗದಿಂದ ತಿರುಗಿಸುವಂತಹ ಆಚರಣೆಯದು. ಇದರೊಂದಿಗೆ ಹರಕೆ ಹೊತ್ತವರು ಹಾಗೂ ನಿರ್ದಿಷ್ಟ ಜನಾಂಗದವರು ಸಿಡೀರಣ್ಣನ ವಿಗ್ರಹವನ್ನು ಹೊತ್ತು ಕುಣಿಯುವರು.

ಸೋರೆಬುರುಡೆಯನ್ನು ಸಣ್ಣ ಕೋಲಿಗೆ ಸೇರಿಸಿ ಒಂದೇ ತಂತಿಯನ್ನು ಕಟ್ಟಿರುವಂತಹ ವಾದ್ಯ 'ಏಕತಾರಿ'ಯನ್ನು ಧಾರ್ಮಿಕ ಗಾಯಕರು, ವಿರಕ್ತರು, ದೈವಭಕ್ತರು ನುಡಿಸುತ್ತಾ ತತ್ವ ಹಾಗೂ ದೈವಪರವಾದ ಪದಗಳನ್ನು ಹಾಡುತ್ತಾರೆ.

ಪಂಡರಿನಾಥ ಮಹಾರಾಷ್ಟ್ರದ ಮೂಲದ್ದಾದರೂ, ಜಿಲ್ಲೆಯಲ್ಲಿಯ 'ಪಂಡರಿಭಜನೆ' ಯಲ್ಲಿ ಸಾಹಿತ್ಯ ಭಾಗ ಅಧಿಕವಾಗಿ ತೆಲುಗಿನಲ್ಲಿ ಇರುವ ಪ್ರಯುಕ್ತ ಆಂಧ್ರದಿಂದ ಇಲ್ಲಿಗೆ ಬಂದಿರಬಹುದು. ಅರಿಸಿನ ಬಣ್ಣದ ವಸ್ತ್ರ ಧರಿಸಿ, ಧ್ವಜಗಳನ್ನು ನೆಟ್ಟು ಸುಮಾರು ಮೂವತ್ತು ಮಂದಿ ಸಾಮೂಹಿಕವಾಗಿ ಗೆಜ್ಜೆ ಮೃದಂಗ, ತಾಳ, ಹಾರ್ಮೋನಿಯಂ, ಕೊಳಲು ವಾದ್ಯಗಳ ನಿನಾದಕ್ಕೆ ಅನುಸಾರವಾಗಿ ಲಯಬದ್ಧವಾಗಿ ಕುಣಿಯುವುದು ಈ ಪ್ರಕಾರದ ವೈಶಿಷ್ಟ್ಯ. ಕೆಲವೊಮ್ಮೆ ಗೀತೆಯೊಂದಿಗೆ ವೇಷಭೂಷಣಗಳ ಸಮೇತ ಪೌರಾಣಿಕ ಸನ್ನಿವೇಶಗಳನ್ನು ಅಭಿನಯಿಸುವುದೂ ಉಂಟು. ಶಿಡ್ಲಘಟ್ಟ ತಾಲೂಕಿನ ದೇವರ ಮಳ್ಳೂರಿನ ಬಾಲಕಿಯರ ಕಳಸ ನೃತ್ಯ ಆಕರ್ಷಕವಾಗಿದ್ದು, ದೆಹಲಿಯ ಗಣರಾಜ್ಯೋತ್ಸವದಲ್ಲಿ ಪಾಲ್ಗೊಂಡಿತ್ತು. ಆದರೆ ಈಗ ಅದು ನಶಿಸುತ್ತಿದೆ.

ಬಿದುರಿನ ತಟಿಕೆಯಿಂದ ಕುದುರೆಯ ಶರೀರಭಾಗ ಹೋಲುವಂತೆ ಹೆಣೆದು, ವಸ್ತ್ರಾಭರಣ, ಜೀನು ಇತ್ಯಾದಿ ಹೊಂದಿಸಿದ ಆಕೃತಿಯನ್ನು ಸೊಂಟಕ್ಕೆ ಕಟ್ಟಿಕೊಂಡು ಅಶ್ವಾರೂಢನಂತೆ ಜನಪದ ವಾದ್ಯಗಳ ತಾಳಕ್ಕೆ ತಕ್ಕಂತೆ ಮೂಕ ನರ್ತನ ಮಾಡುವಂತ

ಮನರಂಜನೆಯ ಪ್ರಕಾರದ್ದು 'ಕೀಲುಕುದುರೆ'. ಸಾಮಾನ್ಯವಾಗಿ ರಾಜ-ರಾಣಿಯರು ಕುದುರೆಯೊಂದಿಗೂ, ವಿಚಿತ್ರ ವೇಷಧಾರಿಯಾಗಿ ವಿದೂಷಕನೂ ಇರುವಂತೆ, ಅಂಗಾಂಗಗಳ ಚಲನೆಯನ್ನು ಸಂಜ್ಞೆಯಂತೆ ಬಳಸುತ್ತಾ ಹಾಸ್ಯಮಯವಾಗಿ ನಾಟಕದಂತೆ ರಂಜಿಸುವಂತಹದು.

ಕೋಲಾರ ಹಾಗೂ ಬೆಂಗಳೂರು ಜಿಲ್ಲೆಗಷ್ಟೇ ಸೀಮಿತವಿರುವ 'ಕರಗ ಶಕ್ತಿ ನೃತ್ಯ' ಜನಪದ ಪ್ರಕಾರಕ್ಕಿಂತ ಹೆಚ್ಚಿನದಾಗಿದ್ದು ಒಂದು ಜನಾಂಗದ ಧಾರ್ಮಿಕ ಆಚರಣೆಯ ಒಂದು ಭಾಗವೆಂದು ಹೇಳಬಹುದು. ನಿರ್ದಿಷ್ಟ ದಿನದಂದು ಆರಂಭವಾಗುವ ಕರಗ ಮಹೋತ್ಸವ ಏಳು ಅಥವಾ ಒಂಬತ್ತು ದಿನಗಳ ಕಾಲ ನಡೆಯುವಂತಹದು. ಕರಗ ಹೊರಲು ನಿಯುಕ್ತನಾಗಿರುವ ವ್ಯಕ್ತಿ ಹಾಗೂ ವೀರಕುಮಾರರು ಧ್ವಜಾರೋಹಣ ದಿನದಿಂದ ಪ್ರತಿನಿತ್ಯ ವಿವಿಧ ಆಚರಣೆಯನ್ನು ಕೈಗೊಳ್ಳುತ್ತಿದ್ದು ಐದನೇದಿನ (ಏಳುದಿನಗಳ ಆಚರಣೆಯಲ್ಲಿ) ಕರಗ ಹೊತ್ತು ಊರಲ್ಲಿ ಮೆರವಣಿಗೆಯಂತೆ ಬರುತ್ತಾರೆ. ಕರಗವನ್ನು ತಲೆಯ ಮೇಲೆ ಹೊತ್ತು ಕೈಗಳನ್ನು ಇಳಿಬಿಟ್ಟು ತಮಟೆ, ಡೋಲು, ನಾಗಸ್ವರಗಳ ಗತ್ತು ಮತ್ತು ರಾಗತಾಳಗಳಿಗನುಗುಣವಾಗಿ ಕರಗ ಪೂಜಾರಿಯು ವಿವಿಧ ಆಕರ್ಷಕ ಭಂಗಿಯಲ್ಲಿ ಕುಣಿಯುತ್ತಾನೆ. ಇದೊಂದು 'ಗಂಭೀರ ನೃತ್ಯ' ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಧರ್ಮರಾಯನ ಕರಗ, ದ್ರೌಪತಮ್ಮ ಕರಗ, ಯಲ್ಲಮ್ಮಕರಗ, ಪಟಾಲಮ್ಮನಕರಗ ಇತ್ಯಾದಿ ಭೇದಗಳಿವೆ. ಮುಳಬಾಗಿಲಿನ ನಾಗರಾಜಚಾರ್ ಅವರು ಆಂಜನೇಯ ಕರಗ ಹೊರುತ್ತಾರೆ.

'ಗಾರುಡಿಗೊಂಬೆ' ಎರಡಾಳೆತ್ತರದ ಬಿದರಿನ ತಡಿಕೆಯಲ್ಲಿ ರೂಪಿಸಿರುವ ಮಾನವಾಕೃತಿಯ ವಿಸ್ತೃತ ರೂಪ. ಶರೀರದ ಅರ್ಧ ಭಾಗ ಇರುವಂತೆ ರೂಪಿಸಿದ್ದು ಆಡಿಸುವ ವ್ಯಕ್ತಿ ತಲೆಯ ಮೇಲೆ ಹೊತ್ತಿದ್ದು ಕೆಳಭಾಗ ಕಾಣದಂತೆ ಬಟ್ಟೆಯಲ್ಲಿ ಲಂಗದಂತೆ ಮುಚ್ಚಿರುವಂತಹದು. ಗಂಡು ಬೊಂಬೆ ಕೈಯ್ಯಲ್ಲಿ ಪುಂಗಿ ಊದುತ್ತಿರುವಂತೆಯೂ, ಹೆಣ್ಣು ಗೊಂಬೆ ಬಳೆ ಒಡವೆಗಳಿಂದ ಕೂಡಿರುವಂತೆಯೂ ಸಹಜವಾದ ವಸ್ತ್ರಗಳೊಂದಿಗೆ ರಚಿಸಿರುವಂತಹವು. ಪ್ರತ್ಯೇಕವಾಗಿ ಬಯಲಿನಲ್ಲಿ ಕುಣಿಯುವರಾದರೂ ಜಾತ್ರೆ ತೇರಿನ ಮೆರವಣಿಗೆಯಲ್ಲಿ ಭಾಗವಹಿಸುವ ಮನೋರಂಜಕ ಶೈಲಿಯದು. 'ಮರಗಾಲು ಕುಣಿತ' ಒಂದು ರೀತಿ ಸಾಹಸ ಕ್ರೀಡೆಯಂತಿದ್ದು ಮರದಿಂದ ಮಾಡಿದ ಕೃತಕವಾದ ಕಾಲಿನ ರೀತಿಯಲ್ಲಿರುವ ಉಪಕರಣವನ್ನು ಕಾಲುಗಳ ತಳಭಾಗಕ್ಕೆ ಕಟ್ಟಿಕೊಂಡಿದ್ದು ಸಮತೋಲನವನ್ನು ನಿಯಂತ್ರಿಸುತ್ತಾ ಕುಣಿಯುವಂತಹದು. ಸಾಮಾನ್ಯ ಮನುಷ್ಯಾಕಾರಕ್ಕಿಂತ ಉದ್ದವಿದ್ದು ವಿಚಿತ್ರ ವೇಷಭೂಷಣಗಳೊಂದಿಗೆ, ತಮಟೆ, ಓಲಗಗಳ ಧ್ವನಿಗೆ ಕುಣಿಯುವುದು ಮನೋರಂಜಕವಾಗಿರುತ್ತದೆ.

ಕೊರವಂಜಿಗಳ ಕಣಿ ಹೇಳುವಿಕೆ ಯಾವುದೇ ನಿರ್ದಿಷ್ಟ ವೇಳೆ ಅಥವಾ ಆಚರಣೆಗೆ ಸಂಬಂಧಿಸಿದ್ದಲ್ಲ. ಆಕರ್ಷಕ ಉಡುಗೆತೊಡುಗೆಗಳನ್ನು ಧರಿಸಿ, ತುರುಬುಕಟ್ಟಿ, ಬುಟ್ಟಿ ಹಾಗೂ ಕಣಿ ಕಡ್ಡಿ ಹಿಡಿದು ಗಾಯನರೂಪದಲ್ಲಿ ಕಣಿ ಹೇಳುವ ಅಲೆಮಾರಿ ಜನಾಂಗದವರು. ಹಚ್ಚೆಯನ್ನು ಹುಯ್ಯುವ ಇವರು ಆಗಲೂ ನೋವು ತಿಳಿಯಬಾರದಂತೆ ಪದಗಳನ್ನು ಹಾಡುತ್ತಾರೆ.

ಯುದ್ಧದಲ್ಲಿ ಗೆದ್ದ ಗೆಲುವನ್ನು ಸೂಚಿಸುವಂತೆ, ಸುಮಾರು ೨೦-೨೫ ಮಂದಿ ಬಿಳಿ ಹಾಗೂ ಕೆಂಪು ವಸ್ತ್ರ ಧರಿಸಿ ಕೈಗಳಲ್ಲಿ ಧ್ವಜ ಹಾಗೂ ಬಾಣಗಳನ್ನು ಹಿಡಿದು, ಹಾರ್ಮೋನಿಯಂ, ತಬಲ, ಗೆಜ್ಜೆಸರ, ತಾಳಗಳ ಧ್ವನಿಗೆ ಲಯಬದ್ಧವಾಗಿ ಕುಣಿಯುವುದೇ 'ಜಂಗೀವೇಷ'.

ಡಿಕಾಂಬರಿ ವೇಷ ಹೆಸರಿಗೆ ತಕ್ಕಂತೆ ವರ್ಣಮಯ ವೇಷಗಾರಿಕೆಯಿಂದ ಕೂಡಿದ್ದು ಬಿಲ್ಲು, ಬಾಣ, ಬತ್ತಳಿಕೆ, ಗಾಜಿನ ಫಲಕದ ಕಿರೀಟ, ನವಿಲುಗರಿ, ಮಣಿಗಳು, ಧ್ವಜ, ಹೂ, ಬಣ್ಣದ ಕಾಗದ ಧರಿಸಿ ಮೈಗೆ ಬಣ್ಣ ಬಳಿದು, ಗೆಜ್ಜೆ ಹಾಗೂ ಕಾಲಿಗೆ ಸರಪಳಿಯಿಂದ ಭಾರವಾದ ಗುಂಡು ಕಟ್ಟಿಕೊಂಡು ತಲೆಯ ಮೇಲೆ ಉರಿಯುವ ದೀಪವಿರಿಸಿ ತಮಟೆ, ವಾಲಗ, ರಂಡೋಲುಗಳ ನಾದಕ್ಕೆ ಕುಣಿಯುವ ಈ ಪ್ರಕಾರ ಮನರಂಜನೆಯದಾದರೂ ಹಬ್ಬ, ದೇವರ ಉತ್ಸವಗಳಲ್ಲಿ ಕಂಡುಬರುವಂತಹದು.

ಸ್ತ್ರೀಯರೇ ಪ್ರಧಾನವಾದ ಲಂಬಾಣಿ ಕುಣಿತ ದೇಶದಾದ್ಯಂತ ಕಂಡುಬರುತ್ತಿದ್ದು ಜಿಲ್ಲೆಯ ಬಾಗೇಪಲ್ಲಿ ತಾಲೂಕಿನಲ್ಲಿಯೂ ಪ್ರಚಲಿತವಿದೆ.

ಜನಪದ ಕಲೆ ಮನರಂಜನೆಗೆಂದೇ ನಿರೂಪಿತವಾದಾಗ ಸಂಪ್ರದಾಯದಿಂದ ಹೊರಸರಿಯಬಹುದು. ಬೆಂಡಿನಲ್ಲಿ ತಯಾರಿಸಿದ ಕಿರೀಟ/ಟೋಪಿಯನ್ನು ಧರಿಸಿ, ಕಬ್ಬಿಣದ ಬಳೆ, ಟೋಫನ್, ಕೋರೆದಾಡೆಗಳಿಂದ ಅಲಂಕರಿಸಿ ಮುಖಕ್ಕೆ ಬಣ್ಣ ಹಾಕಿಕೊಂಡು,

ಮೈಗೆ ಚಿಂದಿ ಬಟ್ಟೆ ಸುತ್ತಿ, ಕೈಲಿ ಬೇವಿನ ಸೊಪ್ಪು, ಉರಿಯುವ ಪಂಜು ಹಿಡಿದು ಬಾಯಲ್ಲಿ ಕಚ್ಚಿದ ದೆಬ್ಬೆಗೆ ಬೆಂಕಿ ಪಂಜು ಅಳವಡಿಸಿ ಕುಣಿಯುವ 'ಬೆಂಕಿ ಮಾರಿ' ನೃತ್ಯಗಾರನನ್ನು ನಾಲ್ವರು ಹಗ್ಗ ಕಟ್ಟಿ ನಿಯಂತ್ರಿಸುವಂತಿರುವ ಈ ಪ್ರಕಾರ ಸಹ ಊರದೇವರ ಜಾತ್ರೆಯಲ್ಲಿ ಕಂಡು ಬರುವಂತಹದು.

ದೇವರನ್ನು ಹೊತ್ತು ಕುಣಿಯುವ ಹಲವು ಪ್ರಕಾರಗಳಲ್ಲಿ ಮುತ್ಯಾಲಮ್ಮನ ಪೂಜಾ ಕುಣಿತ ಬಾಗೇಪಲ್ಲಿ ತಾಲೂಕಿನಲ್ಲಿ ಅಧಿಕವಾಗಿ ಕಂಡುಬರುತ್ತದೆ. ಕಚ್ಚೆಪಂಚೆ, ಸೊಂಟಪಟ್ಟಿ, ಲಂಗ, ಗೆಜ್ಜೆ, ಕಾಲಕಡಗ ಧರಿಸಿ ಅರಿಶಿಣ, ಕುಂಕುಮಗಳಲ್ಲದೆ ಮುಖಕ್ಕೆ ಬಣ್ಣ ಬಳಿದುಕೊಂಡು, ಕೈಯಲ್ಲಿ ಗಂಟೆ, ತಟ್ಟೆ ಹಿಡಿದು, ತಲೆಯ ಮೇಲೆ ಬುಟ್ಟಿಯಲ್ಲಿ ಮುತ್ಯಾಲಮ್ಮನ ಮುಖವಾಡ ಇರಿಸಿ, ತಮಟೆಯ ಗತ್ತಿಗೆ ತಕ್ಕಂತೆ ಕುಣಿಯುತ್ತಾ ನಡೆಯುವುದು ಜಿಲ್ಲೆಯ ವಿಶೇಷಗಳಲ್ಲಿ ಒಂದಾಗಿದೆ.

ಎಡಗೈಯಲ್ಲಿ ಜಾಗಟೆ ಬಲಗೈಯಲ್ಲಿ ಶಂಖವಾದ್ಯ ಹಿಡಿದು, ದೀಪವಿರುವ ಗರುಡಗಂಭದೊಂದಿಗೆ, ವೈಷ್ಣವ ಮತೀಯ ಚಿಹ್ನೆ ಧರಿಸಿ ಮನೆಮನೆಗಳಿಗೆ ಹೋಗಿ ಧಾನ್ಯ ಸಂಗ್ರಹಿಸುವ 'ದಾಸಯ್ಯ ಜೋಗಿಗಳು' ಕೆಲವು ನುಡಿಗಟ್ಟುಗಳನ್ನು ಹಾಡುವುದುಂಟು.

ಮರದ ಹಲಗೆಯಿಂದ ಅರ್ಧಕ್ಕೆ ಕತ್ತರಿಸಿದ ಚಂದ್ರಾಕೃತಿಯ ರೀತಿಯಲ್ಲಿ ರೂಪಿಸುವ 'ಕಾವಟಿ'ಯನ್ನು ತಲೆಯ ಮೇಲೆ ಹೊತ್ತು ತಮಟೆ, ಡೋಲು, ನಗಾರಿ ವಾದ್ಯಗಳೊಂದಿಗೆ ಶಿವರಾತ್ರಿ, ಆಷಾಢಮಾಸ ದೇವರ ಉತ್ಸವಗಳಲ್ಲಿ ಕುಣಿಯುವ ಒಂದು ಕಲಾ ಪ್ರಕಾರ 'ಕಾವಟಿ ನೃತ್ಯ' ಬಂಗಾರುಪೇಟೆ ಪ್ರದೇಶದಲ್ಲಿ ಅಧಿಕವಾಗಿ ಕಂಡುಬರುತ್ತದೆ.

ಹೆಚ್ಚಿನ ವೇಷಭೂಷಣಗಳಿಲ್ಲದೆ ತಲೆಗೆ ಪೇಟ, ಕೋಟು, ಕಚ್ಚೆಪಂಚೆ, ಕಾಲಿಗೆ ಬಾಜಿ ಬಂದಗಳನ್ನು ಹಾಕಿ ನಾಲ್ಕಾರು 'ಮೋಡಿ ವೀರರು' ವಿವಿಧ ರೀತಿಯ ಚಮತ್ಕಾರ, ಮಂತ್ರಮಾಟ (ಯಕ್ಷಿಣಿ-ಮ್ಯಾಜಿಕ್) ವಿದ್ಯೆ ತೋರುವ ಕೆಲವೊಮ್ಮೆ ರೋಮಾಂಚನಕಾರಿಯಾದ ಜನಪದ ಪ್ರಕಾರವಾಗಿದ್ದು ಬಾಗೇಪಲ್ಲಿ, ಗೌರಿಬಿದನೂರು, ಚಿಂತಾಮಣಿಗಳಲ್ಲಿ ಕಾಣಬಹುದು.

ಕೈಯಲ್ಲಿ ಕತ್ತಿ, ಎದೆಯ ಮೇಲೆ ವೀರಭದ್ರಸ್ವಾಮಿ, ಕೊರಳಲ್ಲಿ ರುದ್ರಾಕ್ಷಿ ಸರಗಳು, ಮುಖ ಹಾಗೂ ಮೈಗೆಲ್ಲಾ ವಿಭೂತಿ ಲೇಪನ, ಕಾಲಿಗೆ ಜಂಗು, ತಲೆಯ ಮೇಲೆ ಈಶ್ವರನ ಜಟೆ ಹೋಲುವಂತೆ ಕೇಶ ಧರಿಸಿ, ಕರಡಿವಾದ್ಯ, ಜಾಗಟೆ, ಕೋಲು ಮುಂತಾದ ವಾದ್ಯಗಳನ್ನು ಪಕ್ಕ ವಾದ್ಯವಾಗಿ ಮಾಡಿಕೊಂಡು ವೀರಭದ್ರನ ವಡುಬುಗಳನ್ನು ಹೇಳುತ್ತಾ, ವಾದ್ಯದ ಗತ್ತಿಗೆ ತಕ್ಕಂತೆ ಕುಣಿಯುತ್ತಾ ಕೆಲವು ಪವಾಡ ನಡೆಸುತ್ತಾ ಬರುವ 'ವೀರಭದ್ರ ಕುಣಿತ' ಒಂದು ವೀರರಸಪ್ರಧಾನ ಕಲೆ.

ಹಬ್ಬ, ತೇರು, ಜಾತ್ರೆಗಳಲ್ಲಿ 'ಬೀರೆ ದೇವರ ಡೊಳ್ಳು' ಸಾಮಾನ್ಯವಾಗಿ ಕಂಡುಬರುತ್ತದೆ. ದೊಡ್ಡ ಆಕಾರದ, ಚರ್ಮವಾದ್ಯವಾದ ಡೊಳ್ಳನ್ನು ಹೆಗಲಿಗೆ ತಗುಲಿ ಹಾಕಿಕೊಂಡು, ಮರಗಾಲು ಕಟ್ಟಿಕೊಂಡು ಪದಗಳನ್ನು ಹಾಡಿಕೊಳ್ಳುತ್ತಾ, ಅಬ್ಬರದ ಕೇಕೆ ಹಾಕುತ್ತಾ ಕುಣಿಯುವವರ ಡೊಳ್ಳಿನ ನಿನಾದ ಜಾತ್ರೆಗೆ ರಂಗು ನೀಡುತ್ತದೆ. ಉಳಿದ ಜಿಲ್ಲೆಯಂತೆ ಇಲ್ಲಿಯೂ ಬುಡುಬುಡಿಕೆ ನುಡಿಸುತ್ತಾ ಶಕುನ ಹೇಳುವ ವೃತ್ತಿಗಾಯಕರನ್ನು ಕಾಣಬಹುದು.

ಜಂಗಮಕೋಟೆಯ ಮರಿಯಪ್ಪನವರು 'ಶ್ರೀ ವೀರಭದ್ರ ಜಾನಪದ ಕಲಾ ತಂಡ' ರೂಪಿಸಿ ಅದರ ಮೂಲಕ 'ಕರಡಿಮಜಲು' ವಾದ್ಯತಂಡ ರಚಿಸಿ ಜಿಲ್ಲೆಯಾದ್ಯಂತ ಅನೇಕ ಕಾರ್ಯಕ್ರಮ ನೀಡಿದ್ದಾರೆ. ವೀರಗಾಸೆ ಪ್ರಕಾರದಲ್ಲೂ ತರಬೇತಿ ನೀಡಿದ್ದಾರೆ. ಈ ತಂಡ ನಂದಿ ಉತ್ಸವ, ಗಡಿನಾಡು ಉತ್ಸವ, ರಾಜ್ಯೋತ್ಸವಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಾಂಸ್ಕೃತಿಕ ಉತ್ಸವಗಳಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದೆ.

ಇವಲ್ಲದೆ ಮನರಂಜನೆಗೆ ವಿವಿಧ ರೀತಿಯ ವೇಷಭೂಷಣಗಳೊಂದಿಗೆ ಕುಣಿಯುವ ಹುಲಿವೇಷ, ಪಾಳೇಗಾರರ ವೇಷ, ಪೋಟಿ ವೇಷ ಇತ್ಯಾದಿಗಳೂ ಉಂಟು. ಮೊಹರಂ ಹಬ್ಬದಲ್ಲಿ ಪೇಟ, ಕುಚ್ಚು, ನಡುಪಟ್ಟಿ ಧರಿಸಿ ಮುಖವರ್ಣಿಕೆ ಮಾಡಿಕೊಂಡು ಬಾಬಯ್ಯನನ್ನು ಸ್ಮರಿಸುತ್ತಾ ಕುಣಿಯುವುದು ಕಂಡುಬರುತ್ತದೆ.

ಚಿಕ್ಕಬಳ್ಳಾಪುರದ ಬಸವನ ಪರ್ತಿಯ ಹೆಳವರ ನಾರಾಯಣಸ್ವಾಮಿ ಅವರು ಬಯಲಾಟದ 'ಮೇಷ್ಟ್ರು'ರಾಗಿದ್ದು, ಪೌರಾಣಿಕ ನಾಟಕ, ಯಕ್ಷಗಾನಗಳನ್ನು ನಿರ್ದೇಶಿಸುತ್ತಾರೆ. ಸ್ವತಃ ಅಭಿನಯವನ್ನು ಮಾಡುತ್ತಾರಲ್ಲದೆ, ಭಾಗವಂತಿಕೆಯ ಕಾರ್ಯಕ್ರಮ ನೀಡುತ್ತಾರೆ.

ಮುಳಬಾಗಿಲಿನಲ್ಲಿ ನಡೆದ ಜನಪದ ಕಲಾ ಮಹೋತ್ಸವದ ಸಂದರ್ಭದಲ್ಲಿ ಜಿಲ್ಲೆಯ ಕೆಲವು ಕಲಾ ತಂಡಗಳು ಭಾಗವಹಿಸಿದ್ದು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

ನಂದಿಧ್ವಜ ಕುಣಿತ: ಎಂ.ಎಸ್.ಈಶ್ವರಪ್ಪ ಮತ್ತು ಸಂಗಡಿಗರು. ಮರಗಾಲು ಕುಣಿತ: ಶ್ರೀ ವೀರಶೈವ ಸೇವಾ ಯುವಕ ಸಮಾಜ, ಮಂಚೇನಹಳ್ಳಿ, ಗೌರಿಬಿದನೂರು. ಬೀರೇದೇವರ ಡೋಲು: ಸಿ.ವೆಂಕಟೇಶಪ್ಪ, ಮಗ ಹನುಮಪ್ಪ, ಬೀರೇದೇವರ ಡೋಲು ಮಂಡಲಿ, ಹೊಸೂರು, ಗೌರಿಬಿದನೂರು. ಬುರ್ರಕಥಾ: ನರಸಪ್ಪ ಮಗ ಲಕ್ಷ್ಮಣ, ಸೋಮೇನಹಳ್ಳಿ, ಗುಡಿಬಂಡೆ. ಎಂ.ವಿ. ಚಲಪತಿರಾವ್ ಮಗ ವೆಂಕಟನಾರಾಯಣಪ್ಪ ಗೂಳೂರು, ಬಾಗೇಪಲ್ಲಿ. ಲಾವಣಿಕಾರರು: ಕೆ.ಎಸ್.ನಂಜುಂಡರೆಡ್ಡಿ ಮಗ ಸುಬ್ಬರೆಡ್ಡಿ, ಕಡೇಹಳ್ಳಿ, ಗುಡಿಬಂಡೆ. ಮೋಡಿ ವೀರರು: ಎನ್.ಶ್ರೀನಿವಾಸಾಚಾರಿ ಮಗ ಸರಸಾಚಾರಿ ಉಪ್ಪರ ಕಾಲೋನಿ, ಗೌರಿಬಿದನೂರು. ಲಂಬಾಣಿ ನೃತ್ಯ: ತಿಪ್ಪಾನಾಯಕ ಮಗ ರಾಮನಾಯಕ, ಜೋಳಶೆಟ್ಟಿಹಳ್ಳಿ, ಗೌರಿಬಿದನೂರು. ಒನಕೆ ಕರಗ, ನವಿಲು ಕುಣಿತ ಮತ್ತು ಕಾವಟಿ ನೃತ್ಯ: ಮುನಿಯಪ್ಪ ಮಗ ಮೇಲೂರು ವೆಂಕಟಪ್ಪ ಮತ್ತು ಸಂಗಡಿಗರು, ಚಾಮರಾಜಪೇಟೆ, ಎ.ಕೆ.ಕಾಲೋನಿ, ಚಿಕ್ಕಬಳ್ಳಾಪುರ. ಬುಡಬುಡಿಕೆ: ಬುಡ ಬುಡಿಕೆ ರಾಮಯ್ಯ ಮಗ ಮುನಿಸ್ವಾಮಪ್ಪ ಬೀರಗಾನಹಳ್ಳಿ, ಚಿಕ್ಕಬಳ್ಳಾಪುರ. ಲಿಂಗವೀರರ ಕುಣಿತ: (ವೀರಭದ್ರನ ಕುಣಿತ): ಮರಿ ವೀರಭದ್ರಯ್ಯ ಮಗ ಅಂಗವೀರ ಬಸಪ್ಪ, ಭಕ್ತರಹಳ್ಳಿ, ಶಿಡ್ಲಘಟ್ಟ. ಗಾರುಡಿ ಗೊಂಬೆ, ಕೀಲು ಕುದುರೆ, ನವಿಲು ಕುಣಿತ: ಕೆ.ಎಂ.ನಾರಾಯಣಸ್ವಾಮಿ ಸಂಗಡಿಗರು ಮಗ ಮುನಿಯಪ್ಪ, ಜಂಗಮಕೋಟೆ, ಶಿಡ್ಲಘಟ್ಟ. ತೊಗಲು ಗೊಂಬೆಯಾಟ: ಕೃಷ್ಣಪ್ಪ ಮಗ ಸಂಜೀವಪ್ಪ, ಬಾಲರೆಡ್ಡಿಹಳ್ಳಿ, ಗೌರಿಬಿದನೂರು. ಡಿಕಾಂಬರಿ ವೇಷ: ಜಿ.ನಾರಾಯಣ ರೆಡ್ಡಿ ಮಗ ಮುನಿಸ್ವಾಮಿರೆಡ್ಡಿ ಪೆದ್ದೂರು, ಚಿಂತಾಮಣಿ. ಮುತ್ಯಾಲಮ್ಮನ ಪೂಜಾ ಕುಣಿತ: ಎ.ಕೆ.ದೇವಗನಿ ಚಿಕ್ಕರಂಗಪ್ಪ ಬಿ.ವೆಂಕಟಪ್ಪ ಗೂಳೂರು, ಬಾಗೇಪಲ್ಲಿ. ಕೇಳಿಕೆ (ಬಯಲಾಟ): ಎನ್.ವೆಂಕಟಾಚಲಪತಿ ಮಗ ಆದಿನಾರಾಯಣಸ್ವಾಮಿ, ಗರುಡಾದ್ರಿ ನರಸಿಂಹಸ್ವಾಮಿ ನಾಟಕ ಮಂಡಲಿ, ಮಿಟ್ಟೇಮರಿ, ಬಾಗೇಪಲ್ಲಿ. ದಾಸಯ್ಯಗಳು ಜೋಗಿಗಳು: ದಾಸರ ಕರಿಯಣ್ಣ ಮಗ ತಿಮ್ಮಯ್ಯ, ಹುದಗೂರು, ಗೌರಿಬಿದನೂರು. ಸಿಡೀರಣ್ಣನ ಕುಣಿತ: ಕೃಷ್ಣಪ್ಪ, ತ್ಯಾವನಹಳ್ಳಿ, ಕೋಲಾರ. ಕೋಲೆ ಬಸವ: ಸೀತಾರಾಮುಡು, ವರದೇನಹಳ್ಳಿ, ಕೋಲಾರ. ಪಂಡರಿ ಭಜನೆ: ವೈ.ಮುನಿಸ್ವಾಮಪ್ಪ, ಶ್ರೀ ಆಂಜನೇಯಸ್ವಾಮಿ ಭಕ್ತ ಮಂಡಲಿ, ಹೂವಳ್ಳಿ, ಕೋಲಾರ. ಕೋಲಾಟ: ಎಂ.ರಾಮಪ್ಪ, ಯುವಕ ರೈತ ಸಂಘ, ಕಾಳಹಸ್ತಿಪುರ, ಕೋಲಾರ. ಹಲಗೆ ಕುಣಿತ: ತುಡುಮು ವೆಂಕಟಪ್ಪ, ಸಾರೇ ಹೊಸಹಳ್ಳಿ, ಕೋಲಾರ. ಸಿಂಹ ನೃತ್ಯ: ಡಿನ್ನಪ್ಪ ಮಗ ಚಿಕ್ಕ ಪಿಲ್ಲಪ್ಪ, ದೊಡ್ಡ ಕಡತೂರು, ಮಾಲೂರು. ಮಾರಮ್ಮನ ಕುಣಿತ: ಮುತ್ಯಾಲಪ್ಪ, ಭಂಡಾರಹಳ್ಳಿ, ಮುಳಬಾಗಿಲು. ಕರಡಿ ಕುಣಿತ: ಮುನಿಸ್ವಾಮಿರಾವ್, ರುಕ್ಮಣಿಬಾಯಿ ಸರ್ಕಸ್, ಗುಲ್ಲಹಳ್ಳಿ, ಬಂಗಾರಪೇಟೆ. ಹಗಲು ವೇಷಧಾರಿ ಕುಣಿತ: ರಾಮಲಿಂಗಂ, ವೇಲೂರು, ಬಂಗಾರಪೇಟೆ. ಬೆಂಕಿಮಾರಿ ಕುಣಿತ: ಹರಿದಾಸು ಮಗ ಆಂಜನೇಯಪ್ಪ, ದೊಡ್ಡ ಕಡತೂರು, ಮಾಲೂರು. ಸೋಬಾನೆ ಪದಗಳು: ಮುನಿಯಮ್ಮ ಆಶ್ರಯ ನಾರಾಯಣಮ್ಮ ಯಲ್ದೂರು, ಶ್ರೀನಿವಾಸಪುರ. ಅನುಸೂಯರಾಮ್ ಪತ್ನಿ ವೆಂಕಟರಾಮಯ್ಯ, ಎನ್.ಹೆಚ್.ಶಾಲೆ, ಯಲ್ದೂರು, ಶ್ರೀನಿವಾಸಪುರ. ಸಿಡೀರಣ್ಣನ ಕುಣಿತ: ವೀರಭದ್ರಯ್ಯ ಪುಲ್ಲಯ್ಯ, ದಳಸನೂರು, ಶ್ರೀನಿವಾಸಪುರ. ಏಕತಾರಿ ಬಾಲನಾಗಮ್ಮನ ಕಥೆ (ಪೂಸಲ ಬಲಿಜರು): ನಾರಾಯಣಪ್ಪ ಮಗ ವೆಂಕಟಪ್ಪ, ಮದುಗಿರೆ, ಗೌರಿಬಿದನೂರು. ಕರಗದ ಕುಣಿತ (ದ್ರೌಪದಮ್ಮನ ಕರಗ): ಕರಗದ ವೆಂಕಟರಾಮಣ್ಣ ಮತ್ತು ಸಂಗಡಿಗರು, ಹೋಳೂರು, ಕೋಲಾರ. ಕಣಿ ಹೇಳುವ ಕೊರವಂಜಿಗಳು: ದೊಡ್ಡಕ್ಕ ಪತ್ನಿ ತಿಪ್ಪಣ್ಣ, ಮದುಗಿರೆ, ಗೌರಿಬಿದನೂರು. ಇವಲ್ಲದೆ ಜನಪದ ಪ್ರಕಾರಕ್ಕೆ ನೇರವಾಗಿ ಸೇರಿಸಲಾಗದ ಕೆಲವು ಪ್ರಕಾರಗಳನ್ನು ಹೆಸರಿಸಿದ್ದು, ಅವುಗಳಲ್ಲಿ ಪೋಟಿವೇಣಿ ನಾಲಿಗೆ ಸುಟ್ಟು ಮುಖರಾಶಿ: ಆರ್.ವೆಂಕಟರಮಣಪ್ಪ ಮತ್ತು ಸಂಗಡಿಗರು ಮಗ ರಾಮಯ್ಯ, ಮೇಲೂರು, ಶಿಡ್ಲಘಟ್ಟ. ಶಿಕಾರಿ ವೇಷ (ಶಿಕಾರಿ ನೃತ್ಯ): ದೊಡ್ಡ ಮುನಿಸ್ವಾಮಿ ನಾಯಕ, ಮಗ ವೆಂಕಟಪ್ಪ ನಾಯಕ, ಬಲಮಂದೆ, ಬಂಗಾರುಪೇಟೆ. ಹಕ್ಕಾಬುಕ್ಕಿ: ಹೆಚ್.ಆರ್.ಆಂಜನೇಯಗೌಡ ಮಗ ರಾಮೇಗೌಡ, ಕೆಸರಗೆರೆ, ಮಾಲೂರುಗಳನ್ನು ಉದಾಹರಿಸಲಾಗಿದೆ (ಆಧಾರ: ಮುಗೋಳಿ ಕೂಗಿತು).

ಮಾದಿಗರ ಒಂದು ಉಪ ಪಂಗಡವಾದ 'ಸಿಂದ್ ಮಾದಿಗರು' ಕೋಲಾರ ಜಿಲ್ಲೆಯಲ್ಲಿಯೂ ಇದ್ದು ಇವರುಗಳು ವಂಶಪಾರಂಪರ್ಯವಾಗಿ ಪೌರಾಣಿಕ ನಾಟಕ, ಹಾಡು ಹಾಗೂ ಸಿಂದ್ ತುಳಿಯುವ ಆಚರಣೆಯ ಮೂಲಕ ತಮ್ಮ ಕಲಾಕೌಶಲ್ಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇವರ ಮೂಲ ನೆಲೆ ಆಂಧ್ರಪ್ರದೇಶವಾಗಿದ್ದು ಸಾಮಾನ್ಯವಾಗಿ ತೆಲುಗು

ಭಾಷಿಕರಾದ ಇವರು ಹೆಚ್ಚಾಗಿ ಮಾಲೂರು ತಾಲೂಕಿನ ಮಾತಂಗಪುರ, ಸುಗ್ಗಂಡಹಳ್ಳಿ, ಹುಳದೇನ ಹಳ್ಳಿ, ಕೂರ್ನಹಳ್ಳಿ, ಕೋಲಾರ ತಾಲೂಕಿನ ಆಲಹಳ್ಳಿ, ಗುಲಗಂಜಿ ಗುರ್ಕಿ, ಚಿಂತಾಮಣಿ ತಾಲೂಕಿನ ಮಂಗಾಳಪಲ್ಲಿ, ಶ್ರೀರಾಮಪುರ ಕಾಲೋನಿಗಳಲ್ಲಿ ನೆಲೆಸಿದ್ದಾರೆ. 'ಸಿಂದ್' ಎಂದರೆ ತೆಲುಗು ಆಡುಮಾತಿನಲ್ಲಿ 'ಚಿಂದು' ಎಂದು. ಚಿಂದು ಎಂದರೆ 'ನಾಟ್ಯ' ಎಂಬ ಅರ್ಥವೂ ಇದೆ. ಚಿಂದಾಡು ಎಂದರೆ ಆವೇಶದಿಂದ ಕುಣಿ ಎಂದು ಇದ್ದು ಇದು ಇತರ ನಾಟ್ಯ /ನಾಟಕ ವೃತ್ತಿಯ ಮೂಲ ಸೂಚಿಸುತ್ತದೆ. ಸಿಂದ್ ಕುಣಿತದಲ್ಲೂ ಪೂಜೆಗೆ ಬಳಸುವ ಅರಿಶಿಣ ಕುಂಕುಮಗಳನ್ನೇ ಪ್ರಸಾಧನ ಸಾಮಗ್ರಿಯಾಗಿ ಬಳಸಿ ಗೇಯ, ನಾಟಕ ರೂಪದಲ್ಲಿ ಪ್ರದರ್ಶಿಸುತ್ತಾರೆ. ವಾದ್ಯಗಾರರು, ಹಿಮ್ಮೇಳದವರು, ಪಾತ್ರಧಾರಿಗಳು ಸೇರಿ ಗುಂಪಾಗಿ ಸುಗ್ಗಿಯ ಕಾಲದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ 'ರಂಗಜಾಥಾ' ಹೋಗಿ ರಾಮಾಂಜನೇಯ ಯುದ್ಧ, ಕೃಷ್ಣಲೀಲೆ, ಕರ್ಣದುಶ್ಯಾಸನ ಇತ್ಯಾದಿ ಪೌರಾಣಿಕ ನಾಟಕಗಳನ್ನು ಪ್ರದರ್ಶಿಸುತ್ತಾರೆ. ಕೋಲಾರ ಜಿಲ್ಲೆಯಲ್ಲಿ ಈ ಬಗೆಯ ಬಯಲು ನಾಟಕಗಳನ್ನು ಕೇಳಿಕೆ ಎಂದು ಕರೆಯುವುದು ವಾಡಿಕೆಯಲ್ಲಿದ್ದು ಈ ಹಿಂದೆ ಜಿಲ್ಲೆಯ ಗಂಗಾರಾಂ ಎಂಬಾತ ರಂಗಪರಿಕರಗಳ ಸಮೇತ ಒಂಟಿಯಾಗಿ ರಂಗಜಾಥ ನಡೆಸಿ ಏಕಪಾತ್ರಾಭಿನಯದಂತೆ ನಾಟಕ ಆಡುತ್ತಿದ್ದಾನೆಂದು, ಈ ಕಾರಣದಿಂದ ಆತನಿಗೆ 'ಒಂಟಿಕೇಳಿಕೆ ಗಂಗಾರಾಂ' ಎಂದು ಕರೆಯುತ್ತಿದ್ದರೆಂದು ತಿಳಿದು ಬರುತ್ತದೆ. ಭಾಗವತ ಕಥಾ ಕಾಲಕ್ಷೇಪವನ್ನು ಮಾಡುತ್ತಿದ್ದು 'ಚಿಂದ್ ಭಾಗವತರೂ' ಎಂದೂ ಇವರನ್ನು ಕರೆಯುವುದುಂಟು.

ಕೋಲಾರ ಜಿಲ್ಲೆಯ ಜನಪದ ಕಲೆಗಳನ್ನು ಕುರಿತು ಪಿಎಚ್.ಡಿ. ಅಧ್ಯಯನ ಮಾಡಿರುವ ರಂಗಾರೆಡ್ಡಿ ಕೋಡಿರಾಂಪುರ ಅವರು ವಿಶೇಷವಾಗಿ ಕೇಳಿಕೆ, ಬುದ್ರಕಥಾ, ನಂದಿಧ್ವಜಗಳಲ್ಲದೆ, ಕರಗ, ತೊಗಲು ಗೊಂಬೆ, ಕೋಲಾಟ, ಪಂಡರಿಭಜನೆ, ಗಾರುಡಿಗೊಂಬೆ, ಹಲಗೆ ಮೇಳ ಇತ್ಯಾದಿಗಳ ಬಗ್ಗೆ ವಿವರ ನೀಡುತ್ತಾರೆ. ಕೇಳಿಕೆ ಬಯಲಾಟದ ಒಂದು ಪ್ರಕಾರವಾಗಿದ್ದು ನೆರೆಯ ಆಂಧ್ರದ 'ಕೇಳಿಕೆ'ದ ಪ್ರಭಾವ ದಟ್ಟವಾಗಿದೆಯೆಂದು ಅಭಿಪ್ರಾಯಪಡಲಾಗಿದೆ. ಕೋಲಾರ ಜಿಲ್ಲೆ ಹಾಗೂ ಅದಕ್ಕೆ ಹೊಂದಿಕೊಂಡ ಜಿಲ್ಲೆಯ ಗಡಿಭಾಗಗಳಲ್ಲಿಯಷ್ಟೇ ಕಂಡುಬರುವ ಮೂಡಲಪಾಯ ಶೈಲಿಯ ನಾಟಕವನ್ನು ಬಯಲುರಂಗ, ದೇವಾಲಯಗಳ ಹಜಾರ, ಸಂಘಸಂಸ್ಥೆಗಳ ವೇದಿಕೆಗಳಲ್ಲಿ ಇಡೀ ರಾತ್ರಿ ಅಥವಾ ಸೀಮಿತ ಅವಧಿಗೆ ಆಡುತ್ತಾರೆ. ಆಡಲು ಯಾವುದೇ ನಿರ್ದಿಷ್ಟ ಸಂದರ್ಭಗಳಿಲ್ಲ. ದುಡಿಯುವ ಹಿಂದುಳಿದ ವೃತ್ತಿಕಲಾವಿದರಲ್ಲದ ಹತ್ತು-ಹದಿನೈದು ಮಂದಿ ಕೂಡಿ ಪ್ರಾಯೋಜಕರು ನೀಡುವ ಇಲ್ಲವೆ ದೇವಾಲಯಗಳ ನಿಧಿಯಿಂದ ಮನರಂಜನೆಗೆಂಬಂತೆ ಆಡುತ್ತಾರೆ. ಹೆಚ್ಚಾಗಿ ಪೌರಾಣಿಕ ಕಥೆಗಳೇ ಇದ್ದರೂ ಸ್ಥಳೀಯ ವೀರರ ಕಥೆಗಳಿಗೂ ಅವಕಾಶವುಂಟು. ಸಂಗೀತ, ಕುಣಿತ, ಸಂಭಾಷಣೆ, ಅಭಿನಯಗಳಿಂದ ಕೂಡಿದ್ದು ಕೋಡಂಗಿ ಪಾತ್ರಗಳು ಇನ್ನು ಹೆಚ್ಚಿನ ಆಕರ್ಷಣೆಯನ್ನು ನೀಡುತ್ತವೆ. ಕಥೆಗಳು ಪದ್ಯರೂಪದಲ್ಲಿ ಬರೆದಿರುವುದು ಲಭ್ಯವಿದೆಯಾದರೂ ಮೌಖಿಕವಾಗಿರುವುದೇ ಅಧಿಕ.

ಬುರ್ರಕಥಾ ಸಹ ತೆಲುಗಿನ ಮೂಲದಿಂದ ಬಂದಿದ್ದು ಜಿಲ್ಲೆಯಾದ್ಯಂತ ಕಂಡುಬರುತ್ತದೆ. 'ಬುರ್ರೆ' ಎಂದರೆ ಒಣಗಿದ ಖಾಲಿ ಬುರುಡೆಯಂತಹ ವಸ್ತು(ಗುಮ್ಮಟಿ)ವನ್ನು ಏಕತಾರಿಯಂತೆ ರೂಪಿಸಿಕೊಂಡಿದ್ದು ಮುಖ್ಯ ಹಾಡುಗಾರ ಅಲಂಕೃತ, ಆದರೆ ಆಕಾರದಲ್ಲಿ ಚಿಕ್ಕದಾದ ತಂಬೂರಿಯನ್ನೂ, ಇನ್ನಿಬ್ಬರು ಪ್ರದರ್ಶನಕಾರರು 'ಬುರ್ರೆ'ವನ್ನು ಹಿಡಿದು ನುಡಿಸುತ್ತಾ ಕಥೆ ಹೇಳುತ್ತಾರೆ. ಸಾಮಾನ್ಯವಾಗಿ ಐತಿಹ್ಯಗಳ ಕಥೆ, ಸಾಂಸ್ಕೃತಿಕ ವೀರರ ಚರಿತ್ರೆ, ಸಮಕಾಲೀನ ಘಟನೆಗಳನ್ನು ಕತೆಮಾಡಿ ಹೇಳುವುದುಂಟು. ಹಾಡು, ಕುಣಿತ, ಮಾತು ನಿರೂಪಣೆಯೇ ಪ್ರಧಾನವಾಗಿರುವ ಈ ಕಲೆಯನ್ನು ಯಾವುದೇ ಸಂದರ್ಭದಲ್ಲಿಯಾದರೂ ಪ್ರದರ್ಶಿಸಬಹುದು. 'ಬುರ್ರಕಥೆ' ಜಿಲ್ಲೆಗೆ ತೆಲುಗಿನಿಂದ ಬಂದ ಬಹಳ ಹಳೆಯ ಕಲಾಪ್ರಕಾರವೆಂದು ಹೇಳಬಹುದು. ಹರಿಕಥೆಯ ಧಾಟಿಯಲ್ಲಿದ್ದರೂ ಕಥನಕಲೆ, ನರ್ತನ, ನಾಟಕೀಯತೆಯೊಂದಿಗೆ ಸಮಕಾಲೀನ ವಸ್ತುವನ್ನು ತಂದು ಮನೋರಂಜಕವಾಗಿ ನಿರೂಪಿಸುವಂತಹದಾಗಿದೆ. ಎರಡರಿಂದ ಎಂಟುಗಂಟೆಗಳ ಕಾಲದವರೆಗೆ ನಡೆಸಬಹುದಾದ ಪ್ರದರ್ಶನಕ್ಕೆ ಸ್ಥಳೀಯ ಪ್ರೇಕ್ಷಕರೇ ವಂತಿಗೆ ಸಂಗ್ರಹಿಸಿ ಕಲಾವಿದರಿಗೆ ನೀಡುವಂತಿದ್ದು, ಹಾಡುವ ಗಾಯಕರು ಸಾಮಾನ್ಯವಾಗಿ ಪೂಸಲರು ಎಂಬ ಜನಾಂಗದವರು. ಬುರ್ರಕಥಾ ವೃತ್ತಿಗಾಯಕರನ್ನು ಹಿಂದೆ ಸ್ವಾತಂತ್ರ್ಯ ಸಂಗ್ರಾಮಕಾಲದಲ್ಲಿ, ಜನಜಾಗೃತಿ ಉಂಟುಮಾಡುವಂತಹ ಕಥಾ ನಿರೂಪಣೆಗೆ ಬಳಸಿಕೊಂಡಂತೆ, ಪ್ರಸ್ತುತ ಶೈಕ್ಷಣಿಕ ಆಂದೋಲನಕ್ಕೆ, ಸಂತೋಷ ಸಮಾರಂಭಗಳಿಗೆ ಹಾಗೂ ಚುನಾವಣಾ ಪ್ರಚಾರಕ್ಕೆ ಬಳಸಿಕೊಳ್ಳಲಾಗುತ್ತಿದೆ.

**ತೊಗಲುಗೊಂಬೆ**

ವಿಶ್ವದಾದ್ಯಂತ ತೊಗಲುಗೊಂಬೆಯ ರಚನೆ ಹಾಗೂ ಪ್ರದರ್ಶನ ಕಂಡುಬರುತ್ತಿದ್ದು, ಕೋಲಾರ ಜಿಲ್ಲೆಯಲ್ಲಿಯೂ ಗಣನೀಯ ಸಂಖ್ಯೆಯಲ್ಲಿ ಈ ಕಲೆ ಹಾಗೂ ಕಲಾವಿದರನ್ನು ಕಾಣಬಹುದು. ಶಿಡ್ಲಘಟ್ಟದ ಉಪ್ಪುಗುಂಟಹಳ್ಳಿಯ ಬಂಡೆಯ

ಮೇಲಿರುವ ಶಾಸನದಲ್ಲಿ ಗಂಗರಾಯದೇವ ಮಹಾರಾಯ ೧೫೨೧ರಲ್ಲಿ ತೊಗಲುಗೊಂಬೆ ಆಟಗಾರ (ಬೊಮ್ಮಲಾಟದ) ಪುರವತಿ ಪುರಾಣದ ವೀರಪ್ಪನ ಮಗ ಕೃಷ್ಣಪ್ಪ ಎಂಬಾತನಿಗೆ ಎಲ್ಲ ತೆರಿಗೆಗಳನ್ನು ವಿನಾಯಿತಿ ಮಾಡಿದ ಬಗ್ಗೆ ವಿವರವಿದೆ. (ಶಿ.ಫ–೧೦೦) ಆವನಿಯ ಅಮ್ಮನವರ ದೇವಾಲಯದ ಕಲ್ಲಿನ ಬಸವಣ್ಣ ಮೂರ್ತಿಯ ಮುಂದಿನ ಚಪ್ಪಡಿಯ ಮೇಲೆ ಬೊಮ್ಮಲಾಟದ ಮೋಹನ ಕವಿ ಪುಣ್ಯ ಶ್ರೀ ಕುಂದಿರಿವಿ ವೀರೇಶ್ವರನ ಮಗಳು ವೀರಮ್ಮನು ಮಹಾದೇವರಿಗೆ ಎರಡು ಬಸವ ವಿಗ್ರಹ ನೀಡಿದ ಬಗ್ಗೆ ಶಾಸನವಿದ್ದು, ಇದರ ಕಾಲ ತಿಳಿದುಬರುವುದಿಲ್ಲ. (ಮು.ಬಾ.೨೯೨ ಸಪ್ಲಿ) ಆದರೆ ಕವಿಚರಿತ್ರೆಕಾರರಾದ ಆರ್. ನರಸಿಂಹಾಚಾರ್ ಅವರು ಬೊಂಬೆಯಾಟದ ಸಿದ್ದಯ್ಯ ಹಾಗೂ ಸಾಂಬಯ್ಯ ಅವರ ಬಗ್ಗೆ ವಿವರ ನೀಡಿದ್ದು, ಅದರಂತೆ ಸಾಂಬಯ್ಯನು ಕರಿಭಂಟನ ಕಥೆ, ಸಾರಂಗಧರನ ಕಥೆಗಳನ್ನು ಯಕ್ಷಗಾನವಾಗಿ ಬರೆದಿದ್ದಾನೆ. (ಶಂಭುಲಿಂಗನಿಗೆ ಅಂಕಿತವಾಗಿ ರತ್ನಾಂಗಿಯ ಕುವರ ಶಂಕರವರವುಳ್ಳ ಸಾರಂಗಧರನ ಕಥೆಯನ್ನು ಯಕ್ಷಗಾನವಂ ಮಾಡಿ ಪೇಳ್ವೆಂ) ಅಲ್ಲದೆ ಸಾಂಬಯ್ಯನು ತನ್ನ ತಂದೆ ಬೊಂಬೆಯಾಟದ ಸಿದ್ದಯ್ಯ, ತಾಯಿ ಯಲ್ಲಮ್ಮ ಹಾಗೂ ಅಣ್ಣ ಮೋಹನ ಕವಿ ಎಂಬ ಬಿರುದಾಂಕಿತ ಸಾಂಬಯ್ಯ ಎಂದು ಹೇಳಿದ್ದು, ಈ ಮೋಹನ ಕವಿಯೇ ಆವನಿಯ ಶಾಸನೋಕ್ತ ಬೊಮ್ಮಲಾಟದ ಮೋಹನ ಕವಿಯಾಗಿರಬಹುದು. (ಕರ್ನಾಟಕ ಕವಿಚರಿತೆಯಲ್ಲಿ ಬೊಂಬೆಯಾಟದ ಸಿದ್ದಯ್ಯನಿಗೆ ಮೋಹನ ಕವಿ ಎಂಬ ಬಿರುದಿದ್ದಂತೆ ತಪ್ಪಾಗಿ ತಿಳಿಯಲಾಗಿದೆ). ಇವರ ಜೀವಿತ ಕಾಲವನ್ನು ೧೭೦೦–೧೭೫೫ ಎಂದು ಗುರುತಿಸಲಾಗಿದೆ. ಒಟ್ಟಿನಲ್ಲಿ ತಂದೆ ಹಾಗೂ ಮಕ್ಕಳಿಬ್ಬರೂ ಕವಿಗಳು ಹಾಗೂ ಗೊಂಬೆಯಾಟದವರಾಗಿದ್ದು ಶಾಸನದ ಪಠ್ಯದಂತೆ ಕೋಲಾರದವರೇ ಆಗುತ್ತಾರೆ. ಈಚೆಗೆ ಚಿಂತಾಮಣಿ ತಾಲೂಕಿನ ಮಿಂಡಿಗಲ್ ಬಳಿ ಕೆಲವು ತೊಗಲುಗೊಂಬೆ ಆಟಗಾರರು ನೆಲೆನಿಂತು ಕಾಲೋನಿಯೊಂದನ್ನು ಕಟ್ಟಿಕೊಂಡಿದ್ದು, ಆ ಪ್ರದೇಶಕ್ಕೆ 'ಬೊಮ್ಮಲಾಟಪುರ' ಎಂದೇ ಕರೆದುಕೊಂಡಿದ್ದಾರೆ. ಈ ಮೇಲಿನ ಉದಾಹರಣೆಗಳೆಲ್ಲ ಪ್ರಾಯಶಃ ಕೋಲಾರ ಜಿಲ್ಲೆಯಲ್ಲಷ್ಟೇ ದೊರೆಯುವಂತಿದ್ದು, ಜಿಲ್ಲೆ ತೊಗಲುಗೊಂಬೆಯಾಟಕ್ಕೆ ನೀಡಿದ ಪ್ರಾಮುಖ್ಯತೆ ತಿಳಿಸುತ್ತದೆ. ಅಲ್ಲದೆ ಯಕ್ಷಗಾನ ರೂಪಕವನ್ನು ಗೊಂಬೆಯಾಟದ ಪ್ರಕಾರದಲ್ಲೂ ನಿರೂಪಿಸುತ್ತಿದ್ದ ಸಾಧ್ಯತೆ ಶ್ರುತಪಡಿಸುತ್ತದೆ. ತೊಗಲುಗೊಂಬೆಗಳ ಬಗ್ಗೆ, ವಿಶೇಷ ಅಧ್ಯಯನ ನಡೆಸಿ ಬೃಹತ್, ವರ್ಣಮಯ ಗ್ರಂಥ ರಚಿಸಿರುವ ಚಿತ್ರಕಲಾ ಪರಿಷತ್ತಿನ ಎಂ.ಎಸ್. ನಂಜುಂಡರಾಯರು (೧೯೩೨–೨೦೦೩) ಕೋಲಾರ ಜಿಲ್ಲೆಯ ತೊಗಲುಗೊಂಬೆ ಹಾಗೂ ಆಟಗಾರರ ಬಗ್ಗೆ ಅನೇಕ ಮಾಹಿತಿ ಹಾಗೂ ತೊಗಲುಗೊಂಬೆಗಳ ಛಾಯಾಚಿತ್ರ ನೀಡಿದ್ದಾರೆ. ಅವರುಗಳಲ್ಲಿ ಶಿಡ್ಲಘಟ್ಟದ ಸಂಜೀವರಾವ್, ನಂದಿಯ ರಾಮರಾವ್ ಅವರ ಸಂಘಟಣೆಯನ್ನು ಎರಡು ಬಾರಿ ಯೂರೋಪು ದೇಶಗಳಿಗೆ ಕಳಿಸಿದ್ದು ಅಲ್ಲಿ ಆಡಿದ 'ಕೀಚಕವಧೆ' ಸಾಕಷ್ಟು ಪರಿಣಾಮ ಬೀರಿತು. ನಂದಿಯ ರಾಮರಾವ್ ಅವರು ಕೀಚಕನ ಪಾತ್ರವನ್ನು ಅದ್ಭುತವಾಗಿ ನಿರ್ವಹಿಸಿ ಗೊಂಬೆ ಆಡಿಸುತ್ತಿದ್ದರು. ನಂತರವೂ ಈ ತಂಡ ಹಲವುಬಾರಿ ದೇಶವಿದೇಶಗಳಲ್ಲಿ ಸಂಚರಿಸಿ ಹೆಸರು ಮಾಡಿತು. ನಂಜುಂಡರಾಯರ ಅಧ್ಯಯನದಂತೆ ಕೋಲಾರ ಜಿಲ್ಲೆಯಲ್ಲಿ ಕೆಳಕಂಡ ಗೊಂಬೆಯಾಟಗಾರರು ಕ್ರಿಯಾಶೀಲರಾಗಿದ್ದರು.

ಹನುಮಂತರಾವ್ (ಮಗ) ಸೀತಾರಾಮಯ್ಯ ಅಪ್ಪಾರೆಡ್ಡಿಪಾಳ್ಯ, ಗುಡಿಬಂಡೆ; ಬಾಲಕೃಷ್ಣಪ್ಪ ಅಲಿಯಾಸ್, ಬಸಪ್ಪ (ಮಗ) ಸಂಜೀವಪ್ಪ, ಬಾಲರೆಡ್ಡಿಪಾಳ್ಯ, ಗೌರಿಬಿದನೂರು; ಮುನಿಸ್ವಾಮಪ್ಪ (ಮಗ) ವೆಂಕಟರಾಯಪ್ಪ, ಸೊಪ್ಪಹಳ್ಳಿ, ಚಿಕ್ಕಬಳ್ಳಾಪುರ; ಮುನಿಸ್ವಾಮಿ (ಮಗ) ರಾಮಯ್ಯ ನಂದಿಗಾನಹಳ್ಳಿ, ಚಿಂತಾಮಣಿ; ನಾರಾಯಣಪ್ಪ (ಮಗ)ವೆಂಕೋಬರಾವ್, ಹಂಪಸಂದ್ರ, ಗುಡಿಬಂಡೆ; ರಾಮರಾವ್ ಆಟಕ್ ಜೀಕುಮಂದ್ಯಪಲ್ಲಿ, ಬಾಗೇಪಲ್ಲಿ; ಸಂಜೀವರಾವ್ ಮಿಟ್ಟೆಪಲ್ಲಿ ಪೋಸ್ಟ್ ಮಾರಪಲ್ಲಿ, ಚಿಂತಾಮಣಿ; ಸಾಂಬಯ್ಯ ಜಕಮಂದಿಯಾಪಲ್ಲಿ, ಬಾಗೇಪಲ್ಲಿ; ಶಿಂಧೆ ಶಂಕರಪ್ಪ (ಮಗ) ಜಗನ್ನಾಥ, ಬೊಮ್ಮಲಾಟಪುರ, ಮಿಂಡಿಗಲ್ ಪೋಸ್ಟ್ ಚಿಂತಾಮಣಿ; ಶ್ಯಾಮರಾವ್ (ಮಗ) ಮುನಿಯಪ್ಪ, ಮಂಜಿನಬೆಲೆ, ಚಿಕ್ಕಬಳ್ಳಾಪುರ; ವೆಂಕಟರಮಣಪ್ಪ ಹೊಮ್ಮಲಾಟಪುರ, ರೇಗೆತ್ತಹಳ್ಳಿ, ಚಿಂತಾಮಣಿ. ಇವರದಲ್ಲದೆ, ಗೌರಿಬಿದನೂರು ತಾಲೂಕಿನ ಬಾಲರೆಡ್ಡಿ ಹಳ್ಳಿಯ ಸಂಜೀವಪ್ಪನ (ಮಗ) ಕೃಷ್ಣಪ್ಪ; ಬಾಗೇಪಲ್ಲಿಯ ತಪ್ಪನ್ನಗಾರಿಪಲ್ಲಿಯ ಸೊರಪ್ಪನ (ಮಗ)ಚಿಕ್ಕ ಆಂಜನಪ್ಪ ಅವರುಗಳನ್ನು ಹೆಸರಿಸಬಹುದು.

ಕೋಲಾರ ಜಿಲ್ಲೆಯ ತೊಗಲುಗೊಂಬೆಗಳ ಅಧ್ಯಯನದೊಂದಿಗೆ ಜಿಲ್ಲೆಯ ಕೆಲವು ಗೊಂಬೆಗಳ ಚಿತ್ರ ಹಾಗೂ ಆಚರಣೆಯ ವಿವರಗಳೂ ದೊರೆಯುತ್ತದೆ. ಇವು ಇತರ ಜಿಲ್ಲೆಗಳಿಗಿಂತ ಹೆಚ್ಚು ಭಿನ್ನವಲ್ಲವಾದರೂ ಗೊಂಬೆಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಗುರುತಿಸಬಹುದು. ಇವುಗಳ ಗಾತ್ರ ೪೦ ಅಂಗುಲಗಳಿಂದ ಹಿಡಿದು ೬೦ ಅಂಗುಲಗಳವರೆಗೂ ಇರುವಂತವು. ಮುಖಭಾವ ಒಂದು ಪಾರ್ಶ್ವ ನೋಟದ್ದೇ ಆದರೂ ಒಂದೇ ಕಣ್ಣು ಬಿಡಿಸಿರುವಂತಹವು ಹೆಚ್ಚಿನ ಅಲಂಕಾರಗಳಿಂದ ಕೂಡಿದ್ದು, ನೆರೆಯ

ಅನಂತಪುರದ ಗೊಂಬೆಗಳ ಪ್ರಭಾವ ಬೀರಿದಂತಿವೆ. ದೊಡ್ಡ ಅಳತೆಯ ಗೊಂಬೆಗಳನ್ನು ಕೈಯಲ್ಲಿ ಹಿಡಿದು ಕಲಾವಿದ ಕಾಲಿಗೆ ಗೆಜ್ಜೆಕಟ್ಟಿ ನಿಂತುಕೊಂಡೇ ಕುಣಿಯುತ್ತಾ ಆಡಿಸುವುದರಿಂದ ಗೊಂಬೆಗಳ ಕುಣಿತಕ್ಕೆ ಹೆಚ್ಚಿನ ಆಕರ್ಷಣೆ ಒದಗುತ್ತದೆ. ಪೌರಾಣಿಕ ರಾಜರುಗಳಿಗೂ ಬಿಗಿಯಾದ ನಿಲುವಂಗಿ, ಈಜಾರ, ಮುಂದೆ ಬಾಗಿದ ಚಪ್ಪಲಿ ಇತ್ಯಾದಿ ಸಮಕಾಲೀನ ಉಡುಗೆಗಳನ್ನು ಹಾಕಿದೆ. ರಂಗ ಸಜ್ಜಿಕೆ ಸಹ ಸರಳವಾಗಿದ್ದು ರಸ್ತೆಯ ಮಧ್ಯೆ ಎರಡು ಕಂಬ ನೆಟ್ಟು ಪಂಚೆಯನ್ನೇ ತೆರೆಯಂತೆ ಕಟ್ಟಿ ಸರಳವಾದ ಪಕ್ಕವಾದ್ಯಗಳೊಂದಿಗೆ ಆಡುವಂತಹದು. ಹಳೆಯ ಗೊಂಬೆಗಳನ್ನು ನೀರಿನಲ್ಲಿ ವಿಸರ್ಜನೆ ಮಾಡುವ ಪದ್ಧತಿಯೇ ಇಲ್ಲೂ ಇದೆ.

ಕೋಲಾರ ತಾಲೂಕಿನ ಅಚ್ಚಟ್ನಹಳ್ಳಿಯಲ್ಲಿ ಕೀಲುಗೊಂಬೆ ವರ್ಗದ ಅಪರೂಪದ ಮಾದರಿಯ ಗೊಂಬೆಗಳಿವೆ. ಇವುಗಳನ್ನು ತಮ್ಮ ತಾತ ಸಂಜೀವರೆಡ್ಡಿ ಅವರು ಸ್ವಂತ ಬುದ್ಧಿಶಕ್ತಿಯಿಂದ ರೂಪಿಸಿದರೆಂದೂ ತಮ್ಮ ತಂದೆ ಆಂಜನೇಯ ರೆಡ್ಡಿ ಹಾಗೂ ತಾನು ಕೆಲವು ಹೊಸಗೊಂಬೆಗಳನ್ನು ಮಾಡಿ ಸೇರಿಸಿರುವುದಾಗಿಯೂ ಈಗ ಈ ಗೊಂಬೆಗಳ ಉಸ್ತುವಾರಿ ನೋಡಿಕೊಳ್ಳುತ್ತಿರುವ ಈಗಿನ ಸಂಜೀವರೆಡ್ಡಿ ಅವರು ಹೇಳುತ್ತಾರೆ. ನವರಾತ್ರಿಯ ಸಂದರ್ಭದಲ್ಲಿ ಊರ ಮುಂದಿನ ಚಾವಡಿಯಲ್ಲಿ ಗ್ರಾಮಸ್ಥರ ಸಹಕಾರದೊಂದಿಗೆ ಈ ಗೊಂಬೆಗಳ ಪ್ರದರ್ಶನ ೯ ರಿಂದ ೧೫ ದಿನಗಳವರೆಗೆ ನಿತ್ಯ ಸಂಜೆ ವೇಳೆ ನಡೆಯುತ್ತದೆ. ಹಾಡು, ಸಂಭಾಷಣೆಗೆ ತಕ್ಕಂತೆ ಈ ವಿವಿಧ ಗೊಂಬೆಗಳು ಅಭಿನಯಿಸುವುದು ಇಲ್ಲಿನ ವೈಶಿಷ್ಟ್ಯವಾಗಿದೆ. ಹಾಗೆ ಅವು ಅಭಿನಯಿಸುವಾಗ ಹಾಡುಗಾರ ಸಂಜೀವರೆಡ್ಡಿ ಅವುಗಳನ್ನು ಮುಟ್ಟುವುದಿಲ್ಲ. ಸೂತ್ರದಗೊಂಬೆಗಳ ಹಾಗೆ ಅವುಗಳ ಸೂತ್ರಗಳೂ ಕಾಣುವುದಿಲ್ಲ. ಯಾರು, ಎಲ್ಲಿಂದ ಅವುಗಳನ್ನು ನಿಯಂತ್ರಿಸುತ್ತಾರೆ ಎಂಬುದೂ ಪ್ರೇಕ್ಷಕರಿಗೆ ಸುಲಭವಾಗಿ ಅರಿವಾಗುವುದಿಲ್ಲ. ಅಂತಹ ಚಮತ್ಕಾರ ಈ ತಂತ್ರದಲ್ಲಿದೆ ಎಂಬುದು ವಿಶೇಷ. ಮೂರು ತಲೆಮಾರಿನಿಂದ ಈ ಊರಿನಲ್ಲಿ ಉಳಿದುಬಂದಿರುವ ಇಂತಹ ಚಮತ್ಕಾರದ ಗೊಂಬೆಗಳು ರಾಜ್ಯದ ಇತರ ಭಾಗಗಳಲ್ಲಿ ಎಲ್ಲಿಯೂ ಇಲ್ಲ – ಎಂಬುದರಿಂದ ಅಚ್ಚಟ್ನಳ್ಳಿಯ ಸಂಜೀವರೆಡ್ಡಿಯವರ ಗೊಂಬೆಗಳಿಗೆ ವಿಶೇಷ ಮಹತ್ವ ಬಂದಿದೆ ಎಂದು ಈ ಕುರಿತು ಅಧ್ಯಯನ ಮಾಡಿ ಲೇಖನಗಳನ್ನು ಬರೆದಿರುವ ಟಿ.ಗೋವಿಂದರಾಜು ಅವರು ತಿಳಿಸುತ್ತಾರೆ.

ಜನಪದ ಕಲೆ ವಿವಿಧ ಕಾರಣಗಳಿಂದ ನಶಿಸುತ್ತಿದೆಯಾದರೂ ಜಿಲ್ಲೆಯಲ್ಲಿ ನೂರಾರು ಕಲಾವಿದರು ಕ್ರಿಯಾಶೀಲರಾಗಿದ್ದಾರೆ. ಈ ಹಿಂದೆಯೇ ಜಿಲ್ಲೆಯವರಾದ ಹಂಪ ನಾಗರಾಜಯ್ಯ ಅವರು ರಾಜ್ಯದ ವಿವಿಧ ಕಲಾಪ್ರಕಾರಗಳ ಅನೇಕ ಕಲಾವಿದರ ಪಟ್ಟಿಯನ್ನು ಮಾಡಿದ್ದರು. ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಕೆಲವು ಕಲಾವಿದರನ್ನು ಗುರುತಿಸಿದ್ದು ಅವರ ವಿಳಾಸಪಟ್ಟಿಯಿಂದ ಆಯ್ಕೆ ಮಾಡಿದ ಕಲಾವಿದರ ಪಟ್ಟಿಯನ್ನು ಈ ಮುಂದೆ ನೀಡಿದೆ.

ಗ್ರಾಮೀಣ ಯುವ ಕಲಾತಂಡ, ಗೊಟ್ಲುಕುಂಟೆ, ಕೊಂಬು ಕಹಳೆ ಅರೆಬಾವು (ಮೈಸೂರು ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ); ಶ್ರೀಮತಿ ವೇಣುಬಾಯಿ, ಬೇತವಾಂಡ್ಲಪಲ್ಲಿ, ತೊಗಲುಗೊಂಬೆ ಆಟ; ಮನೋಹರ್, ಬೇತವಾಂಡ್ಲಪಲ್ಲಿ ತೊಗಲುಗೊಂಬೆ ಆಟ; ವೆಂಕಟೇಶಪ್ಪ ಮತ್ತು ತಂಡ, ಗುಂಡ್ಲುಪಲ್ಲಿ, ತಮಟೆವಾದನ; ನರಸಿಂಹಪ್ಪ ಮತ್ತು ತಂಡ, ಯಲ್ಲಂಪಲ್ಲಿ, ಹುಲಿವೇಷ; ನಾಗರಾಜ ಮತ್ತು ತಂಡ, ಪುಟಪರ್ತಿ, ಕೋಲಾಟ; ಅಶ್ವತ್ಥಪ್ಪ ಮತ್ತು ತಂಡ, ಮಲ್ಲಸಂದ್ರ, ಕೋಲಾಟ; ವೆಂಕಟರಾಯಪ್ಪ ಮತ್ತು ತಂಡ, ಚಂಡೂರು (ಗ್ರಾ.), ಚಕ್ಕಲಭಜನೆ; ಲಕ್ಷ್ಮೀಬಾಯಿ ಮತ್ತು ತಂಡ, ಸದ್ದೆಪಲ್ಯ ತಾಂಡ, ಲಂಬಾಣಿ ನೃತ್ಯ; ಸ್ವಾಮಿ ವಿವೇಕಾನಂದ ಕಲಾ ಬಳಕ, ಸೋಮನಹಳ್ಳಿ, ವಿವಿಧ ವೇಷಗಳು; ಪ್ರಭಾಕರ್ ರಾವ್, ಚೋಳಶೌಲಹಳ್ಳಿ,ಕೋಲಾಟ; ಮುಖವೀಣೆ ಆಂಜನಪ್ಪ, ಗವಿಗುಂಟನಹಳ್ಳಿ, ಮುಖವೀಣೆ; ಮುನಿವೆಂಕಟಪ್ಪ, ಪಿಂಡಪಾಪನಹಳ್ಳಿ (ಗ್ರಾ.) ತಮಟೆ (ಜಪಾನ್ ದೇಶದಲ್ಲಿ ತಮಟೆ ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ. ರಾಜ್ಯ ಪ್ರಶಸ್ತಿ ಪಡೆದ ಕಲಾವಿದರು); ಎನ್. ಮರಿಯಪ್ಪ ಮತ್ತು ತಂಡ, ಜಂಗಮಕೋಟೆ ಕ್ರಾಸ್, ವೀರಗಾಸೆ; ಕೆ.ಎಂ. ನಾರಾಯಣಸ್ವಾಮಿ, ಜಂಗಮಕೋಟೆ, ಗಾರುಡಿಗೊಂಬೆ; ಮುನಿಯಪ್ಪ ಮತ್ತು ತಂಡ, ಮಳ್ಳೂರು, ಕೋಲು ವರಸೆ; ಮಂಜುನಾಥ ಸಿದ್ಧಾರ್ಥ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ, ಕರಗ ನೃತ್ಯ; ಮುನಿರೆಡ್ಡಿ, ನಾರಮಂಗಲಹಳ್ಳಿ, ಜಾನಪದ; ಮುನೇಶ್ವರಸ್ವಾಮಿ ಕಲಾ ತಂಡ, ಮೈಲಾಪುರ, ಭಜನೆ; ಕುಲಿನಾಗ ಹನುಮಪ್ಪ, ಕೂದಲಿ (ಶಾ), ಜಾನಪದ ಕಥನ; ಶ್ರೀರಾಮಪ್ಪ ಮತ್ತು ತಂಡ, ವೇಣು ಕಲಾವಿದರ ಸಂಘ, ಪೆದ್ದೂರು (ಶಾ), ವೇಣುಕುಣಿತ; ಬಾಲಕೃಷ್ಣಪ್ಪ ಮತ್ತು ತಂಡ, ಕೂಗಿಲೇರು (ಶಾ), ಕಾವಡಿ ನೃತ್ಯ; ವಿ. ವೆಂಕಟಮುನಿಯಪ್ಪ ಬುರ್ರಕಥೆ (ರಾಜ್ಯಪ್ರಶಸ್ತಿ ಕಲಾವಿದರು); ಶಾರದಾಂಬ ಯುವಕ ಸಂಘ, ಕೆಂಬೋಡಿ, ಕೋಲಾಟ; ರಾಮೇಗೌಡ, ಕಾಳಹಸ್ತಿ ಪುರ, ಕೋಲಾಟ; ತುಡು ಮುನಿವೆಂಕಟಪ್ಪ, ಸಾರೇಹೊಸಹಳ್ಳಿ ಗ್ರಾಮ, ತಮಟೆ (ರಾಜ್ಯಪ್ರಶಸ್ತಿ ಕಲಾವಿದರು); ವೆಂಕಟೇಶಪ್ಪ ಮತ್ತು ತಂಡ, ಕಾಕಿನತ್ತ (ಗ್ರಾ), ತಮಟೆ; ಶ್ರೀನಿವಾಸ ಮತ್ತು ತಂಡ, ಹುತ್ತೂರು

ಗ್ರಾಮ, ತಮಟೆ; ವಿ. ನಾರಾಯಣ ಸ್ವಾಮಿ ಮತ್ತು ತಂಡ, ಚಿನ್ನಾಪುರ, ತತ್ವಪದಕಲಾವಿದರು; ಕೃಷ್ಣಪ್ಪ ಮತ್ತು ತಂಡ, ನರಸಾಪುರ, ಬೆಂಕಿ ಕರಗ; ವೆಂಕಟೇಶಪ್ಪ ಮತ್ತು ತಂಡ, ಹೆಚ್. ಮಲ್ಲಾಂಡಹಳ್ಳಿ, ತಮಟೆ; ಸುಬ್ರಮಣಿ ಮತ್ತು ತಂಡ, ಕಮ್ಮಸಂದ್ರ ಹಾಗೂ ಮುನಿಯಪ್ಪ ಮತ್ತು ತಂಡ, ಅಂಕತಟ್ನಹಳ್ಳಿ, ಕೋಲಾಟ–ತಮಟೆ; ಪಾಲಾಕ್ಷಪ್ಪ, ಅಂದ್ರಹಳ್ಳಿ, ನಂದಿಧ್ವಜ; ಶ್ರೀವೇಣುಗೋಪಾಲ ಸ್ವಾಮಿ ಯುವಕ ರೈತ ಸಂಘ, ಹುಳದೇನಹಳ್ಳಿ, ಕೋಲಾಟ – ಹುಲಿವೇಷ; ನಾಗರಾಜ ಮತ್ತು ತಂಡ, ಬೈರನಹಳ್ಳಿ, ಕರಡಿ ಮಜಲು; ನಾಗರಾಜ ಮತ್ತು ತಂಡ, ಚೋಳಶೆಟ್ಟಿಹಳ್ಳಿ, ಚಕ್ಕಲಭಜನೆ; (ಆಧಾರ: ಉಪನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೋಲಾರ) ಜಿಲ್ಲೆಯಿಂದ ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡಮಿಯ ಪ್ರಶಸ್ತಿ ಪಡೆದವರು – ಪೂಸಾಲು ಆಂಜಿನಪ್ಪ (ಬುರ್ರಕಥೆ), ಎನ್.ವೆಂಕಟಾಚಲಪತಿ (ಕೇಳಿಕೆ), ಪಿ. ರಾಮರಾವ್ (ತೊಗಲುಗೊಂಬೆ ಆಟ), ಕೇಳಿಕೆ ಬೂಶಪ್ಪ (ಕೇಳಿಕೆ), ಶ್ರೀಮತಿ ಪಿಳ್ಳಮ್ಮ (ತೊಗಲುಗೊಂಬೆ ಆಟ), ತಳಾರಿ ಗಂಗಪ್ಪ (ತಮಟೆ), ಕೆ. ಚೆಂಗಪ್ಪ, ಚಿನ್ನಹಳ್ಳಿ (ವೇಣುನೃತ್ಯ), ಕೆ.ಎಸ್. ನಂಜುಂಡರೆಡ್ಡಿ (ಹಾಡುಗಾರ), ಮುನಿಸ್ವಾಮಿ (ಕೋಲಾಟ), ಆಂಜಿನಪ್ಪ (ಮುಖವೀಣೆ), ಶ್ರೀಮತಿ ಗದ್ದೆಕಣ್ಣೂರು ವೆಂಕಟಮ್ಮ (ಸೋಬಾನೆ ಪದ), ಪಿ.ವೆಂಕಟಮುನಿಯಪ್ಪ (ಬುರ್ರಕಥೆ), ಎಸ್.ಸಂಜೀವಪ್ಪ (ಬಯಲಾಟ), ಕೋನಿಗ ಹನುಮ (ಕಥನಕಾವ್ಯ), ದ್ಯಾವಣ್ಣ (ಬಯಲಾಟದ ಭಾಗವತ), ವೇಮಗಲ್ ಡಿ. ನಾರಾಯಣಸ್ವಾಮಿ (ಗೀತಗಾಯನ).

## ಪತ್ರಿಕೋದ್ಯಮ

ಇಪ್ಪತ್ತನೆಯ ಶತಮಾನದ ಆರಂಭದ ವೇಳೆಗೆ ರಾಜ್ಯದಲ್ಲಿ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಹಲವಾರು ಪ್ರಯೋಗಗಳನ್ನು ಕಂಡಿದ್ದರೂ ಕೋಲಾರ ಜಿಲ್ಲೆ ಪತ್ರಿಕೋದ್ಯಮಕ್ಕೆ ಸ್ಪಂದಿಸಿದಂತೆ ಕಂಡು ಬರುವುದಿಲ್ಲ. ನೆರೆಯ ಬೆಂಗಳೂರಿನಿಂದ ಕನ್ನಡ ಹಾಗೂ ತಮಿಳುನಾಡಿನಿಂದ ಇಂಗ್ಲೀಷ್ ಪತ್ರಿಕೆಗಳು ಜಿಲ್ಲೆಗೆ ಬರುತ್ತಿದ್ದರಿಂದ ಇಲ್ಲಿಯದೇ ಆದ ಪತ್ರಿಕೆಯ ಅವಶ್ಯಕತೆ ಇದ್ದಿರಲಾರದು. ಏಕೀಕರಣದ ಹಿಂದಿನ ದಾಖಲೆಗಳಂತೆ ಚಿಕ್ಕಬಳ್ಳಾಪುರದಿಂದ ೧೯೧೬ರಿಂದ ೧೯೪೬ರವರೆಗೆ ಹೊರಬಂದ ನಾರಾಯಣರಾವ್ ಅವರ ಮಾಸಪತ್ರಿಕೆ 'ಎಕ್ಸಾಮಿನರ್', ೧೯೨೨ರಲ್ಲಿ ಚಿಕ್ಕಬಳ್ಳಾಪುರದಿಂದ ಬಂದ, ಎ. ಕೃಷ್ಣಸ್ವಾಮಿ ಅಯ್ಯಂಗಾರರ ತ್ರೈಮಾಸಿಕ 'ಭೋದಕಸೇವೆ', ಕೋಲಾರದಿಂದ ಫಾದರ್ ಜೆ.ಜೆ.ಎಂ.ಫುರ್ಟಾಡೋ ೧೯೩೫ರಲ್ಲಿ ಪ್ರಕಟಿಸುತ್ತಿದ್ದ ಮಾಸಪತ್ರಿಕೆ 'ಕೈಗಾರಿಕೆ'. ಅದೇ ವೇಳೆಯಲ್ಲಿ (೧೯೩೫) ಚಿಕ್ಕಬಳ್ಳಾಪುರದಿಂದ ಜೆ.ಆರ್.ಸ್ವಾಮಿ ಅವರು ಸಂಪಾದಿಸಿ ಪ್ರಕಟಿಸುತ್ತಿದ್ದ ಮಾಸಪತ್ರಿಕೆ 'ಪರೀಕ್ಷಾ ದರ್ಪಣ'ಗಳನ್ನು ಹೆಸರಿಸಬಹುದು. ಇವುಗಳ ಹೆಸರುಗಳಿಂದ ಇವು ಸುದ್ದಿಪತ್ರಿಕೆಗಳಿಗಿಂತ ಹೊರತಾದ ಶೈಕ್ಷಣಿಕ ಹಾಗೂ ಕೈಗಾರಿಕಾ ಕ್ಷೇತ್ರದವೆಂದು ಹೇಳಬಹುದು. ಪ್ರಾಯಶ: ಮಾಲೂರಿನ ಬಿ.ಎ.ನಾರಾಯಣಸ್ವಾಮಿ ಅವರು ೧೯೬೦–೭೦ರ ನಡುವೆ ತರುತ್ತಿದ್ದ 'ವಿಶ್ವಪೌರ' ಪಾಕ್ಷಿಕ ಆದ್ಯ ಪತ್ರಿಕೆಯಾಗಿರಬಹುದು. ಆದರೆ ಜಿಲ್ಲೆಯ ಪತ್ರಿಕೋದ್ಯಮ ಭೀಷ್ಮರೆಂದೇ ಹೆಸರುಗಳಿಸಿದ ಡಿ.ವಿ.ಗುಂಡಪ್ಪ ಅವರು ಸದರಿ ಕ್ಷೇತ್ರದಲ್ಲಿ ಅಪಾರ ಕಾರ್ಯವೆಸಗಿದವರು. ೧೯೦೭ರಲ್ಲೇ 'ಭಾರತಿ' ಎಂಬ ಕನ್ನಡ ದಿನ ಪತ್ರಿಕೆ ೧೯೦೯ರಲ್ಲಿ 'ಸುಮತಿ' ಎಂಬ ವಾರ ಪತ್ರಿಕೆ, ೧೯೧೨ರಲ್ಲಿ 'ಜನಜೀವನ' ಹಾಗೂ ೧೯೧೬ರಲ್ಲಿ 'ಕರ್ನಾಟಕ ಜೀವನ' ಎಂಬ ಮಾಸಪತ್ರಿಕೆಗಳನ್ನು ಕನ್ನಡದಲ್ಲಿಯೂ ೧೯೧೩–೨೧ರಲ್ಲಿ 'ಕರ್ನಾಟಕ' ಎಂಬ ಹೆಸರಿನಲ್ಲಿ ಇಂಗ್ಲೀಷ್‌ನಲ್ಲಿ ಪಾಕ್ಷಿಕ ಪತ್ರಿಕೆಯನ್ನೂ ಬೆಂಗಳೂರಿನಿಂದ ಹೊರತಂದರು. ಇವುಗಳು ಯಾವುವೂ ಹೆಚ್ಚುಕಾಲ ನಡೆಯಲಿಲ್ಲ, ಆದರೆ ಅವರ ಜೀವನವೇ ಒಂದು ಅರ್ಥದಲ್ಲಿ ಪತ್ರಿಕೋದ್ಯಮವಾಗಿತ್ತು. ತಾವು ಕಟ್ಟಿ ಬೆಳೆಸಿದ ಗೋಖಲೆ ಸಾರ್ವಜನಿಕ ಸಂಘದಿಂದ 'ಪಬ್ಲಿಕ್ ಅಫೇರ್ಸ್' ಎಂಬ ನಿಯತಕಾಲಿಕ ತರುತ್ತಿದ್ದರು. ಎಲ್ಲಕ್ಕಿಂತ ಪತ್ರಿಕೋದ್ಯಮದ ಬಗ್ಗೆ ಅವರಿಗೆ ಇದ್ದ ಅಪಾರ ಪಾಂಡಿತ್ಯ, ಓದುಗಳಿಂದಾಗಿ ಆ ಕ್ಷೇತ್ರವನ್ನು ಕುರಿತು ಅನೇಕ ಲೇಖನಗಳನ್ನು, ಕೆಲವು ಪುಸ್ತಕಗಳನ್ನು ಬರೆದಿದ್ದು ಅದರಲ್ಲಿಯ ವಿಚಾರಗಳು ಯಾವ ಕಾಲಕ್ಕಾದರೂ ಪ್ರಸ್ತುತವೆನಿಸುವಂತಿವೆ. ಕನ್ನಡದ ಮೊದಮೊದಲ ಪತ್ರಿಕಾರಂಗದಲ್ಲೇ ವಿಶಿಷ್ಟವೆನಿಸಿದ 'ಜೀವನ' ಸಾಹಿತ್ಯಿಕ ಮಾಸಪತ್ರಿಕೆ ೧೯೪೦ರಲ್ಲಿ ಧಾರವಾಡದಲ್ಲಿ ಆರಂಭವಾಗಿದ್ದು ಮುಂದೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ ಹೊರಬರುತ್ತಿದ್ದು ಏಳನೇ ದಶಕದ ಅಂತ್ಯದಲ್ಲಿ ಸ್ಥಗಿತಗೊಂಡಿತು. ಪತ್ರಿಕೆಗಳೂ ಜನಜಾಗೃತಿಯ ಒಂದು ಪ್ರಮುಖ ಅಸ್ತ್ರವಾಗಿಸಬಹುದೆಂದು ತೋರಿಸಿಕೊಟ್ಟವರು ತಿ.ತಾ.ಶರ್ಮ ಅವರು. ಅವರ ಖಡ್ಗದಷ್ಟು ಹರಿತವಾದ ಸಂಪಾದಕೀಯ ಲೇಖನಗಳು ಅಧಿಕಾರಸ್ಥರನ್ನು ಹತೋಟಿಗೆ ತರುತ್ತಿದ್ದು ಜನಾದರಣೆಯನ್ನೂ ಪಡೆದಿದ್ದವು. ಶರ್ಮ ಅವರೇ ಸ್ವತ: ೧೯೨೫ರಲ್ಲಿ 'ವಿಶ್ವಕರ್ನಾಟಕ' ಪತ್ರಿಕೆ ನಡೆಸಲು ಆರಂಭಿಸಿದರು. ಪತ್ರಿಕೆಯ ಅನೇಕ ಅಭಿಪ್ರಾಯಗಳು ಸರ್ಕಾರಕ್ಕೆ ಮುಜುಗರ ತರುವಂತಾಗಿದ್ದು ಶರ್ಮರವರು ಸರ್ಕಾರದ ಆಗ್ರಹಕ್ಕೆ ಪಾತ್ರರಾಗಿ ಹೊರರಾಜ್ಯಗಳಿಂದ ಹಾಗೂ ಬೇರೆ ವಿಶ್ವಸನೀಯರಿಂದ ಪತ್ರಿಕೆ ಅನಿಯಮಿತವಾಗಿ ಕೆಲವರ್ಷಗಳು ಬಂದವು. ಮುಂದೆಯೂ ಅಂತಿಮಕಾಲದವರೆಗೂ ವಿವಿಧ ಪತ್ರಿಕೆಗಳೊಂದಿಗೆ ಶರ್ಮರವರ ಸಂಪರ್ಕವಿತ್ತು.

ಚಂದ್ರಪಾಲ್

ಕೋಲಾರ ಜಿಲ್ಲೆಯಲ್ಲಿ ಮುಂದಿನ ಕೆಲ ಪತ್ರಿಕೆಗಳ ಬಗ್ಗೆ ನೋಡಬಹುದು. ಕೋಲಾರದ ಪುರಸಭಾ ಅಧ್ಯಕ್ಷರಾಗಿದ್ದ ಕೆ.ಗೋವಿಂದರಾಜು 'ಪೌರಸಂಚಿಕೆ'ಯನ್ನು ತ್ರೈಮಾಸಿಕವಾಗಿ ಕೆಲಕಾಲ ನಡೆಸಿದರು. ಅಲ್ಲಿಯೇ ನಗರಸಭಾಧ್ಯಕ್ಷರಾಗಿದ್ದ ಎಸ್.ಚಂದ್ರಯ್ಯ ಅವರು 'ಪ್ರಜಾರಾಜ್ಯ' ಎಂಬ ವಾರಪತ್ರಿಕೆ ಹೊರತಂದರು. 'ಹಿಂದುಸ್ಥಾನ್ ಸಮಾಚಾರ್'ಗೆ ಪತ್ರಕರ್ತರಾಗಿದ್ದ ಜೆ.ಎಸ್.ಪಾರ್ಥಸಾರಥಿ ಅವರು 'ಜನಬಿಂಬ' ವಾರಪತ್ರಿಕೆ ಪ್ರಕಟಿಸುತ್ತಿದ್ದರು. ಕೋಲಾರದ ವಕೀಲ ಎ.ರಮೇಶ್‌ರವರು ನಗರಸಭಾ ಅಧ್ಯಕ್ಷ ಸೂರಿ ಅವರ ಸಂಪಾದಕತ್ವದಲ್ಲಿ 'ನಿನಾದ' ವಾರಪತ್ರಿಕೆ ಕೆಲಕಾಲ ನಡೆಸಿದರು. ಇವುಗಳಿಗೂ ಮೊದಲೇ ೧೯೪೬ರಲ್ಲೇ ಸಿ.ಪಿ.ಬಸವರಾಜಶೇಖರ್ ಅವರು 'ಛಡಿ' ದಿನಪತ್ರಿಕೆ ಹೊರತರುತ್ತಿದ್ದು ನಂತರ ಅವರ ಮಗ ಬಿ.ಪುಟ್ಟರಾಜು ಅವರು ಸಂಪಾದಕರಾದರು. ಪುಟ್ಟರಾಜು ಅವರೇ ೧೯೮೫ರಲ್ಲಿ 'ಪುನರ್ ವಸತಿ' ಎಂಬ ಮಹಿಳಾ ವಾರಪತ್ರಿಕೆ ಪ್ರಕಟಿಸುತ್ತಿದ್ದರು. ಸ್ವಾತಂತ್ರ್ಯ ಹೋರಾಟಗಾರರಾದ ಆನಂದರಾವ್ ಬೌಂಸ್ಲೆ "ಬಿರುಗಾಳಿ" ಎಂಬ ವಾರಪತ್ರಿಕೆಯನ್ನು ಹೊರತರುತ್ತಿದ್ದರು.

**ಪ್ರಥಮಗಳ ದಾಖಲೆಯ 'ಕೋಲಾರ ಪತ್ರಿಕೆ'**

ಕೋಲಾರ ಜಿಲ್ಲೆಯಲ್ಲಿ ಜಿಲ್ಲಾಮಟ್ಟದ ದಿನಪತ್ರಿಕೆಗಳೇ ಇಲ್ಲದಿದ್ದ ಸಂದರ್ಭದಲ್ಲಿ ಪ್ರಪ್ರಥಮವಾಗಿ ೧೯೭೫ರ ಏಪ್ರಿಲ್ ೫ರಂದು "ಕೋಲಾರ ಪತ್ರಿಕೆ" ಜಿಲ್ಲಾ ಕೇಂದ್ರವಾದ ಕೋಲಾರದಲ್ಲಿ ಪ್ರಾರಂಭಗೊಂಡಿತು. ಪತ್ರಿಕೆಯ ಸಂಪಾದಕರೂ, ಪ್ರಕಾಶಕರೂ, ಮಾಲೀಕರೂ ಆದ ಕೆ.ಪ್ರಹ್ಲಾದರಾವ್‌ರವರು ಹಾಸನದ 'ಜನಮಿತ್ರ'ದ ಕೃ.ನ.ಮೂರ್ತಿಯವರ ಗರಡಿಯಲ್ಲಿ ಹತ್ತು ವರ್ಷಗಳ ಅನುಭವ ಪಡೆದವರಾದ್ದರಿಂದ "ಕೋಲಾರ ಪತ್ರಿಕೆ" ಜನಮಿತ್ರ ಸೋದರ ಸಂಸ್ಥೆಯಾಯಿತು.

ಪ್ರಾರಂಭದಲ್ಲಿ ಕ್ರೌನ್ ಅರ್ಧ ಆಕಾರದಲ್ಲಿದ್ದು ಮುಖಬೆಲೆ ೫ ಪೈಸೆ. ಅಚ್ಚುಮೊಳೆ ಜೋಡಣೆಯಿಂದ ತ್ರೆಡ್ಲ್ ಮುದ್ರಣಯಂತ್ರದಲ್ಲಿ ಅಚ್ಚಾಗುತ್ತಿದ್ದ ಪತ್ರಿಕೆ ಕ್ರಮೇಣ ಅಭಿವೃದ್ಧಿ ಹೊಂದಿ ವಿದ್ಯುಚ್ಚಾಲಿತ ಮುದ್ರಣಯಂತ್ರ, ಗಣಕಯಂತ್ರ, ಶೀಟ್‌ಫೆಡ್ ಆಫ್‌ಸೆಟ್ ಮುದ್ರಣಯಂತ್ರವನ್ನು ಹೊಂದಿ ಇಂದು ವೆಬ್ ಆಫ್‌ಸೆಟ್ ಯಂತ್ರದಲ್ಲಿ ಡೆಮ್ಮಿ ೪ ಪುಟಗಳ ಆಕಾರದಲ್ಲಿ ಮುದ್ರಣಗೊಳ್ಳುತ್ತಿದೆ.

ಜಿಲ್ಲೆಯ ಹಿರಿಯ ಪತ್ರಕರ್ತ ಜಿ.ನಾರಾಯಣಸ್ವಾಮಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕೆ.ಪಟ್ಟಾಭಿರಾಮನ್‌ರವರು ಲೇಖನಗಳನ್ನು, ಸಲಹೆಗಳನ್ನು ನೀಡುವುದರ ಮೂಲಕ ಹೆಚ್ಚಿನ ಪ್ರೋತ್ಸಾಹ ನೀಡಿದರು.

ಜಿಲ್ಲೆಯಲ್ಲಿಯೇ ಪ್ರಪ್ರಥಮವಾಗಿ ಗಣಕಯಂತ್ರ ಹಾಗೂ ಆಫ್‌ಸೆಟ್ ಯಂತ್ರವನ್ನು ಅಳವಡಿಸಿಕೊಂಡ ಕೀರ್ತಿ ಕೋಲಾರಪತ್ರಿಕೆಯದು. ಕರ್ನಾಟಕ ಪತ್ರಿಕಾ ಆಕಾಡೆಮಿಯು ರಾಜ್ಯದಲ್ಲಿಯೇ ಅತ್ಯುತ್ತಮ ಜಿಲ್ಲಾಮಟ್ಟದ ದಿನಪತ್ರಿಕೆಗಳಿಗೆ ಕೊಡಮಾಡುವ ಆಂದೋಲನ ಪ್ರಶಸ್ತಿಯನ್ನು ಮೊಟ್ಟಮೊದಲ ವರ್ಷವೇ ೧೯೯೭ರಲ್ಲಿ ತನ್ನದಾಗಿಸಿಕೊಂಡ ಕೀರ್ತಿ ಕೋಲಾರಪತ್ರಿಕೆಯದು.

ರಜತೋತ್ಸವ ಕಂಡ ಕೆಲವೇ ಯಶಸ್ವಿ ಪತ್ರಿಕೆಗಳಲ್ಲಿ ಒಂದಾದ ಕೋಲಾರ ಪತ್ರಿಕೆ ತನ್ನ ಬೆಳವಣಿಗೆಯ ಹಾದಿಯಲ್ಲಿ ಹಲವು ಎಡರುತೊಡರುಗಳನ್ನು ಅನುಭವಿಸಿದರೂ ಹಲವು ಸಾಧನೆಗಳನ್ನು ಸಾಧಿಸಿದೆ.

ಆರಂಭದಲ್ಲಿಯೇ ತುರ್ತು ಪರಿಸ್ಥಿತಿ ಎದುರಿಸಬೇಕಾಗಿ ಬಂದದ್ದು, ಸರ್ಕಾರವನ್ನು ಎದುರು ಹಾಕಿಕೊಳ್ಳದೆ, ಆದರೆ ಪರಿಸ್ಥಿತಿಯ ಕರಾಳತೆಯನ್ನು ವರದಿಗಳನ್ನು, ಲೇಖನಗಳನ್ನು ಪ್ರಕಟಿಸುವ ಮೂಲಕ ಜನತೆಗೆ ತಿಳಿಸಿದೆ.

ಜಿಲ್ಲೆಯಲ್ಲಿ ತೆಲುಗಿನ ಪ್ರಾಬಲ್ಯವಿದ್ದರೂ ಕನ್ನಡ ಪರವಾದ ಕಾರ್ಯಗಳು ನಡೆದಾಗಲೆಲ್ಲಾ ವಿಶೇಷವರದಿಗಳನ್ನು ತಯಾರಿಸಿ ಪ್ರಕಟಿಸಿದೆ. ಗೋಕಾಕ್ ವರದಿಯ ಪೂರ್ಣಪಾಠ ಪ್ರಕಟವಾದ ಏಕೈಕ ಕನ್ನಡಪತ್ರಿಕೆ ಕೋಲಾರಪತ್ರಿಕೆ. ಅದನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಂದಿನ ಅಧ್ಯಕ್ಷ ಹಂ.ಪ.ನಾಗರಾಜಯ್ಯ ಗುರುತಿಸಿದ್ದುಂಟು.

ವಾರದ ಪುರವಣಿಗಳೇ ಅಲ್ಲದೆ ವಿಶೇಷ ಸಂಚಿಕೆಗಳ ಜೊತೆಗೆ ವಿವಿಧ ಸಾಹಿತ್ಯಕೃತಿಗಳನ್ನು ಕೋಲಾರ ಪತ್ರಿಕೆ ಹೊರತಂದಿದೆ. ತಾಲೂಕು ಸಮ್ಮೇಳನಗಳ ಪೂರ್ಣವರದಿ, ಕನ್ನಡ ನಾಟಕ, ಸಿನಿಮಾ, ಪುಸ್ತಕಗಳ ಪರಿಚಯ, ವಿಮರ್ಶೆ, ಕಥೆ, ಧಾರಾವಾಹಿ, ಕಾದಂಬರಿಗಳೂ, ಸಾಂಸ್ಕೃತಿಕವಾಗಿ ಸಂಗೀತ, ಹರಿಕಥೆ, ಶಾಲಾಕಾಲೇಜುಗಳಲ್ಲಿಯ ಕಾರ್ಯಕ್ರಮಗಳು, ಜನಪದ ಕಲಾ ಉತ್ಸವಗಳು, ಸಮ್ಮೇಳನಗಳು ವಿಶೇಷವಾಗಿ ವರದಿಯಾಗಿವೆ. ಅಲ್ಲದೆ ಜನರ ಕುಂದು–ಕೊರತೆ, ಬೆಳೆನಷ್ಟ, ಪ್ರಕೃತಿವಿಕೋಪಗಳ ಬಗ್ಗೆಯೂ ಬರೆದಿದೆ. ದೈನಂದಿನ ಕಾರ್ಯಕ್ರಮಗಳ ವಿವರ, ಪ್ರೇಕ್ಷಣೀಯ ಸ್ಥಳಗಳ ಪರಿಚಯ, ಇವೇ ಮುಂತಾದ ಸಂಗತಿಗಳನ್ನು ಎಲ್ಲಾ ಮೂಲಗಳಿಂದ ಪಡೆದು ಪ್ರಕಟಿಸಿದ್ದು, ಜಿಲ್ಲೆಯದೇ ಆದ ವಿಷಯಗಳಿಗೆ ಹೆಚ್ಚು ಒತ್ತಾಸೆ ನೀಡುವುದರಿಂದ ಜನ–ಮನದ ಪತ್ರಿಕೆಯಾಗಿ ಉಳಿದಿದೆ.

ವಿದ್ಯಾರ್ಥಿಗಳಿಗೆ ಪ್ರಶ್ನೋತ್ತರ ಪ್ರಕಟಣೆ, ಹಲವಾರು ಮೌಲ್ಯಯುತ ವಿಶೇಷಸಂಚಿಕೆಗಳನ್ನು ಹೊರತಂದಿರುವುದು ಕೋಲಾರ ಪತ್ರಿಕೆಯ ಮೌಲ್ಯವನ್ನು ಹೆಚ್ಚಿಸಿವೆ.

ಪ್ರಥಮ ವಾರ್ಷಿಕ ಸಂಚಿಕೆ "ಶೃಂಗ" (೧೯೭೬), ಕರ್ನಾಟಕ ಏಕೀಕರಣದ ದ್ವಿದಶಮಾನೋತ್ಸವ ಸಂಚಿಕೆ 'ಯೌವನ'(೧೯೭೬), ಜಿಲ್ಲಾ ಕೈಗಾರಿಕಾ ಪ್ರಗತಿ ದರ್ಶನ 'ವಿಕಾಸ' (೧೯೭೭), ಸುಹಾಸ (೧೯೭೮), ಅಂತರರಾಷ್ಟ್ರೀಯ ಮಕ್ಕಳ ವರ್ಷದ 'ಕಿಶೋರ' (೧೯೭೯), ಕನ್ನಡ ಸಾಹಿತ್ಯ ಸಮ್ಮೇಳನದ ವಿಶೇಷಾಂಕ 'ಪ್ರಬುದ್ಧ' (೧೯೮೪) ಪತ್ರಿಕೆಗೆ ೧೦ ವರ್ಷಗಳು ಸಂದ ನೆನಪಿನಲ್ಲಿ "ಸಾಧನೆ" (೧೯೮೫) ದೇಶಕ್ಕೆ ಸ್ವಾತಂತ್ರ್ಯ ಬಂದ ೫೦ ವರ್ಷಗಳ ನೆನಪಿನ ವಿಶೇಷಾಂಕ 'ಸ್ವರ್ಣ ಸ್ವಾತಂತ್ರ್ಯ' (೧೯೯೭) ಕೋಲಾರಪತ್ರಿಕೆ ರಜತಮಹೋತ್ಸವ ವಿಶೇಷಾಂಕ 'ಬೆಳ್ಳಿ–ಬೆಳಕು'(೨೦೦೦) ನೂರು ಮುಖ–ನೂರು ದನಿ (ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಖ್ಯಾತಿವೆತ್ತ ೧೦೦ ಮಂದಿ ಗಣ್ಯರ ಪರಿಚಯ ಕೃತಿ) ಎಲ್ಲವೂ ಸಂಗ್ರಹ ಯೋಗ್ಯ ಮೌಲ್ಯಕೃತಿಗಳು. ಈಚೆಗೆ (೨೦೦೫ರಲ್ಲಿ) ಕೋಲಾರದ ಕೆರೆಗಳನ್ನು ಕುರಿತು 'ಕೆರೆಯಹಾರ' ಎಂಬ ಪುಸ್ತಕ ಪ್ರಕಟಿಸಿದೆ.

ಪ್ರತಿವರುಷವೂ ಪತ್ರಿಕೆ ಹೊರತರುತ್ತಿರುವ ದಿನಸೂಚಿ ವೈಶಿಷ್ಟ್ಯಪೂರ್ಣ. ಕೇವಲ ತಾರೀಖು, ತಿಂಗಳು, ವಾರ, ತಿಥಿ, ರಜಾದಿನಗಳಷ್ಟೇ ಅಲ್ಲದೆ, ಕನ್ನಡದ ಬಹುತೇಕ ಕವಿ ಸಾಹಿತಿಗಳ ಜನ್ಮದಿನ, ಪುಣ್ಯತಿಥಿಗಳ ದಿನಾಂಕಗಳು, ಜಿಲ್ಲೆಯಲ್ಲಿ ನಡೆಯುವ ಜಾತ್ರೆ–ಉತ್ಸವ, ನಿಸರ್ಗ ಚಿಕಿತ್ಸೆ ಅಡುಗೆ ಮನೆಯ ಔಷಧ ಭಂಡಾರ, ತರಕಾರಿ ಹಿರಿಮೆ–ಗರಿಮೆ, ಮನೆ ಮದ್ದು, ಕಲಾವಿದರ – ಸಾಹಿತಿಗಳ, ವಿಜ್ಞಾನಿಗಳ ಮಾಹಿತಿಗಳನ್ನು ಒಳಗೊಂಡು ರಾಜ್ಯದಲ್ಲಿಯೇ ವಿಶೇಷ ಮನ್ನಣೆ ಪಡೆದಿದೆ.

ಕೋಲಾರ ಪತ್ರಿಕೆಯಲ್ಲಿ ಅನುಭವ ಹೊಂದಿ ವಿವಿಧ ರಂಗಗಳಲ್ಲಿ ಮುಂದುವರೆದಿರುವ ಲೇಖಕರು ಹಲವರು (ಜಗನ್ನಾಥ ಪ್ರಕಾಶ್, ಅ.ನ. ಪ್ರಹಾದರಾವ್, ಕಿಕ್ಕೇರಿ ಕೇಶವ ಮೂರ್ತಿ, ಅನಿಲ್ ಕುಮಾರ್ ಇತ್ಯಾದಿ), ಪತ್ರಿಕೆಯ ಮೂಲಕ ಬರವಣಿಗೆ ಪ್ರಾರಂಭಿಸಿದ ಸಾಹಿತಿಗಳು ಹಲವರು. (ಗೋಪಾಲಗೌಡ ಕಲ್ಪಮಂಜಲಿ, ಉತ್ತನೂರು ರಾಜಮ್ಮ ಇತ್ಯಾದಿ).

ಜಿಲ್ಲೆಯ ಪತ್ರಿಕೆಗಳ ಇತಿಹಾಸವೆಂದರೆ "ಕೋಲಾರ ಪತ್ರಿಕೆಯ ಇತಿಹಾಸವೆಂದೇ" ಸ್ಥೂಲವಾಗಿ ಹೇಳಬಹುದೆನ್ನುವ ಮಟ್ಟಿಗೆ ಪತ್ರಿಕೆ ಗಳಿಸಿರುವ ಯಶಸ್ಸಿಗೆ ಕೆ.ಪ್ರಹ್ಲಾದರಾಯರು ಪತ್ರಿಕೆಯ ಬಗ್ಗೆ ಇಂದಿಗೂ ಪ್ರಾರಂಭದ ದಿನದಷ್ಟೇ ಹೊಂದಿರುವ ಶ್ರದ್ಧೆ, ನಿರಂತರ ಕಠಿಣ ಪರಿಶ್ರಮ, ಬತ್ತದ ಉತ್ಸಾಹ, ಎಚ್ಚರಿಕೆಗಳೇ

ಶ್ಲಾಘನೀಯ ಕಾರಣಗಳು. ಹಾಸನದ 'ಜನಮಿತ್ರ' ಪತ್ರಿಕೆಯ ಕೃ.ನ.ಮೂರ್ತಿ ಅವರ ಮಾರ್ಗದರ್ಶನದಲ್ಲಿ ಕೆ. ಪ್ರಹ್ಲಾದರಾವ್ ಮತ್ತು ಶ್ರೀವಾಣಿ ಪ್ರಹ್ಲಾದರಾವ್ ಅವರು 'ಕೋಲಾರ ಪತ್ರಿಕೆ'ಯನ್ನು ರೂಪಿಸುವಲ್ಲಿ ಭದ್ರ ಬುನಾದಿಯನ್ನು ಹಾಕಿದ್ದಾರೆ.

ಪತ್ರಕರ್ತರಾಗಿಯೂ ಜಿಲ್ಲಾ ಭಾರತ ಸ್ಕೌಟ್‌ಗೈಡ್ಸ್‌ನ ಸ್ಥಾನೀಯ ಆಯುಕ್ತರು, ಸೇವಾದಳದ ಜಿಲ್ಲಾ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಜಿಲ್ಲಾ ಪತ್ರಿಕಾ ಸಂಪಾದಕರ ಸಂಘದ ಅಧ್ಯಕ್ಷರಾಗಿ, ಕ್ಷಯ ರೋಗ ಆಸ್ಪತ್ರೆ ಸಂದರ್ಶಕ ಮಂಡಳಿ ಸದಸ್ಯರಾಗಿ, ಕೋಲಾರ ವಿದ್ಯಾ ಸಂಸ್ಥೆ ಸ್ಥಾಪಕ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಪ್ರಹ್ಲಾದರಾಯರದು ಬಹುಮುಖ ಸೇವೆ.

**ಇತರ ಪತ್ರಿಕೆಗಳು**

ಬಿ.ವಿ.ನರಸಿಂಹಮೂರ್ತಿ ಅವರು ಕೆಲ ಪತ್ರಿಕೆಗಳಿಗೆ ಪ್ರತಿನಿಧಿಯಾಗಿದ್ದು ೧೯೭೮ರಲ್ಲಿ 'ಕೋಲಾರ ವಾಣಿ' ಹೊರತರುತ್ತಿದ್ದು ನಂತರ ಅವರ ಮಗ ಬಿ.ಎನ್.ಗುರುಪ್ರಸಾದ್ ಸಂಪಾದಕರಾದರು. ಅ.ನ.ಪ್ರಹ್ಲಾದರಾಯರು ಆರಂಭಿಸಿದ 'ಹೊನ್ನುಡಿ' ಮುಂದೆ ಭುವನೇಶ್ವರಿ ಕನ್ನಡ ಸಂಘದ ಅಧ್ಯಕ್ಷರಾದ ಎಂ.ಜಿ.ಪ್ರಭಾಕರ್ ಅವರ ಸಂಪಾದಕತ್ವಕ್ಕೆ ಬದಲಾಯಿತು. ಕನ್ನಡ ಪರ ಚಳವಳಿಯಲ್ಲಿದ್ದ ಕೋ.ನಾ.ಮಂಜುನಾಥ್ ಅವರ ಸಂಪಾದಕತ್ವ ಹಾಗೂ ಅಬ್ಬಣಿ ಶಂಕರ್ ಅವರ ಪ್ರಕಾಶಕತ್ವದಲ್ಲಿ ೧೯೯೪ರಲ್ಲಿ 'ಪ್ರಿಯಾ' ಪತ್ರಿಕೆ ಆರಂಭವಾಯಿತು. ದಲಿತ ಸಂಘರ್ಷ ಸಮಿತಿಯ ಸಂಚಾಲಕ ಸಿ.ಮುನಿಯಪ್ಪ ಅವರ ಸಂಪಾದಕತ್ವದಲ್ಲಿ ೧೯೯೫ರಿಂದ ಹೊರಬರುತ್ತಿರುವ 'ಸಂಚಿಕೆ' ದಿನಪತ್ರಿಕೆ ಆರಂಭದಲ್ಲಿ ವಾರಪತ್ರಿಕೆಯಾಗಿತ್ತು. ಮೊದಲಿಗೆ ಲಕ್ಷ್ಮೀಪತಿ ಕೋಲಾರ ಅವರು ಸಂಪಾದಕರಾಗಿದ್ದರು. 'ಕೋಲಾರಶಕ್ತಿ' ಎಂ.ಮಲ್ಲೇಶ್ ಅವರು ೧೯೯೮ರಲ್ಲಿ ಆರಂಭಿಸಿದ್ದು ಅಪರಾಧ ಸುದ್ದಿಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುವಂತಹದ್ದಾಗಿದೆ. ಆರಂಭದಲ್ಲಿ ವಾರಪತ್ರಿಕೆಯಾಗಿದ್ದು ನಂತರ ದಿನಪತ್ರಿಕೆಯಾಗಿದೆ. ಕೋಲಾರ ಪತ್ರಿಕೆಯಲ್ಲಿ ಅನುಭವ ಪಡೆದ ಮಹಮದ್ ಯೂನಸ್ ಅವರು ೧೯೯೯ರಲ್ಲಿ 'ಈ ಮುಂಜಾನೆ' ಆರಂಭಿಸಿದರು. ಕೋಲಾರದಿಂದ ಪ್ರಕಟವಾಗುತ್ತಿರುವ ಇನ್ನೆರಡು ಪತ್ರಿಕೆಗಳೆಂದರೆ ಮುರುಳಿ ಅವರು ಸಂಪಾದಿಸುತ್ತಿರುವ 'ಕೋಲಾರ ಧ್ವನಿ' ರಘುನಾಥ್ ಬಾಬು ಅವರ ಸಂಪಾದಕತ್ವದಲ್ಲಿ ೨೦೦೨ರಲ್ಲಿ ಆರಂಭವಾದ 'ಸುಪ್ರಭಾತ' ದಿನಪತ್ರಿಕೆ. ತಾಲೂಕುಗಳಲ್ಲಿ ಆರಂಭವಾದ ಪತ್ರಿಕೆಗಳಲ್ಲಿ ಮಾಲೂರಿನಿಂದ ೧೯೯೫–೯೮ರ ಅವಧಿಯಲ್ಲಿ ಬರುತ್ತಿದ್ದ 'ಬೆಳಗಿನ ಸುದ್ದಿ' ಹೆಸರಿಸಬಹುದು. ಇದರಲ್ಲಿ ಪ್ರಚಲಿತ ರಾಜಕೀಯ. ಡಿವಿಜಿಯವರ ಮಂಕುತಿಮ್ಮನ ಕಗ್ಗ ಕುರಿತ ಲೇಖನಗಳು. ವಿದ್ಯಾರ್ಥಿಗಳಿಗೆ ಅಂಕಣ ಹಾಗೂ ಜಿಲ್ಲೆಯ ವಿಸ್ಮಯಗಳ ಬಗ್ಗೆ ಲೇಖನಗಳಿರುತ್ತಿದ್ದವು. ಚಿಕ್ಕಬಳ್ಳಾಪುರದಿಂದ ೧೯೯೪ರಲ್ಲಿ ಆರಂಭವಾಗಿ ಮೂರು ವರ್ಷಗಳ ನಂತರ ಸ್ಥಗಿತವಾದ 'ವಾಣಿ' ಪತ್ರಿಕೆಯನ್ನು ಎಚ್.ವಿ.ಸೋಮಶೇಖರ್ ಅವರು ಸಂಪಾದಿಸುತ್ತಿದ್ದರು. ಪ್ರಸ್ತುತ ಚಿಕ್ಕಬಳ್ಳಾಪುರದಿಂದ 'ಪಾಲಾರ್' ದಿನಪತ್ರಿಕೆ ಬರುತ್ತಿದ್ದು ೧೯೮೫ರಲ್ಲಿ ಆರಂಭವಾದಾಗ ವಾರಪತ್ರಿಕೆಯಾಗಿತ್ತು. ಸಿ.ಪುಟ್ಟರಾಜು ಅವರು ಸಂಪಾದಕರು. ಪತ್ರಿಕೆ ಪ್ರಕಟವಾಗುತ್ತಿರುವ ಮುದ್ರಣಾಲಯ ೧೯೦೩ರಲ್ಲಿಯೇ ಆರಂಭವಾಗಿದ್ದು ಲೋಯರ್ ಸೆಕೆಂಡರಿ ಪರೀಕ್ಷೆಗೆ ಪೂರಕವಾಗಿ ಪ್ರಶ್ನೋತ್ತರಗಳನ್ನು ಕಿರುಹೊತ್ತಿಗೆಯ ರೂಪದಲ್ಲಿ ಪ್ರಕಟಿಸುತ್ತಿದ್ದುದಾಗಿ ತಿಳಿದುಬರುತ್ತದೆ.

ನಾರಾಯಣಸ್ವಾಮಿ ಅವರ 'ನಿರ್ಣಯ', ಮುರುಳಿ ಅವರ 'ಪುಲಿಕೇಶಿ', ಕಲಾವಿದ ವಿಷ್ಣು ಅವರ 'ಕನ್ನಡ ತಿಲಕ', ರಘುನಾಥಬಾಬು ಅವರ 'ಜ್ವಾಲೆ' ಮುನಿರಾಜು ಅವರ 'ಜನಶಕ್ತಿ', ವೆಂಕಟೇಶ್ ಅವರ 'ಮೂಡಲ ಪ್ರಭ' ಕೃ.ಲಿ.ಚಂದ್ರಶೇಖರ್ ಅವರ 'ಬಂಗಾರದರ್ಶಿನಿ', ಜೆ.ಎಸ್.ಪಾರ್ಥಸಾರಥಿ ಅವರ 'ಜನಬಿಂಬ', ರೆ॥ ದಯಾಶೀಲರವರ 'ಭಾರತ ಜೀವನ ಜ್ಯೋತಿ' ನಾಗೇಂದ್ರಪ್ರಸಾದ್ ಅವರ 'ಕೋಲಾರ ವಾಹಿನಿ' ಇತ್ಯಾದಿ ವಾರಪತ್ರಿಕೆಗಳನ್ನು ಹೆಸರಿಸಬಹುದು. ವಿವಿಧ ಪತ್ರಿಕೆಗಳಿಗೆ ಲೇಖನಗಳನ್ನು ಬರೆದು ಸಾಹಿತ್ಯ ಕ್ಷೇತ್ರಕ್ಕೆ ಕಾಣಿಕೆ ನೀಡಿದವರೂ ವಿವಿಧ ಪತ್ರಿಕೆಗಳಿಗೆ ಬಾತ್ಮೀದಾರರಾಗಿ ಇಲ್ಲದೆ ಹೆಸರಾಂತ ಪತ್ರಿಕೋದ್ಯಮಗಳಲ್ಲಿ ವಿವಿಧ ಕಾರ್ಯಗಳಲ್ಲಿ ನಿರತರಾಗಿದ್ದ ಹಾಗೂ ಇಂದಿಗೂ ನಿರತರಾಗಿರುವವರ ಕೆಲವು ಗಣ್ಯರನ್ನು 'ಕೋಲಾರಸಿರಿ' ಪುಸ್ತಕದಲ್ಲಿ ಜಗನ್ನಾಥ ಪ್ರಕಾಶ್ ಅವರು ಹೆಸರಿಸಿದ್ದು ಇಲ್ಲಿ ಪಟ್ಟಿ ಮಾಡಲಾಗಿದೆ. ಕರ್ನಾಟಕದ ಪ್ರಥಮ ಮುಖ್ಯಮಂತ್ರಿಯಾದ, ಬಂಗಾರಪೇಟೆಯ ಕ್ಯಾಸಂಬಳ್ಳಿಯಲ್ಲಿ ೧೯೦೨ರಲ್ಲಿ ಜನಿಸಿದ ಚಂಗಲರಾಯರೆಡ್ಡಿ (ಕೆ.ಸಿ.ರೆಡ್ಡಿ) ಅವರು 'ಜನವಾಣಿ' ದಿನಪತ್ರಿಕೆಯ ಸಂಪಾದಕರಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರ ಕೆ.ಪಟ್ಟಾಭಿರಾಮನ್, ಇಂಡಿಯನ್ ಎಕ್ಸ್‌ಪ್ರೆಸ್‌ನ ಬಾತ್ಮಿದಾರ ಜಿ.ನಾರಾಯಣಸ್ವಾಮಿ, (ಇನ್ನೂ ಹಲವಾರು ಪತ್ರಿಕೆಗಳಿಗೆ ಹಾಗೂ ಯು.ಎನ್.ಇ.ಗಳಿಗೆ ಕೋಲಾರ ಜಿಲ್ಲಾ ಪ್ರತಿನಿಧಿಗಳಾಗಿದ್ದರು) ಹಾಗೂ ಕಂಬಳಿ ಸ್ಟೋರ್ಸ್ ವೆಂಕಟರಮಣಪ್ಪರವರು ಪತ್ರಿಕೆಗಳಿಗೆ ಬರೆಯುತ್ತಿದ್ದವರಲ್ಲಿ ಆದ್ಯರು. ಚಿಂತಾಮಣಿಯ ಸಿ.ವಿ.ಕೃಷ್ಣಮೂರ್ತಿ (ಬಾಬು) ಅವರು ಪತ್ರಿಕಾ ಲೇಖಕರಾಗಿದ್ದು ಮಂಗಳ, ಬಾಲಮಂಗಳ, ಗಿಳಿವಿಂಡು

ಇತ್ಯಾದಿಗಳಿಗೆ ಸಂಪಾದಕರಾಗಿದ್ದರು. ನಂತರ ೭೦ರ ದಶಕದ ಕಾಲದಲ್ಲಿ ಕೆ.ಆರ್.ಕೃಷ್ಣಸ್ವಾಮಿ, ಕೆ.ಎಂ.ಮುನಿಯಪ್ಪ, ಬಿ.ಎಸ್.ನಾರಾಯಣರಾವ್ (ಗುಡಿಬಂಡೆ), ಸಿ.ಎಸ್.ಸತ್ಯನಾರಾಯಣರಾವ್ (ಚಿಕ್ಕಬಳ್ಳಾಪುರ) ಟಿ.ಎಲ್. ಗುಂಡಪ್ಪ(ಶಿಡ್ಲಘಟ್ಟ), ವೆಂಕಪ್ಪಶೆಟ್ಟಿ ಸತ್ಯನಾರಾಯಣಶೆಟ್ಟಿ (ಶ್ರೀನಿವಾಸಪುರ), ಟಿ.ಸಿ.ಮುನಿವೀರಪ್ಪ, ವೆಂಕಟರಮಣಪ್ಪ (ಕೋಲಾರ), ವೆಂಕಟೇಶಮೂರ್ತಿ (ಗೌರಿಬಿದನೂರು) ಸದಾಶಿವಯ್ಯ (ಮಾಲೂರು) ವೆಂಕಟರಾಮಯ್ಯ, ಕೆ.ಎಸ್.ಕೃಷ್ಣಮೂರ್ತಿ, ಬಾಲು, ಸುಬ್ರಹ್ಮಣ್ಯಂ (ಕೆ.ಜಿ.ಎಫ್), ಜಯರಾಂ (ಚಿಕ್ಕಬಳ್ಳಾಪುರ) ಜಿ.ಎಂ.ಗುರುಮೂರ್ತಿ, ಎಚ್.ಆರ್.ಕೃಷ್ಣಮೂರ್ತಿ (ಬಾಗೇಪಲ್ಲಿ) ರೂಪಸಿ ರಮೇಶ್ (ಶಿಡ್ಲಘಟ್ಟ), ಶ್ಯಾಮನರೇಂದ್ರಯ್ಯ, ಎಸ್.ರಮೇಶ್ (ಚಿಂತಾಮಣಿ) ವೆಂಕೋಬರಾವ್, ಚೌಡಾರೆಡ್ಡಿ (ಶ್ರೀನಿವಾಸಪುರ), ಜಿ.ವಿ.ಪುರುಷೋತ್ತಮರಾವ್ (ಮುಳಬಾಗಿಲು) ಜಾನ್ ಆಲ್ಮೇಡ, ರಾಮಚಂದ್ರ (ಮಾಲೂರು) ಕೆ.ಟಿ.ಕೃಷ್ಣಕಾಂತ್ (ಚಿಕ್ಕಬಳ್ಳಾಪುರ) ಪರಶಿವಮೂರ್ತಿ (ಮುದುಗೆರೆ) ಮೊದಲಾದವರು ಜಿಲ್ಲೆಯ ಸ್ಥಳೀಯ ಬಾತ್ಮೀದಾರರಂತೆ ಸುದ್ದಿ ಹಾಗೂ ಮತ್ತಿತರ ಸಂಗತಿಗಳನ್ನು ಸಂಗ್ರಹಿಸಿ ವಿವಿಧ ಪತ್ರಿಕೆಗಳಿಗೆ ಕಳಿಸಿಕೊಡುವವರಾಗಿದ್ದಾರೆ. ಇವರಂತಯೇ ಬಿ.ವಿ.ಗೋಪಿನಾಥ್, ಎಸ್.ಚಂದ್ರಶೇಖರ್ (ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಮೂರು ಬಾರಿ ಪ್ರಶಸ್ತಿ ವಿಜೇತರು) ರಂಗನಾಥ್,

ಕೃಷ್ಣಪ್ಪ, ಬಿ.ಸುರೇಶ್, ಗಣೇಶ್, ವಾಸುದೇವ ಹೊಳ್ಳ ಮುಂತಾದವರು ವಿವಿಧ ಪತ್ರಿಕೆಗಳಿಗೆ ಅವುಗಳ ಪ್ರತಿನಿಧಿಗಳಂತೆ ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲಾ ವಾರ್ತಾ ಇಲಾಖೆಯವರ ವಿಳಾಸ ಪಟ್ಟಿಯಂತೆ ಪ್ರಸ್ತುತ ವಿವಿಧ ಪತ್ರಿಕೆಗಳಿಗೆ ಜಿಲ್ಲೆಯಿಂದ ನಿಯಮಿತವಾಗಿರುವ ವರದಿಗಾರರೆಂದರೆ ಮರಿಯಪ್ಪ (ಪ್ರಜಾವಾಣಿ), ಬಿ.ವಿ. ಗೋಪಿನಾಥ್ (ಸಂಯುಕ್ತ ಕರ್ನಾಟಕ), ರಂಗನಾಥ್ (ಟೈಮ್ಸ್ ಆಫ್ ಇಂಡಿಯಾ), ಎಸ್. ಚಂದ್ರಶೇಖರ್ (ಜನವಾಹಿನಿ), ಬಿ.ಸುರೇಶ್ (ಪಿ.ಟಿ.ಐ. ಕನ್ನಡಪ್ರಭ), ವಾಸುದೇವ ಹೊಳ್ಳ (ವಿಜಯ ಕರ್ನಾಟಕ), ಕೆ.ಎಸ್. ಗಣೇಶ್ (ಉದಯವಾಣಿ), ಬಿ. ಆರ್ಮುಗಂ (ದಿ ಹಿಂದು), ಕೆ.ಎಂ. ನಾರಾಯಣಸ್ವಾಮಿ (ಕೆ.ಎನ್.ಎನ್.), ಸಚ್ಚಿದಾನಂದ (ಈ ಸಂಜೆ), ಬಾಲಕೃಷ್ಣ (ಈ ಟಿವಿ), ಶ್ರೀಧರ ಪಿಳ್ಳೈ (ಯು.ಎನ್.ಐ.), ಶ್ರೀನಿವಾಸ್ ಮೂರ್ತಿ (ಹೊಸದಿಗಂತ)ಯವರಲ್ಲದೆ ಎಸ್. ಚಂದ್ರಶೇಖರ್ ಮತ್ತು ರಮೇಶ್‌ರವರು ಪತ್ರಿಕಾ ಸುದ್ದಿಗಳಿಗೆ ಛಾಯಾಚಿತ್ರಗ್ರಾಹಕರೂ ಆಗಿದ್ದಾರೆ. ಜಿಲ್ಲೆಯಿಂದ ಹೊರ ಹೋಗಿ ದೊಡ್ಡ ಪ್ರಮಾಣದ ವಿವಿಧ ಪತ್ರಿಕೆಗಳಲ್ಲಿ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿದ ಪತ್ರಕರ್ತರುಗಳಿದ್ದು ಅವರಲ್ಲಿ ಜಿ.ಎ.ಆಚಾರ್ಯ (ಮುಂಬಯಿಯ 'ಫ್ರಿಪ್ರೆಸ್ ಜರ್ನಲ್' ಹಾಗೂ ದೆಹಲಿಯ 'ವೀಕ್'ನ ಸ್ಥಾನಿಕ ಸಂಪಾದಕ), ಕೆ.ಎಸ್.ಸಚ್ಚಿದಾನಂದಮೂರ್ತಿ, ಎಂ.ಎಸ್.ಪ್ರಭಾಕರ್ (ಹಿಂದುಪತ್ರಿಕಾ ಸಮೂಹದ ಯೂರೋಪ್ ಪ್ರತಿನಿಧಿ); ಕನ್ನಡಪ್ರಭ ಪತ್ರಿಕೆಯ ಸುದ್ದಿ ಸಂಪಾದಕರಾಗಿ, ನಂತರ ದೆಹಲಿ ವರದಿಗಾರರಾಗಿದ್ದ ಮಾಸ್ತಿ ಬಳಿಯ ತೊಳಕನಹಳ್ಳಿಯ ಟಿ.ಜಿ.ಅಶ್ವತ್ಥನಾರಾಯಣ, ಸಪ್ತಗಿರಿ ಪತ್ರಿಕೆಯ ಬಿ.ಎನ್.ಶ್ರೀನಿವಾಸನ್, ಟೆಲಿಗ್ರಾಫ್‌ನ ಹೈದರಾಬಾದ್ ಪ್ರತಿನಿಧಿ ರಾಧಾಕೃಷ್ಣ ಘಟ್ಟು, 'ಯೋಜನಾ' ಪತ್ರಿಕೆಯ ಸಂಪಾದಕ ಎಂ.ಎನ್.ಶಂಕರ್. 'ಜಾಣ' ಮಾಸಪತ್ರಿಕೆಯ ಎನ್.ಅರ್ಜುನ್‌ದೇವ್, ಅಲ್ಲದೆ ಟಿ.ನಾಗರಾಜು, ಕೆ.ಎಸ್.ನಾಗಭೂಷಣಂ, ಸಿ.ಎಸ್.ದ್ವಾರಕಾನಾಥ್ ('ಲಂಕೇಶ್ ಪತ್ರಿಕೆ' ನಂತರ 'ಅಗ್ನಿ') ಮಾರ್ಚ್ ಆಫ್ ಕರ್ನಾಟಕ, ಜನಪದ ಪತ್ರಿಕೆಗಳ ಜಗನ್ನಾಥ್ ಪ್ರಕಾಶ್, ಜಿ.ವೈ.ಗಿರಿಶಾಸ್ತ್ರಿ, ಜಿ.ಮಾಧವರಾವ್, ಸುದ್ದಿ ಸಂಗಾತಿಯಲ್ಲಿದ್ದ ಲಕ್ಷ್ಮೀಪತಿ ಕೋಲಾರ, ಎಸ್.ಎಸ್.ಪರಮೇಶ್, ಮಾ.ನ.ವಿಜಯೇಂದ್ರ, ಪಿ.ಕೆ.ಚೆನ್ನಕೃಷ್ಣ, ಪಿ.ರಾಜೇಂದ್ರ, ಕೆ.ವಿ.ಪ್ರಭಾಕರ್, ಎಸ್.ಲಕ್ಷ್ಮೀನಾರಾಯಣ, ಸಾಧು ಶ್ರೀನಾಥ್, ಎನ್.ಉದಯ್‌ಕುಮಾರ್, ರಘುನಾಥ್ ಪೆನುಮಲೆ, ಡೈಲಿ ಸಾಲಾರ್‌ನ ಆಲಿ ಹಫೀಜ್ ಮುಂತಾದವರನ್ನು ಉದಾಹರಿಸಬಹುದು. ಅನೇಕ ಪತ್ರಿಕೆಗಳಲ್ಲಿ ಪದಬಂಧಗಳನ್ನು ರಚಿಸಿ ಹೆಸರುಗಳಿಸಿರುವ ವಾರ್ತಾ ಇಲಾಖೆಯ ಅಧಿಕಾರಿ ಅ.ನ.ಪ್ರಹ್ಲಾದ್‌ರಾವ್ ಸಾವಿರಾರು ಪದಬಂಧಗಳನ್ನು ಪ್ರಕಟಿಸಿ ದಾಖಲೆ ಮಾಡಿದ್ದಾರೆ. ಗೌರಿಬಿದನೂರಿನಲ್ಲಿ ಜನಿಸಿದ ಗಂಗಾಧರ ಮೊದಲಿಯಾರ್ (೧೯೫೪) ಅವರು ಸ್ನಾತಕ ಹಾಗೂ ಪತ್ರಿಕೋದ್ಯಮದಲ್ಲಿ ಡಿಪ್ಲೊಮೊ ಪದವಿ ಪಡೆದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿದ್ದು ಪ್ರಸ್ತುತ 'ಪ್ರಜಾವಾಣಿ'ಯಲ್ಲಿ ಸುದ್ದಿ ಸಂಪಾದಕರಾಗಿದ್ದಾರೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ; ಬೆಂಗಳೂರು ವರದಿಗಾರರ ಗಿಲ್ಡ್; 'ಹೂಗಾರ' ಪತ್ರಿಕೆಯವರು ನೀಡುವ ಶ್ರೇಷ್ಠ ವರದಿಗಾರ ಪ್ರಶಸ್ತಿ ಹಾಗೂ ಕೆನರಾ ಬ್ಯಾಂಕ್‌ರವರು

ಗ್ರಾಮಾಂತರ ವರದಿಗಾಗಿ ನೀಡುವ ಪ್ರಶಸ್ತಿ ಪಡೆದಿದ್ದಾರೆ. 'ಕನ್ನಡ ಸಿನಿಮಾ ಇತಿಹಾಸದ ಪುಟಗಳಲ್ಲಿ', 'ಬಂಡಾಯ ಸಾಹಿತ್ಯ ನೆಲೆ-ಬೆಲೆ', 'ನಂದನಾರ್', 'ಸೂರ್ಯ ಹುಟ್ಟಿದ ದೇಶ' ಪುಸ್ತಕಗಳನ್ನು ಬರೆದಿದ್ದಾರೆ.

ಕೋಲಾರ ಜಿಲ್ಲೆಯ ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು ಕೋಲಾರ ಜಿಲ್ಲೆಯ ಅಭಿವೃದ್ಧಿ ಪಾಕ್ಷಿಕ ಪತ್ರಿಕೆಯಾಗಿ 'ಕರ್ನಾಟಕ ಮುನ್ನಡೆ' ಎಂಬ ಪತ್ರಿಕೆಯನ್ನು ೧೯೮೩-೮೪ರ ಅವಧಿಯಲ್ಲಿ ತರುತ್ತಿದ್ದರು. ಅರ್ಧ ಡೆಮಿ ನಾಲ್ಕು ಪುಟಗಳ ಪತ್ರಿಕೆಗೆ ವಾರ್ಷಿಕ ಚಂದ ೩ ರೂ.ಗಳಾಗಿದ್ದವು. ಹೆಚ್ಚಾಗಿ ಶಿಕ್ಷಣ, ಆರೋಗ್ಯ, ಕೃಷಿ, ಮಾರುಕಟ್ಟೆ ಇತ್ಯಾದಿ ಸರ್ಕಾರಿ ಕಾರ್ಯಾಲಯಗಳ ಕಾರ್ಯಕ್ರಮ, ಯೋಜನೆ, ಪ್ರಗತಿ ಅಂಕಿಅಂಶಗಳು ಇವೇ ವಿಷಯಗಳಿದ್ದರೂ ಕಲೆ, ಸಂಸ್ಕೃತಿ, ಪ್ರೇಕ್ಷಣೀಯ ಸ್ಥಳಗಳ ಬಗ್ಗೆಯೂ ಮಾಹಿತಿಗಳಿವೆ. ಜಿಲ್ಲೆಯ ಪ್ರಗತಿ ದರ್ಶನಕ್ಕೆ ಸಹಕಾರಿಯಾಗಿದ್ದ ಪತ್ರಿಕೆ ಪ್ರಸ್ತುತ ಸ್ಥಗಿತವಾಗಿದೆ. ಜಿಲ್ಲೆಯ ವಾರ್ತಾ ಇಲಾಖೆಯವರ ಇತ್ತೀಚಿನ ಅಂಚೆ ವಿಳಾಸ ಪಟ್ಟಿಯಲ್ಲಿರುವಂತೆ ಜಿಲ್ಲೆಯಿಂದ ಪ್ರಕಟವಾಗುತ್ತಿರುವ ಪತ್ರಿಕೆಗಳು ಈ ರೀತಿಯಿವೆ (ಅಂಕಣದಲ್ಲಿರುವುದು ಸಂಪಾದಕರ ಹೆಸರುಗಳು). ಕೋಲಾರ ಪತ್ರಿಕೆ (ಕೆ. ಪ್ರಹ್ಲಾದರಾವ್), ಕೋಲಾರವಾಣಿ (ಬಿ.ಎನ್. ಗುರುಪ್ರಸಾದ್), ಹೊನ್ನುಡಿ (ಎಂ.ಜಿ. ಪ್ರಭಾಕರ್), ಪ್ರಿಯ ಪತ್ರಿಕೆ (ಕೋನಾ ಮಂಜುನಾಥ್), ಸಂಚಿಕೆ (ಸಿ.ಎಂ. ಮುನಿಯಪ್ಪ), ಕೋಲಾರ ಶಕ್ತಿ, ಸಂಜೆವಾಣಿ (ಎಂ. ಮಲ್ಲೇಶ್), ಈ ಮುಂಜಾನೆ (ಮಹಮದ್ ಯೂನುಸ್), ಕನ್ನಡ ತಿಲಕ (ಕಲಾವಿದ ವಿಷ್ಣು), ಕೋಲಾರಧ್ವನಿ (ಹೆಚ್.ಎನ್. ಮುರಳೀಧರ್), ಸುಪ್ರಭಾತ (ರಘುನಾಥ ಬಾಬು)ಗಳಲ್ಲದೆ ಅಂತರ ಗಂಗೆ, ಸಂಯುಕ್ತ ವಿಜಯ ಹಾಗೂ ಡಮರುಗ. (ಆಧಾರ: ಉಪನಿರ್ದೇಶಕರು, ವಾರ್ತಾ ಇಲಾಖೆ, ಕೋಲಾರ)

## ಚಿತ್ರಕಲೆ

ಉಳಿದ ಸಾಂಸ್ಕೃತಿಕ ಕೊಡುಗೆಗಳ ದೃಷ್ಟಿಯಿಂದ ಕೋಲಾರ ಜಿಲ್ಲೆ ಶ್ರೀಮಂತವಾಗಿ ಕಂಡರೂ ಚಿತ್ರಕಲೆಯಲ್ಲಿ ಸ್ವಲ್ಪ ಮಟ್ಟಿಗಿನ ಕೊರತೆ ಕಂಡುಬರುತ್ತದೆ. ಶಿಲ್ಪಕಲೆ ಹೆಚ್ಚಾಗಿ ವಿಜೃಂಭಿಸುತ್ತಿದೆಯಾದರೂ ಚಿತ್ರಕಲೆಗೆ ಕಲಾ ಪೋಷಕರ ಮತ್ತು ಗ್ರಾಹಕರ ಅಲಭ್ಯತೆಯಿಂದಾಗಿ ಇಂಥ ಪರಿಸ್ಥಿತಿ ಉಂಟಾಗಿರಬಹುದು. ಜಿಲ್ಲೆಯಲ್ಲಿ ಇತಿಹಾಸ ಪೂರ್ವದ ಚಿತ್ರಗಳು ಈವರೆಗೆ ವರದಿಯಾಗಿರುವುದಿಲ್ಲ. ಶ್ರೀನಿವಾಸಪುರ ತಾಲೂಕಿನ ಜಂಕಲವಾರಪಲ್ಲಿಯ ಬಳಿಯ ಸುಣ್ಣಕಲ್‌ಬೆಟ್ಟದಲ್ಲಿ ಬಿಳಿಯ ವರ್ಣದ ಕೆಲವು ರೇಖಾಚಿತ್ರಗಳು ಇರುವುದಾಗಿ ವಿ.ಟಿ.ಎಸ್. ರಾವ್ ಅವರು ತಿಳಿಸುತ್ತಾರೆ.

ಕೋಲಾರಮ್ಮನ ದೇವಾಲಯದಲ್ಲಿ ಫಲ್ಗುಣಿ ಮಾಸದಲ್ಲಿ ನಡೆಯುವ ಆಚರಣೆಯೊಂದಕ್ಕೆ ಸಂಬಂಧಿಸಿದಂತೆ ಧ್ವಜಸ್ತಂಭದ ಮೇಲಿನ ಬಾವುಟದಲ್ಲಿ ಚಿತ್ರ ಬಿಡಿಸುವ ಚಿತ್ರಕಾರನಿಗೆ ಹಾಗೂ ಚಾಮುಂಡಾ ಕಂಬದ ಮೇಲಿನ ಮೂರ್ತಿಗೆ ದೃಷ್ಟಿ ಬಿಡಿಸುವ ಶಿಲ್ಪಿಗೆ ತಲಾ ೧/೮ ಕಾಸು ನೀಡುವಂತೆ ಕ್ರಿ.ಶ.೧೦೭೧ರ ಶಾಸನವೊಂದು ತಿಳಿಸುತ್ತದೆ (ಕೋಲಾರ ೧೦೬). ಕೋಲಾರ ಜಿಲ್ಲೆಯಿಂದ ವರದಿಯಾಗಿರುವ ಏಕೈಕ ಭಿತ್ತಿ ಚಿತ್ರವೆಂದರೆ ಮುಳಬಾಗಿಲಿನ ಆಂಜನೇಯ ದೇವಾಲಯದಲ್ಲಿಯ ಕಲ್ಯಾಣ ಮಂಟಪದಲ್ಲಿರುವ ಭಿತ್ತಿಚಿತ್ರಗಳು. ಇದು ಸುಮಾರು ಒಂದು ನೂರು ವರ್ಷಗಳ ಹಿಂದೆ ಬರೆಸಿರಬಹುದಾದ ಚಿತ್ರಗಳು. ಮೊದಲಿಗೆ ಮಂಡಿಕಲ್ ರಂಗರಾಜು ಅವರು ನಂತರ ನಾಟಕ ಪರದೆಗಳನ್ನು ತಯಾರಿಸುತ್ತಿದ್ದ, ಅಲಂಕಾರಗಳಲ್ಲಿ ಪರಿಣಿತರಾಗಿದ್ದ ಮುಳಬಾಗಿಲಿನ ಎಂ.ಆರ್. ಗೋಪಾಲಕೃಷ್ಣರಾವ್ ಅವರು ಆಂಜನೇಯ ದೇವಾಲಯದ ಹಳೆಯ ಚಿತ್ರಗಳಿಗೆ ಕುಂದುಬರದಂತೆ, ಮರುಹುಟ್ಟುಕೊಟ್ಟಿದ್ದಾರೆ. ಚಿತ್ರಿತ ವಿಷಯಗಳು ರಾಮಾಯಣಕ್ಕೆ ಸಂಬಂಧಿಸಿದ್ದು ಭಿತ್ತಿಯಲ್ಲಿ ಹಾಗೂ ತೊಲೆಗಳಲ್ಲಿ ರಾಮನ ಕಥೆಯ ಚಿತ್ರಣಗಳನ್ನು ಕಾಣಬಹುದು.

ಸುಮಾರು ನೂರು ವರ್ಷಗಳ ಕೆಳಗೆ ಡಿ.ವಿ.ಜಿ ಅವರ ತಂದೆಯ ಗುರುಗಳಾದ ನಂಜುಂಡಯ್ಯ ಅವರು ವರ್ಣಚಿತ್ರ ಹಾಗೂ ಶಿಲ್ಪಗಳ ರಚನೆ ಮಾಡುತ್ತಿದ್ದು ಅವರ ಪತ್ನಿಯ ನೆನಪಿಗಾಗಿ ಶಿಲ್ಪವೊಂದನ್ನು ರಚಿಸಿದ್ದ ಬಗ್ಗೆ ಡಿವಿಜಿ ಅವರು ಹೇಳುತ್ತಾರೆ. ಇದೇ ಸುಮಾರಿನಲ್ಲಿ ಚಿಕ್ಕಬಳ್ಳಾಪುರದ ಸಮೀಪದ

ಇನಿಮಿಂಚೇನಹಳ್ಳಿಯಲ್ಲಿ ಪಾಳೇಗಾರಿಕೆಯ ವಂಶಸ್ಥರು ಇದ್ದು ಅವರಲ್ಲಿ (ಆ ವೇಳೆಗೆ ಪಾಳೇಗಾರಿಕೆ ರದ್ದಾಗಿದ್ದು ಮಾಸಾಶನ ಬರುತ್ತಿತ್ತು) ಅನೇಕ ದೇವತಾ ವಿಗ್ರಹಗಳು, ಕರಕುಶಲವಸ್ತುಗಳು, ಗಾಜಿನ ಮೇಲಿನ ಚಿತ್ರಗಳು ಇದ್ದುವಲ್ಲದೆ ಆಗಾಗ್ಗೆ ಸಂಗೀತ ಕಥಾಕಾಲಕ್ಷೇಪವೂ ಆಗುತ್ತಿತ್ತು ಎಂದು ತಿ.ತಾ. ಶರ್ಮರವರು ತಿಳಿಸುತ್ತಾರೆ.

ಚಿತ್ರಕಲೆಯಲ್ಲಿ ಜಿಲ್ಲೆಗೆ ಹೆಸರು ತಂದವರೆಂದರೆ ಶುಭರಾಯರು. ಮಾಲೂರಿನಲ್ಲಿ ೧೭೫೦ರಲ್ಲಿ ಜನಿಸಿದ್ದು ಟಿಪ್ಪುವಿನ ರಾಜ್ಯಭಾರದಲ್ಲಿ ಒಬ್ಬ ಅಧಿಕಾರಿಯಾಗಿ ನೇಮಕಗೊಂಡಿದ್ದರು. ಟಿಪ್ಪುವಿನ ಇತಿಹಾಸ ಕುರಿತ ಗ್ರಂಥಗಳಲ್ಲಿ ಸುಬ್ಬರಾವ್ ಎಂಬ ಹೆಸರಿನ ಹಿರಿಯ ಅಧಿಕಾರಿಯ ಪ್ರಸ್ತಾಪವಿದ್ದು ಆತ 'ಪೇಷ್ಕಾರ್' (ತೆರಿಗೆ ವಸೂಲಿ ಮಾಡುವ ಅಧಿಕಾರಿ) ಆಗಿದ್ದಿರಬಹುದು. ಟಿಪ್ಪು ೧೭೯೨ರಲ್ಲಿ ಬ್ರಿಟಿಷರಿಗೆ ಸೋತಾಗ ಆತನ ಪರ ಹೋಗಿದ್ದ ನಿಯೋಗದಲ್ಲಿ (ವಕೀಲರಾಗಿ) ಸುಬ್ಬರಾಯರೂ ಇದ್ದರು. ಪ್ರಾಯಶಃ ಅಂದಿನ ರಾಜಕೀಯ ವಿಪ್ಲವದಿಂದಾಗಿ ಶ್ರೀರಂಗಪಟ್ಟಣ ತ್ಯಜಿಸಿ ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ನೆಲಸಿ, ಶುಭರಾಯರೆಂದು ಹೆಸರು ಪಡೆದು, ಮಠವೊಂದನ್ನು ಸ್ಥಾಪಿಸಿ, ಅನೇಕ ಸಮಾಜ ಸುಧಾರಣಾ ಕಾರ್ಯಗಳನ್ನು ಕೈಗೊಂಡರು. ಅಲ್ಲಿಯ ಆಧ್ಯಾತ್ಮ ಚಿಂತನೆ, ಭಕ್ತಿಗೀತೆಗಳ ರಚನೆ, ಹಾಡುವಿಕೆಗಳೊಂದಿಗೆ ಕಲಾಕೃತಿಗಳ ರಚನೆಯೂ ಮಾಡುತ್ತಿದ್ದು ಇಂದಿಗೂ ಅವು ಸೊಲ್ಲಾಪುರದ ಅವರ ಮಠದಲ್ಲಿ ಉಳಿದು ಬಂದಿದೆ. ಶುಭರಾಯರಿಗೆ ಚಿತ್ರಕಲೆ ಬಗ್ಗೆ ಆಸಕ್ತಿ ಅವರ ಹುಟ್ಟಿನ ಪರಿಸರವಾದ ಮಾಲೂರು ಶಿವಾರಪಟ್ಟಣಗಳ ಕಲಾವಿದರಿಂದ ಬಂದಿದ್ದು ಮುಂದೆ ಶ್ರೀರಂಗಪಟ್ಟಣದಲ್ಲಿ ರಚಿಸುತ್ತಿದ್ದ ಬಿಡಿಚಿತ್ರಗಳು ಹಾಗೂ ದರಿಯಾದೌಲತ್‌ನ ಚಿತ್ರಗಳಿಂದ ಪ್ರೇರಣೆ ದೊರೆತಿರಬಹುದು. ಈ ಪರಂಪರೆಯದೇ ಆದ ಮೈಸೂರು ಸಾಂಪ್ರದಾಯಿಕ ಶೈಲಿಯ ಚಿತ್ರಗಳಲ್ಲಿ ಕಂಡುಬರುವ, ವೃತ್ತಾಕಾರದ ಮುಖಭಾವ, ಪುಟ್ಟದಾದ ಗುಂಡನೆಯ ಗಡ್ಡ, ಅಗಲವಾದ ಕಣ್ಣುಗಳು, ತೆಳುವಾದ ತುಟಿ, ನೀಳವಾದ ನಾಸಿಕ, ನೆರಿಗೆಯಿಂದ ಕೂಡಿದ ಉಡುಗೆ, ಉದ್ದನೆಯ ಕೈಬೆರಳು ಇತ್ಯಾದಿ ಶೈಲಿಗಳೇ ಶುಭರಾಯರ ಚಿತ್ರಗಳಲ್ಲಿ ಅಧಿಕವಾಗಿ ಕಂಡುಬರುತ್ತವೆ. ಅಲ್ಲದೆ ಮಹಾರಾಷ್ಟ್ರ ಪ್ರದೇಶದಲ್ಲಿ ನೆಲೆಸಿದ್ದರಿಂದ ಅಲ್ಲಿಯದೇ ಚಿತ್ರಕಲೆಯಲ್ಲಿ ಕಂಡುಬರುವ ಆಭರಣಗಳು, ಸೀರೆ ಉಟ್ಟಿರುವ ರೀತಿಗಳೂ ಸಹ ಕೆಲವೆಡೆ ನೋಡಬಹುದು. ಈ ಚಿತ್ರಗಳನ್ನು ಶುಭರಾಯರು ಮಠದ ಉತ್ಸವದ ವೇಳೆಯಲ್ಲಿ ಮಂಟಪ, ಮತ್ತಿತರ ಭಾಗಗಳಲ್ಲಿ ಅಲಂಕರಣಕ್ಕಾಗಿ ರಚಿಸುತ್ತಿದ್ದರು. ಕಾಗದವನ್ನು ಪದರಪದರವಾಗಿ ಹಚ್ಚಿ ಚಿತ್ರಬರೆಯುತ್ತಿದ್ದು ಕಾಲಕ್ರಮೇಣ ಹರಿದ, ನಾಶವಾದ ಚಿತ್ರಗಳ ಮೇಲೆ ಹೊಸದಾಗಿ ಬರೆದು ಅಂಟಿಸಿರುವುದುಂಟು. ಪ್ರಾಯಶಃ ೧೮೨೦ರಲ್ಲಿ ಶುಭರಾಯರು ತೀರಿಕೊಂಡ ಮೇಲೆ ಅವರು ಬರೆದ ಚಿತ್ರಗಳು ಪೆಟ್ಟಿಗೆಯಲ್ಲಿ ಹಾಕಿರಿಸಿದ್ದು ಸುಮಾರು ನೂರು ವರ್ಷಗಳ ನಂತರ ಮತ್ತೆ ಬೆಳಕಿಗೆ ತಂದಿದ್ದು ಕಲಾವಿದ ಹಾಗೂ ಕೃತಿಗಳನ್ನು ಕುರಿತು ಅನೇಕ ಅಧ್ಯಯನಗಳು ಆಗಿವೆ. ಲೇಖನಗಳು ಪುಸ್ತಕಗಳು ಬಂದಿವೆ. ೧೯೭೨ರಲ್ಲಿ ಕರ್ನಾಟಕ ರಾಜ್ಯ ಲಲಿತ ಕಲಾ ಅಕಾಡೆಮಿ ಸೊಲ್ಲಾಪುರದಲ್ಲಿಯೇ ಶುಭರಾಯರ ಬಗ್ಗೆ ವಿಚಾರಸಂಕಿರಣವೊಂದನ್ನು ಏರ್ಪಡಿಸಿ ನಂತರ ಅಲ್ಲಿ ಮಂಡಿಸಿದ ಪ್ರಬಂಧಗಳನ್ನು ಪುಸ್ತಕರೂಪದಲ್ಲಿ ಮುದ್ರಿಸಿದೆ.

ಪ್ರಸ್ತುತ ಶುಭರಾಯರ ಮಠದಲ್ಲಿ ಸುಮಾರು ೨೫೦ ಚಿತ್ರಗಳು ರಕ್ಷಿತವಾಗಿದ್ದು ಅವುಗಳಲ್ಲಿ ಕೃಷ್ಣನ ಕತೆಗೆ ಸಂಬಂಧಿಸಿದ, ರಾಸಲೀಲೆಗೆ ಸೇರಿದ ಚಿತ್ರಗಳೇ ಅಧಿಕ. ಅಲಂಕಾರವೇ ಮುಖ್ಯ ಉದ್ದೇಶವಾದ್ದರಿಂದ ಹೂ–ಬಳ್ಳಿಗಳ ವಿನ್ಯಾಸದ ಒಳಗೆ ಜಾಣ್ಮೆಯಿಂದ ಮಾನವಾಕಾರಗಳನ್ನೂ ಅಲಂಕಾರಯುತವಾಗಿಯೇ ಚಿತ್ರಿಸಿದ್ದಾರೆ. ಆಕಾರಗಳನ್ನು ಜ್ಯಾಮಿತಿಯ ವಿನ್ಯಾಸದಂತೆ ಅಕ್ಕಪಕ್ಕದಲ್ಲಿ ಮೇಲೆ ಕೆಳಗೆ ಅಥವ ವಿರುದ್ಧ ದಿಕ್ಕಿನಲ್ಲಿ ಡಿಸೈನ್‌ಗಳಂತೆ ಇರಿಸಿ, ಬಣ್ಣಗಾರಿಕೆಯಲ್ಲಿ ನಿಯಂತ್ರಿಸಿರುವ ಕೃತಿಗಳಿಂದಾಗಿ ಶುಭರಾಯರು ಒಬ್ಬ ಯಶಸ್ವೀ ಕಲಾವಿದರಾಗಿದ್ದಾರೆ. ಬಣ್ಣಗಳೂ ಸಹ ಸುಲಭವಾಗಿ ಪೇಟೆಯಲ್ಲಿ ದೊರೆಯುತ್ತಿದ್ದವೇ ಆಗಿದ್ದು ಚಿತ್ರೀಕರಣಕ್ಕೆ ಅಗತ್ಯವಿದ್ದಂತೆ ಸ್ವತಃ ತಯಾರಿಸಿಕೊಂಡಿದ್ದಾರೆ. ಸ್ವಂತ ಜೀವನದಲ್ಲೂ ಶುಭರಾಯರು

ಕ್ರಾಂತಿಕಾರಕ ಮನೋಭಾವವುಳ್ಳವರಾಗಿದ್ದು ತಮ್ಮ ನಂತರ ಮಠಕ್ಕೆ ಪರಿಶಿಷ್ಟ ಜನಾಂಗಕ್ಕೆ ಸೇರಿದ ವ್ಯಕ್ತಿಯನ್ನು ಉತ್ತರಾಧಿಕಾರಿಯಾಗಿ ಮಾಡಿ ಅಂದಿನ ಮೇಲ್ವರ್ಗದವರಿಂದ ನಿಂದನೆಗೆ ಗುರಿಯಾದರು. ಹಿಂದುಳಿದವರನ್ನು ಬಿಟ್ಟುಕೊಡಲಿಲ್ಲ. ಅವರು ರಚಿಸಿದ ಕೀರ್ತನೆ, ಪದ್ಯಗಳಂತಹ ರಚನೆಗಳನ್ನು ಇಂದಿಗೂ ಸೊಲ್ಲಾಪುರಪ್ರದೇಶದಲ್ಲಿ ಹಾಡುವ ಸಂಪ್ರದಾಯವಿದೆ. ರಾಜ್ಯದ ಕಲಾವಿದನೊಬ್ಬ ಹೊರರಾಜ್ಯದಲ್ಲಿ ಖ್ಯಾತಿ ಪಡೆದಿದ್ದು ಎರಡು ನೂರುವರ್ಷಗಳ ನಂತರವೂ ಜನಮನದಲ್ಲಿ ಉಳಿದು ಅವರ ಬಗ್ಗೆ ಹಲವಾರು ಅಧ್ಯಯನಗಳು. ಸಂಶೋಧನೆಗಳು ನಡೆದಿದ್ದು, ಅಂತಹ ಒಬ್ಬ ವ್ಯಕ್ತಿಯನ್ನು ನೀಡಿದ್ದು ಕೋಲಾರ ಜಿಲ್ಲೆಯಾಗಿದೆ.

ರಾಜ್ಯದಲ್ಲಿ ಹೆಚ್ಚು ಪ್ರಸಿದ್ಧಿ ಹೊಂದಿದ ಇನ್ನೊಬ್ಬ ಕಲಾವಿದರೆಂದರೆ ಎಸ್.ಜಿ.ಟಂಕಸಾಲೆಯವರು. ಬಾಗೇಪಲ್ಲಿಯ ಬಳಿ ಚಂದೂರಿನಲ್ಲಿ ೧೮೮೭ರಲ್ಲಿ ಜನಿಸಿದ ಶ್ರೀನಿವಾಸ ಗುರುರಾಯ ಟಂಕಸಾಲೆಯವರು ಮೊದಲಿಗೆ ನಾಟಕ ಕಂಪನಿಗಳಲ್ಲಿದ್ದು ಅಲ್ಲಿಯ ಪರದೆ ಹಾಗೂ ಅದರ ಕಲಾವಿದರ ಪ್ರೇರಣೆಯಿಂದ ೧೯೦೮ರಲ್ಲೇ ಮುಂಬಯಿಯ ಜೆ.ಜೆ.ಕಲಾಶಾಲೆಯಲ್ಲಿ ಕಲಿತು, ಮರಳಿ ಕೆಲ ವರ್ಷ ಮಹಾರಾಜ ಪ್ರೌಢಶಾಲೆಯಲ್ಲಿ ಕಲಾ ಶಿಕ್ಷಕರಾಗಿದ್ದು ೧೯೧೯ರಲ್ಲಿ ಮೈಸೂರಿನ ಚಾಮರಾಜೇಂದ್ರ ಕಲಾ ಶಾಲೆಗೆ ಕರಕುಶಲ ವಿಭಾಗದಲ್ಲಿ ಅಧ್ಯಾಪಕರಾಗಿ ನೇಮಕವಾಗಿ ಹತ್ತು ವರ್ಷಗಳ ನಂತರ ಚಿತ್ರಕಲಾ ವಿಭಾಗಕ್ಕೆ ಬಂದರು. ಮುಂಬಯಿಯಲ್ಲಿದ್ದಾಗಲಿಂದಲೂ ಚಿತ್ರಕಲೆಯಲ್ಲಿ ಭೂದೃಶ್ಯ ಪ್ರಕಾರಕ್ಕೆ ಒಲವಿದ್ದು ಈ ವಿಭಾಗದಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಮುಂದೆ ಖ್ಯಾತರಾದ, ಭೂದೃಶ್ಯವನ್ನೇ ಹೆಚ್ಚಾಗಿ ಅಭಿವ್ಯಕ್ತಿ ಮಾಧ್ಯಮವಾಗಿ ಆರಿಸಿಕೊಂಡ ಪಿ.ಆರ್.ತಿಪ್ಪೇಸ್ವಾಮಿ, ರುಮಾಲೆಚನ್ನಬಸವಯ್ಯ, ಎಂ.ಎಸ್.ಚಂದ್ರಶೇಖರ್ ಮುಂತಾದ ಅನೇಕರು ಟಂಕಸಾಲೆಯವರ ಶಿಷ್ಯರು. ಚಿತ್ರೀಕರಣಕ್ಕೆ ಸ್ಥಳದ ಆಯ್ಕೆ, ಕೆಲವೇ ಗಂಟೆಗಳಲ್ಲಿ ಚಿತ್ರರಚನೆಯನ್ನು ಪೂರೈಸುವಿಕೆ, ಕಾಗದದ ಬಿಳಿಯ ಬಣ್ಣವನ್ನೇ ಯಶಸ್ವಿಯಾಗಿ ಬಳಸಿಕೊಳ್ಳುತ್ತಿದ್ದ ವಿಧಾನ, ಶುದ್ಧ ವರ್ಣಗಳು ಫಲಕದಲ್ಲಿ ಮಿಶ್ರಿತವಾಗುವ ರೀತಿ, ಹಿನ್ನೆಲೆ-ಮುನ್ನೆಲೆಗಳಿಗೆ ಸೂಕ್ತ ಸ್ಥಳಾವಕಾಶ ಇತ್ಯಾದಿಗಳ ಬಗ್ಗೆ ಕಲಾವಿಮರ್ಶಕರು ಮೆಚ್ಚುಗೆಯ ಮಾತುಗಳನ್ನು ಆಡಿದ್ದಾರೆ. ಮಿತಭಾಷಿಯಾಗಿದ್ದ, ಜೀವನಸಂಧ್ಯೆಯಲ್ಲಿ ಹಲವಾರು ಕಷ್ಟಗಳಿಗೆ ಈಡಾದ ಇವರು ನೂರಾರು ಕೃತಿಗಳನ್ನು ರಚಿಸಿದ್ದರು. ಇಂದು ಅಲ್ಲಲ್ಲಿ ನೋಡಸಿಗುವುದು ಬೆರಳೆಣಿಕೆಯಷ್ಟು ಮಾತ್ರ. ರಾಜ್ಯ ಲಲಿತ ಕಲಾ ಅಕಾಡೆಮಿಯಿಂದ ೧೯೬೯ರಲ್ಲಿ ಸನ್ಮಾನ ಹಾಗೂ ಸಾರ್ವಜನಿಕರಿಂದ ಸನ್ಮಾನಗಳು ನಡೆದಿದ್ದವು. ಶ್ರೀಯುತರು ಡಿಸೆಂಬರ್ ೧೯೭೨ರಲ್ಲಿ ನಿಧನ ಹೊಂದಿದರು. ಟಂಕಸಾಲೆಯವರು ಬರಹಗಾರರೂ ಆಗಿದ್ದು, ಹಳ್ಳಿಯ ರೈತರ ಕುರಿತ 'ಅಪರಂಜಿ' ಹಾಗೂ ಸಂಸಾರಿಕ ಸಮಸ್ಯೆ ಕುರಿತ 'ಮಂಗಳಗೌರಿ' ಎಂಬ ಕಾದಂಬರಿಯನ್ನು ಪ್ರಕಟಿಸಿದ್ದಾರೆ. 'ಚಂದೂರು ನಾರಾಯಣ' ಅವರ ಆತ್ಮಕತೆ ಎಂದು ಹೇಳಲಾದ ಅಪ್ರಕಟಿತ ಕೃತಿ.

ಗೌರಿಬಿದನೂರು ತಾಲೂಕಿನ ಮರಳೂರಿನಲ್ಲಿ ಜನಿಸಿದ ಆರ್ಯಮೂರ್ತಿ ಅವರಿಗೆ (ಜ ೧೮೯೧) ಚಿಕ್ಕಂದಿನಿಂದಲೇ ಚಿತ್ರಕಲೆಯ ಬಗ್ಗೆ ಆಸಕ್ತಿಯಿದ್ದು ಮದ್ರಾಸ್ (ಚೆನ್ನೈ) ಕಲಾಶಾಲೆಯಲ್ಲಿ ಕೆಲವು ಪಾಠಗಳ ಶಿಕ್ಷಣ ಪಡೆದಿದ್ದರು. ನಂತರ ಚನ್ನಪಟ್ಟಣದ ಕರಕುಶಲಶಾಲೆಯಲ್ಲಿ ಅಧ್ಯಾಪಕರಾಗಿದ್ದು ಇವರ ಕಲೆಗಾರಿಕೆಯಿಂದಾಗಿ ಮುಂಬಯಿಯ ಜೆ.ಜೆ.ಶಾಲೆಯಲ್ಲಿ ಹೆಚ್ಚಿನ ಅಭ್ಯಾಸ ನಡೆಸಲು ಸರ್ಕಾರದ ವತಿಯಿಂದ ಕಳಿಸಿಕೊಡಲಾಗಿತ್ತು (೧೯೨೫). ಮರಳಿ ಮೈಸೂರಿಗೆ ಬಂದು ಚಾಮರಾಜೇಂದ್ರ ತಾಂತ್ರಿಕಶಾಲೆಯಲ್ಲಿ ಟಂಕಸಾಲೆಯವರ ಜಾಗಕ್ಕೆ ನೇಮಕವಾಗಿ ಕೆಲಕಾಲಾನಂತರ ಚನ್ನಪಟ್ಟಣದ ಕರಕುಶಲ ಶಾಲೆಗೆ ಮರಳಿ ಅಲ್ಲಿಯೇ ನೆಲೆ ನಿಂತರು. ಮುಂದೆ ಹಲವಾರು ಕೃತಿಗಳನ್ನು ರಚಿಸಿದರಾದರೂ ಗಾಂಧೀಜಿಯವರ ಭೇಟಿಯಾಗಿ ಸ್ವದೇಶೀ ಚಳವಳಿ, ಸಮಾಜಸೇವೆಯಲ್ಲಿ ನಿರತರಾದರು. ಮುಂದೆ ೧೯೬೦ರ ಸುಮಾರಿನಲ್ಲಿ ಚಿತ್ರಕಲಾ ಪರಿಷತ್ತು ಸಂಘಟನೆಯಾಗಲು, ಕಲಾಶಾಲೆಯೊಂದು ಆರಂಭವಾಗಲು ಕಾರಣರಾಗಿದ್ದ ಆರ್ಯಮೂರ್ತಿಯವರು

ಆರಂಭದಲ್ಲಿ ಅದರ ಅಧ್ಯಕ್ಷರೂ ಆಗಿದ್ದರು. ೧೯೭೩ರಲ್ಲಿ ಅಲ್ಲಿಂದ ಅವರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು. ಆರ್ಯಮೂರ್ತಿ ಅವರು ರಚಿಸಿದ ಕೋದಂಡರಾಮ ಕಲಾಕೃತಿ ದೊಡ್ಡಬಳ್ಳಾಪುರದ ರಾಮಮಂದಿರದಲ್ಲಿದೆ. ಅದೇ ಗೌರಿಬಿದನೂರು ತಾಲೂಕಿನ ವೆಂಕಟಾಪುರದಲ್ಲಿ ಜನಿಸಿದ ವಿ.ಟಿ.ಎಸ್.ರಾವ್ (ಜ.೧೯೩೫) ಕಲಾವಿದ ಎನ್.ಜಿ.ಪಾವಂಜೆ ಅವರ ಬಳಿ ಚಿತ್ರಕಲೆ ಕಲಿತು ಸ್ವಂತವಾಗಿ ಅಭ್ಯಸಿಸಿದವರು (ಕೆಲವರ್ಷಗಳು ಪಾಂಜೆಯವರು ಗೌರಿಬಿದನೂರಿನಲ್ಲಿ ವಾಸ್ತವ್ಯವಿದ್ದರು) ಮೈಸೂರು ದಸರ ವಾರ್ಷಿಕ ಕಲಾಪ್ರದರ್ಶನ, ಸಾಹಿತ್ಯ ಪರಿಷತ್ ಪ್ರದರ್ಶನಗಳಲ್ಲಿ ನಿರಂತರವಾಗಿ ಭಾಗಿಯಾಗಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಚಿತ್ರಕಲಾ ಪರಿಷತ್ತಿನೊಂದಿಗೆ ನಿಕಟ ಸಂಬಂಧ ಹೊಂದಿರುವ ರಾವ್ ಅವರು ಪರಿಷತ್ತಿಗೆ ತೊಗಲು ಗೊಂಬೆ ಹಾಗೂ ಸಾಂಪ್ರದಾಯಿಕ ಚಿತ್ರಗಳ ಸಂಗ್ರಹಕ್ಕೆ ನೆರವು ನೀಡಿದ್ದಾರೆ. ಶಾಂತಿನಿಕೇತನ ಹಾಗೂ ದೆಹಲಿಯಲ್ಲಿ ಹಲವು ಬಾರಿ ತೊಗಲುಗೊಂಬೆ ಕಲಾವಿದರಿಂದ ಕಲಾಪ್ರದರ್ಶನ ಏರ್ಪಡಿಸಿ, ಪ್ರಾತ್ಯಕ್ಷಿಕೆ ಹಾಗೂ ಉಪನ್ಯಾಸ ನೀಡಿದ್ದಾರೆ. ಮೈಸೂರು ದಸರಾ ಕಲಾಪ್ರದರ್ಶನದಲ್ಲಿ ರಾವ್ ಅವರ ಕೃತಿಗೆ ಬಹುಮಾನ ಬಂದಿದೆ.

ಮೂಲತ: ಕೋಲಾರದವರಾದ ಲಕ್ಷ್ಮೀನಾರಾಯಣ ಶರ್ಮ ಅವರು ಸ್ವಸಾಮರ್ಥ್ಯದಿಂದ ಚಿತ್ರಕಲೆ ಕಲಿತು ಭಾರತಾದ್ಯಂತ ಸಂಚರಿಸಿ, ಕೆಲಕಾಲ ಕೋಲ್ಕತದಲ್ಲಿ ಪೋಸ್ಟರ್ ರಚನೆ ಮಾಡಿ ಬೆಂಗಳೂರಲ್ಲಿ ನೆಲಸಿ ಕಪ್ಪುಬಿಳುಪು ಛಾಯಾಚಿತ್ರಗಳಿಗೆ ಬಣ್ಣ ತುಂಬುವ ಕಾಯಕವಲ್ಲದೆ ನೂರಾರು ಬಿಡಿ ಚಿತ್ರಗಳನ್ನು ರಚಿಸಿದ್ದಾರೆ. ಗೌರಿಬಿದನೂರಿನಲ್ಲಿ ನೆಲೆಸಿದ್ದ ವೆಂಕಟಾಚಲಯ್ಯ, ಮಾಲೂರಿನ ಜಿ.ಪಿ.ವೆಂಕಟಗಿರಿಯಪ್ಪ ಅವರುಗಳು ಚಿತ್ರಕಲಾವಿದರಾಗಿದ್ದರು. ಮಾಲೂರಿನ ಟಿ.ವೆಂಕಟಪ್ಪರವರು ಅನೇಕ ಕಲೆಗಳಲ್ಲಿ ಪಾರಂಗತರಿದ್ದು ಚಿತ್ರಕಲೆ ಸಹ ಸ್ವಂತವಾಗಿ ಕಲಿತವರು. ಮಾಲೂರಿನವರೇ ಆದ ಚನ್ನಕಲ್ ರಾಮಸ್ವಾಮಿ ಅಯ್ಯಂಗಾರ್ ಎಂಬ ಹರಿಕಥೆ ವಿದ್ವಾಂಸರು ಚಿತ್ರಕಲಾವಿದರೂ ಆಗಿದ್ದು ರಾಮಾಯಣದ ಕಥೆಯನ್ನು ನಿರೂಪಿಸುವಾಗ ಅದರ ಕಥೆಯನ್ನು ದೊಡ್ಡ ಅಳತೆಯಲ್ಲಿ ಬರೆದು ಹಿನ್ನೆಲೆಗೆ ಪ್ರದರ್ಶಿಸುತ್ತಿದ್ದರು. ಅವರ ಕೃತಿಗಳಿಗೆ ಬಣ್ಣ ತುಂಬುವುದಕ್ಕೆ ನೆರವಾಗುತ್ತಿದ್ದ ವೆಂಕಟಪ್ಪ ಅವರು ಚಿತ್ರಕಲೆಯಲ್ಲಿ ಆಸಕ್ತಿ ಬೆಳೆಸಿ ಬಿಡಿಚಿತ್ರಗಳಲ್ಲದೆ, ರಂಗಮಂದಿರದ ತೆರೆಗಳನ್ನೂ ರಚಿಸಿದ್ದಾರೆ. ಮಾಸ್ತಿ ವೆಂಕಟೇಶ್ ಅಯ್ಯಂಗಾರರ ಭಾವಚಿತ್ರ ಪೆನ್ಸಿಲ್‌ನಿಂದ ರಚಿಸಿ ಮಾಸ್ತಿ ಅವರಿಂದಲೇ ಮೆಚ್ಚುಗೆ ಪಡೆದಿದ್ದಾರೆ. ಮಾಲೂರಿನ ಎಂ.ವಿ.ಶಿವಶಂಕರ್ ಅವರು ಅಲ್ಲಿ ವಿಜಯಕಲಾಮಂದಿರ ಸ್ಥಾಪಿಸಿ ಅನೇಕರಿಗೆ ಚಿತ್ರಕಲೆ ಕಲಿಸಿದ್ದಾರೆ. ಸ್ವತ: ಕಲಾರಚನೆ ಕಲಿತಿದ್ದು ಭಾವಚಿತ್ರ ರಚನೆಯಲ್ಲಿ ಪರಿಣತಿ ಹೊಂದಿದ್ದಾರೆ. ಮಲ್ಲಿಗೆ ಮಾಸಪತ್ರಿಕೆಗೆ ೧೮ ವರ್ಷಗಳ ಕಾಲ ಚಿತ್ರ ರಚಿಸುವ ಕಲಾವಿದರಾಗಿದ್ದರು. ಬಿಡಿಚಿತ್ರ ಸಾಂಪ್ರದಾಯಿಕ ಹಾಗೂ ರಮ್ಯಪಂಥೀಯ ಚಿತ್ರ ರಚನೆಗಳೊಂದಿಗೆ ರಂಗ ಪರಿಕರಗಳ ಚಿತ್ರಗಳನ್ನು ರಚಿಸಿದ್ದಲ್ಲದೆ ರಂಗಭೂಮಿ ಕಲಾವಿದರೂ ಆಗಿದ್ದಾರೆ. ಹಲವಾರು ಏಕವ್ಯಕ್ತಿ ಪ್ರದರ್ಶನ ನೀಡಿರುವ ಶಿವಶಂಕರ್ ಅವರು ಮೈಸೂರು ದಸರಾ, ಕೇಂದ್ರ ಲಲಿತ ಕಲಾ ಅಕಾಡೆಮಿಗಳ ಪ್ರದರ್ಶನಗಳಲ್ಲಿ ಭಾಗವಹಿಸಿದ್ದು ಸ್ಥಳೀಯವಾಗಿ ಸಂಘಸಂಸ್ಥೆಗಳು ಸನ್ಮಾನ, ಗೌರವಾರ್ಪಣೆಗಳನ್ನು ಮಾಡಿದೆ. ಚಿಕ್ಕಬಳ್ಳಾಪುರದ ಜಿ.ಶಂಕರ್ ಅವರು ಚಿತ್ರ, ಶಿಲ್ಪಗಳಲ್ಲದೆ ಛಾಯಾಚಿತ್ರ, ಸಾಹಿತ್ಯ ಕ್ಷೇತ್ರಗಳಲ್ಲೂ ಕಾಣಿಕೆ ನೀಡಿದ್ದಾರೆ. ಭಾವಚಿತ್ರ ರಚನೆಯನ್ನು ಅಭಿವ್ಯಕ್ತಿ ಮಾಧ್ಯಮವಾಗಿರಿಸಿಕೊಂಡು ಸಾಮಾನ್ಯರನ್ನಲ್ಲದೆ, ರಾಷ್ಟ್ರನಾಯಕರು, ಪೌರಾಣಿಕ ವ್ಯಕ್ತಿಗಳ ಭಾವಚಿತ್ರ ರಚಿಸಿ ಮನ್ನಣೆಗಳಿಸಿದ್ದಾರೆ. ವಾಣಿಜ್ಯಕಲೆಯಲ್ಲಿಯೂ ಕಲಾತ್ಮಕತೆ ತಂದು ಕಲಾಭಿರುಚಿ ಹೆಚ್ಚಿಸಿದ್ದಾರೆ. ಇವರ ಮಗ ವಿ.ಶಂಕರ್ ಕೂಡ ಛಾಯಾಚಿತ್ರಗಾರ ಹಾಗೂ ಚಿತ್ರಕಲಾವಿದರಾಗಿದ್ದಾರೆ.

ಮಾಲೂರಿನವರಾದ ವಿ.ಗೋಪಾಲ್ ಚಿತ್ರಕಲಾವಿದ, ಛಾಯಾಚಿತ್ರಗ್ರಾಹಕ, ರಂಗಭೂಮಿ ನಟ–ನಿರ್ದೇಶಕ, ಮೂರ್ತಿಶಿಲ್ಪಕಾರ ಎಂದೆಲ್ಲಾ ಕ್ರಿಯಾಶೀಲರಾಗಿದ್ದು ವ್ಯಂಗ್ಯಚಿತ್ರ ರಚನೆಯಲ್ಲಿ ಹೆಚ್ಚಿನ

ಜನಮನ್ನಣೆ ಗಳಿಸಿದ್ದಾರೆ. ಎಂ.ಟಿ.ವಿ ಆಚಾರ್ಯರ ಕಲಾಶಾಲೆಯಲ್ಲಿ ಕ್ರಮಬದ್ಧ ಅಭ್ಯಾಸ ಮಾಡಿದ್ದು ಅಖಿಲ ಭಾರತ ಚಿತ್ರಕಲಾ ಸ್ಪರ್ಧೆಯೊಂದರಲ್ಲಿ ಪ್ರಥಮ ಬಹುಮಾನಗಳಿಸಿದ್ದಾರೆ. ದೆಹಲಿಯಲ್ಲಿ ನಡೆದ ಅಖಿಲ ಕರ್ನಾಟಕ ೫೦ನೇ ಸಮ್ಮೇಳನ ಚಿತ್ರಪ್ರದರ್ಶನದಲ್ಲಿ ಪ್ರಶಸ್ತಿಪತ್ರ ದೊರೆತಿದೆ. ರಾಜ್ಯ ಲಲಿತ ಕಲಾ ಅಕಾಡೆಮಿಯ ಸಂಗ್ರಹದಲ್ಲಿಯೂ ಇವರ ಕೃತಿಗಳಿವೆ. ಗೋಪಾಲ್‌ರವರ ವ್ಯಂಗ್ಯ ಚಿತ್ರಗಳು ಹಾಗೂ ಛಾಯಾಚಿತ್ರಗಳು ನಾಡಿನ ಬಹುತೇಕ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಎರಡೂ ಕ್ಷೇತ್ರಗಳಲ್ಲಿ ಗಮನಿಸಬಹುದಾದ ಸಾಧನೆ ಮಾಡಿದ್ದಾರೆ. ಮೈಸೂರು ಹಾಗೂ ರಾಜಮಹೇಂದ್ರಿ ಸೇರಿದಂತೆ ಹಲವಾರು ರಾಜ್ಯಮಟ್ಟದ ಪ್ರದರ್ಶನಗಳಲ್ಲಿ ಬಹುಮಾನಗಳಿಸಿದ್ದಾರೆ. ಈಚೆಗೆ ಕಂಪ್ಯೂಟರ್ ಬಳಸಿ ಕಲಾಕೃತಿ ರಚಿಸುವ ಕಾರ್ಯವನ್ನೂ ಚಿತ್ರಕಲಾವಿದರೇ ಮಾಡುತ್ತಿದ್ದು ಕೋಲಾರದ ಈಶ್ವರ್ ಈ ಪ್ರಕಾರದಲ್ಲಿ ಸಿದ್ಧಹಸ್ತರೆನಿಸಿದ್ದಾರೆ. ಶ್ರೀಯುತರು ಸಾಂಪ್ರದಾಯಿಕ ಹಾಗೂ ನೈಜ ಶೈಲಿಯ ಚಿತ್ರ ಮತ್ತು ಛಾಯಾಚಿತ್ರಗಳಲ್ಲಿಯೂ ಅಭಿವ್ಯಕ್ತಿಸುತ್ತಿದ್ದು ಅವುಗಳ ಬಳಕೆಯನ್ನು ಕಂಪ್ಯೂಟರ್ ವಿನ್ಯಾಸದಲ್ಲೂ ಯಶಸ್ವಿಯಾಗಿ ಬಳಸಲು ಸಾಧ್ಯವಾಗಿದೆಯೆನ್ನಬಹುದು. ಕನ್ನಡ ತಿಲಕ ಪತ್ರಿಕೆಯ ಸಂಪಾದಕರಾದ ವಿಷ್ಣು ಅವರು ಚಿತ್ರಕಲಾವಿದರಾಗಿದ್ದು ಭಾವಚಿತ್ರ, ದೇವ–ದೇವಿಯರ ಚಿತ್ರ ರಚಿಸಿದ್ದಾರೆ. ಕೋಲಾರದ ಪಿ.ಚಂದ್ರಪ್ರಕಾಶ್ ಅವರು ವ್ಯಂಗ್ಯಚಿತ್ರ ಹಾಗೂ ಗ್ರಾಫಿಕ್ ಕಲೆಗಳಲ್ಲಿ ಪರಿಣಿತರಾಗಿದ್ದು ಪತ್ರಿಕೆಗಳ ಸಾಂದರ್ಭಿಕ ಚಿತ್ರ, ಕಾರ್ಟೂನ್, ಮುಖಚಿತ್ರ, ಶೀರ್ಷಿಕೆಗಳ ಕಲಾತ್ಮಕ ಅಕ್ಷರವಿನ್ಯಾಸಗಳಿಗೆ ಪ್ರಶಂಸೆಗಳಿಸಿದ್ದಾರೆ. ಸುಂದರವಾದ, ವೈವಿಧ್ಯವಾದ ಅಕ್ಷರಗಳನ್ನು (ಕ್ಯಾಲಿಗ್ರಫಿ) ಹಾಗೂ ಚಿತ್ರಕಲೆಯನ್ನು ಆಸಕ್ತರಿಗೆ ಕಲಿಸಿಕೊಟ್ಟಿದ್ದಾರೆ. ರಂಗಭೂಮಿಯಲ್ಲೂ ತೊಡಗಿಸಿಕೊಂಡಿದ್ದು ನಾಟಕಗಳಿಗೆ ರಂಗ ಸಂಯೋಜನೆ ಮಾಡಿದ್ದಾರೆ. ಚಾಲುಕ್ಯ ಕಲಾಕೇಂದ್ರದಲ್ಲಿ ಕಲಾ ಸಂಘಟಿತರಾಗಿ ಕಾರ್ಯನಿರ್ವಹಿಸಿದ್ದಾರೆ.

ಬಂಗಾರಪೇಟೆಯ ಇತಿಹಾಸ ಪ್ರಸಿದ್ಧ ಕೇಂದ್ರ ಬೂದಿಕೋಟೆಯಲ್ಲಿ ಜನಿಸಿದ ವಿ.ವೆಂಕಟಪ್ಪ ಅವರು ಗ್ರಾಮೀಣ ಪ್ರದೇಶದವರಾಗಿದ್ದು ಸಾಮಾನ್ಯ ಜನರ ದುಖಃ, ನೋವುಗಳಲ್ಲದೆ ಸಂತಸ, ಜಾತ್ರೆ, ತೇರು ಇತ್ಯಾದಿ ವಿಷಯಗಳ ಬಗ್ಗೆಯೂ ಕೃತಿ ರಚಿಸಿದ್ದಾರೆ. ಯುವ ಜನಕಲಾ ಮೇಳ, ಜಿಲ್ಲಾ ಕಲಾ ಮೇಳ, ದಸರಾ ಕಲಾ ಪ್ರದರ್ಶನ ಸದ್ಭಾವನಾ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಶ್ರೀಯುತರು ಛಾಯಾಚಿತ್ರಗ್ರಾಹಕರಾಗಿ ಜಿಲ್ಲೆಯ ಐತಿಹಾಸಿಕ ಹಾಗೂ ಪ್ರೇಕ್ಷಣೀಯ ಸ್ಥಳಗಳ ಛಾಯಾಚಿತ್ರ ತೆಗೆದಿದ್ದು ಕೆಲವಕ್ಕೆ ರಾಷ್ಟ್ರ ಹಾಗೂ ರಾಜ್ಯಮಟ್ಟದ ಪುರಸ್ಕಾರ ದೊರೆತಿವೆ. ಇದೇ ಬೂದಿಕೋಟೆಯ ಗುಲ್ಜಾರ್ ಅವರು ಆಧುನಿಕ ತಾಂತ್ರಿಕತೆಯೊಂದಿಗೆ ಕಲಾ ನೈಪುಣ್ಯ ಬೆರೆಸಿ ಕೃತಿ ರಚನೆ ಮಾಡಿದ್ದಾರೆ. ಗಾಜಿನ ಚಿತ್ರಗಳು ಇವರ ಪ್ರಮುಖ ಅಭಿವ್ಯಕ್ತಿ ಮಾಧ್ಯಮ. ಚಾಲುಕ್ಯ ಕಲಾ ಕೇಂದ್ರದೊಂದಿಗೆ ಸಂಪರ್ಕವಿರಿಸಿ ಹಲವಾರು ಪ್ರದರ್ಶನಗಳಲ್ಲಿ ಭಾಗಿಯಾಗಿದ್ದಾರೆ. ಬಂಗಾರಪೇಟೆಯವರೇ ಆದ ಜಗದೀಶ್ ಬೃಹತ್ ಪ್ರಮಾಣದ ಚಿತ್ರ ರಚನೆಯಲ್ಲಿ ಸಿದ್ಧಹಸ್ತರಿದ್ದು, ದೇಹರಚನೆ, ವರ್ಣಗಳ ಬಳಕೆ, ಹಿನ್ನೆಲೆ, ಸಂಯೋಜನೆ ಇತ್ಯಾದಿಗಳಿಂದ ಇವರ ಕೃತಿಗಳು ಹಾಗೂ ಯಂತ್ರ, ತಂತ್ರಗಳ ವಿನ್ಯಾಸಗಳು ಜನಪ್ರಿಯತೆ, ಗೌರವಗಳನ್ನು ತಂದುಕೊಟ್ಟಿದೆ. ಇವರುಗಳಲ್ಲದೆ ಜಿಲ್ಲೆಯವರಾದ ಎಂ.ಚೆನ್ನಪ್ಪ, ಮುನಿಯಪ್ಪ, ಬಿ.ಜಗದೀಶ್, ಜಿ.ರಾಮಕೃಷ್ಣಾಶಾಸ್ತ್ರಿ, ಓ.ತಿಪ್ಪೇಸ್ವಾಮಿ, ಎಸ್.ಶಂಕರಶಾಸ್ತ್ರಿ ಇವರೇ ಮುಂತಾದವರು ಕಲಾಶಾಲೆಗಳಲ್ಲಿ ಅಥವ ಸ್ವಂತವಾಗಿ ಕಲಿತು ಕೃತಿಗಳನ್ನು ರಚಿಸಿ ಪ್ರದರ್ಶಿಸಿದ್ದಾರೆ. ಇವರಲ್ಲಿ ಕೆಲವರು ಭಾವಚಿತ್ರರಚನೆ, ನಿಸರ್ಗಚಿತ್ರ, ಗ್ರಾಫಿಕ್ ಚಿತ್ರರಚನೆಗಳಲ್ಲಿ ಹೆಸರುಗಳಿಸಿದ್ದು ಕೆಲವರು ಕಲಾ ಶಿಕ್ಷಕರೂ ಆಗಿದ್ದಾರೆ. ಗೌರಿಬಿದನೂರಿನ ಟಿ.ಎನ್.ಕೃಷ್ಣಮೂರ್ತಿ ಹಾಗೂ ಇಡಗೂರಿನ ರಮೇಶಚಂದ್ರ ಅವರುಗಳು ಚಿತ್ರಕಲೆಯಲ್ಲಿ ಉನ್ನತ ಪದವಿ ಪಡೆದಿದ್ದು, ಕಲೆ ಕುರಿತು ಹಲವಾರು ಲೇಖನಗಳನ್ನು ಬರೆದಿದ್ದಾರೆ. ರಮೇಶ ಚಂದ್ರ ಅವರು ಹಲವಾರು ರಾಷ್ಟ್ರೀಯ ಅಂತರ ರಾಷ್ಟ್ರೀಯ ಕಲಾಗಾರಗಳಲ್ಲಿ ಭಾಗವಹಿಸಿ ಕೃತಿಗಳನ್ನು ರಚಿಸಿದ್ದಾರೆ. ಪ್ರಸ್ತುತ ಇಬ್ಬರೂ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಸ್ನಾತಕೋತ್ತರ ಪದವಿಯ ತರಗತಿಗಳಿಗೆ ಅಧ್ಯಾಪಕರಾಗಿದ್ದಾರೆ.

ಕೆ.ಜಿ.ಎಫ್.ನಲ್ಲಿ ಬೆಮೆಲ್ (ಬಿ.ಇ.ಎಂ.ಎಲ್) ಕಾರ್ಖಾನೆ ಆರಂಭವಾಗಿ ಭಾರತಾದ್ಯಾಂತದಿಂದ ನೌಕರರು ಬಂದು ಸೇರಿದ್ದು ಅವರಲ್ಲಿ ಕೆಲವರು ಚಿತ್ರಕಲಾವಿದರೂ ಇದ್ದಾರೆ. ಎಲ್ಲ ಬಗೆಯ ಸಾಂಸ್ಕೃತಿಕ ಕಲಾ ಚಟುವಟಿಕೆಗಳಿಗೆ ಕಾರ್ಖಾನೆ ಪ್ರೋತ್ಸಾಹ ನೀಡುತ್ತಿದ್ದು ಚಿತ್ರಕಲಾವಿದರು ಅದರ ಪ್ರಯೋಜನ ಪಡೆಯುತ್ತಿದ್ದಾರೆ. ಅಲ್ಲದೆ ಕೆಲವರಲ್ಲಿ ಹುದುಗಿದ್ದ ಕಲಾಚಟುವಟಿಕೆ ಹೊರಬರಲು ಅವಕಾಶವಾದಂತಾಗಿದೆ. ಇಲ್ಲಿ ಕೆಲಕಾಲ ಅಧಿಕಾರಿಯಾಗಿದ್ದ ಇ.ಎಂ.ಜೋನ್ಸ್ ಎಂಬಾತ ಬರೆದಿರುವ 'ಪೊಯೆಮ್ಸ್ ಆಫ್ ಸೌತ್ ಇಂಡಿಯಾ'ನ ಪದ್ಯಗಳಿಗೆ ಪಿ.ಜೆ.ಕ್ರೊಲೆ ಎಂಬಾತ ಚಿತ್ರಗಳನ್ನು ರಚಿಸಿದ್ದು, ಬೂದಿಕೋಟೆಯ ಅರಮನೆ ಪ್ರವೇಶದ್ವಾರ, ಕೋಲಾರದ ಬಳಿಯ ಬೆಟ್ಟವೊಂದರ ಮೇಲಿನ ದೇವಾಲಯ ಹಾಗೂ ನಾಲ್ಕು ಪ್ರಕೃತಿದೃಶ್ಯಗಳು ಕೋಲಾರ ಜಿಲ್ಲೆಗೆ ಸಂಬಂಧಪಟ್ಟದ್ದಾಗಿವೆ. ಇದಲ್ಲದೆ ಇನ್ನೂ ಹಲವಾರು ವರ್ಣಚಿತ್ರಗಳಿದ್ದು ಅವು ೧೯೩೭ರ ಅವಧಿಯದಾಗಿದ್ದು ಪುಸ್ತಕವೂ ಅದೇವೇಳೆಯಲ್ಲಿ ಪ್ರಕಟವಾಗಿರಬಹುದು. ಕಲಾವಿದ ಕ್ರೊಲೆ, ಜೋನ್ಸ್ ಜೊತೆಯಲ್ಲಿಯೇ ಸಂಚರಿಸಿ ಸ್ಥಳದಲ್ಲಿಯೇ ಚಿತ್ರ ಬರೆದಂತಿದೆ. ಭದ್ರಾವತಿಯವರಾದ ವೇದಮೂರ್ತಿ ಅವರು ಬೆಮೆಲ್‌ನಲ್ಲಿ ಅಧಿಕಾರಿಯಾಗಿದ್ದು ಆಧುನಿಕ ಶೈಲಿಯ ಕಲಾಕೃತಿ ರಚನೆಯನ್ನು ಅಭಿವ್ಯಕ್ತಿ ಮಾಧ್ಯಮವಾಗಿ ಆರಿಸಿಕೊಂಡಿದ್ದು, ರಾಜ್ಯ ಲಲಿತ ಕಲಾ ಅಕಾಡೆಮಿ, ಮೈಸೂರು ದಸರಾ ಹಾಗೂ ಕಲಾಮೇಳಗಳಲ್ಲಿ ಸಕ್ರಿಯವಾಗಿ ಪಾಲುಗೊಂಡು ನಿರಂತರವಾಗಿ ಪ್ರದರ್ಶಿಸಿದ್ದಾರೆ. ಕೋಲಾರ ಪ್ರದೇಶದ ಬಂಡೆಗಲ್ಲುಗಳ ಭೂದೃಶ್ಯವನ್ನು ಕೃತಿಗಳಲ್ಲಿ ಯಶಸ್ವಿಯಾಗಿ ದುಡಿಸಿಕೊಂಡಿದ್ದಾರೆ. ಬೆಂಗಳೂರು ಹಾಗೂ (ಕೆಲಕಾಲ ವರ್ಗವಾಗಿದ್ದ) ಅಹಮದಾಬಾದ್‌ಗಳಲ್ಲೂ ಹಲವಾರು ಏಕವ್ಯಕ್ತಿ ಪ್ರದರ್ಶನ ನೀಡಿದ್ದಾರೆ. ಭಿತ್ತಿಚಿತ್ರ, ವಾಣಿಜ್ಯ ಚಿತ್ರ ರಚಿಸಬಲ್ಲ ವೇದಮೂರ್ತಿ ಅವರು (ಚಿತ್ರಕಲಾ ಎಂಬುದು ಅವರ ಅಂಕಿತನಾಮ) ರಂಗಸಜ್ಜಿಕೆಗಳ ವಿನ್ಯಾಸಗೊಳಿಸಿ ಪ್ರಶಂಸೆಗಳಿಸಿದ್ದಾರೆ. ಉತ್ತರಕನ್ನಡ ಜಿಲ್ಲೆಯ ಮಂಜುನಾಥ ಕೃ.ಹೆಗಡೆ ಅವರು ಕೆ.ಜಿ.ಎಫ್‌ನ ಸಂತಮೇರಿ ವಿದ್ಯಾಲಯದಲ್ಲಿ ಕಲಾಶಿಕ್ಷಕರಾಗಿದ್ದು, ಸಮರ್ಪಕ ಕಲಾ ಶಿಕ್ಷಣ ನೀಡಿ ವಿದ್ಯಾರ್ಥಿಗಳಲ್ಲಿ ಕಲೆಯ ಬಗ್ಗೆ ಆಸಕ್ತಿ ಮೂಡಿಸಿದ್ದಾರೆ. ಸ್ವತ: ಸಾಂಪ್ರದಾಯಿಕ ಹಾಗೂ ರಮ್ಯ ಶೈಲಿಯ ಕಲಾವಿದರಾಗಿದ್ದು, ಜನಪದ ದೃಶ್ಯಗಳು. ನಿಸರ್ಗ ದೃಶ್ಯಗಳನ್ನು ರಚಿಸಿ ಪ್ರದರ್ಶಿಸಿದ್ದಾರೆ. ವಿಜಾಪುರದವರಾದ ವಿ.ಬಿ.ದೇಶಪಾಂಡೆ ಅವರು ಕೆ.ಜಿ.ಎಫ್‌ನ ಸಂತ ಜೋಸೆಫ್ ಶಾಲೆಯಲ್ಲಿ ಕಲಾ ಶಿಕ್ಷಕರಾಗಿದ್ದು ಮಕ್ಕಳ ಸುಪ್ತ ಚೇತನ ಹೊರಹೊಮ್ಮುವಂತೆ ಮಾಡಿ ಮಕ್ಕಳ ಚಿತ್ರಕಲಾ ಸ್ಪರ್ಧೆಯಲ್ಲಿ ಅವರು ಬಹುಮಾನಗಳಿಸುವಂತೆ ಮಾಡಿದ್ದಾರೆ. ಸ್ವತ: ಕಲಾವಿದರಾಗಿದ್ದು ಮೈಸೂರು ದಸರಾ ಹಾಗೂ ಲಲಿತಕಲಾ ಅಕಾಡೆಮಿಯ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ರೇಖಾಚಿತ್ರವನ್ನು ಅಭಿವ್ಯಕ್ತಿ ಮಾಧ್ಯಮವಾಗಿ ಪ್ರಧಾನವಾಗಿ ಅಂಗೀಕರಿಸಿ ಹಲವಾರು ಪ್ರಯೋಗಗಳನ್ನು ಮಾಡಿರುವ ದೇಶಪಾಂಡೆಯವರು ಕವಿ ಹೃದಯದವರಾಗಿ ಪದ್ಯರಚನೆಯನ್ನು ಮಾಡಿ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ದಾವಣಗೆರೆ ಕಲಾಶಾಲೆಯಲ್ಲಿ ಕಲಾ ಡಿಪ್ಲೊಮಾ ಪದವಿ ಪಡೆದು ಬೆಮೆಲ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿ.ಎಸ್.ನಾಗೇಂದ್ರರಾವ್ ಜಲ ವರ್ಣ, ತೈಲವರ್ಣಗಳಲ್ಲಿ ನವ್ಯ ಶೈಲಿಯ ಕೃತಿ ರಚನೆ ಮಾಡಿದ್ದಲ್ಲದೆ ಕಲಾಸಂಘಟಕರಾಗಿ ಕ್ರಿಯಾಶೀಲರಾಗಿ ಕಾರ್ಯನಿರ್ವಹಣೆ ಮಾಡಿ ಮುನ್ನಡೆಯುತ್ತಿದ್ದಾರೆ. ಮೂಲತ: ಬಿಜಾಪುರದವರಾಗಿದ್ದು, ಬೆಮೆಲ್‌ನಲ್ಲಿ ದೀರ್ಘಾವಧಿ ಕಾರ್ಯನಿರ್ವಹಿಸಿ ನಿವೃತ್ತರಾಗಿ ಕೋಲಾರದಲ್ಲೇ ನೆಲೆಸಿರುವ ಅರವಿಂದ ಕಟ್ಟಿಯವರು ಸ್ವತ: ಚಿತ್ರಕಲೆ ಕಲಿತು, ಕೊಲಾಜ್, ಆಧುನಿಕ ತಂತ್ರ, ಜನಪದ, ರೇಖಾಚಿತ್ರಗಳಲ್ಲಿ ನಿಪುಣರಾಗಿದ್ದಾರೆ. ರಾಜ್ಯ ಲಲಿತಕಲಾ ಅಕಾಡೆಮಿ, ಮೈಸೂರು ದಸರಾ, ಕಲಾಮೇಳಗಳಲ್ಲಿ ಪಾಲುಗೊಂಡು ಕೃತಿ ರಚಿಸಿ, ಪ್ರದರ್ಶಿಸಿ ಪ್ರಶಂಸೆಗಳಿಸಿದ್ದಾರೆ. ಅನೇಕ ಪುಸ್ತಕಗಳಿಗೆ ಮುಖಪುಟ ರಚನೆ, ಪ್ರಶಸ್ತಿಪತ್ರಗಳ ವಿನ್ಯಾಸ, ವಿಶೇಷಾಂಕಗಳಿಗೆ ಪೂರಕ ಚಿತ್ರರಚನೆ ಇತ್ಯಾದಿಗಳನ್ನು ಮಾಡಿ ಮೆಚ್ಚುಗೆಗಳಿಸಿದ್ದಾರೆ. ಚಿತ್ರಕಲೆಗಾಗಿ ಜಿಲ್ಲಾ ಸಾಹಿತ್ಯಪರಿಷತ್ತಿನಿಂದ ಸನ್ಮಾನ ಪಡೆದಿರುವುದಲ್ಲದೆ, ಶ್ರೀಪಾದರಾಜ ಮಠದವರಿಂದ 'ಕಲಾರತ್ನ' ಪ್ರಶಸ್ತಿ ಪಡೆದಿದ್ದಾರೆ. ರಾಜ್ಯೋತ್ಸವ ಸಂದರ್ಭದಲ್ಲಿ ಬೆಂಗಳೂರಲ್ಲಿ ಗೌರವಿಸಲಾಗಿದೆ. ಅರವಿಂದ

ಕಟ್ಟಿಯವರು ಒಂದು ಅವಧಿಗೆ ರಾಜ್ಯ ಲಲಿತ ಕಲಾ ಅಕಾಡೆಮಿಯ ಸಕ್ರಿಯ ಸದಸ್ಯರೂ ಆಗಿದ್ದು ಜಿಲ್ಲೆಯ ಕಲಾ ಚಟುವಟಿಕೆಗೆ ನೆರವಾಗಿದ್ದಾರೆ. ಲಲಿತಕಲಾ ಅಕಾಡಮಿಯ ಅಪ್ರಕಟಿತ ಗ್ರಂಥ ಚಿತ್ರಕಲಾ ದರ್ಪಣಕ್ಕೆ ಕೋಲಾರ ಜಿಲ್ಲೆಯ ಚಿತ್ರಕಲಾವಿದರನ್ನು ಕುರಿತು ಲೇಖನ ಬರೆದಿದ್ದಾರೆ. ಗೌರಿಬಿದನೂರು ಚಿಂತನಪಲ್ಲಿಯಲ್ಲಿ ಜನಿಸಿದ ಎಚ್.ಎಸ್.ಗಂಗಾಧರ, ಲಲಿತಕಲಾ ಅಕಾಡಮಿಯ ಗ್ರಾಫಿಕ್ ವಿಭಾಗದ ನೌಕರರಾಗಿದ್ದು, ಪರಿಸರದಿಂದ ಪ್ರೇರಿತರಾಗಿ ಸುಪ್ತವಾಗಿದ್ದ ಚಿತ್ರಕಲೆಯನ್ನು ಬೆಳೆಸಿ ರಾಜ್ಯ ಹಾಗೂ ರಾಷ್ಟ್ರೀಯ ಕಲಾಪ್ರದರ್ಶನಗಳಲ್ಲಿ, ಐಫಾಕ್ಸ್‌ನ ಪ್ರದರ್ಶನ. ಶಿಲ್ಪಕಲಾ ಅಕಾಡೆಮಿಯ ಸಹಸ್ರಮಾನ ಪ್ರದರ್ಶನಗಳಲ್ಲಿ ಕೃತಿಗಳನ್ನು ಪ್ರದರ್ಶಿಸಿದ್ದಾರೆ. ಹತ್ತಕ್ಕೂ ಹೆಚ್ಚು ಗುಂಪು ಪ್ರದರ್ಶನಗಳಲ್ಲಿ ಮುಂಬಯಿ-ದೆಹಲಿಯೂ ಸೇರಿದಂತೆ ಭಾಗವಹಿಸಿದ್ದಾರೆ. ಇವರಿಗೆ ಮೈಸೂರು ದಸರಾ, ದೆಹಲಿಯ ಆವಂತಿಕಾ, ಟಾಸ್ಮಿಯಾ ಪ್ರದರ್ಶನಗಳಲ್ಲಿ ಬೆಳ್ಳಿಯ ಪದಕ ಇತ್ಯಾದಿ ಪ್ರಶಸ್ತಿಗಳು ಬಂದಿವೆ.

ಮಾಲೂರಿನಲ್ಲಿ ಜನಿಸಿ ಕೆನ್ ಶಾಲೆಯಲ್ಲಿ ಚಿತ್ರಕಲೆ ಅಭ್ಯಸಿಸಿ ಚಿತ್ರ ಹಾಗೂ ಛಾಯಾಚಿತ್ರಗಳಲ್ಲಿ ಅಭಿವ್ಯಕ್ತಿಸುತ್ತಿರುವ ಪುರುಷೋತ್ತಮ, ಕಾಷ್ಠ ಕಲೆಯ ಕಲಾವಿದ ನಂದಿಯ ಟಿ.ಎನ್.ನಾಗರಾಜ್; ರಾಜ್ಯಮಟ್ಟದ ಅನೇಕ ವ್ಯಂಗ್ಯ ಚಿತ್ರ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ, ಲಂಕೇಶ್ ಪತ್ರಿಕೆ ಸೇರಿದಂತೆ ಹಲವಾರು ಪತ್ರಿಕೆಗಳಲ್ಲಿ ಹಾಗೂ ಜೀವಜಾಲ ಪುಸ್ತಕಕ್ಕೆ ಸಾಂದರ್ಭಿಕ ಹಾಗೂ ವ್ಯಂಗ್ಯ ಚಿತ್ರ ರಚಿಸಿದ, ಗೌರಿಬಿದನೂರಿನ ಚಂದ್ರಶೇಖರ ಗುಬ್ಬಿ; ತಿರಸ್ಕೃತವಾದ ವ್ಯಂಗ್ಯ ಚಿತ್ರ, ಸಾಹಿತ್ಯಕ ಬರವಣಿಗೆಗಳಿಂದಲೇ 'ರಿಗ್ರೇಟ್' ಎಂದು ನಾಮಾಂಕಿತರಾದ 'ರಿಗ್ರೇಟ್ ಅಯ್ಯರ್ (ಸತ್ಯನಾರಾಯಣ ಅಯ್ಯರ್) 'ಪಮ್ಮಿ' ಎಂಬ ಹೆಸರಲ್ಲಿ ವ್ಯಂಗ್ಯ ಚಿತ್ರ ರಚಿಸುತ್ತಿರುವ ಬಿ.ಎಸ್.ಪರಮೇಶ್ವರಚಾರ್ ಇವರೇ ಮುಂತಾದ ಜಿಲ್ಲೆಯ ಅನೇಕ ಕಲಾವಿದರನ್ನು ಹೆಸರಿಸಬಹುದು.

ಬಂಗಾರಪೇಟೆಯ ಬಿ.ಎಸ್.ರಾಘವೇಂದ್ರರಾವ್ ಅವರು ಬೆಂಗಳೂರಿನ ಕಲಾಮಂದಿರದಲ್ಲಿ ಚಿತ್ರಕಲೆ ಅಭ್ಯಸಿಸಿ ಸ್ವಂತವಾಗಿ ಕಲಾಕೃತಿ ರಚನೆ, ಪ್ರದರ್ಶನ ಮಾಡುತ್ತಿದ್ದಾರೆ. ಹಲವಾರು ಪುಸ್ತಕಗಳಿಗೆ ಮುಖಪುಟ ರಚನೆ ಮಾಡಿದ್ದಾರೆ. ಚಿಂತಾಮಣಿಯ ಸಿ.ವಿ.ಕೃಷ್ಣಮೂರ್ತಿ (ಬಾಬು) ಒಳ್ಳೆಯ ವ್ಯಂಗ್ಯ ಚಿತ್ರಕಾರರು. ಪ್ರೌಢಶಾಲೆಗಳಲ್ಲಿ ಬಿಡುವಿನ ವೇಳೆಯಲ್ಲಿ ಹವ್ಯಾಸಿ ಕಲಾವಿದರಿಗೆ ಕಲಿಸಿಕೊಡುತ್ತಿದ್ದಾರೆ. ಜಿಲ್ಲೆಯಲ್ಲಿ ಬಾಲಕಲಾವಿದರು ಅನೇಕರಿದ್ದು ರಾಜ್ಯ ಹೊರರಾಜ್ಯಗಳಲ್ಲಿ ಕಲಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಬೆಳ್ಳಿಯ ಪದಕ ಇತ್ಯಾದಿ ಪಡೆದಿದ್ದಾರೆ.

ಜಾನಪದ ಶೈಲಿಯಲ್ಲಿ ಕಾಷ್ಠ ಶಿಲ್ಪಗಳನ್ನು ರಚಿಸುವುದರಲ್ಲಿ ಶ್ರೀನಿವಾಸಪುರದ ಶಾಗತ್ತೂರು ಗ್ರಾಮದ ಶಿಲ್ಪಿಗಳು ಸಿದ್ಧಹಸ್ತರು. ಮಹಾಭಾರತ ವ್ಯಕ್ತಿಗಳ ಕಾಷ್ಠ ಶಿಲ್ಪಗಳಂತೂ ಮನೋಹರವಾಗಿವೆ. ಆಕರ್ಷಕ ಈ ವೃತ್ತಿಯಲ್ಲಿ ಮೂರು-ನಾಲ್ಕು ಕುಟುಂಬಗಳು ತೊಡಗಿಸಿಕೊಂಡಿವೆ.

ಮಂಜುನಾಥ ಸಾಗರ ಅವರು ಅಕ್ಕಿಕಾಳು, ಗಸಗಸೆ ಕೂದಲುಗಳ ಮೇಲೆ ಸೂಕ್ಷ್ಮ ಚಿತ್ರರಚನೆ ಮಾಡುತ್ತಿದ್ದು ಮಾಲೂರು, ಶಿಡ್ಲಘಟ್ಟ ಸೇರಿದಂತೆ ಅನೇಕ ಕಲಾಪ್ರದರ್ಶನಗಳಲ್ಲಿ ಪಾಲ್ಗೊಂಡಿರುವರು.

ಚಿತ್ರಕಲೆಗೆ ಪ್ರೋತ್ಸಾಹ ನೀಡುವ ಕೆಲವು ಸಾಂಸ್ಕೃತಿಕ ಕಲಾ ಕೇಂದ್ರಗಳು ಜಿಲ್ಲೆಯಲ್ಲಿವೆ. ಕೆ.ಜಿ.ಎಫ್‌ನ 'ಚಾಲುಕ್ಯ ಕಲಾಕೇಂದ್ರ' ೧೯೮೭ರಲ್ಲಿ ಆರಂಭವಾಗಿದ್ದು, ಪ್ರತಿ ವರ್ಷ ಕಲಾ ಉತ್ಸವ ನಡೆಸುತ್ತಿದ್ದು ಕಲಾಕೃತಿಗಳ ಪ್ರದರ್ಶನ, ಶಾಲಾವಿದ್ಯಾರ್ಥಿಗಳಿಗೆ ಸ್ಥಳದಲ್ಲಿಯೇ ಚಿತ್ರ ರಚಿಸುವ ಸ್ಪರ್ಧೆ, ಹಿರಿಯ ಕಲಾವಿದರನ್ನು ಆಹ್ವಾನಿಸಿ ಕಲೆಯ ಬಗ್ಗೆ ವಿಚಾರಗೋಷ್ಠಿ, ಪಾರದರ್ಶಿಕೆ ಪ್ರದರ್ಶನ, ಕಲಾಪರಿಚಯ, ರಸಗ್ರಹಣ ಶಿಬಿರ ಇತ್ಯಾದಿಗಳನ್ನು ನಡೆಸುತ್ತಾ ಬಂದಿದೆ. ಛಾಯಾಚಿತ್ರಕಲೆಗೂ ಇದೇ ಬಗೆಯ ಪ್ರೋತ್ಸಾಹ

ನೀಡಲಾಗುತ್ತಿದೆ. ಛಾಯಾಗ್ರಾಹಕರಾದ ಎಸ್.ಹರಿನಾರಾಯಣ. ವಿ.ಎನ್.ಪ್ರಕಾಶ್, ಕಲಾವಿದರಾದ ಅರವಿಂದ ಕಟ್ಟಿ, ವೇದಮೂರ್ತಿ, ಎಂ.ಕೆ.ಹೆಗಡೆ, ವಿ.ಬಿ.ದೇಶಪಾಂಡೆ, ಕಲಾವಿಮರ್ಶಕ ಶೇ.ನಾ.ಕುಲಕರ್ಣಿ ಮುಂತಾದವರ ನಿರ್ದೇಶನದಲ್ಲಿ ನಡೆಯುತ್ತಿದ್ದು ಜಿಲ್ಲೆಯ ಬಹಳಷ್ಟು ಕಲಾವಿದರು ಈ ಸಂಘಟನೆಯೊಂದಿಗೆ ಸಂಪರ್ಕ ಇರಿಸಿಕೊಂಡಿದ್ದಾರೆ. ಬೂದಿಕೋಟೆಯ ವಿ.ವೆಂಕಟಪ್ಪ ಅವರು ೧೯೯೧ರಲ್ಲಿ ವಿವೇಕ ಕಲಾ ನಿಕೇತನ ಆರಂಭಿಸಿದ್ದು ಗ್ರಾಮೀಣ ಪ್ರದೇಶದಲ್ಲಿ ಕಲಾ ಸಂಸ್ಕೃತಿಯನ್ನು ಬೆಳೆಸುತ್ತಿದ್ದಾರೆ. ಬಿ.ವಿ.ಲೋಕೇಶ್ ಗುಲ್ಜಾರ್, ಚೆನ್ನಪ್ಪ, ಕೃಷ್ಣ, ಅಶೋಕ್, ಮುನಿಯಪ್ಪ, ಶಶಿಕಲಾ ಮುಂತಾದವರು ಸಂಘಟನೆಯಲ್ಲಿದ್ದಾರೆ.

## ಛಾಯಾಚಿತ್ರ

ಕೋಲಾರ ಜಿಲ್ಲೆಯಲ್ಲಿ ಛಾಯಾಚಿತ್ರ ಗ್ರಾಹಕರು ಹಲವಾರು ಮಂದಿ ಇದ್ದು ಸಂಘಟನೆಯೊಂದು ಆರಂಭವಾಗಿದ್ದಂತೆ ಕಂಡುಬರುತ್ತದೆ. ಈ ಕ್ಷೇತ್ರದಲ್ಲಿ ಹೆಸರು ಪಡೆದವರೆಂದರೆ ಮಾಲೂರಿನವರಾದ ಕೇಸರಸಿಂಗ್ ಅವರು (೧೯೦೧–೧೯೯೩) ಮೊದಲಲ್ಲಿ ಚಿತ್ರಕಲೆ, ವ್ಯಂಗ್ಯ ಚಿತ್ರಕಲೆಯಲ್ಲಿ ಅಭಿವ್ಯಕ್ತಿಸುತ್ತಿದ್ದ ಸಿಂಗ್ ಅವರು ೧೯೩೦ರಲ್ಲಿ ಅ.ನ.ಸುಬ್ಬರಾಯರ ಕಲಾಮಂದಿರದಲ್ಲಿ ಚಿತ್ರಕಲೆ ಅಭ್ಯಸಿಸಿ, ಕಲಾಕೃತಿ ಹಾಗೂ ಕಲೆಯ ಬಗ್ಗೆ ಲೇಖನಗಳನ್ನು ಬರೆದು ಪತ್ರಿಕೆಗಳಿಗೆ ಕಳಿಸುತ್ತಿದ್ದರು. ನಂತರ ಛಾಯಾಚಿತ್ರ ಕ್ಷೇತ್ರಕ್ಕೆ ಒಲಿದರು. ಬೆಂಗಳೂರಲ್ಲಿ ೧೯೩೩ರಲ್ಲೇ ಠಾಕೂರ್ ಆರ್ಟ್ ಸ್ಟುಡಿಯೋ ಆರಂಭಿಸಿ, ಎಸ್.ಜೆ.ಪಾಲಿಟೆಕ್ನಿಕ್‌ನ ಛಾಯಾಚಿತ್ರ ವಿಭಾಗದಲ್ಲಿ ಉಪಾಧ್ಯಾಯರಾಗಿ, ನಂತರ ರಾಜ್ಯ ವಾರ್ತಾ ಇಲಾಖೆಯಲ್ಲಿ ಛಾಯಾಗ್ರಾಹಕ ಹುದ್ದೆಗೆ ಸೇರ್ಪಡೆಯಾದರು. ರಾಜ್ಯಾದ್ಯಂತ ಅನೇಕ ಬಾರಿ ಸಂಚರಿಸಿ ಪ್ರಮುಖ ಶಿಲ್ಪ, ವಾಸ್ತುಶಿಲ್ಪ, ಪ್ರಕೃತಿ ಸೌಂದರ್ಯ, ಸಮುದ್ರ, ಜಲಪಾತ, ಸಾಂಸ್ಕೃತಿಕ ದೃಶ್ಯಗಳು ಮುಂತಾದವುಗಳಲ್ಲದೆ ಔದ್ಯೋಗಿಕ, ಶೈಕ್ಷಣಿಕ, ವೈದ್ಯಕೀಯ ಇತ್ಯಾದಿಗಳಿಗೆ ಸಂಬಂಧಿಸಿದ ಕಟ್ಟಡಗಳ ಚಿತ್ರಗಳನ್ನು ತೆಗೆದಿದ್ದು ಅಂದಿನ ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಕಟಣೆಗಳಲ್ಲದೆ ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಗ್ರಂಥಗಳಲ್ಲಿ ಸಾವಿರಾರು ಚಿತ್ರಗಳು ಪ್ರಕಟವಾಗಿವೆ. ಮೈಸೂರು ಫೋಟೋಗ್ರಾಫಿಕ್ ಸೊಸೈಟಿಯ ಸದಸ್ಯ, ಪ್ರೆಸ್ ಫೋಟೋಗ್ರಾಪರ್ಸ್ ಸೊಸೈಟಿಯ ಅಧ್ಯಕ್ಷ, ಬ್ರಿಟನ್ನಿನ ರಾಯಲ್ ಫೋಟೋಗ್ರಾಫಿಕ್ ಸೊಸೈಟಿಯಿಂದ ಎ.ಆರ್.ಪಿ.ಎಸ್ ಬಿರುದು, ಛಾಯಾಗ್ರಹಣ ಚತುರ ಬಿರುದು ಇತ್ಯಾದಿಗಳು ಅವರ ಪಾಲಿಗೆ ದಕ್ಕಿದ್ದವು. ಕೇಸರ ಸಿಂಗ್ ಅವರ ನಿಧನಾನಂತರ ಅವರ ಮಗ ಚಂದ್ರಬಾಬು ಸಿಂಗ್ ಅವರು ತಂದೆಯವರ ಕೃತಿಗಳನ್ನು ವ್ಯವಸ್ಥೆಯಾಗಿರಿಸಿದ್ದು ಆಸಕ್ತರಿಗೆ ಲಭ್ಯವಾಗುವಂತೆ ನೆರವಾಗುತ್ತಿದ್ದಾರಲ್ಲದೆ, ಸ್ವತಃ ಉತ್ತಮ ಛಾಯಾಚಿತ್ರ ಗ್ರಾಹಕರೂ ಆಗಿದ್ದಾರೆ. ಉಳಿದಂತೆ ಜಿಲ್ಲೆಯಲ್ಲಿ ಹಲವಾರು ಛಾಯಾಚಿತ್ರ ಗ್ರಾಹಕರಿದ್ದು ಜಿ.ನಾರಾಯಣಸ್ವಾಮಿ ಅವರು ಕೋಲಾರ ಚಿನ್ನದ ಗಣಿ ಪ್ರದೇಶಕ್ಕೆ ಭೇಟಿ ನೀಡಿದ ಬಾಬುರಾಜೇಂದ್ರಪ್ರಸಾದ್, ಜವಹರಲಾಲ್‌ನೆಹರು ಮೊದಲಾದವರಿಂದ ಹಿಡಿದು ಜಿಲ್ಲೆಯ ಅತಿವೃಷ್ಟಿ–ಅನಾವೃಷ್ಟಿಯವರೆಗೆ ಅನೇಕ ಸಂದರ್ಭಗಳನ್ನು ಛಾಯಾಚಿತ್ರದಲ್ಲಿ ದಾಖಲಿಸಿದ್ದಾರೆ. ಶೇಖರ್ ಸ್ಟುಡಿಯೋದ ಜಿ.ಸೋಮಶೇಖರ್ ಜಿಲ್ಲೆಯ ವಾಸ್ತುಶಿಲ್ಪ, ಶಿಲ್ಪ, ಪ್ರಕೃತಿ ಚಿತ್ರಣ, ಜನಪದ ಕಲೆಗಳು ಇವೇ ಮುಂತಾದವನ್ನು ಸೆರೆಹಿಡಿದಿದ್ದಾರೆ. ಕೋಲಾರದ ಛಾಯಾಗ್ರಾಹಕ ಕೆ.ಎಸ್. ನಾಗರಾಜ್ (೧೯೪೪) ಬೆಮೆಲ್‌ನ ಉದ್ಯೋಗಿಯಾಗಿದ್ದವರು. ವರ್ಣ ಛಾಯಾಚಿತ್ರಗಳಿಗಿಂತಲೂ ಕಪ್ಪುಬಿಳುಪಿನಲ್ಲಿ ಹಲವರು ಪ್ರಯೋಗಗಳನ್ನು ಮಾಡಿ ಯಶಕಂಡವರು. ನಾಡಿನ ಅನೇಕ ಪ್ರಸಿದ್ಧ ಪತ್ರಿಕೆಗಳಲ್ಲಿ ಶ್ರೀಯುತರ ಸುಂದರ ಚಿತ್ರಗಳು ಪ್ರಕಟವಾಗಿವೆ. ಕೋಲಾರ ಪತ್ರಿಕೆ ಜೊತೆಯಲ್ಲಿ ಚಾಲುಕ್ಯ ಕಲಾಕೇಂದ್ರ, ಕೋಲಾರ ಫೋಟೋಗ್ರಫಿ ಸೊಸೈಟಿ ಆಶ್ರಯದಲ್ಲಿ ರಾಜ್ಯಮಟ್ಟದ ಛಾಯಾಚಿತ್ರ ಸ್ಪರ್ಧೆಯನ್ನು ನಡೆಸಿದ್ದಾರೆ. ನಿವೃತ್ತಿಯ ನಂತರವೂ ಛಾಯಾಗ್ರಹಣ ಕಲೆಯಲ್ಲಿನ ಹೊಸ ತಂತ್ರಜ್ಞಾನಗಳ ಕಲಿಕೆಗೆ ಆಸಕ್ತಿ ತೋರಿಸಿದ್ದಾರೆ. ಕೆ.ಜಿ.ಎಫ್‌ನ ವಿ.ಎನ್.ಪ್ರಕಾಶ್ ಅವರು ಕಪ್ಪುಬಿಳುಪು ಛಾಯಾಗ್ರಹಣದಲ್ಲಿ ಪರಿಣಿತರಿದ್ದು ಕಲಾತ್ಮಕವಾದ ಚಿತ್ರಗಳನ್ನು ಹಲವಾರು ಕಡೆಗಳಲ್ಲಿ ಪ್ರದರ್ಶಿಸಿದ್ದಾರೆ.

ವರ್ಣಪಾರದರ್ಶಿಕೆಗಳಲ್ಲಿ ನಿಸರ್ಗದ ಸೊಬಗು ಚಿತ್ರಿಸಿದ್ದಾರೆ. ಎನ್.ಲಕ್ಷ್ಮೀನಾರಾಯಣ್, ಕೆ.ಎಂ.ನಾರಾಯಣಸ್ವಾಮಿ ಅವರುಗಳು ಕಲಾತ್ಮಕ ಹಾಗೂ ವನ್ಯಜೀವಿಗಳ ಚಿತ್ರಣಕ್ಕೆ ಹೆಸರಾಗಿದ್ದಾರೆ. ಇದೇ ರೀತಿ ಜಿ.ಪ್ರಸನ್ನಕುಮಾರ್, ಕೆ.ಆರ್.ಶಂಕರ್, ಚಂದನ ಚಂದ್ರಶೇಖರ್, ರೂಪಸಿ ರಮೇಶ್, ಹಾಬಿ ರಮೇಶ್, ಕೃ.ಲಿ.ಚಂದ್ರಶೇಖರ್. ಸರ್ವಜ್ಞಮೂರ್ತಿ ಮುಂತಾದವರನ್ನು ಹೆಸರಿಸಬಹುದು. ಚಿಂತಾಮಣಿಯ ಬಿ.ಆರ್.ಶಂಕರ್ ಅವರು ಪಾರಂಪರಿಕವಾಗಿ ಛಾಯಾಚಿತ್ರಗಾರರಾಗಿದ್ದು ಅವರ ತಂದೆ ಸಹ ಈ ಕಲೆಯಲ್ಲಿ ಹೆಸರು ಮಾಡಿದ್ದರು. ಶಂಕರ್ ಅವರು ಈಚೆಗೆ ಕಂಪ್ಯೂಟರ್ ಬಳಸಿ ಅನೇಕ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದು ವಿಸ್ತೃತವಾದ ತೈಲವರ್ಣದ ಕೃತಿಗಳಂತೆ, ನೆರಳು–ಬೆಳಕುಗಳಿಂದ ಕೂಡಿದ ಕಲಾತ್ಮಕವಾದ ಛಾಯಾಚಿತ್ರಣಗಳಲ್ಲಿ ನಿರತರಾಗಿದ್ದಾರೆ. ಬೆಂಗಳೂರಿನಲ್ಲಿ ಶಾಖೆಯೊಂದನ್ನು ತೆರೆದಿದ್ದಾರೆ.

## ವಾಸ್ತುಶಿಲ್ಪ, ಶಿಲ್ಪ

ಕೋಲಾರ ಜಿಲ್ಲೆ ಹಲವಾರು ರಾಜಮನೆತನಗಳಿಗೆ ಆಶ್ರಯ ನೀಡಿದ್ದು, ಅವರುಗಳ ಕಾಲದ ಶಿಲ್ಪ ವಾಸ್ತುಶಿಲ್ಪಗಳು ಜಿಲ್ಲೆಯಾದ್ಯಂತ ಕಂಡುಬರುತ್ತದೆ. ಬಾಣ–ನೊಳಂಬದಿಂದ ಆರಂಭಿಸಿ ಗಂಗ–ಚೋಳ ಮುಂದೆ ವಿಜಯನಗರ ನಾಯಕರ ಕಾಲದವರೆಗೂ ವಾಸ್ತುಶಿಲ್ಪಗಳ ರಚನೆ ಕಾಣಬಹುದು. ಇಡೀ ರಚನೆಯಲ್ಲಿ ಆಯಾ ಕಾಲದ ಗುರುತು, ರಾಜಮನೆತನಗಳ ಅಭಿರುಚಿ ಕಂಡುಬರುತ್ತದೆಯಾದರೂ ಒಟ್ಟಾರೆಯ ರಚನೆಗಳು 'ದ್ರಾವಿಡ ಶೈಲಿ' ಎಂದೇ ಪ್ರತ್ಯೇಕವಾಗಿ ಗುರುತಿಸುವಂತಿವೆ. ಇತ್ತ ಐಹೊಳೆಯ ಕೆಲವು ದೇವಾಲಯಗಳು ಅತ್ತ ಮಹಾಬಲಿಪುರದ ದೇವಾಲಯಗಳನ್ನು ನೆನಪಿಸುವಂತೆ ಉದ್ದದಲ್ಲಿ ಹೆಚ್ಚಾದ, ಎತ್ತರ ಕಿರಿದಾದ, ಗರ್ಭಗುಡಿಯ ಮೇಲೆ ಚೌಕಾಕಾರದ ಗೋಪುರಗಳು ಭಿತ್ತಿಯಿಂದಲೇ ಕಿರಿದಾಗುತ್ತಾ ಮೇಲ್ಭಾಗದ ಶಿಖರದಲ್ಲಿ ಅಷ್ಟಕೋನಾಕೃತಿಯ ಅಮಲಕದಿಂದ ಕೂಡಿರುವುದನ್ನು ಗುರುತಿಸಬಹುದು. ಹೊರಭಿತ್ತಿಯೂ ಸಪಾಟಾಗಿ ಅಲ್ಲಲ್ಲಿ ಸ್ವಲ್ಪ ಮುಂದೆ ಬಂದಿರುವ ಕಂಬಗಳು ಹಿಂಚಾಚು ಮುಂಚಾಚುಗಳಿಂದ ಕೂಡಿದ ಅಧಿಷ್ಠಾನ ಮುಂತಾದುವೆಲ್ಲ ಸರಳ ಸುಂದರ ರಚನೆಗಳು. ಹೊರಭಿತ್ತಿಯಲ್ಲಿ, ಭಿತ್ತಿ ಹಾಗೂ ಛತ್ತು ಸೇರುವಲ್ಲಿ ಕೆಲವು ಉಬ್ಬುಶಿಲ್ಪಗಳೂ ಇರಬಹುದಾದರೂ ಹೆಚ್ಚಾದ ಅಲಂಕಾರದಿಂದ ಕೂಡಿರುವುವಲ್ಲ.

ಜಿಲ್ಲೆಯಲ್ಲಿ ಇತಿಹಾಸ ಪೂರ್ವದ ಉತ್ಖನನಗಳು ನಡೆದಿದ್ದು ಅನೇಕ ಸ್ಥಳಗಳನ್ನು ಗುರುತಿಸಿದರೂ ಅವುಗಳಲ್ಲಿ ಶಿಲ್ಪ ಅಥವ ಅವುಗಳನ್ನು ಹೋಲುವಂತಹ ವಸ್ತುಗಳು ದೊರೆತಿರುವುದು ಕಡಿಮೆ. ಬೃಹದಾಕಾರದ ಚಪ್ಪಡಿಗಳಿಂದ ಮುಚ್ಚಿರುವ ಸಮಾಧಿ ಮನೆಗಳು ಆವನಿ ಬಳಿ ಕಂಡುಬರುತ್ತವೆ. ನೈಸರ್ಗಿಕ ಗುಹಾಲಯ ಅಥವ ಮುಚ್ಚಿದ ಶಿಲಾಶ್ರಯಗಳು ನಂದಿ, ಸೀತಿಬೆಟ್ಟ, ಪ್ರದೇಶದಲ್ಲಿವೆ. ಚಿನ್ನದಗಣಿ ಪ್ರದೇಶದಲ್ಲಿ ೧೯೪೪ರ ಸುಮಾರಿನಲ್ಲಿ ಬೋಗುಣಿಯಂತಹ ಕಲ್ಲಿನಪಾತ್ರೆ ಹಾಗೂ ಲೋಹ ಬಡಿಯುವ ಬಡಿಗಲ್ಲುಗಳು ಗಣಿಗಾರಿಕೆಯ ಸಂದರ್ಭದಲ್ಲಿ ದೊರೆತಿದ್ದು ಅವು ಇತಿಹಾಸ ಪೂರ್ವದ್ದೆಂದು ತಿಳಿಯಲಾಗಿದೆ. ಈ ಬಗೆಯ ಉಪಕರಣಗಳು ಬಳ್ಳಾರಿ, ರಾಯಚೂರು ಪ್ರದೇಶದಲ್ಲಿ ದೊರೆತಿದ್ದು ಈ ಪ್ರದೇಶದೊಂದಿಗೆ ಸಂಬಂಧವಿದ್ದಿರಬಹುದು. ಕಲ್ಲಿನಪಾತ್ರೆ ಅದಿರನ್ನು ಕುಟ್ಟಿ ಪುಡಿಮಾಡಲು ಬಳಸುತ್ತಿದ್ದಿರಬಹುದು. ದೊಡ್ಡ ಹಾಗೂ ಕಿರಿಯ ಆಕಾರದ ಎರಡು ಒರಳುಕಲ್ಲಿನ ಪಾತ್ರೆಗಳು ದೊರೆತಿದ್ದು ದೊಡ್ಡದನ್ನು ಬಡಿಗಲ್ಲಿನೊಂದಿಗೂ ಚಿಕ್ಕದನ್ನು ಅದಿರುಪುಡಿ ಮಾಡಲೂ ಬಳಸುತ್ತಿದ್ದಿರಬೇಕೆಂದು ವಿದ್ವಾಂಸರ ಅಭಿಪ್ರಾಯ. ಸೀತಿಗುಡ್ಡದ ಶಿಲಾಶ್ರಯವೊಂದರ ಬಳಿ ನಯಗೊಳಿಸಿದ ಕಲ್ಲಿನ ಬೋಗುಣಿ ಹಾಗೂ ಹತ್ತಾರು ಪಾತ್ರೆಗಳನ್ನು ಪತ್ತೆಹಚ್ಚಲಾಗಿದ್ದು ಈ ಪಾತ್ರೆಗಳು ಐದಾರು ಅಂಗುಲ ಆಳವಾಗಿಯೂ ಸುಮಾರು ಒಂದು ಅಡಿ ವ್ಯಾಸವುಳ್ಳದ್ದೂ ಆಗಿವೆ. ಮಾಲೂರಿನ ಬನಹಳ್ಳಿಯ ಉತ್ಖನನದಲ್ಲಿ ಕಲ್ಲು ಆಯುಧಗಳು, ಕೆಂಪು–ಕಪ್ಪು ಮಡಕೆ ಚೂರು ದೊರೆತಿದ್ದು, ಇವು ಕ್ರಿ.ಪೂ.೧೮೦೦ರಿಂದ ಕ್ರಿ.ಪೂ.೬೦೦ರ ಅವಧಿಯದೆಂದು ಗುರುತಿಸಲಾಗಿದೆ.

ಇವು ಶಿಲ್ಪಕಲೆಯ ಆರಂಭದ ಹೆಜ್ಜೆಗಳು. ಮಾಲೂರಿನ ನೊಸಗೆರೆಯಲ್ಲಿ ಕ್ರಿ.ಶ.೧೯೩–೨೧೧ರ ಕಾಲಕ್ಕೆ ಸೇರಿದ ರೋಮನ್ ಚಕ್ರವರ್ತಿ ಸೆಪ್ಟಿಯಸ್ ಸೆವೆರಸ್‌ನ ನಾಣ್ಯಗಳ ಮಾದರಿಯ ಪದಕಗಳು ದೊರೆತಿದ್ದು, ಅವುಗಳ ಮೇಲೆ ಚಕ್ರವರ್ತಿಯ ಪಾರ್ಶ್ವನೋಟದ ಉಬ್ಬು ಶಿಲ್ಪಗಳಿವೆ. ಇವನ್ನು ಸ್ಥಳೀಯವಾಗಿ ತಯಾರಿಸಿರಬಹುದೆಂದು ಇವುಗಳನ್ನು ಪತ್ತೆ ಹಚ್ಚಿದ ಪುರಾತತ್ವ ಶಾಸ್ತ್ರಜ್ಞ ಆರ್.ಗೋಪಾಲ್ ಅವರು ಅಭಿಪ್ರಾಯಪಡುತ್ತಾರೆ. ಅಲ್ಲದೆ ಗೋಪಾಲ್ ಅವರೇ ಜಿಲ್ಲೆಯಲ್ಲಿ, ಮೊಘಲ್, ಟಿಪ್ಪುವಿನದೂ ಸೇರಿದಂತೆ ಬೇರೆಬೇರೆ ಇಪ್ಪತ್ತೊಂಬತ್ತು ಸ್ಥಳಗಳಲ್ಲಿ ಹೂತಿಟ್ಟ ನಾಣ್ಯಗಳ ನಿಕ್ಷೇಪಗಳನ್ನು ಪತ್ತೆ ಹಚ್ಚಿದ್ದು ಅವುಗಳ ಮೇಲಿನ ಶಾಸನ/ಶಿಲ್ಪಗಳ ಅಧ್ಯಯನ ಮಾಡಿದ್ದಾರೆ. ಉಳಿದಂತೆ ನೂತನ ಶಿಲಾಯುಗದ ಉಪಕರಣಗಳನ್ನು ಹುನಗುಂದ, ಹುನಕುಂದಪಟ್ಟಣ, ಮುರುಗಮಲ್ಲೆ, ಗರುಡನಹಳ್ಳಿ, ಕೋಲಾರಬೆಟ್ಟ, ಆವನಿ, ಕೋಳಿಗುಡ್ಡ, ಗರುಡನಪಾಳ್ಯ, ಪರಂದಪಳ್ಳಿ, ಹರಳಕೋಟೆ, ಪೆರಿಸಂದ್ರ, ಮಾಸಳ್ಳಿ ಹಾಗೂ ಅರಾಬಿ ಕೊತ್ತನೂರು ಇತ್ಯಾದಿಗಳ ಕಡೆಗಳಲ್ಲಿ ಗುರುತಿಸಲಾಗಿದೆ (ಇತಿಹಾಸ ಪೂರ್ವಕಾಲದ ಬಗ್ಗೆ ಅಧ್ಯಾಯ ಎರಡು–ನೋಡಿ).

ಚಿಂತಾಮಣಿ ತಾಲೂಕಿನ ಸಂತೆಕಲ್ಲಹಳ್ಳಿಯ ಬೂದಿ ಹೊಲವೊಂದರಲ್ಲಿ ೧೯೭೩ರ ಸುಮಾರಿನಲ್ಲಿ ಅನೇಕ ಕುತೂಹಲಕರ ಮೃತ್ ಪಾತ್ರೆಗಳು ದೊರೆತವು. ಅವುಗಳಲ್ಲಿ ಮುಖ್ಯವಾಗಿ ಕ್ರಿ.ಶ. ೮ನೇ ಶತಮಾನದ ಕೆಲವು ಕನ್ನಡ–ತೆಲುಗು ಲಿಪಿಗಳಿರುವ ಮಡಕೆಯೊಂದು ದೊರೆತಿದ್ದು ತೀರ ಅಪರೂಪದ ಶೋಧವಾಗಿದೆ. ಅಂತೆಯೇ ಮುಚ್ಚಳಗಳು, ಶಿಲಾಯುಧಗಳು ಹಲವಾರು ವಿನ್ಯಾಸಗಳಿಂದ ಕೂಡಿದ ಮಡಕೆಯ ಚೂರುಗಳು. ದರ್ಜಿಗಳು ದಾರವನ್ನು ಸುತ್ತುವ ಕೊಳವೆಯಂತಹ ವಸ್ತು (ಗುರುತಿಸಲಾಗದಂತಹ ಲಿಪಿ ಇರುವ), ಶಿವಲಿಂಗ ಹಾಗೂ ನಂದಿ ವಿಗ್ರಹವುಳ್ಳ ಬಟ್ಟಲು ಹಾಗೂ ಮುಖ್ಯವಾಗಿ ಕಿರೀಟದಂತಹ ಟೋಪಿ ಧರಿಸಿರುವ ವ್ಯಕ್ತಿಯೊಬ್ಬನ ಮುಖಭಾವವುಳ್ಳ ಶಿಲ್ಪ ಇತ್ಯಾದಿಗಳು ದೊರೆತಿವೆ. ಗಂಗರ ಎಂಟನೇ ಶತಮಾನದ ತಾಮ್ರ ಶಾಸನ ಸಹ ಇಲ್ಲಿ ದೊರೆತಿದೆ. ಈ ಎಲ್ಲಾ ವಸ್ತುಗಳು ಎಂಟನೇ ಶತಮಾನದ್ದಾಗಿದ್ದು ಐತಿಹಾಸಿಕ ಕಾಲಕ್ಕೆ ಸೇರಿಸಬಹುದಾಗಿದೆ.

ಜಿಲ್ಲೆಯಾದ್ಯಂತ ಅನೇಕ ಗುಹಾಂತರ ಹಾಗೂ ಶಿಲಾಶ್ರಯದ ದೇವಾಲಯಗಳಿದ್ದು ಮೊದಲಿಗೆ ಅವು ಆದಿಮ ಜನರ ವಾಸಸ್ಥಾನವಾಗಿದ್ದಿರಬಹುದು. ಹುನಕುಂದ ಪಟ್ಟಣದ ಬಳಿಯಲ್ಲಿ ಕೆಲವು ಶಿಲಾಶ್ರಯಗಳಲ್ಲಿ ಮಡಕೆಯಚೂರುಗಳು ದೊರೆತಿದ್ದು ಶಾತವಾಹನರ ಕಾಲದ್ದೆಂದು ತಿಳಿಯಲಾಗಿದೆ. ಆವನಿ ಬಳಿಯ ಗುಹಾಲಯವೊಂದರಲ್ಲಿ ಋಷಿಯೊಬ್ಬನ ಉಬ್ಬು ಶಿಲ್ಪವಿದೆ. ಮುಳಬಾಗಿಲ ಬಳಿಯಿರುವ ಬೆಟ್ಟದ ಭಾಗದಲ್ಲಿ ಸ್ವಲ್ಪಮಟ್ಟಿಗೆ ಆಳವಾಗಿ ಕೊರೆದಂತಿರುವ ಗುಹಾಲಯದಲ್ಲಿ ಅಂತ್ಯವಾಗುವ ಭಿತ್ತಿಯಲ್ಲಿ ಸ್ತ್ರೀದೇವತೆಯ ಉಬ್ಬುಶಿಲ್ಪವಿದ್ದು ಸ್ಥಳೀಯವಾಗಿ 'ನಾಚ್ಯಾರಮ್ಮ' ಎಂದು ಕರೆಯಲಾಗುತ್ತದೆ. ದೇವಾಲಯದ ಹೊರಗೆ ಬಂಡೆಯ ಮೇಲೆ ೧೪೧೬ರ ಶಾಸನವಿದೆಯಾದರೂ ಒಳಗಿನ ದೇವಿ ಶಿಲ್ಪ ಪುರಾತನವೆಂದೇ ಹೇಳಬಹುದು. ಗುಹಾಲಯದ ಆರಂಭದಲ್ಲಿ ಮುಖಮಂಟಪವಿದೆ. ಇದೇ ರೀತಿಯ ಮುಖಮಂಟಪ ಹಾಗೂ ಗರ್ಭಗೃಹದಿಂದ ಕೂಡಿದ ನರಸಿಂಹದೇವರಿರುವ ಗುಹಾಲಯ ಗುಡಿಬಂಡೆಯ ಬಳಿಯೂ ಇದೆ. ಸೀತಿಬೆಟ್ಟದ ಸಾಕಷ್ಟು ದೊಡ್ಡದಾದ ಗುಹಾಲಯ ಇಂದು ಭೈರವೇಶ್ವರ ದೇವಾಲಯದಿಂದ ಪ್ರಸಿದ್ಧವಾದರೂ ಇಲ್ಲಿರುವ ಶ್ರೀಪತೇಶ್ವರ ಉದ್ಭವ ಲಿಂಗ ಕುರಿತು ಕುಲೋತ್ತಾಂಗ ಚೋಳನ ೧೦೭೧ರ ಶಾಸನ ತಿಳಿಸಿದ್ದು ಇಡೀ ಸಮುಚ್ಛಯ ಇನ್ನೂ ಪುರಾತನವಾದ ರಚನೆ. ನಂದಿ ಬೆಟ್ಟದ ಬಳಿಯ ಗೋಪಿನಾಥ ಶಿಲಾಶ್ರಯ ನೂರಾರು ಅಡಿಗಳಷ್ಟು ವಿಸ್ತಾರವಾಗಿದ್ದು ಇಟ್ಟಿಗೆ ಗಾರೆಗಳಿಂದ ದೇವಾಲಯ ರಚನೆಯನ್ನು ಮಾಡಿದೆ.

ಕುರುಡಮಲ್ಲೆಯಲ್ಲಿ ಬುದ್ಧನ ಶಿಲ್ಪವೊಂದು ಸಿಕ್ಕಿರುವುದಾಗಿ ಆರ್.ನರಸಿಂಹಾಚಾರ್ಯರು ತಿಳಿಸಿದ್ದು ಅದು ಮೂಲತಃ ಶ್ರೀನಿವಾಸಪುರದ ಹರಳುಕೋಟೆಯದಿರಬಹುದೆಂದು ಊಹಿಸಲಾಗಿದೆ. ತುಮಕೂರು

ಜಿಲ್ಲೆಯ ಮೆಳೆಕೋಟೆಯ ಎರಡನೇ ಮಾಧವನ ಶಾಸನದಲ್ಲಿ ಉಕ್ತವಾಗಿರುವ ಆವನಿ ನದಿಯ ಉಲ್ಲೇಖವನ್ನು ಬಳಸಿಕೊಂಡು, ಹರಳುಕೋಟೆಯಲ್ಲಿ ಇಂದಿಗೆ ಇರುವ ಇಟ್ಟಿಗೆಯ ಅವಶೇಷ ಆಧರಿಸಿ ಎಂ.ಜಿ.ಮಂಜುನಾಥ್ ಅವರು ಈ ಪ್ರದೇಶದಲ್ಲಿ ಒಂದು–ಎರಡನೇ ಶತಮಾನದಲ್ಲಿ ಬೌದ್ಧ ಧರ್ಮ ಪ್ರಚಾರದಲ್ಲಿತ್ತೆಂದು ಊಹಿಸುತ್ತಾರೆ. ಒಂಬತ್ತನೇ ಶತಮಾನದ ಭೋಗಾನಂದೀಶ್ವರ ದೇವಾಲಯದ ಹೊರಭಿತ್ತಿಯಲ್ಲಿಯೂ ಬುದ್ಧನ ಶಿಲ್ಪವೊಂದನ್ನು ಗುರುತಿಸಲಾಗಿದೆ.

ಪ್ರಾಚೀನ ಜೈನ ಶಿಲ್ಪ, ವಾಸ್ತುಶಿಲ್ಪಗಳು ಜಿಲ್ಲೆಯಲ್ಲಿ ಕೆಲವೆಡೆ ದೊರೆತಿದ್ದು ಮಾಲೂರಿನ ನೋಣಮಂಗಲದಲ್ಲಿ ಹಾಗೂ ನಂದಿ ಬಳಿಯ ಗೋಪಿನಾಥ ಗುಡ್ಡದಲ್ಲಿ (ಈಗಿರುವ ಗೋಪಾಲ ಕೃಷ್ಣ ದೇವಾಲಯವೇ) ಶಾಸನೋಕ್ತ ಜೈನ ಬಸದಿಗಳನ್ನು ಗುರುತಿಸಲಾಗಿದೆ. ಬಂಗಾರಪೇಟೆ ರಸ್ತೆಯ ರಾಜಪ್ಪ ಮಠದ ಬಳಿ; ಕೋಲಾರದ ಬಂಡಿ ಮಾಂಕಾಳಮ್ಮ ದೇವಾಲಯದ ಮುಂದೆ, ಕೆ.ಜಿ.ಎಫ್.ನ ಚಾಂಪಿಯನ್ ರೀಫ್ ಪ್ರವೇಶದ್ವಾರದಲ್ಲಿಯಲ್ಲದೆ ಆರಾಬಿಕೊತ್ತನೂರು, ಗಾಂಡ್ಲಹಳ್ಳಿ, ಮತ್ತಕಪಲ್ಲಿ, ಮೋತಕಪಲ್ಲಿ, ತೊಟ್ಲಿ ಇತ್ಯಾದಿ ಕಡೆಗಳಲ್ಲಿ ಜಿನಬಿಂಬ/ಜೈನಾವಶೇಷಗಳು ದೊರೆತಿವೆ.

ಬಿಡಿ ದೇವಾಲಯಗಳ ರಚನೆ ಜಿಲ್ಲೆಯಲ್ಲಿ ೮–೯ನೇ ಶತಮಾನದಿಂದಲೇ ಆರಂಭವಾದಂತೆ ತೋರುತ್ತದೆ. ಬಂಗಾರಪೇಟೆಯ ಬೇತಮಂಗಲದ ವಿಜಯೇಂದ್ರ ದೇವಾಲಯ ಅಲ್ಲಿಯ ೯೫೦ರ ಶಾಸನಕ್ಕಿಂತ ಹಿಂದೆ ರಚಿತವಾದ ದೇವಾಲಯ. ಭವ್ಯವೂ ಸರಳ ಸುಂದರವೂ ಆದ ಕೆಲವೇ ದೇವಾಲಯಗಳಲ್ಲಿ ಒಂದೆಂದು ಹೇಳಬಹುದಾದುದು ನಂದಿಗ್ರಾಮದ ಭೋಗಾನಂದೀಶ್ವರ ಹಾಗೂ ಅರುಣಾಚಲೇಶ್ವರ ಜೋಡಿ ದೇವಾಲಯಗಳು. ಇಂದು ತಮಿಳುನಾಡಿನ ತಿರುವಾರೂರಿನ ದೇವಾಲಯದ ಒಳಕೈಸಾಲೆಯ ಅರವತ್ತು ಕಂಬಗಳು ಹಾಗೂ ತಂಜಾವೂರಿನ ಬೃಹದೇಶ್ವರ ದೇವಾಲಯದ ಒಂದು ಜಾಲಾಂಧ್ರ (ಈಗ ಅಲ್ಲಿಯ ವಸ್ತುಸಂಗ್ರಹಾಲಯದಲ್ಲಿರುವ)ಗಳನ್ನು ನಂದಿಯ ಮೇಲಿನ ದಾಳಿಯ ಸಂದರ್ಭದಲ್ಲಿ ರಾಜೇಂದ್ರ ಚೋಳ ನಂದಿಯ ಅರುಣಾಚಲೇಶ್ವರ ದೇವಾಲಯದಿಂದ ಕೊಂಡೊಯ್ದನೆಂದು, ಸಿ.ಶಿವರಾಮಮೂರ್ತಿಯವರು ತಿಳಿಸುತ್ತಾರೆ ಎಂದು ಹೇಳುವ ಎಂ.ಎಸ್.ಕೃಷ್ಣಮೂರ್ತಿ ಅವರು ೮೧೦ರಲ್ಲಿ ಬಾಣವಂಶದ ರಾಣಿ ರತ್ನಾವಳಿ ಭೋಗಾನಂದೀಶ್ವರ ನಿರ್ಮಿಸಿದ್ದು, ಮುಂದೆ ನೊಳಂಬರಾಜರು ಅರುಣಾಚಲ ದೇವಾಲಯ ನಿರ್ಮಿಸಿದರೆಂದೂ, ಇಲ್ಲಿರುವ ಭಕ್ತನೊಬ್ಬನ ಮೂರ್ತಿ ರಾಜೇಂದ್ರಚೋಳನದಿರಬಹುದೆಂದೂ ಅಭಿಪ್ರಾಯಪಡುತ್ತಾರೆ. ಅಂತೆಯೇ ಕಂಚಿಯನ್ನು ಗೆದ್ದು ಅಲ್ಲಿಂದ ಶಿಲ್ಪಿಗಳನ್ನು ಬಾದಾಮಿಗೆ ಕರೆದೊಯ್ದು ಚಾಲುಕ್ಯ ವಿಕ್ರಮಾದಿತ್ಯನ ಅಳಿವಿನ ನಂತರ ಶಿಲ್ಪಿಗಳು ಮರಳಿ ಪಲ್ಲವ ರಾಜ್ಯಕ್ಕೆ ಹೋಗುತ್ತಿರುವಾಗ ನಂದಿಯ ಬಳಿಯ ಮಹಾಬಲಿ ಬಾಣರು ಈ ಶಿಲ್ಪಿಗಳ ನೆರವು ಪಡೆದಿದ್ದು ಇಲ್ಲಿಯ ದೇವಾಲಯಗಳನ್ನು ನಿರ್ಮಿಸಿದರೆಂದೂ, ಆ ಕಾರಣದಿಂದ ಅವು ಬಾದಾಮಿ ಹಾಗೂ ನೊಳಂಬ ಪಲ್ಲವ ಶೈಲಿಯಲ್ಲಿರಲು ಕಾರಣವಾಯಿತೆಂದು ತಿಳಿಸುತ್ತಾರೆ. ನಂದಿಬೆಟ್ಟದ ಮೇಲೆ ಇರುವ ಯೋಗಾನಂದೀಶ್ವರ ದೇವಾಲಯವೂ ಹಳೆಯ ರಚನೆ. ಕೋಲಾರದ ಕೋಲಾರಮ್ಮ ದೇವಾಲಯ ಹನ್ನೊಂದನೆಯ ಶತಮಾನದ ಆರಂಭ ಕಾಲದ್ದು. ಆವನಿಯ ದೇವಾಲಯ ಸಮುಚ್ಛಯ ೧೧–೧೨ನೇ ಶತಮಾನದಿಂದ ಆರಂಭವಾಗಿ ನಾಯಕರ ಕಾಲದವರೆಗೂ ಮುಂದುವರಿದು ಬಂದಿರುವುದು ಕಾಣಬಹುದು. ಬೆಳ್ಳೂರಿನ ರಾಮನಾಥ ದೇವಾಲಯ ೧೧೫೩ರದ್ದಾದರೂ ಮೂಲವಿಗ್ರಹ ಕಳೆದಿದ್ದು ಈಗಿರುವುದು ೧೪ನೇ ಶತಮಾನದ್ದೆಂದು ತಿಳಿಯಲಾಗಿದೆ. ಮಡಿವಾಳದ ಸ್ವಯಂಭೂವೇಶ್ವರ ದೇವಾಲಯಕ್ಕೆ ದಾನನೀಡಿದ ಬಗ್ಗೆ ೧೨೦೦ ಕ್ರಿ.ಶ. ಶಾಸನವಿದ್ದು ದೇವಾಲಯ ಆ ವೇಳೆಗೆ ರಚನೆಗೊಂಡಿತ್ತು. ಕೈವಾರದ ಅಮರನಾರಾಯಣ ದೇವಾಲಯದ ಕಾಲ ಅಲ್ಲಿಯ ಶಾಸನವಿರುವ ೧೨೮೩ಕ್ಕೂ ಹಿಂದಿನ ರಚನೆ. ಕುರುಡುಮಲೆ ಹೊಯ್ಸಳರ ಉಪರಾಜಧಾನಿಯಂತಿದ್ದು ಅಲ್ಲಿಯ ಗಣಪತಿ ದೇವಾಲಯದ ಮೂಲ ರಚನೆ ೧೨–೧೩ನೇ ಶತಮಾನದ್ದಾಗಬಹುದು. ಇಲ್ಲಿಯ ಸೋಮೇಶ್ವರ ದೇವಾಲಯವೂ ಸೇರಿದಂತೆ ಮುಳಬಾಗಲ

ಆಂಜನೇಯ, ದೇವರ ಗುಡಿಪಲ್ಲಿಯ ವೆಂಕಟರಮಣ, ಮಾರ್ಕಂಡೇಯ ಬೆಟ್ಟದ ಮಾರ್ಕಂಡೇಶ್ವರ, ಕೋಲಾರದ ಸೋಮೇಶ್ವರ, ವಿರೂಪಾಕ್ಷ ಪುರದ ವಿರೂಪಾಕ್ಷ ಇವೇ ಮುಂತಾದ ದೇವಾಲಯಗಳು ವಿಜಯನಗರ ಕಾಲದವು.

ಜಿಲ್ಲೆಯ ಅಸಂಖ್ಯಾತ ಬಿಡಿಶಿಲ್ಪಗಳನ್ನು ಎರಡು ಬಗೆಯಲ್ಲಿ ಕಾಣಬಹುದು. ದೇವಾಲಯದ ಹೊರಭಿತ್ತಿಗಳಲ್ಲಿ, ಕಂಬಗಳ ಮೇಲೆ ಉಬ್ಬುಶಿಲ್ಪಗಳು ದೇವಾಲಯದ ಒಳಗೆ ಬಿಡಿಶಿಲ್ಪಗಳು ಒಂದಾದರೆ, ವೀರ ಮಾಸ್ತಿಗಳ ನೆನಪಿನ ಕಲ್ಲುಗಳು, ಸ್ಥಂಭ ಇತ್ಯಾದಿಗಳು ಇನ್ನೊಂದು. ನಂದಿಗ್ರಾಮದ ಭೋಗಾನಂದೀಶ್ವರ ದೇವಾಲಯದ ಹೊರಭಿತ್ತಿಯಲ್ಲಿರುವ ಕುಬ್ಜರು ಹಾಗೂ ಮಿಥುನ ಶಿಲ್ಪಗಳು ಬಾದಾಮಿ ಚಾಳುಕ್ಯರ ಶಿಲ್ಪಗಳಂತೆ ಮುದ್ದಾದ ಶಿಲ್ಪಗಳು. ಒಳಗಿನ ಗರ್ಭಗುಡಿಯ ಮುಂದೆ ಇರುವ ಕಲ್ಯಾಣಮಂಟಪ, ಅನೇಕ ಪಶುಪ್ರಾಣಿಗಳಿಂದ ಎಲೆಬಳ್ಳಿಗಳಿಂದ ಕೂಡಿದ್ದು ಕಲ್ಲಿನಲ್ಲಿ ಕೆತ್ತಿದ ಕಾವ್ಯದಂತೆ ತೋರುತ್ತದೆ. ಇದರ ಬಳಿಯಲ್ಲಿ ಶಿಲ್ಪಾಚಾರ್ಯರ ಆರಾಧ್ಯ ದೈವ ಕಮಠೇಶ್ವರ ಸ್ವಾಮಿಗೆ ಪ್ರತ್ಯೇಕ ಗರ್ಭಗುಡಿಯೊಂದು ರಚಿಸಿರುವುದು ಶಿಲ್ಪಿಗಳಿಗೆ ನೀಡಿದ ಗೌರವವೆಂದು ತಿಳಿಯಲಾಗಿದೆ. ನಂದಿಬೆಟ್ಟದ ಮೇಲಿನ ಯೋಗಾನರಸಿಂಹ ದೇವಾಲಯದಲ್ಲಿ ಶೂಲಬ್ರಹ್ಮರೂ ಸೇರಿದಂತೆ ಸೂರ್ಯ, ವೀರಭದ್ರ ಇತ್ಯಾದಿ ಬಿಡಿಶಿಲ್ಪಗಳಿವೆ. ಆವನಿಯ ದೇವಾಲಯಗಳ ಒಳಗೆ ಹಲವಾರು ಬಿಡಿಶಿಲ್ಪಗಳಿದ್ದು ವಿವಿಧ ಕಾಲಘಟ್ಟದಲ್ಲಿ ರಚಿತವಾಗಿದ್ದು ಶೈಲಿಯಲ್ಲೂ ವ್ಯತ್ಯಾಸ ಗುರುತಿಸುವಂತಿದೆ. ಕುರುಡುಮಲೆಯ ಸೋಮೇಶ್ವರ ದೇವಾಲಯದಲ್ಲೂ ಬಿಡಿಶಿಲ್ಪಗಳಿವೆ. ಬಳಿಯ ಗಣಪತಿ ದೇವಾಲಯದ ಮೂಲಮೂರ್ತಿ ಬೃಹದಾಕಾರವಾದ ಸರಳ ಸುಂದರ ರಚನೆಯಿಂದ ಪ್ರಮಾಣಬದ್ಧವಾಗಿ ಕಂಗೊಳಿಸುತ್ತದೆ. ಮುಂದಿನ ಪಚ್ಚೆಕಲ್ಲಿನ ದೊಡ್ಡ ಅಳತೆಯ ಮೂಷಿಕ ಮೂರ್ತಿ ಸಹ ಮುದ್ದಾದ ರಚನೆ. ಬಿಡಿ ಶಿಲ್ಪಗಳಲ್ಲಿ ಜಿಲ್ಲೆಯಾದ್ಯಂತ ಹೆಚ್ಚಾಗಿ ಕಂಡುಬರುವುದು ವೀರಭದ್ರನ ಮೂರ್ತಿಗಳು. ಸಪೂರವಾದ, ಉದ್ದನೆಯ ಅಂಗಾಂಗಗಳ ಸರಳ ಸುಂದರ ರಚನೆಗಳು ಕಲ್ಲಿನವಾದರೂ ಲೋಹದ ಶಿಲ್ಪದಂತೆ ಕಲೆಗಾರಿಕೆಯನ್ನು ಕಾಣಬಹುದು. ಕಂಬದ ಮೇಲಿನ ಕೆತ್ತನೆಗಳು ಶೈವ ಪುರಾಣಕ್ಕೆ ಹೆಚ್ಚಾಗಿ ಸಂಬಂಧಿಸಿದವು. ಸಾಮಾಜಿಕ ಜೀವನ ಪ್ರತಿಬಿಂಬಿಸುವ ಶಿಲ್ಪಗಳು, ನೃತ್ಯ, ಬೇಟೆಗಾರರು ಮಲ್ಲಯುದ್ಧ ಇತ್ಯಾದಿ ಕ್ರೀಡೆಗಳು, ವಿಷ್ಣು ಮೋಹಿನಿಯ ರೂಪದಲ್ಲಿ ವಿವಸ್ತ್ರವಾಗಿರುವುದು ಮುಂತಾದವು ಕಾಣಬಹುದು. ಶೃಂಗಾರ ಪರವಾದ ಹಾಗೂ ಮಿಥುನ ಶಿಲ್ಪಗಳು ಹೆಚ್ಚಾಗಿ ಕಂಡುಬರುವುದಿಲ್ಲ. ಸೀತಿಬೆಟ್ಟ, ಮಾರ್ಕಂಡೇಶ್ವರ ದೇವಾಲಯ, ಆಲಂಬಗಿರಿ, ರಂಗಸ್ಥಳ, ಆವನಿಯ ದೇವಾಲಯಗಳು, ಚಿಕ್ಕತಿರುಪತಿ, ಟೇಕಲ್, ಕುರುಡುಮಲೆಯ ದೇವಾಲಯಗಳು ವಿರೂಪಾಕ್ಷಿ, ಕೋಲಾರದ ಸೋಮೇಶ್ವರ, ಬಾಗೇಪಲ್ಲಿ ಬಳಿಯ ಗೂಳೂರು ಸಂಸ್ಥಾನ ಮುಂತಾದ ಕಡೆಗಳಲ್ಲಿ ಕಂಬದ ಮೇಲಿನ ಶಿಲ್ಪಗಳನ್ನು ಕಾಣಬಹುದು.

ಕೋಲಾರದ ಪ್ರಾಚೀನ ಸ್ಥಳೀಯ ದೇವತೆಗಳು ಗಾರೆಯಲ್ಲಿ ರೂಪಿತವಾಗಿರುವುದು ಕಂಡುಬರುತ್ತದೆ. ತೀರ ಆರಂಭಕಾಲದ್ದೆನ್ನಬಹುದಾದ ಕೋಲಾರಮ್ಮ ದೇವಾಲಯದ ಸಪ್ತಮಾತೃಕೆಯರು ಗಾರೆಯದವಾಗಿವೆ. ಆಗಾಗ್ಗೆ ಅವುಗಳಿಗೆ ಬಣ್ಣಹಚ್ಚಿರುವ ಗುರುತುಗಳಿವೆ. ದೇವಾಲಯದಲ್ಲಿ ಆಳೆತ್ತರದ ನಗ್ನ ಸ್ತ್ರೀಯ ಕಲ್ಲಿನ ಶಿಲ್ಪವೊಂದಿದ್ದು 'ಮೂಕನಾಂಚಾರಮ್ಮ' ಎಂದು ಕರೆಯಲಾಗುತ್ತದೆ. ಕೋಲಾರಮ್ಮನ ಮೂಲವಿಗ್ರಹ ವಿಜಯನಗರದ ಕಾಲದಲ್ಲಿ ನಾಶವಾಗಿದ್ದು ಇಂದು ಇರುವುದು ನಂತರ ಕಾಲದ್ದೆಂದು ತಿಳಿಸುವ ವೀಣಾಶೇಖರ್ ಅವರು ೧೮ನೇ ಶತಮಾನದಲ್ಲಿ 'ಉಮ್ಮಾಜಿ ಪಂಡಿತ' ಎಂಬಾತ ಇಲ್ಲಿ ಕೆಲವು ಜೀರ್ಣೋದ್ಧಾರ ಮಾಡಿಸಿದನೆಂದೂ ಶಿಲ್ಪಗಳನ್ನು ರಕ್ಷಿಸಿದನೆಂದೂ ಅಭಿಪ್ರಾಪಡುತ್ತಾರೆ. ಈ ದೇವಾಲಯ ಭೈರವ ಹಾಗೂ ಶಕ್ತಿಯ ಆರಾಧಕರ ಕೇಂದ್ರವಾಗಿದ್ದು ಶಕ್ತಿಯ ಆರಾಧನೆಗಾಗಿ ವೀರಭಕ್ತರು ತಮ್ಮ ತಲೆಯನ್ನು ಕತ್ತರಿಸಿಕೊಂಡು ಬಲಿದಾನ ಮಾಡಿಕೊಳ್ಳುತ್ತಿದ್ದರು ಎಂದು ಹೇಳುವ ಆರ್.ಶೇಷಶಾಸ್ತ್ರಿಯವರು ಈ ರೀತಿಯ ಧಾರ್ಮಿಕ ಹತ್ಯೆಯನ್ನು ನಿರೂಪಿಸುವ ವೀರಗಲ್ಲುಗಳು ಕೋಲಾರದ ಕೋಲಾರಮ್ಮ, ಬಲ್ಲ ಗ್ರಾಮದ ಸಪ್ತಮಾತೃಕೆಯರ ಮುಂದೆ ಹಾಗೂ ರಾಜಕಲ್ಲಹಳ್ಳಿಯ ಪಟಾಲಮ್ಮ ಎಂಬ ಕಪಾಲ ಭೈರವಿ

ದೇವಾಲಯದ ಮುಂದೆ ಇರುವುದಾಗಿ ತಿಳಿಸುತ್ತಾರೆ. ಅಲ್ಲದೇ ಜಿಲ್ಲೆಯಲ್ಲಿ ದೊರೆಯುವ ಶ್ರೀನಿವಾಸಪುರದ ತೆಲುಗು ಶಾಸನವೊಂದರಲ್ಲಿ ವೀರನೊಬ್ಬನಿಗೆ 'ನೆತ್ರಪಟ್ಟ' (ನೆತ್ತರು ಕೊಡುಗೆ) ಕೊಟ್ಟ ವಿಷಯವಿದ್ದು ಈ ಪದಪ್ರಯೋಗ ಕೋಲಾರ ಜಿಲ್ಲೆಗೆ ಸೀಮಿತವಾಗಿದೆಯೆಂದು ತಿಳಿಸುತ್ತಾರೆ. ಅಲ್ಲದೇ ತಳಗವಾರದ ಕುದುರೆ ಸ್ಮಾರಕ, ಮೇಲಗಾಣಿಯ ನಾಯಿಯ ಸ್ಮಾರಕ, ಹುಲಿಬೇಟೆ, ಹಾವಿನಬೇಟೆ, ಗೋಗ್ರಹಣ, ಸಿಡಿತಲೆ ಸ್ಮಾರಕಗಳು; ನಗರಗೆರೆ, ಕೋಲಾರ, ಸೋಮಾಂಬುಧಿ ಅಗ್ರಹಾರ, ತಾವರೆಕೆರೆ, ಎಲ್ದೂರು, ಸಂತೆಕಲ್ಲಹಳ್ಳಿ, ಸಾಕಮ್ಮನ ಜೋಡಿಹೊಸಳ್ಳಿ, ತಳಗವಾರ, ಮರಗಲ್ಲು ಮುಂತಾದ ಕಡೆಗಳಲ್ಲಿಯ ಮಾಸ್ತಿ ವೀರಗಲ್ಲುಗಳ ಬಗ್ಗೆ, ಮುಳಬಾಗಿಲಿನ ವೀರಗಾರರ ಗುಡಿಯ ಬಗ್ಗೆ ಗಮನ ಸೆಳೆಯುತ್ತಾರೆ. ಮೊದಮೊದಲ ಪಲ್ಲವ, ನೊಳಂಬ ಕಾಲದ ವೀರಗಲ್ಲುಗಳಲ್ಲಿ ವೀರರ ಶಿಲ್ಪವೇ ಪ್ರಧಾನವಾಗಿದ್ದು ಶಿಲ್ಪವಿರುವ ಕಲ್ಲ ಚಪ್ಪಡಿಯೂ ಬೃಹದಾಕಾರವಾಗಿ ಇರುತ್ತವೆ ಎಂಬುದನ್ನು ಗುರುತಿಸಿದ್ದಾರೆ. ಕೋಲಾರಮ್ಮನ ದೇವಾಲಯದಲ್ಲಿ ಇರುವ ವೀರಗಲ್ಲು ಲಿಪಿರಹಿತವಾಗಿದ್ದರೂ ದೊಡ್ಡ ಯುದ್ಧವೊಂದರ ಚಿತ್ರಣ ನೀಡುವಂತೆ ವೀರ ಯೋಧರು, ಶತ್ರುಪಕ್ಷದವರು, ಯುದ್ಧವಾಹನಗಳು, ಧ್ವಜಸ್ತಂಭ, ಯುದ್ಧದಲ್ಲಿ ಮಡಿದವರ ದೇಹವನ್ನು ತಿನ್ನುತ್ತಿರುವ ಪ್ರಾಣಿಪಕ್ಷಿಗಳು ಇವೇ ಮುಂತಾದವುಗಳಿಂದ ಯುದ್ಧದ ಭೀಕರತೆಯನ್ನು, ಭೀಭತ್ಸರಸವನ್ನು ಶಿಲ್ಪಿ ತೋರುವುದರಲ್ಲಿ ಯಶಸ್ವಿಯಾಗಿದ್ದಾನೆ ಎಂದು ಶೇಷಶಾಸ್ತ್ರಿ ಅವರು ತಿಳಿಸುತ್ತಾರೆ. ಶ್ರೀನಿವಾಪುರದ ಸಾಕಮ್ಮನ ಹೊಸಹಳ್ಳಿಯ ವೀರಗಲ್ಲಿನ ಶಿಲ್ಪದಲ್ಲಿ ಧ್ಯಾನಸ್ಥ ಋಷಿಯೊಬ್ಬನ ತಲೆಯನ್ನು ಯೋಧನೊಬ್ಬ ಕತ್ತರಿಸುತ್ತಿದ್ದು, ಚಾಮರ ಧಾರಿಣಿ ಸ್ತ್ರೀಯೊಬ್ಬಳೂ ಶಿಲ್ಪದಲ್ಲಿದ್ದಾಳೆ ಶಾಸನದ ಪಾಠದಲ್ಲಿ ಈ ಕಲ್ಲನ್ನು ಮೊರೆಹೊಕ್ಕವರನ್ನು ಕೊಲ್ಲಬಾರದು ಎಂಬ ವಾಕ್ಯವೂ ಇದ್ದು ಶಾಸನ ಶಿಲ್ಪ ಕುತೂಹಲಕಾರಿಯಾಗಿದೆ. ಇದೇ ಬಗೆಯಲ್ಲಿ ವಿವರವಾದ ಚಿತ್ರಣಗಳಿಂದ ಕೂಡಿದ ಹಲವಾರು ವೀರಗಲ್ಲುಗಳನ್ನು ಶ್ರೀನಿವಾಸಪುರ ತಾಲೂಕು ಪರಿಸರದಲ್ಲಿ ಕೆ.ಆರ್.ನರಸಿಂಹನ್ ಅವರು ಉತ್ಖನನ ಮಾಡಿ ಬೆಳಕಿಗೆ ತಂದಿದ್ದಾರೆ. ಇತ್ತೀಚೆಗೆ ಮುಳಬಾಗಿಲಿನ ದುಗ್ಗಸಂದ್ರದ ನೊಳಂಬ, ಗಂಗರ ಕಾಲದ ಹಲವಾರು ವೀರಗಲ್ಲುಗಳ ಶಿಲ್ಪ, ಪಠ್ಯಗಳ ವಿವರ ಪ್ರಕಟಿಸಿದ್ದಾರೆ.

ವಿದುರಾಶ್ವತ್ಥದ ನಾಗರಕಲ್ಲುಗಳು ವೈವಿಧ್ಯಮಯವಾಗಿದ್ದು ಅವುಗಳ ಸಂಖ್ಯೆ ಬೆರಗು ಹುಟ್ಟಿಸುವಷ್ಟಿದೆ. ಸಪ್ತಮಾತೃಕೆಯರು ದೇಶಾದ್ಯಂತ ಕಂಡುಬಂದರೂ ದೊಡ್ಡ ಪ್ರಮಾಣದ ಬಿಡಿ ಶಿಲ್ಪಗಳು ಕೋಲಾರ ಜಿಲ್ಲೆಯಲ್ಲಿ ಕಂಡುಬರುವುದು ವಿಶೇಷ. ಕೋಲಾರಮ್ಮ ದೇವಾಲಯದಲ್ಲಿ ಗಾರೆಯ ಶಿಲ್ಪಗಳಲ್ಲದೆ ಕಲ್ಲಿನವೂ ಇವೆ. ಹುನ್ಕುಂದದ ಬಿಡಿಶಿಲ್ಪಗಳು ೯–೧೦ನೇ ಶತಮಾನದವು. ಹಳೇಕೊಪ್ಪಲು, ನಂಗಲಿ, ಮೋತಕಪಲ್ಲಿಗಳಲ್ಲೂ ಸಪ್ತಮಾತೃಕೆಯರ ಬಿಡಿಶಿಲ್ಪಗಳನ್ನು ಕಾಣಬಹುದು. ಆವನಿಯ ಚಾಮುಂಡಿ ಈಗ ಬೆಂಗಳೂರು ಮ್ಯೂಸಿಯಂನಲ್ಲಿದೆ. ಏಳು ಶಿಲ್ಪಗಳ ಒಂದೇ ಪಟ್ಟಿಕೆ ಸಾಮಾನ್ಯವಾಗಿ ಕಂಡುಬರುತ್ತದೆ. ಕೆಲವೆಡೆ ಒಂದೆರಡು ಮಾತ್ರ ಇರುವುದುಂಟು. ಬಲ್ಲ, ಕೌತನಹಳ್ಳಿ, ಕೋಲಾರ (ಊರು), ತೇರುಹಳ್ಳಿ, ಕೊರಟ್ಟಿ, ಮಡಿವಾಳ, ಸುಳದೇನಹಳ್ಳಿ, ಹೆಬ್ಬೆಟ್ಟು, ನಂಬಿಹಳ್ಳಿ, ಕರ್ನೆಲ್ಲಿಗಳಲ್ಲಿ ಕೆಲವು ಬಿಡಿಶಿಲ್ಪಗಳಿವೆ. ಮಡಿವಾಳ, ಮುತ್ತಕಪಲ್ಲಿಗಳಲ್ಲಿ ಸಪ್ತಮಾತೃಕೆಯರ ದೇವಾಲಯವಿದೆ. ಮಾತೃಕೆಯರೊಂದಿಗೆ ಆರಂಭದಲ್ಲಿ ವೀರೇಶ/ ವೀಣಾಧರ ಅಂತ್ಯದಲ್ಲಿ ಗಣಪತಿ ಸಾಮಾನ್ಯವಾಗಿರುತ್ತವೆ. ಇವರೊಂದಿಗೆ ದ್ವಿಭುಜೆಯಾದ ಏಳು ಮಕ್ಕಳ ತಾಯಿ 'ಯೋಗೇಶ್ವರಿ' ಇರುವುದುಂಟು. ನಗ್ನ ಭೈರವ, ಭೈರವಿಯರೂ ಕೆಲವೆಡೆ ಇರುತ್ತವೆ. ಬಂಗಾರಪೇಟೆ ಹಾದಿಯಲ್ಲಿರುವ ಕೋಟಿಲಿಂಗೇಶ್ವರ ಹಾಗೂ ಚಿಂತಾಮಣಿ ಬಳಿ ನಿರ್ಮಿತವಾಗುತ್ತಿರುವ ಬೃಹತ್ ಪ್ರಮಾಣದ ಗುಹಾಂತರ ದೇವಾಲಯದ ಗವಿಗಂಗಾಧರೇಶ್ವರ ಲಿಂಗಗಳು ಆಧುನಿಕ ಕಾಲದ ರಚನೆಗಳಾದರೂ ವಿಸ್ಮಯಕಾರಿಯಾದ ಶಿಲ್ಪಗಾರಿಕೆಯಾಗಿವೆ. ಗುಡಿಪಲ್ಲಿಯಲ್ಲಿ ಈಚೆಗೆ ಶಿವದೇವಾಲಯದ ಜೀರ್ಣೋದ್ಧಾರದ ವೇಳೆಯಲ್ಲಿ ಗಣೇಶ, ಶಿವ, ಶ್ರೀದೇವಿ–ಭೂದೇವಿ ಇತ್ಯಾದಿ ಏಳು ಪಂಚಲೋಹದ ಶಿಲ್ಪಗಳು ದೊರೆತಿದ್ದು ಅವು ವಿಜಯನಗರ ಕಾಲದ್ದೆಂದು ತಿಳಿಯಲಾಗಿದೆ. ಕೋಲಾರ ಜಿಲ್ಲೆಯ ಅನೇಕ ಕೆರೆ ಏರಿಯ ಮೇಲೆ

'ದುಗ್ಗಲಮ್ಮ' ಎಂದು ಕರೆಯುವ ನಗ್ನ ದೇವತೆಯ ಶಿಲ್ಪಗಳು ಇರುವುದಾಗಿ ಸಿದ್ಧಲಿಂಗಯ್ಯನವರು ತಿಳಿಸುತ್ತಾರೆ (ದೇವಾಲಯ ಹಾಗೂ ಶಿಲ್ಪಗಳ ವಿವರಗಳಿಗೆ 'ಪ್ರೇಕ್ಷಣೀಯ ಸ್ಥಳಗಳು' ಅಧ್ಯಾಯ ನೋಡಿ).

ಬಂಗಾರಪೇಟೆಯ ಕಾರಬೆಲೆಯಲ್ಲಿದ್ದ ಸುಮಾರು ೯೦೦ಕ್ರಿ.ಶ.ದ ಸ್ವಾಮಿನಿರ್ಮಡಿಯ ಸ್ಮಾರಕ ಶಿಲ್ಪ (ಬಂಗಾರಪೇಟೆ, ೬೫) ರಾಜ್ಯದಲ್ಲಿಯೇ ಅಪರೂಪವಾದುದು. ಕೈಯಲ್ಲಿ ತಾಳೆಯೋಲೆಯ ಕಟ್ಟೊಂದನ್ನು ಹಿಡಿದು ಸುಖಾಸನದ ಮೇಲೆ ದಿಂಬಿಗೆ ಒರಗಿ ಕುಳಿತು ಬೋಧಿಸುತ್ತಿರುವ ಭಂಗಿಯಲ್ಲಿರುವ ಈ ಶಿಲ್ಪದ ಮೇಲ್ಭಾಗದಲ್ಲಿ ನಂದಿನಾಗಾರ್ಜುನಯ್ಯ ನಂದಿಗೆಯಬ್ಬೆಯರ ಮಗಳು ಸಾಮಿನಿರ್ಮಡಿ, ಸಕಲ ಶಾಸ್ತ್ರಪ್ರಸಿದ್ಧಿ ಶ್ರೀ, ಎಂಬ ಶಾಸನವಿದ್ದು ಲಿಪಿಯ ಆಧಾರದಿಂದ ಹತ್ತನೆಯ ಶತಮಾನದ್ದೆಂದು ಗುರುತಿಸಲಾಗಿದೆ. ಆಕೆ ಸಕಾಲಶಾಸ್ತ್ರ ಪ್ರವೀಣೆಯಾಗಿದ್ದುದಕ್ಕೆ ಅಂದಿಗೂ ಇದ್ದಿರಬಹುದಾದ ಸ್ತ್ರೀ ವಿದ್ಯಾಭ್ಯಾಸವೇ ಕಾರಣವೆಂದು, ಅಲ್ಲದೆ ಶಿಲ್ಪದಲ್ಲಿ ಪತಿಯ ಹೆಸರಿಲ್ಲದೆ ತಂದೆ ತಾಯಿಯರ ಹೆಸರಿರುವುದರಿಂದ ಆಕೆ ಅವಿವಾಹಿತೆಯಿರಬೇಕೆಂದೂ, ಮುಡಿಯನ್ನು ಜಟೆಯಂತೆ ಕಟ್ಟಿರುವುದರಿಂದ ಸನ್ಯಾಸಿನಿಯಾಗಿರಬಹುದೆಂದೂ, ಸ್ಮಾರಕ ಶಿಲೆಯಂತಿರುವುದರಿಂದ ಆಕೆಯ ಮರಣಾನಂತರ ಹಾಕಿಸಿರಬಹುದೆಂದೂ ಜ್ಯೋತ್ಸ್ನಾ ಕಾಮತ್ ಅವರು ಅಭಿಪ್ರಾಯಪಡುತ್ತಾರೆ. ಈಗ ಈ ಶಿಲ್ಪ ಬೆಂಗಳೂರು ವಸ್ತು ಸಂಗ್ರಹಾಲಯದಲ್ಲಿದೆ.

ಜಿಲ್ಲೆಯಲ್ಲಿ ವಿವಿಧ ಕಾರ್ಯನಿರ್ವಹಿಸಿದ ಶಿಲ್ಪಿಗಳು, ಅವರಿಗೆ ನೀಡಿದ ಸಂಭಾವನೆ, ಶಿಲ್ಪಕಾರ್ಯಗಳ ಬಗ್ಗೆ ಶಾಸನಗಳಲ್ಲಿ ಕೆಲವು ಮಾಹಿತಿಗಳು ದೊರೆಯುತ್ತವೆ. ಚಿಂತಾಮಣಿಯ ಕ್ರಿ.ಶ.೧೦೦೦ವರ್ಷದಲ್ಲಿ ರಚಿತಗೊಂಡ ಶಾಸನವನ್ನು ಕಾಳಾಚಾರಿ ಎಂಬಾತ ಬರೆದದ್ದು (ಚಿಂತಾಮಣಿ ೭೭). ಚಿಕ್ಕಬಳ್ಳಾಪುರದ ನಂದಿಯ-ರಾಜಾಧಿರಾಜ ಚೋಳ ಗಾವುಂಡನನ್ನು ಹೆಸರಿಸುವ ೧೦೪೯ರ ಶಾಸನವೊಂದು, ಪಂಡಿತ ಆಸರಿ ಎಂಬ ಪೆರಿಯ ನಂದಿಯ ಬಡಗಿಯೊಬ್ಬ ಮಾಡಿದ ಕಾರ್ಯದ ಬಗ್ಗೆ ದಾಖಲಿಸಿದೆ (ಈ ಭಾಗ ತ್ರುಟಿತವಾಗಿದೆ) (ಚಿಕ್ಕಬಳ್ಳಾಪುರ-೨೨). ಇಂದೂ ನೀರಿಗೆ ಅಭಾವವಿರುವ ಕೋಲಾರ ಜಿಲ್ಲೆಯಲ್ಲಿ ಬಿದ್ದ ಮಳೆನೀರನ್ನು ಸಂಗ್ರಹಿಸಲು ಕೆರೆಕಟ್ಟೆಗಳನ್ನು ನಿರ್ಮಿಸಲು, ಕಾಲುವೆ ತೋಡಿಸಿ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಿರುವ ಬಗ್ಗೆ ಅನೇಕ ಶಾಸನಗಳು ಇರುವುದನ್ನು ಕುರಿತು ಶಾಸನ ಸಂಪುಟದ ಸಂಗ್ರಹಕಾರ ಬಿ.ಎಲ್.ರೈಸ್ ಗಮನಸೆಳೆಯುತ್ತಾರೆ. ಇಂದಿನ ಇಂಜಿನಿಯರಿಂಗ್ ಕುಶಲಕರ್ಮಿಯಂತೆ ಅಂದಿಗೂ (ಅಂದಿನ ಮಟ್ಟಿಗಿನ ತಾಂತ್ರಿಕ ಅಂಶಗಳಿಂದ ಕೂಡಿದಂತೆ) ರಚನೆಗಳಾಗುತ್ತಿದ್ದವು. ಚಿಂತಾಮಣಿಯ ಕುಲೋತ್ತಾಂಗ ಚೋಳನ ೧೧೦೦ರ ಶಾಸನ ಬೆಟ್ಟದ ಮೇಲೆ ಕಾಲುವೆ, ಕೋಟೆ, ದೇವಾಲಯಗಳ ನಿರ್ಮಿತಿಯನ್ನು ಕುರಿತು ಹೇಳುತ್ತದೆ (ಚಿಂತಾಮಣಿ, ೮). ಚಿನ್ನದಗಣಿ ಪ್ರದೇಶದ ಬೇತಮಂಗಲಕೆರೆ ಸಾಕಷ್ಟು ಪುರಾತನವಾಗಿದ್ದು ೯೫೦ರಲ್ಲಿಯೇ ನೊಳಂಬ ಇರವಿರಾಯ ದುರಸ್ಥಿ ಮಾಡಿಸಿದ. ನಂತರ ೧೧೫೫ರಲ್ಲಿ ಹೊಯ್ಸಳ ವಿಷ್ಣುವರ್ಧನನ ಅಧಿಕಾರಿ ಚೊಕ್ಕಮಯ್ಯ ಮತ್ತೆ ದುರಸ್ಥಿ ಮಾಡಿಸಿದ್ದ.

ಹಲವಾರು ತಾಮ್ರಶಾಸನಗಳಲ್ಲಿ 'ವಿಶ್ವಕರ್ಮಾಚಾರ್ಯ' ಎಂಬ ಶಿಲ್ಪಿಯ ಹೆಸರಿದ್ದು ಅವುಗಳಲ್ಲಿ ೭೬೨ರ ಗೌರಿಬಿದನೂರು (ಸಂಖ್ಯೆ ४೭) ಹಾಗೂ ೭೯೯ರ ಶಿಡ್ಲಘಟ್ಟದ ಶಾಸನಗಳು ಒಬ್ಬ ವಿಶ್ವಕರ್ಮಾಚಾರ್ಯನಿಂದ ರಚಿತವಾಗಿದ್ದೆನ್ನಬಹುದು. ಈತ ಗಂಗರ ಆಳ್ವಿಕೆಯಲ್ಲಿದ್ದು ಅವರ ಆಳ್ವಿಕೆ ಕೋಲಾರವೇ ಆಗಿದ್ದು ಗಮನಾರ್ಹ.

ಜಿಲ್ಲೆಯವನೇ ಎನ್ನಬಹುದಾದ 'ಬಹುಗುಣ ತೇಜನ್' ವಿಕ್ರಮಾದಿತ್ಯ ಎಂಬ ಶಿಲ್ಪಿ ೯೫೦-೯೭೦ ಕ್ರಿ.ಶ.ದ ಅವಧಿಯಲ್ಲಿ ಮುಳಬಾಗಿಲು ಹಾಗೂ ಕೋಲಾರ ತಾಲೂಕಿನಲ್ಲಿ ಆರು ಹಾಗೂ ನೆರೆಯ ಚಿತ್ತೂರಿನ ಪುಂಗನೂರಿನಲ್ಲಿ ಒಂದು-ಒಟ್ಟು ಏಳು ವೀರಗಲ್ಲುಗಳನ್ನು ಶಾಸನ ಪಾಠದ ಸಮೇತ ಕಂಡರಿಸಿದ್ದಾನೆ. ಈತನ ತಂದೆ ಬಿಜಯತಾಚಾರಿ. 'ಕೊಯತೂರು' ಈತನ ಗ್ರಾಮವಾಗಿದ್ದು ಅದೂ

ಜಿಲ್ಲೆಯಲ್ಲಿಯೇ ಇದ್ದಿರಬಹುದಾದ ಸಂಭವವಿದೆ. ತಾವರಕೆರೆಯ ಮೂರು, ಎಲ್ದೂರು (ಶ್ರೀಪುರ)ದಲ್ಲಿ ಎರಡು ಹಾಗೂ ಹರಳಕುಂಟೆಯಲ್ಲಿ ಒಂದು ವೀರಗಲ್ಲು ಈತನ ಕಂಡರಣೆಯಾಗಿದ್ದು ಅವು 'ತುರುಗೋಳ್' ಹಾಗೂ 'ಪೆಣ್ಬುಯಲ್'ಗೆ ಸಂಬಂಧಿಸಿದವು. ಇನ್ನೊಂದು ಹುಲಿಬೇಟೆಗೆ ಸಂಬಂಧಿಸಿದ್ದು, ಇಲ್ಲಿ ಹುಲಿ ಹಾಗೂ ಅದರ ಮೇಲೆ ಹಾಯ್ದ ನಾಯಿಗಳ ಚಿತ್ರಣವಷ್ಟೇ ಇದ್ದು ಇವುಗಳಷ್ಟೇ ಬೇಟೆಯಲ್ಲಿ ಸತ್ತವೆಂದೂ ವೀರ ಬದುಕಿದ್ದು ತನ್ನ ಪ್ರೀತಿಯ ನಾಯಿಗಳಿಗೆ ಹಾಕಿಸಿದ ಕಲ್ಲೆಂದು ತಿಳಿಸುವ ಶೇಷಶಾಸ್ತ್ರಿ ಅವರು ನಾಯಿಗಳ ಆಕ್ರಮಣ, ಹುಲಿಯ ಅಸಹಾಯಕತೆ ಇತ್ಯಾದಿಗಳನ್ನು ಶಿಲ್ಪದಲ್ಲಿ ಕಂಡರಿಸಿದ ಶಿಲ್ಪಿ ವಿಕ್ರಮಾದಿತ್ಯ ಬಹುಗುಣ ತೇಜನ ಕಲೆಗಾರಿಕೆಯ ಬಗ್ಗೆ ವಿವರ ನೀಡುತ್ತಾರೆ. ಈತನ ಕಾಲ ಎರೆಯ ಹಾಗೂ ದಿಲೀಪ ನೊಳಂಬರದ್ದಾಗಿದ್ದು ವೀರಗಲ್ಲುಗಳು ಹುಟ್ಟು ಬಂಡೆಯ ಮೇಲೆ ಅಂಕಣರಹಿತವಾಗಿ ಕಂಡರಿಸುತ್ತಿದ್ದ ಆರಂಭಕಾಲದ ಶಿಲ್ಪಗಳು. ಈತ ರಚಿಸಿದ ತಾವರೆಕೆರೆಯ ಒಂದು ವೀರಗಲ್ಲು ಮಾತ್ರ ಸುಟ್ಟಕಲ್ಲಿನ ಚಪ್ಪಡಿಯ ಮೇಲೆ ಕಂಡರಿಸಿದ್ದಾಗಿದೆ.

ಹೊಯ್ಸಳರ ಕಾಲದಲ್ಲಿದ್ದ 'ನಂದಿಯ ಬೈಚೋಜ' ಎಂಬ ಶಿಲ್ಪಿ ೧೨೪೯–೫೦ರ ಅವಧಿಯಲ್ಲಿ ಹಲವಾರು ಕಡೆಗಳಲ್ಲಿ ಶಿಲ್ಪ ರಚಿಸಿದ ವಿವರವಿದೆ. ಮೊದಲಿಗೆ ಚನ್ನರಾಯಪಟ್ಟಣದ ನುಗ್ಗೆಹಳ್ಳಿಯಲ್ಲಿ ನಂತರ ನಾಗಲಾಪುರದ ಕೇಶವ ದೇವಾಲಯದಲ್ಲಿ ಶಿಲ್ಪಗಳನ್ನು ರಚಿಸಿದ್ದಲ್ಲದೆ ಹಳೇಬೀಡಿನ ವಸ್ತುಸಂಗ್ರಹಾಲಯದಲ್ಲಿರುವ ಶಿಲ್ಪವೊಂದು ಈತನ ರಚನೆ ಎಂದು ತಿಳಿಯಲಾಗಿದೆ. ಶಿಲ್ಪಗಳ ಕೆಳಗೆ ತನ್ನ ಹುಟ್ಟೂರಾದ ನಂದಿಯ ಬಗ್ಗೆ, ತನ್ನ ಬಿರುದುಗಳಾದ 'ಅರಿಬಿರುದ ರೂವಾರಿ ಗಿರಿವಜ್ರದಂಡ' ಹಾಗೂ 'ಬಿರುದ ಪ್ರಸಾದಿ ಮಸ್ತಕ ಶೂಲ' ಎಂಬುದನ್ನೂ ಅಭಿಮಾನದಿಂದ ಹೇಳಿಕೊಳ್ಳುತ್ತಾನೆ.

ವಿಜಯನಗರ ಕಾಲದಲ್ಲಿ ೧೩೮೬ರಿಂದ ೧೬೪೫ರವರೆಗೆ ಎಂಟು ಪೀಳಿಗೆಯ ಶಿಲ್ಪ ವಂಶಾವಳಿಯೊಂದು ಪ್ರಸಿದ್ಧವಿದ್ದು ಅವರಲ್ಲಿ ನಾಲ್ಕನೇ ಪೀಳಿಗೆಯ ವೀರಣಾಚಾರಿ ಎಂಬಾತ ೧೫೩೪ರ ಚಿಂತಾಮಣಿಯ ತಾಮ್ರ ಶಾಸನ (ಸಂ.೨೮ ಮತ್ತು ೨೯) ವನ್ನೂ ಈತನ ಮೊಮ್ಮಗ ವೀರಣಮಹಾಚಾರ್ಯ ೧೫೮೭ರಲ್ಲಿ ಅದೇ ಚಿಂತಾಮಣಿಯ ಇನ್ನೊಂದು ತಾಮ್ರಶಾಸನವನ್ನು (ಸಂ.೧೭೨) ಈತನ ಮಗ ಕಾಮಯ ೧೬೪೫ರ ಮುಳಬಾಗಿಲಿನ ಶಾಸನವನ್ನೂ (ಸಂ.೬೦) ಕಂಡರಿಸಿದ್ದಾರೆ. ಈ ಕಾರಣ ಈ ಮೂವ್ವರಿಗೂ ಜಿಲ್ಲೆಯೊಂದಿಗೆ ಸಂಬಂಧವಿದ್ದಿರಬಹುದು.

ಬಾಗೇಪಲ್ಲಿ ತಾಲೂಕು ತಿರುವಣಿ ಗ್ರಾಮದ ಕೆರೆಗೆ ಸಂಬಂಧಿಸಿದ ಶಾಸನವೊಂದು ಸ್ವಾರಸ್ಯಕರವಾಗಿದೆ. ವೀರಬುಕ್ಕರಾಯನ ಮೊಮ್ಮಗಳು ಜೋಮ್ಮದೇವಿ ತಿರುವಣಿ ಗ್ರಾಮದಲ್ಲಿ ಪೆದ (ದೊಡ್ಡ)ಬಯಿರ ಓಜ ಹಾಗೂ ಪಿನ (ಚಿಕ್ಕ) ಬಯಿರ ಓಜರಿಗೆ ಕೆರೆಯೊಂದನ್ನು ಕಟ್ಟಲು ೧೪೯೭ರಲ್ಲಿ ತನ್ನ ಅಧಿಕಾರಿಗಳ ಮೂಲಕ ಆದೇಶಿಸುತ್ತಾಳೆ (ಬಾಗೇ ೧೦) ಶಿಲ್ಪಿಗಳು ಕೆರೆಯಲ್ಲಿ ನೀರು ಬಂದಿದ್ದೇ ಆದರೆ ತಮಗೆ ೧೩೦ ಸಿಂಗಯಗದ್ಯಾಣ, ಜಮೀನು, ಕುದುರೆ ಹಾಗೂ ತೋಳಬಂದಿಗಳನ್ನು ಕೊಟ್ಟು ಗೌರವಿಸಬೇಕೆಂದು ಕರಾರು ಮಾಡಿಕೊಂಡು ಅದರಂತೆ ಕಾರ್ಯನಿರ್ವಹಿಸಿ ಯಶಸ್ವಿಯಾಗಿ ಕಾಲುವೆ ನಿರ್ಮಾಣ ಮಾಡುತ್ತಾರೆ. ಅದರಂತೆ ಇವರು ಕೇಳಿದ್ದು ಪಡೆದುದಲ್ಲದೆ ಕೆಲವು ತೆರಿಗೆಗಳಿಂದಲೂ ಮುಕ್ತರಾಗುತ್ತಾರೆ. ಈ ಬಗ್ಗೆ "ಅಧಿಕಾರಿಗಳಿಗೆ ಸವಾಲು ಹಾಕುವ ಹಾಗೂ ತೆಗೆದುಕೊಂಡ ಕೆಲಸ ಸಮರ್ಥವಾಗಿ ನಿರ್ವಹಿಸುವ ಧೈರ್ಯ, ಹಣಕಾಸಿನ ಬಗ್ಗೆ ಮೊದಲೇ ಮಾತಾಡುವ ವ್ಯವಹಾರ ಬುದ್ಧಿ, ಕೆಲಸ ಕೆಟ್ಟರೆ ಪಡೆದದ್ದನ್ನು ಹಿಂದಿರುಗಿಸುವ ಎದೆಗಾರಿಕೆ ಹಾಗೂ ಕೆಲಸ ಮಾಡಿದ ತೋಳುಗಳಿಗೆ ಗೌರವಿಸಬೇಕೆಂದು ಆತ್ಮಗೌರವ ಮೆಚ್ಚುವಂತಹುದು" ಎಂದು ಕೆ.ಎಸ್.ಕುಮಾರ ಸ್ವಾಮಿಯವರು ಹೇಳುತ್ತಾರೆ.

ಅಂಬಾಜಿದುರ್ಗದ ಬಳಿಯ ಉಪ್ಪಾರಪೇಟೆಯ ಶಿವಾಲಯವನ್ನು ಸೆಟ್ಟಿದೇವೆನ್ ಎಂಬಾತ ೧೧೭೯ರಲ್ಲಿ ಕಟ್ಟಿಸಿದ್ದು ಅದು ಕೈಲಾಸ ಪರ್ವತದಂತೆ ಕಂಗೊಳಿಸುತ್ತಿತ್ತು (ಚಿಂತಾಮಣಿ ೩). ಬಾಗೇಪಲ್ಲಿಯ ೧೩೩೬ರ

ಶಾಸನ ಕಂಡರಿಸಿದಾತ ಶಾಸನಾಚಾರ್ಯ ನಾಗದೇವ (ಬಾಗೇಪಲ್ಲಿ ೨೦). ಗೌರೀಬಿದನೂರಿನ ೧೩೨೦ರ ಕವಿ ನಾಚನ ಸೋಮನನ್ನು ಉಲ್ಲೇಖಿಸುವ ಶಾಸನವನ್ನು ಬಡಗಿ ಶಾಸನಾಚಾರ್ಯ ನಾಗಿದೇವ ಕಂಡರಿಸಿದ (ಗೌರೀಬಿದನೂರು ೪೬). ಚಿಕ್ಕಬಳ್ಳಾಪುರದ ೧೩೨೧ರ ಶಾಸನ ಕೆತ್ತಿದ್ದು ದಾಸೋಜನ ಮಗ ಬೈರೋಜ. ಗುಡಿಬಂಡೆ ಬಳಿ ದೇವರ ಗುಡಿಪಲ್ಲಿಯ (ಗಡಿದಂ ಪಟ್ಟಣ) ತಿರುವೆಂಗಳನಾಥ ದೇವಾಲಯವನ್ನು ೧೩೯೧ರಲ್ಲಿ ನಾಯೊಂಡಯ, ಕಾಮೋಜ ಮತ್ತು ಭೈರೋಜರು ನಿರ್ಮಿಸಿದ್ದು ಇದು ಚೋಳ ಗಂಗ ಶೈಲಿಯಲ್ಲಿದೆ. ಕಾಕಟ್ಟೆ ಅಗತಿ ಭೈರೋಜನ ಮಗ ನಾಡೋಜ ೧೩೯೮ರಲ್ಲಿ ಹರಿಯಪ್ಪ ಒಡೆಯ ಕಟ್ಟಿಸಿದ ನಾಲೆಗೆ ಮರ ಹಾಗೂ ಕಬ್ಬಿಣದ ಕೆಲಸ ಮಾಡಿದ (ಚಿಂತಾಮಣಿ ೬೮). ನಂದಿ ಬೆಟ್ಟದಲ್ಲಿಯ ವೀರಭದ್ರ ದೇವಾಲಯದ ಬಾಗಿಲು ಮತ್ತು ವೀರಭದ್ರ ದೇವರುಗಳನ್ನು ೧೩೯೬ರಲ್ಲಿ ಕಣಪ್ಪರಾಯನ ಮಗ ದೇವಯ್ಯ ನಿರ್ಮಿಸಿದ (ಚಿಕ್ಕಬಳ್ಳಾಪುರ ೩೮) ಗೌರಿಬಿದನೂರಿನ ೧೪೦೮ರ ಶಾಸನ ದೇವಾಲಯವೊಂದನ್ನು ತಿಪ್ಪಾಜಿಯ ಮಗ ಮದ್ದೋಜ ಕಟ್ಟಿದಂತೆ ತಿಳಿಸುವುದಲ್ಲದೆ (ಗೌ.ಬಿ. ೫೯) ೧೪೬೯ರ ಶಾಸನ ಸಣ್ಣ ತಿಮ್ಮ ಓಜ ಹಾಗೂ ಶಿವಮೋಜರನ್ನು ಉಲ್ಲೇಖಿಸುತ್ತದೆ (ಗೌ.ಬಿ. ೯). ಬಂಗಾರಪೇಟೆಯ ೧೪೩೦ರ ಶಾಸನ ಇತರ ಕಸುಬಿನವರೊಂದಿಗೆ ಕಮ್ಮಾರ, ಬಡಗಿ ಅಕ್ಕಸಾಲಿಗರಿಗೂ ಕೆಲವು ಸುಂಕಗಳ ವಿನಾಯ್ತಿ ತೋರುತ್ತದೆ (ಬಂಗಾರುಪೇಟೆ ೨೭). ಪ್ರಖ್ಯಾತ ಟೇಕಲ್‌ನ ೧೪೩೧ರ ಶಾಸನ ಮರಗೆಲಸ ಮಾಡಿದ ಬೇವೋಜನ ಮಗ ಚಿಕ್ಕ ಓಜ, ಕಬ್ಬಿಣದ ಕೆಲಸ ಮಾಡಿದ ಕಮ್ಮಾರ ಅಂಜಲ ದಿವಿಂಗೋಜ ಅವರಿಗೆ ಕುದುರೆ, ಛತ್ರಿ ಸಹಿತವಾಗಿ(?) ಭೂದಾನ ಮಾಡಿದಂತೆಯೂ ೧೪೩೪ರಲ್ಲಿ ಅಲ್ಲಿಯೇ ಶಾಸನ ಮಾಡಿದ್ದಕ್ಕೆ ಕಲ್ಲುಕುಟಿಗ ತಿರುಮಲನಿಗೆ ಭೂದಾನ ನೀಡಿರುವುದನ್ನು ದಾಖಲಿಸುತ್ತದೆ (ಮಾಲೂರು ೭ ಮತ್ತು ೩) ಕ್ರಿ.ಶ.೧೫೦೦ರ ಶಾಸನವೊಂದು ಸಿಂಮ್ಮೋಜಿ ಬೈಚುವಿನ ಮಗ ಬಯಿರು ನಂದಿಯ ಯೋಗಾನಂದೀಶ್ವರ ದೇವಾಲಯದ ದಕ್ಷಿಣ ಕಡೆಯ ಬಾಗಿಲು ಒಂದನ್ನು ಮಾಡಿದ ಬಗ್ಗೆ (ಚಿಕ್ಕಬಳ್ಳಾಪುರ. ೩೧) ೧೫೦೫ರ ವೀರ ನರಸಿಂಹನ ಶಾಸನ ಕೆತ್ತಿದ ಬಡಗಿ ಜನಾರ್ಧನನ ಬಗ್ಗೆ (ಗೌರಿಬಿದನೂರು ೨೨), ೧೫೩೪ರ ಒಂದು ಶಾಸನ ಬರೆದ ಸ್ವಯಂಭೂ, ಕಂಡರಿಸಿದ ವೀರಣ್ಣನ ಮಗ ಬಡಗಿ ವೀರಣಾಚಾರ್ಯ ಇತ್ಯಾದಿ (ಚಿಂತಾಮಣಿ೭೮) ಶಿಲ್ಪಿಗಳನ್ನು ಉದಾಹರಿಸಬಹುದು. ಕೋಲಾರದ ವೆಲಗಲ ಬುಕ್ರಿ ಗ್ರಾಮದ ಮಾರಮ್ಮ ದೇವಾಲಯದಲ್ಲಿಯ ಶಾಸನ (೧೭೯೩ರ) ಬಸವಣ್ಣನ ಮಗ ಶಿಲ್ಪಿ ಮಲ್ಲಾಚಾರಿಯನ್ನು ಹೆಸರಿಸುತ್ತದೆ. (ಕೋಲಾರ ೧೭೯) ೧೭೯೪ರಲ್ಲಿ ಯಾಲವಹಳ್ಳಿ–ದೊಡ್ಡಮರಲೆ ಮಧ್ಯೆ ಜೋಗಿ ಬಸಪ್ಪ ಮಂಟಪಕಟ್ಟಿದ ಬಗ್ಗೆ (ಚಿಕ್ಕಬಳ್ಳಾಪುರ ೪೬); ಮಾಕಳಿ ದುರ್ಗದ ಅಮಲ್‌ದಾರ್ ಉಸ್ಮಾನ್ ಸಾಹೇಬರು ದ್ಯಾವರಹಳ್ಳಿಯಲ್ಲಿ ೧೭೯೮ರಲ್ಲಿ ಕೆರೆ ಕಟ್ಟಿಸಿದ್ದಕ್ಕೆ ಟಿಪ್ಪುವಿನಿಂದ ಭೂದಾನ ಪಡೆದ ಬಗ್ಗೆ (ಗೌರೀಬಿದನೂರು ೪೪) ಶಾಸನೋಲ್ಲೇಖವಿದೆ. ವಿವರವಾಗಿ ಕಲ್ಲಿನ ಮೇಲೆ ಶಾಸನ ಹಾಕಿಸಿದ ಅಂತಿಮ ಉದಾಹರಣೆಯೆಂದರೆ ಹಿಡಿಂಬಾಪುರದಲ್ಲಿ ೧೮೪೮ರಲ್ಲಿ ರಾಮನ ದೇವಾಲಯದ ರಚನೆಯ ಕುರಿತಾದ ಶಾಸನವೆಂದು ಹೇಳಬಹುದು (ಗೌರಿಬಿದನೂರು ೧೦).
(ಆಧಾರ: ಎಪಿಗ್ರಾಫಿಯಾ ಕರ್ನಾಟಿಕ, ಬಿ.ಎಲ್.ರೈಸ್. ಸಂ.೧೦)

ದೇವಾಲಯಗಳ ಮುಂದೆ ವಿವಿಧ ಕಾರಣಗಳಿಗಾಗಿ, ವಿವಿಧ ಧರ್ಮಗಳಿಗೆ ಅನುಗುಣವಾಗಿ ಕಂಬಗಳ ರಚನೆಯಾಗುತ್ತವೆ. ಗರುಡಗಂಬ, ಮಾನಸ್ಥಂಭಗಳಂತೆ, ಶಿವನ ದೇವಾಲಯದಲ್ಲೂ ಕಂಬಗಳನ್ನು ಕಾಣಬಹುದು. ಜಾತ್ರೆಯ ವೇಳೆಯಲ್ಲಿ ಧ್ವಜಸ್ಥಂಭದ ರಚನೆಯಾಗಿ ಆಚರಣೆಗಳು ನಡೆಯುತ್ತವೆ. ಕೋಲಾರಮ್ಮ ದೇವಾಲಯದ ಕ್ರಿ.ಶ.೧೦೨೧ ಶಾಸನ ಫಲ್ಗುಣಿ ಮಾಸದ ಉತ್ತರಾನಕ್ಷತ್ರದಂದು ನಡೆಯುವ ಜಾತ್ರೆಯ ಸಂದರ್ಭದಲ್ಲಿ ಧ್ವಜಸ್ಥಂಭದ ರಚನೆ, ಬಾವುಟ ಹಾರಿಸುವಿಕೆ, ಚಾಮುಂಡಾಕಂಬದ ರಚನೆ, ದೃಷ್ಟಿ ಬಿಡಿಸುವ ಶಿಲ್ಪಿ, ಧ್ವಜದ ಮೇಲೆ ಚಿತ್ರ ಬರೆಯುವ ಕಲಾವಿದರಿಗೆ ಸಂಭಾವನೆ ಕುರಿತು ಹೇಳಿದೆ. ಬಾವುಟದ ಕಂಬಕ್ಕೆ 'ಧ್ವಜ ದೇವರ್' ಎಂದೇ ಕರೆದಿದೆ (ಕೋಲಾರ ೧೦೬). ಅಂತೆಯೇ ಮಾಲೂರು ತಾಲೂಕಿನ ಕುರಕಿ ಗ್ರಾಮದ ಚನ್ನಕೇಶವ ದೇವಾಲಯದ

ಗರುಡಗಂಭ ಮಾಡಿದಾತ ಶಿಲ್ಪಿ ನಿಂಗಕೋಜ; ಶಿಡ್ಲಘಟ್ಟದ ಕೆಮ್ಮಣ್ಣು ಬಾಗಿಲ ಬಳಿಯ ತೋರಣಕಂಬವನ್ನು ೧೭೦೩ರಲ್ಲಿ ಕಡೆದು ನಿಲ್ಲಿಸಿದಾತ ಕೊಂಕೋಜನ ಮಗ ಶಿಲ್ಪಿ ಎಂಕೋಜ; ಗೌರಿಬಿದನೂರಿನ ಹುಡೂತಿಯ ಆಂಜನೇಯ ಸ್ವಾಮಿ ಗುಡಿ ಬಳಿ 'ತಿರುಮಲ ದೇವರ ಕಂಭ'ವೆಂದು ೧೪೩೦ರ ಶಾಸನದಲ್ಲಿ ಕರೆದಿರುವ ಕಂಬ ನಿರ್ಮಿಸಿದಾತ ಬೊಮ್ಮೋಜನ ಮಗ ಸಾಮೋಜ; ಶಿಡ್ಲಘಟ್ಟ ತಾಲೂಕಿನ ಹುಜಗೂರಿನಲ್ಲಿ ೧೬೩೭ರಲ್ಲಿ ಕಂಬ ರಚಿಸಿದಾತ ಹೊಸಗೊರಲಿನ ಹದಿಯೋಜನ ಮಗ ಬೊಮ್ಮೋಜ, ಇವೇ ಮುಂತಾದ ಕೆಲವು ಉದಾಹರಣೆಗಳನ್ನು ನೀಡಬಹುದು. ಇಂತಹ ಒಂದು ಶಿಲ್ಪ ಪರಂಪರೆಯ ಹಿನ್ನೆಲೆ ಶಿವಾರಪಟ್ಟಣದ ಶಿಲ್ಪಿಗಳದ್ದು.

**ಶಿವಾರ ಪಟ್ಟಣದ ಶಿಲ್ಪಿಗಳು**

ಇಂದು ಮಾಲೂರು ತಾಲೂಕಿನ ಒಂದು ಗ್ರಾಮವಾಗಿರುವ ಶಿವಾರಪಟ್ಟಣ ಈ ಹಿಂದೆ ಕೋಲಾರ ತಾಲೂಕಿನ ವಕ್ಕಲೇರಿ ಹೋಬಳಿಯಲ್ಲಿತ್ತು. ಇಲ್ಲಿ ದೊರೆಯುವ ಪ್ರಥಮ ಶಾಸನ ಗಂಗ ಶಿವಮಾರನದಾಗಿದ್ದು, ಆತನ ಹೆಸರಿನಲ್ಲಿ ಶಿವಮಾರ ಪಟ್ಟಣ ಎಂದು ರಚಿತವಾಗಿದ್ದು ಮುಂದೆ ಶಿವಾರಪಟ್ಟಣವೆಂದಾಗಿರಬಹುದು. ಶಿವಮಾರ ಕ್ರಿ.ಶ.೭೫೩ರಲ್ಲಿ ಕರಂಬೂರಿನಿಂದ ಆಳುತ್ತಿದ್ದು ಇಲ್ಲಿಗೆ ಕೆಲವು ದಾನಗಳನ್ನು ನೀಡಿದ ಬಗ್ಗೆ ಅದೇ ವರ್ಷ ಶ್ರೀಪುರುಷ ಸಹ ಒಂದು ದಾನ ನೀಡಿದ ಬಗ್ಗೆ ಶಾಸನಗಳಿವೆ. ಮತ್ತೆ ಶ್ರೀಪುರುಷನದೇ ೭೬೦ರ ವ್ಯಾಜ್ಯವೊಂದರ ತೀರ್ಮಾನದ ಶಾಸನವಿದೆ. ಇನ್ನೊಂದು ಶಾಸನ ಪಲ್ಲವ ಕುಲ ವೀರ ನೊಳಂಬ ೯೨೫ರಲ್ಲಿ ಮಂಡಿ ಮಂಗಲದ ಬ್ರಾಹ್ಮಣರಿಗೆ ಚಿನ್ನದ ನಾಣ್ಯ ನೀಡಿದ್ದು ದಾಖಲಿಸುತ್ತದೆ. ಹೊಯ್ಸಳ ವೀರ ಬಲ್ಲಾಳ ದೇವ ವಿತ್ತಿಮಂಗಲದ ಸೆಟ್ಟಿಪಲ್ಲಿ ಗ್ರಾಮ ದಾನ ನೀಡಿದ ಬಗ್ಗೆ ಇನ್ನೊಂದು ಶಾಸನವಿದೆ. (ಈ ಐದೂ ಶಾಸನಗಳು ಕೋಲಾರ ಶಾಸನ ಸಂಪುಟ ೧೦ರಲ್ಲಿ ಕೋಲಾರ ಶಾಸನ ಸಂಖ್ಯೆ ೬ ರಿಂದ ೧೦ರವರೆಗೆ ಇದ್ದು ಶಾಸನಗಳು ಶಿವಾರಪಟ್ಟಣದ ಈಶ್ವರ ಹಾಗೂ ರಾಮೇಶ್ವರ ದೇವಾಲಯದ ಬಳಿ ಇದ್ದವು). ಇನ್ನೆರಡು ಶಾಸನಗಳು ಶಿವಾರದಲ್ಲಿದ್ದು ಅವು ೯೫೦ ಕ್ರಿ.ಶ.ದಲ್ಲಿ ಕನ್ನರ ಯಮನ ಯುದ್ಧವೊಂದರ ಕುರಿತಾದ ವೀರಗಲ್ಲು. ಇಡೀ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಕೆಲವೇ ಶಾಸನಗಳಲ್ಲಿ ಇದೊಂದಾಗಿದ್ದು ಇದರ ಪಠ್ಯ ಸರಳಾಚಾರಿಯ ಮಗ ಕೋವಲ ಬರೆದದ್ದು. ಮತ್ತೊಂದು ಶಾಸನ ೭೫೦ರದ್ದಾಗಿದ್ದು ಶ್ರೀಪುರುಷನನ್ನು ಹೆಸರಿಸುವ ವೀರಗಲ್ಲು (ಮಾಲೂರು ಶಾಸನ ಸಂಖ್ಯೆ ೯೪, ೯೬). ಎಂದರೆ ಹತ್ತನೇ ಶತಮಾನದ ಆರಂಭದಲ್ಲೇ ಶಿವಾರಪಟ್ಟಣ ಪ್ರದೇಶ ಅಸ್ತಿತ್ವದಲ್ಲಿತ್ತು.

ಜಿಲ್ಲೆಯವರೇ ಆದ ಸರಿತಾ ಜ್ಞಾನಾನಂದ ಅವರು 'ಶಿವಾರಪಟ್ಟಣದ ಶಿಲ್ಪಿಗಳು' ಪುಸ್ತಕ ಬರೆದಿದ್ದು ಇದರಲ್ಲಿ ಜಿಲ್ಲೆಯಲ್ಲಿ ಶಿಲ್ಪಕಲೆ ಬೆಳೆದುಬಂದ ಬಗೆ ಹಾಗೂ ಶಿಲ್ಪಿಗಳ ವಿವರಗಳಿವೆ. ಸದರಿ ಪುಸ್ತಕಕ್ಕೆ ಲಲಿತಕಲಾ ಅಕಾಡಮಿಯ ಪ್ರಶಸ್ತಿ ಸಹ ಬಂದಿದೆ. ಅದರಂತೆ ೧೦-೧೧ನೇ ಶತಮಾನದ ವೇಳೆಗೆ ಕೊಲ್ಲಿಪಾಕಿಯಿಂದ ಹೊಸೂರಿಗೆ ಬಂದ, ವಿಶ್ವ ಬ್ರಾಹ್ಮಣ ಶಿಲ್ಪಾಚಾರ್ಯರ ಗುರುಗಳಾದ ಸುಜ್ಞಾನ ಪ್ರಭುಗಳು ಕೋಲಾರ ಜಿಲ್ಲೆಯೂ ಸೇರಿದಂತೆ ಆ ಪ್ರದೇಶದಾದ್ಯಂತ ಅನೇಕ ಶಾಖಾಮಠಗಳನ್ನು ಸ್ಥಾಪಿಸಿ ಶಿಷ್ಯ ಪರಂಪರೆ ಬೆಳೆಸಿರುವುದಾಗಿ ತಿಳಿದುಬರುತ್ತದೆ. ಅಲ್ಲದೆ ಸುಜ್ಞಾನ ಪ್ರಭುಗಳ ಶಿಷ್ಯರು ನಂದಿಯನ್ನು ಪೂಜಿಸುತ್ತಿದ್ದು, ನಂದಿ ದೇವಾಲಯಗಳನ್ನು ನಿರ್ಮಿಸುತ್ತಿದ್ದು ಮಾಲೂರಿನಲ್ಲಿ ಅಂತಹ ಒಂದು ಹಳೆಯ ನಂದಿ ದೇವಾಲಯ ಇದ್ದು, ಶ್ರೀನಿವಾಸಪುರ ತಾಲೂಕಿನ ನಂಬಿಹಳ್ಳಿಯ ಮಠವು ಸುಜ್ಞಾನ ಪ್ರಭುಗಳು ಸ್ಥಾಪಿಸಿದ ಒಂದು ಶಾಖಾ ಮಠವಾಗಿದೆ. ಸುಗಟೂರಿನ ಪ್ರಭುಗಳು ಈ ಗುರುಪರಂಪರೆಯನ್ನು ಆರಾಧಿಸುತ್ತಿದ್ದರೆಂದೂ ಮುಮ್ಮಡಿ ತಮ್ಮ ಭೂಪಾಲ 'ಸುಜ್ಞಾನಿದೇವನ ಕಾವ್ಯ' ಬರೆದಿರುವುದಾಗಿಯೂ, ಇಂದಿಗೂ ಜಿಲ್ಲೆಯ ಶಿವಾರಪಟ್ಟಣದ ಶಿಲ್ಪಿಗಳೂ ಸೇರಿದಂತೆ ಅನೇಕ ಶಿಲ್ಪಿಗಳು ನಂಬಿಹಳ್ಳಿಯ ಮಠದ ಶಿಷ್ಯರೆಂದೂ (ಹಾಗೂ ಪಾಪಾಘ್ನಿ ಮಠದ ಶಿಷ್ಯರೆಂದೂ), ಇವಲ್ಲದೆ ಅಂದಿಗೆ ಇದ್ದ ವೇದ-ಆಗಮಗಳ

ಬಗ್ಗೆ ತಾಕಲಾಟ, ಐತಿಹಾಸಿಕವಾಗಿ ಗಂಗ ಸಾಮ್ರಾಜ್ಯ ಈ ಪ್ರದೇಶದಲ್ಲಿ ನೆಲೆ ನಿಂತದ್ದು, ಇಲ್ಲಿಯೂ ಹಿಂದೆ ಹೇಳಿದಂತೆ ಜಲಕ್ಷಾಮವಿರುವ ಜಿಲ್ಲೆಗೆ ಲಭ್ಯ ನೀರನ್ನು ಶೇಖರಿಸಿಡುವಂತೆ ಮಳೆ ಹರಿವಿನ ಪ್ರದೇಶ, ಕೆರೆ–ಕಟ್ಟೆಗಳ ನಿರ್ಮಾಣಗಳ ನಕ್ಷೆ ಹಾಕಿಕೊಳ್ಳುವಿಕೆ (ಪ್ಲಾನ್) ಹಾಗೂ ನಿರ್ಮಿಸುವಿಕೆ ಶಿಲ್ಪಾಚಾರ್ಯರ ಕಾರ್ಯವೇ ಆಗಿದ್ದು ಗಂಗರಾಜರ ನಿರ್ದೇಶನದಂತೆ ಇಂತಹ ಕಾರ್ಯ ಮಾಡಿದ ಶಿಲ್ಪಾಚಾರ್ಯರೊಬ್ಬರಿಗೆ ಗ್ರಾಮದಾನ ಮಾಡಿದ್ದು ಅದೇ ಶಿವಾರಪಟ್ಟಣ ಪ್ರದೇಶ ಎಂದು ದಂತಕತೆಯಿರುವುದಾಗಿ ತಿಳಿಸುತ್ತಾರೆ.

ಸ್ಥಳೀಯ ಶಿಲ್ಪಿಗಳ ಹೇಳಿಕೆಯಂತೆ ಸುಮಾರು ೪೫೦ ವರ್ಷಗಳ ಹಿಂದೆ ಹೊಸಕೋಟೆ ತಾಲೂಕಿನ ಎಳಚೇಹಳ್ಳಿಯ ಜ್ಞಾನಚಾರ್ಯರ ಮಗ ಬಸವಲಿಂಗಾಚಾರ್ಯರು ಕಂಚಿಗೆ ಹೋಗಿ ಶಿಲ್ಪಕಲೆ ಕಲಿತು ಬಂದರೆಂದೂ ಇವರ ವಂಶಸ್ಥರೇ ಆದ ವಿಶ್ವನಾಥಾಚಾರ್ಯ, ಸ್ಥಪತಿ ಆಚಾರ್ಯರು ಸಂಗೀತ, ನಾಟ್ಯ, ಚಿತ್ರ, ಶಾಸ್ತ್ರ, ಸಂಸ್ಕೃತಗಳಲ್ಲಿ ಪಾರಂಗತರಾಗಿ ಶಿವಾರಪಟ್ಟಣದಲ್ಲಿ ನೆಲೆಸಿದರೆಂದೂ, ಮುಂದೆ ಅವರೇ ಕವಲೊಡೆದು ೩೦–೪೦ ಮನೆಗಳಾದುವೆಂದೂ ತಿಳಿದುಬರುತ್ತದೆ. ಇಂದು ಇಲ್ಲಿ ಶಿಲಾಶಿಲ್ಪವಷ್ಟೇ ಅಲ್ಲ, ಬೆಳ್ಳಿ, ಕಂಚು ಇತ್ಯಾದಿ ಲೋಹ ಹಾಗೂ ಮರಗೆಲಸ ಸಹ ನಡೆಯುತ್ತಿದೆ. ಗ್ರಾಮದ ಪ್ರತಿಮನೆಯೂ ಒಂದು ಶಿಲ್ಪಶಾಲೆಯಂತಿದೆ. ಮೊದಲಿಗೆ ಶಿಲ್ಪಿಗಳು ಶಿಲೆಯನ್ನು ಬಳಿಯ ಸೂರ್ಯಮಲ್ಲೇಶ್ವರ ಬೆಟ್ಟ ಹಾಗೂ ವೇಮಗಲ್ ಬಳಿಯ ಬೆಟ್ಟಗಳಿಂದ ಶಾಸ್ತ್ರೋಕ್ತವಾಗಿ ತರುತ್ತಿದ್ದು ಈಚೆಗೆ ಹೆಗ್ಗಡದೇವನ ಕೋಟೆ ಪ್ರದೇಶದಿಂದ ಶಿಲೆ ಬರುತ್ತದೆ. ಗಣಿಗಾರಿಕೆಯ ಮೇಲೆ ಸರ್ಕಾರದ ಹತೋಟಿಯಿದ್ದು ಶಿಲೆ ಪಡೆಯುವುದು ಕಷ್ಟ ಸಾಧ್ಯವೆಂಬುದಾಗಿ ತಿಳಿದುಬರುತ್ತದೆ.

ಶಿವಾರಪಟ್ಟಣದಲ್ಲಿ ಇಂದು ನೂರಾರು ಶಿಲ್ಪಿಗಳಿದ್ದು ಬಹಳಷ್ಟು ಕಲಾವಿದರು ವಿವಿಧ ರೀತಿಯಲ್ಲಿ ಹೆಸರು ಮಾಡಿದ್ದಾರೆ. ಪ್ರಶಸ್ತಿ, ಪಾರಿತೋಷಕಗಳನ್ನು ಗಳಿಸಿದ್ದಾರೆ. ಕಳೆದ ಶತಮಾನದ ಮೊದಲಭಾಗದಲ್ಲಿದ್ದ ಚನ್ನಪ್ಪಾಚಾರ್ಯರು ನಿರ್ಮಿಸಿದ ವಿಗ್ರಹಗಳು ನಾಡಿನಾದ್ಯಂತ ಸಂಗ್ರಹಿತವಾಗಿದ್ದು ಹೃಷಿಕೇಶಕ್ಕೆ ಹತ್ತೊಂಬತ್ತು ವಿಗ್ರಹಗಳನ್ನು ರಚಿಸಿಕೊಟ್ಟು ಸನ್ಮಾನಿತರಾಗಿದ್ದರು. ಶಿಲೆ–ಲೋಹಶಿಲ್ಪ, ಹಿತ್ತಾಳೆ, ಬೆಳ್ಳಿ ತಗಡುಗಳಲ್ಲಿ ಪ್ರಭಾವಳಿ, ಆಭರಣ, ಕಿರೀಟ ಇತ್ಯಾದಿ ಶಿಲ್ಪಕಾರ್ಯದಲ್ಲಿ ಪ್ರಸಿದ್ಧರಿದ್ದು ಶೃಂಗೇರಿ, ಚೆನ್ನೈ, ರಾಮೇಶ್ವರ ಇತ್ಯಾದಿ ಪ್ರದೇಶಗಳಲ್ಲಿ ಬಿರುದು ಬಾವಲಿ ಸನ್ಮಾನ–ಬಹುಮಾನಗಳನ್ನು ಪಡೆದಿದ್ದರು.

ಸುಜ್ಞಾನಮೂರ್ತಾಚಾರ್ಯರು ಚಿಕ್ಕಬಳ್ಳಾಪುರದ ಆದಿವೇಣುಗೋಪಾಲ, ಉತ್ಸವಮೂರ್ತಿ, ಕೈವಾರ ತಾತಯ್ಯನವರ ವಿಗ್ರಹ ಚಾಮುಂಡೇಶ್ವರಿ, ಶ್ರೀನಿವಾಸ ಇತ್ಯಾದಿಗಳಲ್ಲದೆ ಲಂಡನ್ ಮ್ಯೂಸಿಯಂಗೆ ನಂದಿ ವಿಗ್ರಹ ರಚಿಸಿಕೊಟ್ಟಿದ್ದಾರೆ. ಇವರ ಪುತ್ರ ಎಸ್.ಶಂಕರನಾರಾಯಣಚಾರ್ಯ (೧೯೩೪)ರು ಶಿಲೆ, ಲೋಹಗಳ ಶಿಲ್ಪಕಲೆ ಹಾಗೂ ಚಿತ್ರಕಲಾವಿದರೂ ಆಗಿದ್ದಾರೆ. ದೆಹಲಿಯ ಕರಕುಶಲ ಮ್ಯೂಸಿಯಂ, ಹರಿಯಾಣದ ಸೂರಜ್ ಕುಂಡ್, ಮಹಾಬಲಿಪುರ, ಆಂಧ್ರದ ವಾರಂಗಲ್, ಹೈದರಾಬಾದ್ ಹಾಗೂ ಶಿಲ್ಪಗ್ರಾಮ ಕ್ರಾಫ್ಟ್ ವಿಲೇಜ್, ಮಾದಾಪುರ (ಹೈದರಾಬಾದ್) ಸೂರತ್, ಮುಂಬಯಿ, ಪೂನಾ, ಗ್ವಾಲಿಯರ್‌ಗಳಲ್ಲದೆ ಕೊಲ್ಲೂರು ಬೆಂಗಳೂರಿನ ರಾಷ್ಟ್ರಪತಿ ಭವನಗಳಲ್ಲಿ ನಡೆದ ಶಿಲ್ಪಶಿಬಿರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಶ್ರೀಯುತರು ರೂಪಿಸಿದ ವಿಗ್ರಹಗಳು ಅಮೆರಿಕಾ, ಮಿಚಿಗನ್, ಬ್ರಿಟನ್ (ಲಂಡನ್) ಜರ್ಮನಿಗಳಲ್ಲದೆ ಭಾರತಾದ್ಯಂತ ಸಂಗ್ರಹಗೊಂಡಿವೆ. ರಾಷ್ಟ್ರಪತಿಗಳಿಗೆ, ರಾಜ್ಯಪಾಲರುಗಳಿಗೆ, ಮಂತ್ರಿಗಳಿಗೆ ಅವರ ನಿರ್ದೇಶನದಂತೆ ಶಿಲ್ಪ ರಚಿಸಿ ನೀಡಿದ್ದಾರೆ. ೧೯೭೮ರಲ್ಲಿ ರಾಷ್ಟ್ರಪ್ರಶಸ್ತಿ, ೧೯೯೬ರಲ್ಲಿ ನ್ಯಾಷನಲ್ ಹ್ಯಾಂಡಿಕ್ರಾಫ್ಟ್ ಸೆಂಟರಿನ 'ವೆಟ್ರನ್ ಆರ್ಟಿಸ್ಟ್ ಪ್ರಶಸ್ತಿ' ೧೯೯೭ರಲ್ಲಿ ಇಂಡಿಪೆಂಡೆಂಟ್ ಗೋಲ್ಡನ್ ಜ್ಯೂಬಿಲಿ ಪ್ರಶಸ್ತಿ ಇತ್ಯಾದಿಗಳು ಬಂದಿವೆ. ಲಲಿತ ಕಲಾ ಅಕಾಡೆಮಿ ಹಾಗೂ ಶಿಲ್ಪಕಲಾ ಅಕಾಡೆಮಿಗಳಿಗೆ ತಲಾ ಒಂದೊಂದು ಅವಧಿಗೆ ಸದಸ್ಯರಾಗಿದ್ದರು. ಇವರ ಮಕ್ಕಳಾದ ಎಸ್.ಮಂಜುನಾಥಾಚಾರ್ಯ ಮತ್ತು ಮೋಹನ ಕುಮಾರರೂ ಶಿಲ್ಪ ಕಲಾವಿದರಾಗಿದ್ದು ಮಂಜುನಾಥಾಚಾರ್ಯರು ಬೆಂಗಳೂರಲ್ಲಿ 'ಸುರಭಿ

ಹೊಯ್ಸಳ ಕಲಾನಿಕೇತನ' ಮೂಲಕ ಶಿಲ್ಪಗಳ ರಚನೆ, ಪ್ರದರ್ಶನ, ಮಾರಾಟ ಮಾಡುತ್ತಿದ್ದಾರೆ. ಕೆಲವು ಪ್ರಶಸ್ತಿಗಳ ವಿಜೇತರೂ ಆಗಿದ್ದಾರೆ. ಎಸ್.ಶಂಕರನಾರಾಯಣಾಚಾರ್ಯರ ಲೋಹದ ಶಿಲ್ಪಗಳಲ್ಲಿ ಚೋಳ ಶಿಲ್ಪಗಳಂತೆ ಪ್ರಮಾಣ ಬದ್ಧತೆ, ಸಪೂರತೆಗಳೂ ಹೊಯ್ಸಳ ಶಿಲ್ಪಗಳಂತೆ ಆಭರಣ ವಿಶೇಷತೆಗಳು ಕಂಡುಬರುತ್ತದೆ. ಚಲನಶೀಲತೆ, ಜೀವಂತಿಕೆಗಳ ಅನುಭವವಾಗುತ್ತದೆ.

ಚನ್ನಪ್ಪಾಚಾರ್ಯರ ಮಕ್ಕಳಾದ ಎಸ್.ಶಂಕರಾಚಾರ್ಯರು ಸ್ನಾತಕ ಹಾಗೂ ಹಿಂದಿ 'ರತ್ನ' ಪದವಿ ಪಡೆದಿದ್ದು ಶಿಲ್ಪ ರಚನೆಯನ್ನು ಶಾಸ್ತ್ರೋಕ್ತವಾಗಿ ಮುಂದುವರಿಸಿದ್ದಾರೆ. ಸಮಕಾಲೀನ ಹಾಗೂ ಭಾವ ಶಿಲ್ಪಗಳಲ್ಲೂ ಪರಿಣತರಿದ್ದಾರೆ. ಬೆಂಗಳೂರಿನಲ್ಲಿ ಶಿವನಮೂರ್ತಿ, ರಾಮಸಂಪುಟ, ಮಂಡ್ಯದಲ್ಲಿ ಶಂಕರಾಚಾರ್ಯ, ದತ್ತಾತ್ರೇಯ, ರಾಜರಾಜೇಶ್ವರಿ ಮೂರ್ತಿಗಳಲ್ಲದೆ ಆಂಧ್ರ, ತಮಿಳುನಾಡುಗಳಲ್ಲೂ ದೇವಾನುದೇವತೆಗಳ ಶಿಲ್ಪಗಳನ್ನು ಶ್ರೀಯುತರು ರಚಿಸಿಕೊಟ್ಟಿದ್ದಾರೆ. ಸ್ವಾಮಿಶಿವಾನಂದ, ವೀರೇಂದ್ರಪಾಟೀಲ್, ತಾಳಕೆರೆ ಸುಬ್ರಹ್ಮಣ್ಯ ಹಾಗೂ ದೇವೇಗೌಡರ ಭಾವ ಶಿಲ್ಪಗಳು ಗಮನಾರ್ಹವಾಗಿವೆ. ಇವರ ಒಬ್ಬ ಪುತ್ರ ಗೋಪಿನಾಥಾಚಾರ್ಯ ತಂದೆಗೆ ನೆರವಾಗುತ್ತಿದ್ದು ಇನ್ನೊಬ್ಬ ಪುತ್ರ ಎಸ್.ಶಶಿಧರ ಬೆಂಗಳೂರಿನ ಕೆನ್ ಕಲಾಶಾಲೆಯಲ್ಲಿ ಅಭ್ಯಸಿಸುತ್ತಿದ್ದು ಈಗಾಗಲೇ 'ಯುವಪ್ರತಿಭೆಯ' ಪುರಸ್ಕೃತನಾಗಿರುವದಲ್ಲದೆ ಆರ್.ಎಂ.ಹಡಪದ್, ಜಿ.ವಿ.ಅಯ್ಯರ್, ನೀಲಾಕಂಠಾಚಾರ್ಯರ ಭಾವಶಿಲ್ಪ ರಚಿಸಿದ್ದಾರೆ. ಶಿಲೆ, ಲೋಹದ ಎರಕ, ಸಿಮೆಂಟ್ ಪ್ಲಾಸ್ಟರ್‌ಗಳು ಹಾಗೂ ಆಧುನಿಕ ಸಾಮಗ್ರಿಯಾದ ಪ್ಲಾಸ್ಟರ್, ಫೈಬರ್ ಗ್ಯಾಸ್‌ಗಳಲ್ಲೂ ಐವತ್ತಕ್ಕೂ ಮೀರಿದ ಭಾವ ಶಿಲ್ಪ ರಚಿಸಿ ಭರವಸೆಯ ಕಲಾವಿದರಾಗಿದ್ದಾರೆ.

ಕೆ.ಎಸ್.ಶ್ರೀಧರಾಚಾರ್ಯರು ಶಿಲೆ, ಲೋಹ ಶಿಲ್ಪಗಳಲ್ಲಿ ಹೆಸರು ಮಾಡಿದ್ದು ರಾಜಾಜಿನಗರದ ರಂಗನಾಥ ದೇವಾಲಯಕ್ಕೆ ರೂಪಿಸಿರುವ ಕರಿಕಲ್ಲಿನ ಗಟ್ಟಿ ಶಿಲೆಯ ೨೫ ಅಡಿ ಉದ್ದದ ಪವಡಿಸಿರುವ ರಂಗನಾಥ ಜೊತೆಗೆ ಶ್ರೀದೇವಿ–ಭೂದೇವಿ, ವೆಂಕಟೇಶ ಇವೇ ಮುಂತಾದ ಶಿಲ್ಪಗಳು ಆಧುನಿಕ ಕಾಲದಲ್ಲಿಯೂ ಸಾಂಪ್ರದಾಯಿಕ ಶಿಲ್ಪಗಳ ಬೃಹದಾಕಾರ, ಸೌಂದರ್ಯ, ಶಾಸ್ತ್ರೀಯ ಗುಣಗಳಿಗೆ ಉದಾಹರಣೆಯಂತಿವೆ. ಕೋಲಾರದ ಉದ್ಯಾನವನದಲ್ಲಿರುವ ಸರ್ವಜ್ಞ ಮೂರ್ತಿಯೂ ಸೇರಿದಂತೆ ಅಂಡಮಾನ್, ಆಂಧ್ರದ ಕುಪ್ಪಂ ಹಾಗೂ ಜಪಾನ್, ಅಮೆರಿಕೆಗಳಲ್ಲಿ ಇವರ ಕಲಾಕೃತಿಗಳಿವೆ. ಶ್ರೀಯುತರಿಗೆ ಕರ್ನಾಟಕ ಲಲಿತ ಕಲಾ ಅಕಾಡೆಮಿ ರಾಜ್ಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳು ದೊರೆತಿವೆ. ಇವರ ಮಕ್ಕಳಾದ ನರೇಂದ್ರ ವಿಶ್ವಕರ್ಮ ಹಾಗೂ ಮಹದೇವ್ ಪಾಂಚಾಲ್ ಅವರುಗಳು ಶಿಲ್ಪಕಲೆ ಮುಂದುವರಿಸುತ್ತಿದ್ದಾರೆ. ಶಿವಾರಪಟ್ಟಣದಲ್ಲಿರುವ ಇವರ ಮನೆಯ ಮುಂದಿನ ಅಂಗಳದಲ್ಲಿ ಶ್ರೀಧರಾಚಾರ್ಯರಿಂದ ರಚಿತವಾದ ನೂರಾರು ಶಿಲ್ಪಗಳು ವ್ಯವಸ್ಥಿತವಾಗಿ ಜೋಡಿಸಿದ್ದು ಒಂದು ಬಯಲು ಪ್ರದರ್ಶನಾಲಯದಂತಿದೆ.

ಎಸ್.ಬಿ.ಪದ್ಮನಾಭಾಚಾರ್ಯರ ಶಿಲ್ಪ ಕಲಾ ಕಾಣಿಕೆ ಹಿರಿಯದಾದುದು. ವಿಶ್ವಾದ್ಯಂತ ವ್ಯಾಪಿಸಿರುವುದು. ಆಗಮೋಕ್ತ ಶಿಲ್ಪ ರಚನೆಯಲ್ಲದೆ ಜ್ಯೋತಿಷ್ಯ, ಸಂಗೀತ, ಸಾಹಿತ್ಯ, ನಾಟಕ ಕಲೆ ಇತ್ಯಾದಿಗಳಲ್ಲೂ ಪರಿಶ್ರಮವಿರುವ ಇವರ ನೂರಾರು ಶಿಲ್ಪಗಳಲ್ಲಿ ಮುಖ್ಯವಾದವು, ಬೆಂಗಳೂರಿನ ಶಾಂತಲ ಸಿಲ್ಕ್ ಹೌಸ್ ಮುಂದಿರುವ ಶಾಂತಲೆಯ ವಿಗ್ರಹ, ಟಿಬೆಟ್‌ನ ಪತಂಜಲಿ, ಕೊಚ್ಚಿನ್‌ನ ದತ್ತಾತ್ರೇಯ, ಪೂನಾವಿನ ಸತ್ಯನಾರಾಯಣ ಇತ್ಯಾದಿ ೬೦ ವಿಗ್ರಹಗಳು, ತಮಿಳುನಾಡಿಗೆ ೫೦ ವಿಗ್ರಹಗಳು, ಕೊಡಗಿಗೆ ೩೦, ಆಂಧ್ರದ ವಿವಿಧ ೨೦ ದೇವಾಲಯಗಳಿಗೆ ಅಗತ್ಯವಿದ್ದ ಎಲ್ಲ ವಿಗ್ರಹಗಳು, ಟೆಕ್ಸಾಸ್‌ಗೆ ವೆಂಕಟರಮಣ, ಲಕ್ಷ್ಮಿ, ಪದ್ಮಾವತಿ, ರಾಮ ಸಂಪುಟ, ಕವಚ, ಪ್ರಭಾವಳಿ, ಆಭರಣಗಳು, ಲಂಡನ್‌ಗೆ ಪತಂಜಲಿ ಇವೇ ಮುಂತಾದುವನ್ನು ಉದಾಹರಿಸಬಹುದು. ಶ್ರೀಯುತರ ಶಿಲ್ಪಕಲಾ ಕಾಯಕಕ್ಕೆ ಮೆಚ್ಚಿ ಅಮೆರಿಕೆಯಿಂದ ಮೆಚ್ಚುಗೆಯ ಪತ್ರ. ಪುಣೆಯಿಂದ ಪ್ರಶಸ್ತಿ ಪತ್ರ, ಕರ್ನಾಟಕ ರಾಜ್ಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಇತ್ಯಾದಿಗಳು ಸಂದಿವೆ. ಇವರ

ಮಗ ಉದಯಕುಮಾರ್ ಅವರ ಶಿಲ್ಪಕಲೆಗೆ ದಕ್ಷಿಣ ಫ್ಲಾರಿಡಾದಿಂದ ಪ್ರಶಸ್ತಿ ಪತ್ರ ಬಂದಿದೆ. ಇವರೂ ಸೇರಿದಂತೆ ಪುರಷೋತ್ತಮಾಚಾರ್ಯ, ನಂದಾಚಾರ್ಯ, ನಂಜುಂಡಾಚಾರ್ಯ, ಸುಧಾಮಾಚಾರ್ಯ, ಭಾನುಪ್ರಕಾಶ್, ನಾಗೇಶ್ ಮುಂತಾದವರು ಶಿಷ್ಯ ವೃತ್ತಿ ಮಾಡಿ ಪ್ರವರ್ಧಮಾನಕ್ಕೆ ಬರುತ್ತಿದ್ದಾರೆ.

ಎಸ್.ಎಂ.ಶಂಕರಾಚಾರ್ಯರಿಗೆ ಶಿಲ್ಪ ರಚನೆಯಲ್ಲಿ ಅರವತ್ತಕ್ಕೂ ಹೆಚ್ಚು ವರ್ಷಗಳ ಅನುಭವವಿದ್ದು ಶಾಸ್ತ್ರೋಕ್ತವಾಗಿ ರಚನೆ ಹಾಗೂ ಪ್ರತಿಷ್ಠಾಪನಾ ಕಾರ್ಯ ಸಹ ಮಾಡಿಕೊಡುತ್ತಾರೆ. ಚಿಕ್ಕಬಳ್ಳಾಪುರದ ಚಾಮುಂಡೇಶ್ವರಿ, ಹುಣಸಮಾರನಹಳ್ಳಿಯ ರೇಣುಕಾಚಾರ್ಯ ಇವಲ್ಲದೆ ಆಂಧ್ರ, ತಮಿಳುನಾಡು, ಒರಿಸ್ಸಾಗಳಲ್ಲಿಯ ಅನೇಕ ದೇವಾಲಯಗಳಿಗೆ ಶಿಲ್ಪಗಳನ್ನು ನೀಡಿದ್ದಾರೆ. ಶ್ರೀಯುತರಿಗೆ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿಯಲ್ಲದೆ ಅಖಿಲಭಾರತ ಕುಶಲಕೈಗಾರಿಕಾ ಸಪ್ತಾಹಗಳ ವಾರ್ಷಿಕ ಪ್ರದರ್ಶನಗಳಲ್ಲಿ ಮೂರು ಬಾರಿ ಪ್ರಶಸ್ತಿ ಸಂದಿವೆ. ಇವರ ಮಗ ಶ್ರೀಪಥಾಚಾರ್ಯ ಕ್ರಮಬದ್ಧ ಕಲಾಭ್ಯಾಸ ಮಾಡಿದ್ದು ಭಾವಶಿಲ್ಪ, ಭಾವಚಿತ್ರ ರಚನೆಯಲ್ಲಿ ಪರಿಣಿತರಿದ್ದಾರೆ. ಪ್ರಸ್ತುತ 'ನಿಮ್ಹಾನ್ಸ್'ನಲ್ಲಿ ಚಿತ್ರಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ರಾಜಶೇಖರಾಚಾರ್ಯರು ಹಾಸನಕ್ಕೆ ಶಂಕರಾಚಾರ್ಯ, ಶಾರದೆ, ಗಣಪತಿ ಇತ್ಯಾದಿಗಳಿಗೆ ಬೆಳ್ಳಿಯ ಕವಚ, ರಾಜಾಜಿನಗರದ ರಾಮಮಂದಿರಕ್ಕೆ ರಾಮಸಂಪುಟ, ಪಶ್ಚಿಮ ಜರ್ಮನಿಗೆ ಕೃಷ್ಣ ಹಾಗೂ ಮುಂಬಯಿ, ಹೊಸೂರು, ಮುಳಬಾಗಿಲು, ಬೆಂಚೇನಹಳ್ಳಿ, ಹೈದರಾಬಾದ್ ಇತ್ಯಾದಿ ಕಡೆಗಳಿಗೆ ವಿಗ್ರಹ, ಬೆಳ್ಳಿ ಕವಚ ಇತ್ಯಾದಿ ರೂಪಿಸಿಕೊಟ್ಟಿದ್ದಾರೆ. ಇವರ ಮಗ ಶ್ರೀನಿವಾಸಚಾರ್ಯ ಕ್ರಮಬದ್ಧ ಕಲಾಭ್ಯಾಸ ಮಾಡಿ ಶಿಲ್ಪಕಲೆ ಮುಂದುವರಿಸಿದ್ದಾರೆ. ಬೆಂಗಳೂರಿನ ಮಲ್ಲೇಶ್ವರದ ನರಸಿಂಹಸ್ವಾಮಿ ದೇವಾಲಯಕ್ಕೆ ಬೆಳ್ಳಿಯ ಕವಚಗಳು, ಇಮ್ಮಡಿ ಹಳ್ಳಿಯ ಧ್ವಜಸ್ತಂಭ ಮುಖ್ಯ ಕೃತಿಗಳು. ಕರಕುಶಲ ಅಭಿವೃದ್ಧಿ ನಿಗಮದಿಂದ ಪ್ರಶಂಸಾ ಪತ್ರ, ರಾಷ್ಟ್ರೀಯ ಮಟ್ಟದ ಕಿರು ಶಿಲ್ಪ ರಚನೆಗಳಲ್ಲಿ ಬಹುಮಾನ ಪಡೆದಿದ್ದು ಹಲವಾರು ಕಲಾಗಾರಗಳಲ್ಲಿ ಭಾಗವಹಿಸಿದ್ದಾರೆ. ಎನ್.ಎಸ್.ಮಾಳಿಗಾಚಾರ್ಯರು ಶಿಲೆ, ಲೋಹಗಳಲ್ಲಿ ಶಿಲ್ಪ ಕಲಾವಿದರಾಗಿದ್ದು ಸಿಟಿ ಮಾರ್ಕೆಟ್ ಬಳಿಯ ಗಣಪತಿ, ನಿಮ್ಹಾನ್ಸ್ ಆವರಣದಲ್ಲಿ ಬೃಹದಾಕಾರದ ಗಣಪತಿ, ಕೋದಂಡರಾಮ ವಿಗ್ರಹಗಳನ್ನೂ, ಮಚಲೀಪಟ್ಟಣ, ಅನಂತಪುರ, ಬಳ್ಳಾರಿಗಳಿಗೆ ವಿವಿಧ ಶಿಲ್ಪಗಳನ್ನೂ ರಚಿಸಿಕೊಟ್ಟಿದ್ದಾರೆ. ಇವರಿಗೆ ಶಿಲ್ಪಕಲಾ ಅಕಾಡೆಮಿಯ ರಾಜ್ಯ ಪ್ರಶಸ್ತಿ ಲಭಿಸಿದೆ. ಇವರ ಪುತ್ರ ಎಸ್.ಎಂ.ವಿಜಯಕುಮಾರ್ ಶಿಲ್ಪಕಲೆ ಮುಂದುವರಿಸಿದ್ದಾರೆ. ಎಸ್.ಜ್ಞಾನಲಿಂಗಚಾರ್ಯರು ಹೊಸಪೇಟೆ, ಬಳ್ಳಾರಿ, ರಾಣಿಬೆನ್ನೂರು, ಹಾಸನ, ಚಿತ್ರದುರ್ಗ, ಪಾವಗಡಗಳಲ್ಲದೆ ಚೆನ್ನೈನ ದೇವಾಲಯಗಳಿಗೆ ಶಿಲ್ಪ ನೀಡಿದ್ದಾರೆ. ಧೋಂಡುಸಾ ಅವರ ಮೂಲಕ ಅಮೆರಿಕೆಗೆ ವೆಂಕಟಸ್ವಾಮಿ ವಿಗ್ರಹ ಕಳಿಸಿದ್ದಾರೆ. ಇವರ ಮಕ್ಕಳು ಹಾಗೂ ತಮ್ಮಂದಿರೂ ಶಿಲ್ಪಕಲಾವಿದರಾಗಿದ್ದಾರೆ.

ಹೊರ ಜಿಲ್ಲೆಯಿಂದ ಬಂದು ಇಲ್ಲಿ ನೆಲೆಸಿರುವ ದಕ್ಷಿಣ ಮೂರ್ತಿ ಆಚಾರ್ಯರು ತಡವಾಗಿ ಶಿಲ್ಪಕಲೆ ಕಲಿತರಾದರೂ ಬಹಳಷ್ಟು ಶಿಲ್ಪಗಳನ್ನು ರಚಿಸಿಕೊಟ್ಟಿದ್ದಾರೆ. ಅದಕ್ಕಿಂತ ಸಂಗೀತ, ನಾಟಕ, ವೈದ್ಯವೃತ್ತಿಗಳಲ್ಲದೆ ಪಂಚಾಯಿತಿಯ ಅಧ್ಯಕ್ಷರಾಗಿ ಅನೇಕ ಜನಹಿತ ಕಾರ್ಯಮಾಡಿದ್ದಾರೆ. ೧೯೩೭ರಲ್ಲಿಯೇ ಶಿವಾರಪಟ್ಟಣದ ಶಿಲ್ಪಿಗಳ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪ ತಂದು ಶಿಲ್ಪಕಲಾ ಕೇಂದ್ರವಾಗಿ ರಾಜ್ಯದ ಗಮನ ಸೆಳೆಯುವಂತೆ ಮಾಡಿದವರು. ಜಿ.ಎನ್.ಮಂಜುನಾಥಚಾರ್ಯ ಹೊಯ್ಸಳ ಶಿಲ್ಪಗಳಂತೆ ಅಲಂಕಾರಯುತವಾಗಿ, ಶಿಲೆಯಲ್ಲಿಯೂ ಲೋಹಶಿಲ್ಪಗಳಂತೆ ಕುಸುರಿ ಕೆಲಸದಲ್ಲಿ ಪರಿಣಿತರಿದ್ದು ಅನೇಕ ಪ್ರಶಸ್ತಿಗಳು ದೊರೆತಿವೆ. ಮುಖ್ಯವಾಗಿ ಚನ್ನಕೇಶವ ವಿಗ್ರಹಕ್ಕೆ ರಾಷ್ಟ್ರಪ್ರಶಸ್ತಿ, ರಾಷ್ಟ್ರೀಯ ಕಲಾಮೇಳ ಪ್ರಶಸ್ತಿ, ದೆಹಲಿಯಲ್ಲಿ ಇಂದಿರಾಗಾಂಧಿಯವರ ಶಿಲಾಪ್ರತಿಮೆಗೆ ಪ್ರಶಸ್ತಿ ಅಂತರ ರಾಷ್ಟ್ರೀಯ ಕಲಾಮೇಳಗಳಲ್ಲಿ ಪ್ರಶಸ್ತಿಗಳು ಬಂದಿವೆ. ಮಲ್ಲಿಕಾರ್ಜುನಾಚಾರ್ಯರು ಜ್ಞಾನಲಿಂಗಾಚಾರ್ಯರ ಸಹೋದರರಾಗಿದ್ದು ಮಲ್ಲೇಶ್ವರದ ಲಕ್ಷ್ಮೀನರಸಿಂಹಸ್ವಾಮಿ ವಿಗ್ರಹವಲ್ಲದೆ ರಾಜ್ಯಾದ್ಯಂತ ಅನೇಕ ಶಿಲ್ಪಗಳನ್ನು ರಚಿಸಿಕೊಟ್ಟಿದ್ದಾರೆ. ಜ್ಞಾನಮೂರ್ತಾಚಾರ್ಯರು ೧೯೯೧ರಲ್ಲಿಯೇ ದೂರದರ್ಶನದಲ್ಲಿ ಶಿಲ್ಪ ರಚಿಸುವ ಬಗ್ಗೆ ವಿವರವಾದ ಕಾರ್ಯಕ್ರಮ ನೀಡಿದವರಲ್ಲಿ

ಒಬ್ಬರಾಗಿದ್ದವರು. ಶ್ರೀಯುತರು ತಮಿಳುನಾಡು, ಈರೋಡು, ಭವಾನಿ, ಕೊಯಮತ್ತೂರು, ಸೇಲಂ ಮುಂತಾದೆಡೆಗಳಿಗೆ ಶಿಲ್ಪ ರಚಿಸಿ ನೀಡಿದ್ದಾರೆ. ಶಿವಾರಪಟ್ಟಣ ಸಮೀಪದ ತ್ಯಾವನಹಳ್ಳಿಯಲ್ಲಿ ವೆಂಕಟರಮಣಾಚಾರ್ಯ ಹಾಗೂ ಅವರ ಮಕ್ಕಳು, ರಾಮಾಚಾರ್ಯ ಹಾಗೂ ಅವರ ಮಕ್ಕಳು ಲೋಹದ ಪ್ರಭಾವಳಿ ಕವಚ ಇತ್ಯಾದಿಗಳನ್ನು ತಯಾರಿಸುತ್ತಿದ್ದಾರೆ. ಮಾಲೂರಿನ ಕುಡೇನೂರು ಗ್ರಾಮದಲ್ಲಿಯ ಮುನಿಶ್ಯಾಮಾಚಾರ್ಯರು ಶಿಲ್ಪಾಗಮಗಳಲ್ಲಿ ಪರಿಣಿತರಿದ್ದು ಶಿಲ್ಪರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ಮಕ್ಕಳು ಹಾಗೂ ಶಿಷ್ಯರಲ್ಲಿ ಸಾಂಬಾಚಾರ್ಯ, ರಘುನಾಥಾಚಾರ್ಯ, ಶಂಕರಾಚಾರ್ಯ, ಚಂದ್ರಾಚಾರ್ಯ ಮುಂತಾದವರು ತಯಾರಾಗುತ್ತಿದ್ದಾರೆ. ಜಿಲ್ಲೆಯ ಉಳಿದ ಶಿಲ್ಪಿಗಳೆಂದರೆ ಚಿಕ್ಕಬಳ್ಳಾಪುರದ ಪಾಪಾಚಾರ್ ಹಾಗೂ ಜಿ.ವೀರೇಂದ್ರ, ಕುಡಿಯನೂರಿನ ಬಿ.ಆರ್.ಮೃತ್ಯುಂಜಯಾಚಾರ್, ಅಣ್ಣಿಹಳ್ಳಿಯ ಎನ್.ಜನಾರ್ಧನಾಚಾರ್ಯ, ನಂದಿಬೆಟ್ಟದ ಟಿ.ಎನ್.ನಾಗರಾಜ್, ತ್ಯಾವನಹಳ್ಳಿಯ ಎನ್.ಶಂಕರಾಚಾರ್ಯ ಮುಂತಾದವರನ್ನು ಉದಾಹರಿಸಬಹುದು. ಉಪ್ಪುಕುಂಟೆಯಲ್ಲಿಯೂ ಕೆಲವು ಶಿಲ್ಪಿಗಳಿದ್ದಾರೆ.

ಉಳಿದಂತೆ ಶಿವಾರಪಟ್ಟಣದ ಶಿಲ್ಪಿಗಳಲ್ಲಿ ಎಸ್.ಬಿ.ನಂಜುಂಡಾಚಾರ್, ಗಂಗಾಧರಾಚಾರ್ಯ, ಎಸ್.ಎನ್.ತ್ಯಾಗರಾಜಾಚಾರ್ಯ, ಎಸ್.ಎನ್.ಬಸವಾಚಾರ್ಯ, ಡಂಕಣಾಚಾರ್ಯ ಅವರ ಮಗ ಎಸ್.ಡಿ.ಬಸವಲಿಂಗಾಚಾರ್ಯ, ಕೆ.ಎನ್.ಕಾಳಾಚಾರ್ಯ, ಕೆ.ಎನ್.ಶಂಕರಾಚಾರ್ಯ, ಕೆ.ಎನ್.ವೀರಭದ್ರಾಚಾರ್ಯ, ನಾರಾಯಣಾಚಾರ್ಯ, ಬಿ.ನಾಗರಾಜಾಮೂರ್ತಿ, ವಿ.ನಂಜಪ್ಪಾಚಾರ್ಯ, ಉಮಾಕಾಂತಾಚಾರ್ಯ, ಕೆ.ಗೋಪಾಲಾಚಾರ್ಯ, ಕೆ.ಈಶ್ವರಾಚಾರ್ಯ, ಜಗನ್ನಾಥಚಾರ್ಯ, ಜೈಶಂಕರ್ ಆಚಾರ್ಯ, ನಾಗರಾಜಾಚಾರ್ಯ, ಪಿ.ರಾಜಶೇಖರ್, ನಾರಾಯಣ್, ರಘುಭದ್ರಾಚಾರ್ ಮುಂತಾದ ಅನೇಕರನ್ನು ಉದಾಹರಿಸಬಹುದು. ಈಚೆಗೆ ಇನ್ನೂ ಹಲವಾರು ತರುಣ ಕಲಾವಿದರು ಕ್ರಿಯಾಶೀಲರಾಗಿದ್ದು ಕೆಲವರು ಬೆಂಗಳೂರಿನಲ್ಲೂ ಶಿಲ್ಪಕಲಾಗಾರ ತೆರೆದಿದ್ದಾರೆ. ಮೇಲಿನ ಶಿಲ್ಪಿ ಸಮೂಹದಲ್ಲಿ ಅನೇಕರು ರಾಜ್ಯ ಪ್ರಶಸ್ತಿ, ಲಲಿತಕಲಾ ಹಾಗೂ ಶಿಲ್ಪಕಲಾ ಅಕಾಡಮಿ ಪ್ರಶಸ್ತಿಗಳಲ್ಲದೆ ಅಭಿಮಾನಿಗಳು, ಮಠಮಾನ್ಯಗಳಿಂದ ಪುರಸ್ಕೃತರಾಗಿದ್ದಾರೆ. ಬಹಳಷ್ಟು ಶಿಲ್ಪಿಗಳ ಅನೇಕ ಕೃತಿಗಳು ರಾಜ್ಯ, ಹೊರರಾಜ್ಯ ಮೀರಿ ವಿದೇಶಗಳಲ್ಲೂ ಸಂಗ್ರಹಿತಗೊಂಡಿವೆ. ಶಿಲ್ಪಿಗಳಲ್ಲಿ ಕೆಲವರು ಪೂರ್ಣ ಪ್ರಮಾಣದ ದೇವಾಲಯವನ್ನೂ ನಿರ್ಮಿಸಿಕೊಟ್ಟಿದ್ದಾರಲ್ಲದೆ, ಪೂಜಾವಿಗ್ರಹಗಳನ್ನು ಆಗಮೋಕ್ತವಾಗಿ ಪ್ರತಿಷ್ಠಾಪನೆ ಮಾಡಿಕೊಡುವುದುಂಟು. ಶಿವಾರಪಟ್ಟಣದಲ್ಲಿ ಶಿಲ್ಪಕಲಾ ತರಬೇತಿಕೇಂದ್ರವೊಂದು ಆರಂಭವಾಗಿ ಕೆಲಕಾಲ ನಡೆಯಿತು.

ರಾಜ್ಯ ಹಾಗೂ ಕೇಂದ್ರ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಗಳು ಕೋಲಾರ ಜಿಲ್ಲೆಯಲ್ಲಿ ಕೆಲವು ಸ್ಮಾರಕ/ದೇವಾಲಯಗಳನ್ನು 'ರಕ್ಷಿತ ಸ್ಮಾರಕಗಳು' ಎಂದು ಪರಿಗಣಿಸಿದ್ದು ಅವುಗಳ ವಿವರ ಈ ರೀತಿಯಿದೆ.

**ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ರಕ್ಷಿತ ಸ್ಮಾರಕಗಳು:–** ಬಂಗಾರ ಪೇಟೆಯ ಬೇತಮಂಗಲದ ವಿಜಯೇಂದ್ರ ದೇವಾಲಯ; ಚಿಕ್ಕಬಳ್ಳಾಪುರದ ರಂಗಸ್ಥಳದ ರಂಗನಾಥ ದೇವಾಲಯ; ಚಿಂತಾಮಣಿಯ ಆಲಂಗಿರಿಯ ವೆಂಕಟರಮಣಸ್ವಾಮಿ ದೇವಾಲಯ ಹಾಗೂ ಕೈವಾರದ ಭೀಮೇಶ್ವರ ಮತ್ತು ನಕುಲೇಶ್ವರ ದೇವಾಲಯಗಳು, ಗೌರಿಬಿದನೂರು ತಾಲೂಕಿನ ಹಿರೇಬಿದನೂರು ಹುಸೇನ್ ಷಾ ದರ್ಗಾ, ಕೋಲಾರದ ಬಾರಾ ಇಮಾಮ್ ಮಶಾನ್, ಸೀತಿ ಬೆಟ್ಟದ ಶ್ರೀ ಪತೀಶ್ವರ ದೇವಾಲಯ ಮತ್ತು ವಕ್ಕಲೇರಿಯ ಮಾರ್ಕಂಡೇಶ್ವರ ದೇವಾಲಯ; ಮಾಲೂರಿನ ಮಡಿವಾಳದ ಸ್ವಯಂಭೇಶ್ವರ ದೇವಾಲಯ; ಮುಳಬಾಗಿಲಿನ ದೊಡ್ಡ ಗರುಡ ಶಯನ ದೇವಾಲಯ ಹಾಗೂ ಭಾವಿ, ಬೃಂದಾವನ, ಮಂಟಪ, ಪುಷ್ಕರಣಿ ಇತ್ಯಾದಿಗಳು; ಕುರುಡುಮಲೆಯ ಸೋಮೇಶ್ವರ ದೇವಾಲಯ ಮತ್ತು ಶಾಸನಗಳು ಹಾಗೂ ವಿನಾಯಕ ದೇವಾಲಯ; ಮುಳಬಾಗಿಲು ಶಹರದಲ್ಲಿಯ ಹೈದರಲಿದರ್ಗ, ಸೋಮೇಶ್ವರ ದೇವಾಲಯ, ಶ್ರೀಪಾದರಾಯರ ಬೃಂದಾವನ, ವಿಠಲನಾರಾಯಣ ದೇವಾಲಯ; ವಿರೂಪಾಕ್ಷಪುರದ ಈಶ್ವರ ದೇವಾಲಯ; **ಕೇಂದ್ರ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯ ರಕ್ಷಿತ ಸ್ಮಾರಕಗಳು:–** ಬಂಗಾರ ಪೇಟೆಯ ಬೂದಿಕೋಟೆಯಲ್ಲಿರುವ ಹೈದರಲಿಯ ಜನ್ಮಸ್ಥಳ, ಹುನಕೊಂಡದ

ಪ್ರಾಗೈತಿಹಾಸಿಕ ನೆಲೆ; ನಂದಿಗ್ರಾಮದ ಭೋಗಾನಂದೀಶ್ವರ ದೇವಾಲಯ ಮತ್ತು ನಂದಿದುರ್ಗದ ಟಿಪ್ಪುಸುಲ್ತಾನನ ತಂಗುದಾಣ. ಕೋಲಾರ ಶಹರಿನ ಕೋಲಾರಮ್ಮ ಹಾಗೂ ಸೋಮೇಶ್ವರ ದೇವಾಲಯಗಳು ಮತ್ತು ಹೈದರಾಲಿಯ ತಂದೆಯ ಸಮಾಧಿ; ಆವನಿಯ ರಾಮೇಶ್ವರ ದೇವಾಲಯ ಹಾಗೂ ಶಾಸನಗಳು.

## ಸಂಗೀತ, ನೃತ್ಯ

ಸಂಗೀತ, ನೃತ್ಯಕಲೆಗಳಿಗೆ ಮೊದಲಿನಿಂದಲೂ ಜಿಲ್ಲೆ ನೀಡಿರುವ ಪ್ರೋತ್ಸಾಹ ಅನಾದೃಶ್ಯವಾದುದು. ಕೋಲಾರಮ್ಮ ದೇವಾಲಯದ ಕ್ರಿ.ಶ.೧೦೭೧ರ ಶಾಸನ, ದೇವತೆಯನ್ನು ಪಿಡಾರಿಯಾರ್ ಎಂದು ಕರೆದಿದ್ದು ಯೋಗೇಶ್ವರ ಯೋಗಿಣಿಯರಿಗೆ ಸಂಬಂಧಿಸಿದಂತೆ, ತಲೆಯಮೇಲೆ ಮೃದಂಗ ವಾದ್ಯ ಹೊತ್ತು ನುಡಿಸುವವನಿಗೆ, ಇಬ್ಬರು ತಾಳವಾದಕರಿಗೆ, ಕರಡಿಗೆ, ಜಾಗಟೆ, ಕೈಗಂಟೆ ನುಡಿಸುವವರಿಗೆ, ಇಬ್ಬರು ಶಂಖವಾದಕರಿಗೆ, ೨೪ ಮಂದಿ ನರ್ತಕಿಯರಿಗೆ ಕೆಲವು ಪ್ರಮಾಣದಲ್ಲಿ ಭತ್ತ ದಾನ ನೀಡುವಂತೆ ತಿಳಿಸುತ್ತದೆ (ಕೋಲಾರ ೧೦೬). ಮುಂದೆಯೂ ೧೩೬೩ರಲ್ಲಿ ನೃತ್ಯ, ಗೀತ, ವಾದ್ಯಗಳಿಗೆ ಸಂಬಂಧಿಸಿದಂತೆ ಭೂದಾನ ಮಾಡಿದ ಪ್ರಸ್ತಾಪ ಕೋಲಾರಮ್ಮ ದೇವಾಲಯದಲ್ಲಿರುವ ಶಾಸನದಲ್ಲಿದೆ (ಕೋಲಾರ ೧೦೧). ಶಿಡ್ಲಘಟ್ಟದ ಕ್ರಿ.ಶ.೧೧೨೦ರ ವಿಕ್ರಮಚೋಳನ ಶಾಸನ ಸುಗಟೂರನ್ನು (ನಿಗರಲಿ ಚೋಳಮಂಡಲ) ವರ್ಣಿಸುತ್ತಾ ಅದು ದೇವತೆಗಳು ನರ್ತನ ಕಲಿಯತಕ್ಕಂತಹ ಪ್ರಾಂತ್ಯ ಎಂದೂ, ಸಂಗೀತವಾದ್ಯಗಳ ನಿನಾದಕ್ಕೆ ಮೀಸಲಿರಿಸಿದಂತಹ ನಾಡೆಂದೂ ದಾಖಲಿಸಿದೆ (ಶಿಡ್ಲಘಟ್ಟ ೯). ಚಿಂತಾಮಣಿಯ ಅಂಬಾಜಿದುರ್ಗ ಹೋಬಳಿಯ ಉಪ್ಪಾರಪೇಟೆ ಗ್ರಾಮದಲ್ಲಿ ೧೧೭೯ರಲ್ಲಿ ಸೆಟ್ಟಿದೇವನ್ ಎಂಬಾತ ಕಟ್ಟಿಸಿದ ದೇವಾಲಯದಲ್ಲಿ ದೇವರ ಮುಂದೆ ಸಂಗೀತ ವಾದ್ಯ ನುಡಿಸಲು ಭೂದಾನ ನೀಡಲಾಗಿತ್ತು (ಚಿಂತಾಮಣಿ–೮೩). ಅಂತೆಯೇ ಬಂಗಾರಪೇಟೆಯ ೧೨೦೦ರ ಶಾಸನದಲ್ಲಿ ಕೊಂಬುಕಹಳೆಯ ವಾದ್ಯ ನುಡಿಸುವುದಕ್ಕೆ ಸಂಬಂಧಿಸಿದಂತೆ ದಾನ ನೀಡಿದ ಉಲ್ಲೇಖವಿದೆ (ಬಂಗಾರಪೇಟೆ–೩೫ ಎಫ್). ಇದೇ ಬಂಗಾರಪೇಟೆಯ ಕ್ಯಾಸಂಬಳ್ಳಿ ಹೋಬಳಿಯ ಮಡಿವಾಳ ಗ್ರಾಮದಲ್ಲಿರುವ ೧೨೮೦ರ ಶಾಸನ ಅನೇಕ ವಿಧದಿಂದ ಕುತೂಹಲಕಾರಿಯಾಗಿದೆ. ಜಯಂಗೊಂಡ ಚೋಳ ಇಳವೆಂಗಿರಾಯ ನಿರ್ಮಿಸಿದ ಸ್ವಯಾಂಭವೇಶ್ವರ ದೇವಾಲಯದಲ್ಲಿ ನೃತ್ಯಮಂಟಪ (ನಡೈಮಾಳಿಗೆ vestibule)ವನ್ನೂ ಹಾಗೂ ಹಲವಾರು ಶಿಲ್ಪಗಳನ್ನು ರಚಿಸಿದ ಶಿಲ್ಪಿಗಳಿಗೆ ಹಾಗೂ ಐದು ಮಂದಿ ವಾದ್ಯಗಾರರು, ನೃತ್ಯ ಶಿಕ್ಷಕ, ೨೪ ಮಂದಿ ನೃತ್ಯಗಾರ್ತಿಯರು, ತಿರುಪ್ಪಾಡಿಯಮ್ ಹಾಡುವ ಹಾಡುಗಾರ, ಪೌರಾಣಿಕ ನಾಟಕ ಕಲಿಸಿಕೊಡುವ ರಂಗ ನಿರ್ದೇಶಕ, ಶ್ಲೋಕ ವಾಚಿಸುವ ೧೨ ಬ್ರಾಹ್ಮಣರು ಮುಂತಾದವರಿಗೆ ಹಲವಾರು ದಾನಗಳನ್ನು ನೀಡಲಾಗಿದೆ (ಬಂಗಾರಪೇಟೆ ೩೮ ಎ). ಇದಕ್ಕೂ ಹಿಂದಿನ ಮುಳಬಾಗಿಲಿನ ೧೨೩೪ರ ವೀರರಾಯನ ಮಗ ಇಳವೆಂಗಿರಾಯನ ಶಾಸನ ನೃತ್ಯ, ಸಂಗೀತಗಳ ಬಗ್ಗೆ ಉಲ್ಲೇಖಿಸಿ ಗ್ರಾಮ ದಾನ ನೀಡಿರುವುದನ್ನು ದಾಖಲಿಸುತ್ತದೆ. ಮಾಲೂರು ತಾಲೂಕಿನ ಟೇಕಲ್‌ನ ವರದರಾಜ ದೇವಾಲಯ ಹಾಗೂ ಶಾಸನಗಳು ಅಧ್ಯಯನ ಯೋಗ್ಯವಾಗಿದ್ದು ೧೩೩೬ರ ಶಾಸನವೊಂದು ನೃತ್ಯಗಾರ್ತಿಯೊಬ್ಬಳಿಗೆ ದಿನಭತ್ಯೆಯಾಗಿ ಬೇಯಿಸಿದ ಅನ್ನ (Cooked rice) ನೀಡುವಂತೆ ತಿಳಿಸುತ್ತದೆ. (ಮಾಲೂರು ೨೪) ಆದರೆ ಇದೇ ಸ್ಥಳದ ೧೩೫೬ರ ಶಾಸನದಂತೆ ಅರುಳಾಳನಾದನ್ ದೇವಾಲಯದಲ್ಲಿ ಹಲವಾರು ನೃತ್ಯಗಾರರಿದ್ದಂತೆಯೂ ಅವರಲ್ಲಿ ಸೇಂದಿಕ್ಕಾದೇವಿ ಹಾಗೂ ಆಕೆಯ ಸಹೋದರಿ ವರದಿಗಳಿಗೆ ಮೊದಲ ಸೇವೆ ನೀಡುವ ಅವಕಾಶ ಕೊಟ್ಟಿದ್ದಲ್ಲದೆ ಕೆಲವು ಭೂದಾನ ಸಹ ನೀಡಿರುವುದು ಕಂಡುಬರುತ್ತದೆ (ಮಾಲೂರು೨೧). ಇದೇ ಅವಧಿಯ (೧೩೫೬) ಇನ್ನೊಂದು ಶಾಸನ ನೃತ್ಯಗಾತಿ ವರದಿಯನ್ನು ರಾಜಮಾನಿಕ್ಕಮ್ ಎಂದು ಕರೆದು ಬೇಯಿಸಿದ ಆಹಾರ ನೀಡುವಂತೆ ಆದೇಶಿಸಿದೆ (ಮಾಲೂರು೨೨). ಇದೇ ಟೇಕಲ್‌ನ ೧೪೩೦ರ ವಿಜಯನಗರ ಕಾಲದ ಶಾಸನ ಸಂಗೀತ ನೃತ್ಯಗಳ ಬಗ್ಗೆ ವಿಸ್ತಾರವಾಗಿ ದಾಖಲಿಸಿದೆ. ಕೆಲವೆಡೆ ತ್ರುಟಿತವಾಗಿ ಅನೇಕ ಕಲಾವಿದರ ಹೆಸರು ನಾಶವಾಗಿದ್ದರೂ ವರದರಾಜ ಸ್ವಾಮಿ

ದೇವಾಲಯದಲ್ಲಿ ಕಹಳೆ ನುಡಿಸುತ್ತಿದ್ದ ದಾಸ(?), ಶಂಖ ನುಡಿಸುತ್ತಿದ್ದ ಶ್ರೀರಂಗ, ಉಪಾಂಗದಂತಿದ್ದ ವರದಿಕಾ, ವರದನ ಮಗಳು ಅಲ್ಲೆನಾಚಿ, ಅರಂಗಿದೇವಿ, ನಟುವ ನಾಯಿನಾರು ಮಗಳು ಚಿಕ್ಕನಾಚಿ ಅವರಿಗೆ ಗೋಪರಾಜ ಒಡೆಯ ಎಂಬಾತ ಗ್ರಾಮ ದಾನ ಮಾಡಿದ್ದು ಮುಂದೆ ಇನ್ನಷ್ಟು ವಿವರ ನೀಡುತ್ತದೆ. 'ದೇವರಿಗೆ ನಿಲಿಸಿದ' ಪಾತ್ರದವರಲ್ಲಿ ಚಂಗಿಯ ಮಗಳು ವರದಿ, ಹಿರಿಯ ವರದಿ, ನಿಟ್ಟೆಯ ವರದಿ, ಸಿಂಗಿಯ ಮಗಳು ಬಡನಾಚಿ, ಚಿಕ್ಕ ಅಳುವಿಯ ಮಗಳು ಕಸ್ತೂರಿ ವರದಿ, ಚಿಕ್ಕವರದಿ, ಕಾಳೆವರದನ ಮಗಳು ಸಂಪಂಗಿ ವರದಿ, ಹಿರಿಯ ಅಲವಿಯ ಮಗಳು ನಾಚಿ, ಶ್ರೀರಂಗಿಯ ಮಗಳು ತಿಪ್ಪಿ, ಮೂರಾತೆಗಳಲ್ಲದೆ ಅಂಗಭೋಗ ರಂಗಭೋಗ ನಿರ್ವಹಿಸುವ (ಶುಚಿಮಾಡುವ) ಹಲವರನ್ನು ಹೆಸರಿಸಿ ಅವರಿಗೆ ಗ್ರಾಮದಾನ ಮಾಡಿದೆ. (ಕೋಲಾರ ಶಾ.ಸಂ. ಪುರವಣಿ, ಶಾ.ಸಂಖ್ಯೆ, ಮಾಲೂರು-೩)ಟೇಕಲ್‌ನ ೧೩೫೭ರ ಶಾಸನದಲ್ಲಿಯೂ 'ವರದಿ' ಎಂಬ ನೃತ್ಯಗಾತಿಯ ಪ್ರಸ್ತಾಪವಿದ್ದು ಮುಂದಿನ ಎಪ್ಪತ್ತು ವರ್ಷಗಳ ನಂತರವೂ ಆಕೆಯ ವಂಶಜರೇ ದೇವಾಲಯದಲ್ಲಿ ಸೇವೆ ಮಾಡುತ್ತದ್ದಿರಬಹುದು. 'ವರದಿ' ಎಂಬ ಹೆಸರನ್ನು ತಮ್ಮ ಹೆಸರಿಗೆ ಉಪನಾಮದಂತೆ ಸೇರಿಸಿಕೊಂಡಿದ್ದು, ಒಟ್ಟಾರೆಯಾಗಿ ಈ ಅವಧಿಯಲ್ಲಿ ನೃತ್ಯ, ಸಂಗೀತ ಕಲೆ, ಕಲಾವಿದರಿಗೆ ನೀಡಿದ ಆದ್ಯತೆ ಮೆಚ್ಚುವಂತಹದು. ಮಾಲೂರಿನ ನೊಣಮಂಗಲದ ಜೈನಬಸ್ತಿಯ ಜೀರ್ಣೋದ್ಧಾರದ ವೇಳೆಯಲ್ಲಿ ಲೋಹದ ಆನೆ, ಎಂಟು ಶಂಖಗಳು ದೊರೆತಿದ್ದು ಶಂಖದ ಮೇಲೆ 'ಪೆಳ್ಮಡಿ' ಎಂಬ ಬರಹವಿದ್ದು ಇದನ್ನು ದೇವಾಲಯಗಳ ಸೇವೆಯಲ್ಲಿ ಬಳಸುವ ಒಂದು ವಾದ್ಯ ವಿಶೇಷ ಎಂದು ಪರಿಗಣಿಸಿದೆ. ಮುಂದಿನ ದಿನಗಳಲ್ಲಿ ಸಾಹಿತ್ಯ ರಚನೆ ಅಧಿಕವಾಗಿದ್ದು ಅವುಗಳಲ್ಲಿ ನೃತ್ಯ, ಸಂಗೀತಗಳ ಉಲ್ಲೇಖ ಬರುವುದಲ್ಲದೆ ಜಿಲ್ಲೆಯಲ್ಲಿ ಅನೇಕರು ಯಕ್ಷಗಾನ ಕೃತಿಗಳನ್ನು ರಚಿಸಿದ್ದು ಅವುಗಳು ರಂಗಮಂದಿರದಲ್ಲಿ ಪ್ರಯೋಗವಾಗುವಾಗ ನೃತ್ಯ, ಸಂಗೀತ, ವಾದ್ಯಗಳ ಬಳಕೆಯಾಗಿರಲೇಬೇಕು. ಹತ್ತೊಂಬತ್ತನೆಯ ಶತಮಾನದ ಅಂತ್ಯದ ವೇಳೆಗೆ ಸಂಗೀತ-ನೃತ್ಯಗಾರರಿಗೆ ದೇವಾಲಯದ ನೇರ ಸೇವೆ ತಪ್ಪಿ ಸಾಮಾಜಿಕವಾಗಿ ಅವರ ಸ್ಥಾನಕ್ಕೆ ಕೀಳ್ಮೆಯುಂಟಾಗುವಂತಾಯಿತು. ಆದರೂ ನೃತ್ಯ-ಸಂಗೀತಗಳನ್ನು ಉಳಿಸಿದ್ದು ಈಗ ಮತ್ತೆ ಅದಕ್ಕೆ ಒಂದು ಮಹತ್ವದ ಸ್ಥಾನ ಬರುವಂತಾಯಿತು.

ಡಿ.ವಿ.ಗುಂಡಪ್ಪನವರು ತಾವು ಎಳವೆಯಲ್ಲಿ ಕಂಡಿದ್ದ ಮುಳಬಾಗಿಲು ಪ್ರದೇಶದ ಸಂಗೀತ-ನೃತ್ಯಗಾರರ ಬಗ್ಗೆ ತಮ್ಮ ಜ್ಞಾಪಕ ಚಿತ್ರಶಾಲೆಯಲ್ಲಿ ಹೇಳುತ್ತಾರೆ. ತಾಲೂಕಿನ ಗುಣಿಗಂಟಿಪಾಳ್ಯದ ಸೀತಕ್ಕ ಹಾಗೂ ಆಕೆಯ ಸಾಕುಮಗಳು ರತ್ನಾಸಾನಿ ಅವರಿಗೆ ನೃತ್ಯ ಕಲಿಸುತ್ತಿದ್ದ ಭರತಾಚಾರ್ಯರು ಪನಸಕಾಯಲ ವೆಂಕಟಸುಬ್ಬಾಭಟ್ಟರೆಂಬ ವೈದಿಕರು. ರತ್ನಸಾನಿಗೆ ವೇದಮೂರ್ತಿ ವೆಂಕಟರಾಮಭಟ್ಟರ ಮನೆಯಲ್ಲಿ ಗೆಜ್ಜೆಪೂಜೆ ನಡೆದು ದೇವಾಲಯಗಳಲ್ಲಿ ಸಾಂಪ್ರದಾಯಿಕ ಕ್ರಿಯೆಗಳ ನಂತರ ಮೆರವಣಿಗೆಯಲ್ಲಿ ಆಕೆಯ ನೃತ್ಯವಿದ್ದು ನಟುವ ಮಾದಯ್ಯ ಪಿಟೀಲು ಹಾಗೂ ನಟುವ ಸೀತಾರಾಮಯ್ಯ ಮದ್ದಳೆ ನುಡಿಸುತ್ತಿದ್ದರು. ಬೈರಕೂರು ವೆಂಕಟಲಕ್ಷ್ಮಸಾನಿ ಭರತನಾಟ್ಯದೊಂದಿಗೆ ಸಾಹಿತ್ಯ ಜ್ಞಾನವೂ ಉಳ್ಳವರಿದ್ದು ಜಯದೇವನ ಅಷ್ಟಪದಿ, ಕೃಷ್ಣ ಕರ್ಣಾಮೃತಗಳಲ್ಲದೆ ಜಾವಳಿಗಳನ್ನೂ ಹಾಡಿ ಅಭಿನಯಿಸುತ್ತಿದ್ದರು. ಆಕೆಯ ನರ್ತನಕ್ಕೆ ಊರಿನ ರಸಿಕರಲ್ಲದೆ ಗಣ್ಯರೂ ಸೇರುತ್ತಿದ್ದರು. ಆಕೆಯ ಸಹೋದರ ನಾರಾಯಣ ಸಾಮಪ್ಪ ಸಂಗೀತ ಬಲ್ಲವರಾಗಿದ್ದರು. ಇವರಲ್ಲದೆ ಜೌಗುಪಾಳ್ಯದ ವೆಂಕಟಾಸಾನಿ, ಆಕೆಯ ಮಗಳು ಕಮಲಾಸಾನಿ, ಗೌರಕ್ಕ, ಪದ್ಮಾವತಿ ಸಹೋದರಿಯರು, ತುಳಸಾಸಾನಿ ಹಾಗೂ ನಟುವ ಅಪ್ಪಾಜಯ್ಯನ ಹೆಣ್ಣುಮಕ್ಕಳು ನೃತ್ಯ ಸಂಗೀತಗಳಲ್ಲಿ ಪರಿಣತರಿದ್ದರೆಂದು ಡಿವಿಜಿಯವರು ಉಲ್ಲೇಖಿಸುತ್ತಾರಲ್ಲದೆ, ನೃತ್ಯ ಶಿಕ್ಷಣ, ನರ್ತನದಲ್ಲಿ ಸೊಗಸುಗಾರಿಕೆ, ಅದರಲ್ಲಿಯ ಕಲೆಯ ಅಂಶ ಕುರಿತು ಅನೇಕ ವಿವರಣೆ ನೀಡುತ್ತಾರೆ. ಅಲ್ಲದೆ ಕೋಲಾರದ ನಾಗರತ್ನಮ್ಮ ಹಾಗೂ ಆಕೆಯ ಸಹೋದರ ಪಿಟೀಲುವಾದಕ ಪುಟ್ಟಸ್ವಾಮಯ್ಯ ಅವರ ಬಗ್ಗೆಯೂ ವಿವರ ನೀಡುತ್ತಾರೆ. ನಾಗರತ್ನಮ್ಮ ಅವರ ತಾಯಿ ನಂಜುಂಡಾನಿ ಸಹ ಪ್ರಸಿದ್ಧ ಗಾಯಕಿ,

ನರ್ತಕಿಯಾಗಿದ್ದು ಬೆಂಗಳೂರಿನಲ್ಲೂ ಹೆಸರುವಾಸಿಯಾಗಿದ್ದರು. ಚಿಕ್ಕಬಳ್ಳಾಪುರದ ಖ್ಯಾತ ತಿರುಮಲೆ ತಾತಾಚಾರ್ಯರ ವಂಶಸ್ಥರಾದ ಕಾಂಬೋಧಿ ಶ್ರೀನಿವಾಸಚಾರ್ಯರು (ತಿ.ತಾ.ಶರ್ಮರ ಅಜ್ಜಂದಿರು) ಸಂಗೀತ, ಭರತನಾಟ್ಯ ಶಾಸ್ತ್ರಗಳಲ್ಲಿ ವಿಶೇಷ ನೈಪುಣ್ಯ ಪಡೆದು ಕರ್ನಾಟಕ–ಆಂಧ್ರಗಳಲ್ಲಿ ಹೆಸರುಗಳಿಸಿದ್ದರು. ತಿ.ತಾ.ಶರ್ಮರ ಪತ್ನಿ ಭಾರತಿ ಅವರು ಸಂಗೀತ ವಿದುಷಿ ಎಂದೇ ಹೆಸರಾಗಿದ್ದರು. ಇವರ ಮಗ ತಿರುಮಲೆ ಶ್ರೀರಂಗಾಚಾರ್ಯ ಅವರ ಮಕ್ಕಳು ಸಹ ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ.

ಇದೇ ಅವಧಿಯಲ್ಲಿ ಮುಳಬಾಗಿಲಿನಲ್ಲಿ ಕೆಲವು ಪಿಟೀಲು ನುಡಿಸುವವರಿದ್ದು ಅವರಲ್ಲಿ ಸೇತುಮಾಧವರಾಯರು, ಮಾಧವಯ್ಯ, ರಾಮಚಂದ್ರಾಚಾರ್ರು ಹಾಗೂ ವೆಂಕಟಪ್ಪರನ್ನು ಡಿವಿಜಿ ಅವರು ಉದಾಹರಿಸುತ್ತಾರೆ. ಮಾಧವಯ್ಯ ನಟುವಾಂಗದವರಾಗಿದ್ದು, ಕೋಲಾರ ನಾಗರತ್ನಮ್ಮನವರ ಸಹೋದರ ಪುಟ್ಟಸ್ವಾಮಿ, ರಂಗನಾಥರಾವ್, ಮುಂತಾದವರಿಗೆ ಸಂಗೀತ ಶಿಕ್ಷಣ ಹೇಳಿ ಕೊಟ್ಟಿದ್ದರು. ರಾಮಚಂದ್ರಯ್ಯ ಖುಷಿಗಾಗಿ ಪಿಟೀಲು ಕಲಿತವರು. ವೆಂಕಟಪ್ಪ ಮೇಳದವರು. ಊರಲ್ಲಿ ಪೂಜೆ, ಪುನಸ್ಕಾರ, ಮದುವೆ, ಮುಂಜಿ, ಶ್ರೀಪಾದರಾಯರ ಆರಾಧನೆ ಇತ್ಯಾದಿ ವೇಳೆಗಳಲ್ಲಿ ಹಾಗೂ ಗೆಳೆಯರ ಒತ್ತಾಯದಿಂದ ಆಗಾಗ್ಗೆ ವಾದ್ಯ ವಾದನ ಮಾಡುತ್ತಿದ್ದಂತಹವರು. ಜಾತಿಯನ್ನು ಮೀರಿದ ಅನ್ಯೋನ್ಯತೆ, ಸಹಚರ್ಯೆ ಇವರಲ್ಲಿತ್ತು. ವೆಂಕಟಪ್ಪರವರಲ್ಲಿ ಕಲಿಯಲು ನೆರೆಯ ಆಂಧ್ರದಿಂದಲೂ ಆಸಕ್ತರು ಬರುತ್ತಿದ್ದರು.

ಕುರುಡುಮಲೆ, ಟೇಕಲ್, ಮಡಿವಾಳ, ಊಲವಾಡಿ, ರೋಣೂರು, ನೆಂಪಲ್ಲಿಗಳಲ್ಲಿ ನರ್ತಕಿಯರ ತರಬೇತು ಕೇಂದ್ರಗಳಿದ್ದವು. ಊಲವಾಡಿ (ಚಿಂತಾಮಣಿ ತಾ.) ರೋಣೂರು (ಶ್ರೀನಿವಾಸಪುರ ತಾ) ಕಾದಲವೇಣಿ, ಮುದುಗೆರೆ (ಗೌರಿಬಿದನೂರು ತಾ.) ಗಳಲ್ಲಿ ಇನ್ನೂರಕ್ಕೂ ಹೆಚ್ಚು ವೃತ್ತಿಪರ ನರ್ತಕಿಯರಿದ್ದು ಸ್ಥಳೀಯ ದೇವಾಲಯಗಳೇ ಅಲ್ಲದೆ ಮೈಸೂರು ಅರಮನೆಯಲ್ಲೂ ನೃತ್ಯ ಪ್ರದರ್ಶನ ನೀಡುತ್ತಿದ್ದುದಾಗಿ ತಿಳಿದುಬರುತ್ತದೆ.

ಸುಮಾರು ಇದೇ ಸಂದರ್ಭದಲ್ಲಿ ಮಾಲೂರಿನಲ್ಲಿ ಕೆಲವು ಸಂಗೀತಗಾರರಿದ್ದರು. ಮಾಲೂರು ಮುನಿಶಾಮಪ್ಪರವರು ಪ್ರಸಿದ್ಧ ನಾಗಸ್ವರವಾದಕರಾಗಿದ್ದು ಅವರಿಗೆ ಮೈಸೂರು ಅರಮನೆಯಿಂದ ಬಂಗಾರದ ನಾಗಸ್ವರ ಬಹುಮಾನಿತವಾಗಿತ್ತೆಂದು ತಿಳಿದುಬರುತ್ತದೆ. ಅಲ್ಲದೆ ಇವರು ಕೊಳಲು ಹಾಗೂ ಪಿಟೀಲುವಾದಕರೂ ಆಗಿದ್ದು ಇವರ ಶಿಷ್ಯರಲ್ಲಿ ಕುಡಿಯನೂರು ಸೀತಾರಾಮಯ್ಯ ಹಾಗೂ ದ್ಯಾಪಸಂದ್ರದ ಗುರಪ್ಪರವರು ಗುರುಗಳಿಗೆ ಕೀರ್ತಿ ತಂದುಕೊಟ್ಟವರಾಗಿದ್ದರು. ಮುನಿಶಾಮಪ್ಪ ಅವರ ತಮ್ಮ ಕೃಷ್ಣಪ್ಪ ಹಾಗೂ ಇವರ ಮಗ ಕೆ.ಚಂದ್ರಶೇಖರ್ ಸಹ ವಾದ್ಯಗಾರರು. ನಾಗಸ್ವರ ಕಲಾವಿದರಲ್ಲಿ ಮೊದಲಿಗೆ ಆಲಂಬಾಡಿ ಚಿನ್ನಪ್ಪ, ಮುನಿವೆಂಕಟಪ್ಪ (ಇವರು ಮುನಿಶಾಮಪ್ಪ ಅವರ ಅಣ್ಣಂದಿರಾಗಿದ್ದು ಬೆಳ್ಳಿ ನಾಗಸ್ವರ ಬಹುಮಾನವಾಗಿ ಪಡೆದಿದ್ದರು) ಅವರೂ ನಂತರ ಕುಡಿಯನೂರುನಂಜಪ್ಪ, ವೆಂಕಟೇಶ್, ರಾಜಣ್ಣ, ಜಯಮಂಗಲದ ಗಿರಿಯಪ್ಪ ಅವರನ್ನು ಉದಾಹರಿಸಬಹುದು. ಡೋಲುವಾದನದಲ್ಲಿ ಕುಡಿಯನೂರುರಂಗಪ್ಪ, ಮುನಿವೆಂಕಟರಾಮಯ್ಯ, ಗೋಪಾಲಪ್ಪ, ಸಂಪಂಗಪ್ಪ, ನಂಜುಂಡಪ್ಪ, ನಾರಾಯಣಸ್ವಾಮಿ, ಮುನಿಯಪ್ಪ, ಪೆದ್ದನ್ನರನ್ನು ಉದಾಹರಿಸಬಹುದು. ವಿದ್ವಾನ್ ಟಿ.ಗಂಗಾಧರಂ ಅವರು ನಾಗಸ್ವರ, ಶೃತಿ, ಡೋಲು, ತಾಳ ಮುಂತಾದ ಮಂಗಳವಾದ್ಯ ತರಬೇತಿ ಕೇಂದ್ರವೊಂದನ್ನು ಗುರುಕುಲ ಪದ್ಧತಿಯಲ್ಲಿ ಬೇತಮಂಗಲದಲ್ಲಿ ಸ್ಥಾಪಿಸಿದ್ದು, ಶ್ರೀರಾಮುಲು, ನಲ್ಲೂರು ಶ್ರೀನಿವಾಸ, ಕೋಲಾರದ ಶ್ಯಾಮಣ್ಣ, ಶ್ರೀರಾಮಪ್ಪ, ನಾಗಪ್ಪ ಮುಂತಾದವರು ಇಲ್ಲಿ ಕಲಿತು ಹೆಸರು ಪಡೆದ ಕಲಾವಿದರಾಗಿದ್ದಾರೆ. ಮಾಲೂರು ತಾಲೂಕು ಕುಡಿಯನೂರಿನ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಹಿಂದೆ ನಾಟ್ಯಸೇವೆಯಿದ್ದು ನಂತರ ಸ್ಥಗಿತವಾದರೂ ಆ ಕುಟುಂಬದ ಶಾಂತರಾಜಮ್ಮ ಮದ್ರಾಸ್ (ಚೆನ್ನೈ)ನಲ್ಲಿ ಸಂಗೀತಾಭ್ಯಾಸ ಮಾಡಿ ಪ್ರಸಿದ್ಧಿಗೆ ಬಂದಿದ್ದರು. ಇನ್ನೊಬ್ಬ ಕಲಾವಿದ ಕೆ.ಆರ್.ಅಶ್ವತ್ಥನಾರಾಯಣ

ಅವರು ಸಂಗೀತದ ಅಧ್ಯಾಪಕರಾಗಿದ್ದು ಗಾಯಕ ಹಾಗೂ ಪಿಟೀಲುವಾದಕರಾಗಿದ್ದರು. ಮೈಸೂರು ವಾಸುದೇವಾಚಾರ್ಯರಲ್ಲಿ ಅಭ್ಯಸಿಸಿ, ಅನೇಕ ಕಾರ್ಯಕ್ರಮಗಳನ್ನು ನೀಡಿದ್ದರು. ಮಾಲೂರಿನಲ್ಲಿ ನೆಲೆಸಿದ್ದ ಹುಟ್ಟುಕುರುಡರಾದ ಅಶ್ವತ್ಥನಾರಾಯಣರಾಯರು, ಗಾಯನ, ಮೃದಂಗ ಹಾಗೂ ಕೊನಗೋಲು ನುಡಿಸುವುದರಲ್ಲಿ ನಿಷ್ಣಾತರಿದ್ದು ಅವರು ಸುಶ್ರಾವ್ಯವಾಗಿ ಹಾಡಿದ ದೇವರನಾಮಗಳನ್ನು ಓಡಿಯನ್ ಗ್ರಾಮಫೋನ್ ಕಂಪನಿಯವರು ಧ್ವನಿಮುದ್ರಿಸಿ ಎರಡು ಗ್ರಾಮಫೋನ್ ರೆಕಾರ್ಡ್‌ಗಳನ್ನು ಬಿಡುಗಡೆ ಮಾಡಿದ್ದರು. ಅಬ್ಬೇನಹಳ್ಳಿ ಲಕ್ಷ್ಮಣರಾವ್ ಚಿಂತನಪಲ್ಲಿ ವೆಂಕಟರಾಯರ ಶಿಷ್ಯರಾಗಿದ್ದರು. ಲಕ್ಕೂರು ಪಾಪಯ್ಯ ಹಾಗೂ ಚಿನುಪಗಾನಹಳ್ಳಿಯ ಪರಿಶಿಷ್ಟ ಕುಟುಂಬದ ಮುನಿಯಪ್ಪ ಒಳ್ಳೆಯ ಗಾಯಕರಾಗಿದ್ದರು. ಮುನಿಯಪ್ಪ ಅನೇಕ ಕಚೇರಿಗಳನ್ನು ನೀಡಿದ್ದರು. ಅಂತೆಯೇ ಸಂಗೀತ ಕಚೇರಿಗಳನ್ನು ನೀಡಿದ್ದ ಭಜನೆ ಮನೆ ಕೃಷ್ಣಪ್ಪ, ಸಂಗೀತ ಅಧ್ಯಾಪಕ ಬಿ.ಕೆ.ವಿಠೋಬಮೂರ್ತಿ, ರಾಗಾಲಾಪನೆ, ಸಾಹಿತ್ಯ ಶುದ್ಧತೆ ಹಾಗೂ ಸ್ವರ ವಿನ್ಯಾಸಗಳಿಗೆ ಹೆಸರಾಗಿದ್ದ ತಿರುಮಲಹಟ್ಟಿ ಶ್ರೀನಿವಾಸಯ್ಯಂಗಾರ್ ಅವರುಗಳೂ ಮಾಲೂರು ಪ್ರದೇಶದವರು. ಇದೇ ಸ್ಥಳದ ಹಲವಾರು ವಾದನಗಳಲ್ಲಿ ಹಾಗೂ ಹಾಡುಗಾರಿಕೆಯಲ್ಲಿ ನುರಿತ ಟಿ.ವೆಂಕಟಪ್ಪ ಅವರು ಗಾನ ಕಲಾಭೂಷಣ ಎಲ್.ರಾಜಾರಾವ್ ಅವರಲ್ಲಿ ಅಭ್ಯಸಿಸಿ ಗಾನ ಕಲಾ ಪರಿಷತ್ತಿನ ಸಮ್ಮೇಳನಗಳಲ್ಲಿ ಕಚೇರಿ ನೀಡಿದ್ದಾರೆ. ಇವರ ಶಿಷ್ಯರಲ್ಲಿ ಉಮಾದೇವಿ ಶ್ರೀಕಂಠಯ್ಯ ಹಾಗೂ ಶಶಿಕಲಾ ಅವರನ್ನು ಉದಾಹರಿಸಬಹುದು. ಟಿ.ವೆಂಕಟಪ್ಪರವರಿಗೆ ೭೫ ವರ್ಷವಾದಾಗ ಸನ್ಮಾನಿಸಿ, ನಿಧಿಯನ್ನು ನೀಡಿದ್ದು ಅದನ್ನು ಮುದುವಟ್ಟಾಗಿ ಇರಿಸಿ ಪುರಂದರ ಹಾಗೂ ತ್ಯಾಗರಾಜರ ಆರಾಧನೆ ನಡೆಸಿಕೊಂಡು ಹೋಗಲು ನೆರವಾಗಿದ್ದಾರೆ.

ಪಿಟೀಲು ವಾದಕರಲ್ಲಿ ಕುಡಿಯನೂರು ಶೀನಪ್ಪ, ರಾಮಕೃಷ್ಣಪ್ಪ, ಜಯಮಂಗಲದ ಮಳೆರಾಯಪ್ಪ, ಮಾಲೂರಿನ ಎ.ಎಂ.ವೆಂಕಟಾಚಲಂ, ಕೋಲಾರದವರಾಗಿದ್ದು ಮಾಲೂರಿನಲ್ಲಿ ನೆಲೆಸಿದ್ದ ಭುವನೇಶ್ವರಯ್ಯ ಹಾಗೂ ಅವರ ಶಿಷ್ಯ ಕೆ.ಎಸ್.ನಾಗಭೂಷಣಯ್ಯ ಇವರ ಮಗ ಮಾರುತಿಪ್ರಸಾದ ಅವರುಗಳನ್ನು ಹೆಸರಿಸಬಹುದು. ಹಾರ್ಮೋನಿಯಂ ವಾದಕರಲ್ಲಿ ರಾಮಯ್ಯ, ನಂಜಪ್ಪ, ಜಂಗಮಕೋಟೆ ಕೃಷ್ಣಪ್ಪ, ಮಾಸ್ತಿ ವೆಂಕಟಾಚಲಂ, ಕೊಳಲು ವಾದಕರೂ ಆಗಿರುವ ಲಕ್ಷ್ಮೀಪತಿ ಅವರುಗಳು ತಾಳವಾದ್ಯದಲ್ಲಿ ಕುಡಿಯನೂರು ರಂಗಪ್ಪ, ಮಾಲೂರು ಪಾಪಯ್ಯ, ಸಂತೋಜರಾವ್, ದಾಸಪ್ಪ ಅವರೂ ಪ್ರಸಿದ್ಧರಿದ್ದಾರೆ.

ಹಳೆಯ ತಲೆಮಾರಿನವರಲ್ಲಿ ಕೋಲಾರದ ಕಿಟ್ಟಪ್ಪರವರು, ಕಂಚಿ ಸದಾಶಿವಯ್ಯ, ಹೊಸಕೋಟೆ ಅಣ್ಣಯಪ್ಪ ಮುಂತಾದವರಿಂದ ನೃತ್ಯ ಕಲಿತಿದ್ದವರು ಇವರ ಮಗಳಾದ ಬಿ.ಕೆ.ನಾಗರತ್ನಮ್ಮ ಖ್ಯಾತ ನೃತ್ಯಗಾರ್ತಿಯಾಗಿದ್ದು ಜಾವಳಿ ಮತ್ತು ಪದಗಳ ಅಭಿನಯದಲ್ಲಿ ಹೆಸರು ಮಾಡಿದ್ದರು. ಇವರು ಗಾಯಕಿಯೂ ಆಗಿದ್ದು ನಟುವಾಂಗ ಸಹ ನಿರ್ವಹಿಸಿದ್ದರು. ಕಿಟ್ಟಪ್ಪರ ಶಿಷ್ಯರಲ್ಲಿ ನಾಗರತ್ನಮ್ಮ, ವರಾಲು, ಕೋಲಾರದ ಪುಟ್ಟಪ್ಪ, ಎನ್.ಗುಂಡಪ್ಪ ಹೆಸರಿಸಬಹುದು. ಪುಟ್ಟಪ್ಪನವರು ಯು.ಎಸ್.ಕೃಷ್ಣರಾವ್ ಅವರಿಗೆ ನೃತ್ಯ ಕಲಿಯಲು ಪ್ರೇರೇಪಿಸಿದವರು. ಪುಟ್ಟಪ್ಪರವರ ರಂಗ ನಿರ್ವಹಣೆಯ ಬಗ್ಗೆ ಮೆಚ್ಚುಗೆಯ ಮಾತುಗಳಿವೆ. ಎಲ್.ಗುಂಡಪ್ಪ ಮೊದಲಿಗೆ ನರ್ತಕರಾಗಿದ್ದು ನಂತರ ನಟುವಾಂಗಕ್ಕೆ ಸೀಮಿತಗೊಳಿಸಿಕೊಂಡಿದ್ದು ಅವರು ಬಳಸುತ್ತಿದ್ದ ಸಂಗೀತದ ಪ್ರಕಾರಗಳು (ಜತಿಸ್ವರ, ಜಾವಳಿ ಇತ್ಯಾದಿ) ಅಪರೂಪವಿದ್ದು ಮುಂದೆ ಅದು ಬೆಳಕಿಗೆ ಬರಲಿಲ್ಲ.

ಈಚಿನ ಕಾಲದ ನೃತ್ಯ ಕಲಾವಿದರಲ್ಲಿ ಚಿನ್ನದ ಗಣಿಪ್ರದೇಶದಲ್ಲಿ ಜನಿಸಿದ ದೇವಕಿ ನರಸಿಂಹನ್ ಭರತನಾಟ್ಯ, ಕೂಚಿಪುಡಿ ಎರಡು ಪ್ರಕಾರಗಳಲ್ಲೂ ಅಭ್ಯಸಿಸಿದ್ದು ೧೯೬೫ರಲ್ಲಿ ರಂಗ ಪ್ರವೇಶ ಮಾಡಿ ಬೆಂಗಳೂರು, ಮುಂಬಯಿ, ಚೆನ್ನೈಗಳಲ್ಲೂ ದೆಹಲಿಯಲ್ಲಿ ಬಾಬು ರಾಜೇಂದ್ರಪ್ರಸಾದ್, ಜವಹರಲಾಲ್ ನೆಹರು ಅವರ ಸಮ್ಮುಖದಲ್ಲೂ ನಾಟ್ಯಪ್ರದರ್ಶನ ನೀಡಿದ್ದಾರೆ. ಮೈಸೂರಿನಲ್ಲಿ 'ನೃತ್ಯಾಲಯ' ಎಂಬ ನಾಟ್ಯಶಾಲೆ ಆರಂಭಿಸಿದ್ದರು. ಪ್ರಖ್ಯಾತ ನರ್ತಕಿ ಹಾಗೂ ಪ್ರಾಧ್ಯಾಪಕಿಯಾಗಿದ್ದ ಪದ್ಮಿನಿರಾವ್ (ಜ ೧೯೫೫)

ಅವರು ಕೋಲಾರದಲ್ಲಿ ಜನಿಸಿದ್ದು ಭರತನಾಟ್ಯ ಹಾಗೂ ಕೂಚಿಪುಡಿ ನೃತ್ಯಗಳಲ್ಲಿ ಹೆಸರುಮಾಡಿದ್ದಲ್ಲದೆ ಕೋರಿಯೋಗ್ರಫಿ ಸಹ ಕ್ರಮಬದ್ಧವಾಗಿ ಅಭ್ಯಸಿಸಿದ್ದಾರೆ. ನೃತ್ಯ ನಟುವಾಂಗಗಳಿಗೆ ಕೇಂದ್ರ ಸರ್ಕಾರದ ಶಿಷ್ಯ ವೇತನ ಪಡೆದಿದ್ದಾರೆ. ೧೯೭೩ರಲ್ಲಿ ರಂಗಪ್ರವೇಶ ಮಾಡಿದ್ದು ದೇಶ-ವಿದೇಶಗಳಲ್ಲಿ ಅನೇಕ ನೃತ್ಯ ಪ್ರದರ್ಶನ ನೀಡಿದ್ದಾರೆ. ತಮ್ಮ ಸ್ವಂತ ಪೊನ್ನಯ್ಯಪಿಳ್ಳೆ ನೃತ್ಯಶಾಲೆ ೧೯೭೭ರಲ್ಲಿ ಆರಂಭಿಸಿದ್ದು ಕೆಲವು ನೃತ್ಯರೂಪಕಗಳನ್ನು ಸಂಯೋಜಿಸಿದ್ದಾರೆ. ಮುಂಬಯಿಯ ಸುರಸಿಂಗಾರ್ ಸಂಸದ್‌ನಿಂದ 'ಶೃಂಗಾರ ಮಣಿ' ಬಿರುದು ದೊರೆತಿತ್ತು. ಕೆ.ಜಿ.ಎಫ್‌ನಲ್ಲಿ ಜನಿಸಿದ ಶರ್ಮಿಳ ಶಿವಶಂಕರ್ (೧೯೬೬) ಭರತನಾಟ್ಯವನ್ನು ಪದ್ಮಿನಿ ರಾಮಚಂದ್ರ ಅವರ 'ನಾಟ್ಯಪ್ರಿಯ'ದಲ್ಲಿ ಕಲಿತಿದ್ದು ಅಲ್ಲಿಯ ನೃತ್ಯರೂಪಕಗಳ ಪ್ರಮುಖ ಭೂಮಿಕೆಯಲ್ಲಿ ಪಾತ್ರವಹಿಸಿದ್ದಾರೆ. ಚಿನ್ನದಗಣಿ ಪ್ರದೇಶದವರೇ ಆದ ಶಾಲಿನಿ ಶಿವಶಂಕರ್ ಪದ್ಮಿನಿರಾಮಚಂದ್ರರವರಲ್ಲಿ ಅಭ್ಯಸಿಸಿ, ಕೆಜಿಎಫ್, ಬೆಂಗಳೂರು, ಎರ್ನಾಕುಲಂ ಸೇರಿದಂತೆ ಅನೇಕ ಕಡೆ ಪ್ರದರ್ಶನ ನೀಡಿದ್ದಾರೆ.

ಕೈವಾರದ ಕೈ.ಪು.ಕೃಷ್ಣಶಾಸ್ತ್ರಿಗಳು ಪ್ರಸಿದ್ಧ ಕೀರ್ತನಕಾರರಾಗಿದ್ದರು. ಇವರ ಪುತ್ರ ಕೈ.ಪು.ಲಕ್ಷ್ಮೀನರಸಿಂಹಶಾಸ್ತ್ರಿಗಳು (ಜ ೧೯೪೧) ಕೈವಾರದಲ್ಲಿ ಜನಿಸಿದ್ದು ಸಂಗೀತ ಶಿಕ್ಷಣ ಕ್ರಮಬದ್ಧವಾಗಿ ಕಲಿತು, ಪ್ರೌಢಶಾಲೆಯ ಅಧ್ಯಾಪಕರೂ ಆಗಿದ್ದರು. ಕರ್ನಾಟಕ ಸಂಗೀತವನ್ನು ಬಲ್ಲವರಾಗಿದ್ದು ಸುಶ್ರಾವ್ಯವಾಗಿ ಹಾಡಬಲ್ಲರು. ಮೃದಂಗ, ಕೊಳಲು, ಹಾರ್ಮೋನಿಯಂ ಮುಂತಾದ ಸಂಗೀತ ವಾದ್ಯ ನುಡಿಸಬಲ್ಲವರು. ಹರಿಕಥೆ, ಉಪನ್ಯಾಸ ನೀಡುತ್ತಿದ್ದು ಅನೇಕ ಹರಿಕಥಾ ಕಾಲಕ್ಷೇಪ ಮಾಡಿರುವರಲ್ಲದೆ ಆಸಕ್ತರಿಗೆ ಬೋಧಿಸಿಯೂ ಇದ್ದಾರೆ. ಇವರ ಮಕ್ಕಳಾದ ಭಾಸ್ಕರ ಶರ್ಮ ಹಾಗೂ ಬಾಲಕೃಷ್ಣಶರ್ಮ ಅವರುಗಳೂ ಸಂಗೀತ ವಿದ್ವಾಂಸರಾಗಿದ್ದಾರೆ.

ಗೌರಿಬಿದನೂರು ತಾಲೂಕಿನ ಹುಣಸೇನಹಳ್ಳಿಯ ವೆಂಕಟರಾಯರ (೧೮೭೫-೧೯೬೯) ಪೂರ್ವಜರಾದ ತಿಪ್ಪಣ್ಣರವರು ರಣದುಲ್ಲಾಖಾನನನ್ನು ಸಂಗೀತದಿಂದ ಮೆಚ್ಚಿಸಿ, 'ಸಂಗೀತರಾವ್' ಎಂಬ ಬಿರುದು ಪಡೆದ ಬಗ್ಗೆ ಸನ್ನದು ಇರುವಂತೆ ತಿಳಿದುಬರುತ್ತದೆ. ವೆಂಕಟರಾಯರು ಮೊದಲಿಗೆ ತಮ್ಮ ಚಿಕ್ಕಪ್ಪ ಭಾಸ್ಕರರಾವ್ ಹಾಗೂ ವೆಂಕಟದಾಸಪ್ಪರಲ್ಲಿ ಕಲಿತು ನಂತರ ಹಲವಾರು ವಿದ್ವಾಂಸರಲ್ಲಿ ಪ್ರೌಢ ಶಿಕ್ಷಣ ಪಡೆದರು. ಚಿಕ್ಕಂದಿನಲ್ಲಿಯೇ ಇವರ ತಮ್ಮ ವೆಂಕಟಾಚಲಯ್ಯ ಅವರೊಂದಿಗೆ ಬರೋಡ, ಗದ್ವಾಲ್ ಸೇರಿದಂತೆ, ಉತ್ತರ ಭಾರತದ ಹಲವಾರು ಕಡೆಗಳಲ್ಲಿ ಕಚೇರಿ ನೀಡಿ ನಂತರ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ನೆಲೆ ನಿಂತರು. ಅರಮನೆಯಿಂದ 'ಸಂಗೀತ ರತ್ನ' ಬಿರುದಲ್ಲದೆ ಹಲವಾರು ಸನ್ಮಾನಗಳು ಬಿರುದುಗಳು ದೊರೆತಿದ್ದವು. ಹುಣಸೇಹಳ್ಳಿಯಲ್ಲಿ ಹುಟ್ಟಿದ ಚಿಂತನಪಲ್ಲಿ ರಾಮಚಂದ್ರರಾವ್ (ಜ೧೯೧೬) ಅವರ ತಂದೆ ವೆಂಕಟರಾವ್, ಚಿಕ್ಕಪ್ಪ ವೆಂಕಟಾಚಲಯ್ಯ ಸಂಗೀತ ವಿದ್ವಾಂಸರಾಗಿದ್ದು ರಾಮಚಂದ್ರರಾವ್ ಮೊದಲಿಗೆ ಅವರಲ್ಲಿ ನಂತರ ಬೆಂಗಳೂರು, ಚಿದಂಬರಂಗಳಲ್ಲಿ ಹೆಚ್ಚಿನ ಶಿಕ್ಷಣ ಪಡೆದು ಮೈಸೂರು ಅರಮನೆಯೂ ಸೇರಿದಂತೆ ಅನೇಕ ಕಡೆಗಳಲ್ಲಿ ಕಚೇರಿ ಮಾಡಿದ್ದಾರೆ. ಮೈಸೂರು ಆಸ್ಥಾನ ವಿದ್ವಾಂಸರಾಗಿದ್ದ ಶ್ರೀಯುತರಿಗೆ ಸಂಗೀತ ನಾಟಕ ಅಕಾಡೆಮಿಯದು ಸೇರಿದಂತೆ ಹಲವಾರು ಪ್ರಶಸ್ತಿಗಳು 'ಸಂಗೀತ ಚೂಡಾಮಣಿ', 'ಸಂಗೀತ ರತ್ನಾಕರ' ಇತ್ಯಾದಿ ಬಿರುದುಗಳು ಬಂದಿದ್ದವು. ಇವರ ಗಾಯನದ ರೆಕಾರ್ಡ್‌ಗಳು ಬಿಡುಗಡೆಯಾಗಿದ್ದು ಆಕಾಶವಾಣಿಯಿಂದಲೂ ಕಾರ್ಯಕ್ರಮ ನೀಡಿದ್ದಾರೆ.

ಚಿಂತನಪಲ್ಲಿ ರಂಗರಾವ್ (ಜ೧೯೧೮) ಅವರು ಹುಣಸೇನಹಳ್ಳಿಯಲ್ಲಿ ಜನಿಸಿ ಶೇಷಗಿರಿರಾವ್, ಡಿ.ಸುಬ್ಬರಾಮಯ್ಯ ಎಲ್.ರಾಜಾರಾವ್ ಮುಂತಾದವರಲ್ಲಿ ಗಾಯನ, ವೀಣೆ ಶಿಕ್ಷಣ ಪಡೆದು, ಆಂಧ್ರ, ಮಹಾರಾಷ್ಟ್ರ ಸೇರಿದಂತೆ ರಾಜ್ಯದ ಅನೇಕ ಸ್ಥಳಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಸಂಗೀತನಿಧಿ, ಕಲಾಭೂಷಣ, ಸಂಗೀತ ವಿದ್ಯಾಭೂಷಣ ಬಿರುದುಗಳು ಲಭಿಸಿವೆ. ಗುಡಿಬಂಡೆಯಲ್ಲಿ ಜನಿಸಿದ ಚಿಂತನಪಲ್ಲಿ

ಕೃಷ್ಣಮೂರ್ತಿ ಅವರು (ಜ.೧೯೨೦) ವೆಂಕಟರಾವ್, ಆಸ್ಥಾನ ವಿದ್ವಾನ್ ಚಿಂತನಪಲ್ಲಿ ರಾಮಚಂದ್ರರಾವ್ ಅವರಲ್ಲಿ ಕಲಿತು ಗೋವಾ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ರಾಜ್ಯಾದ್ಯಂತ ಕಾರ್ಯಕ್ರಮ ನೀಡಿದ್ದಾರೆ. ಗಾಯನ ಸಮಾಜ, ಗಾನಕಲಾಪರಿಷತ್ತು ಇತ್ಯಾದಿಗಳಲ್ಲದೆ ರಾಮೋತ್ಸವ ಮುಂತಾದ ಉತ್ಸವಗಳಲ್ಲಿ ನಿರಂತರವಾಗಿ ಕಚೇರಿ ನೀಡಿದ್ದಾರೆ. ಆಕಾಶವಾಣಿಯಿಂದಲೂ ಇವರ ಕಾರ್ಯಕ್ರಮ ಪ್ರಸಾರವಾಗಿವೆ. ಗಾಯನಚತುರ, ಗಾನಸುಧಾನಿಧಿ, ಕಲಾಸಿಂಧು, ಗಾಯಕಭೂಷಣ, ಗಾಂಧರ್ವ ಇತ್ಯಾದಿ ಬಿರುದುಗಳು ಲಭಿಸಿದ್ದವು. ಸಂಗೀತ ಶಾಲೆಯೊಂದನ್ನು ಬೆಂಗಳೂರಲ್ಲಿ ಸ್ಥಾಪಿಸಿ ಆಸಕ್ತರಿಗೆ ಕಲಿಸಿಕೊಡುತ್ತಿದ್ದು ಜನಪ್ರಿಯರಾಗಿದ್ದರು. ಕೃಷ್ಣಮೂರ್ತಿಗಳ ಮಗ ಚಿಂತಲಪಲ್ಲಿ ರಮೇಶ್ (೧೯೫೧) ನಂದಿಯಲ್ಲಿ ಜನಿಸಿ ತಂದೆಯಿಂದ ಸಂಗೀತ ಕಲಿತು ವಂಶಪಾರಂಪರ್ಯವಾಗಿ ಬಂದ ಕಲೆಯನ್ನು ಮುಂದುವರಿಸುತ್ತಿದ್ದಾರೆ. ಹಲವಾರು ಸಭೆಗಳಲ್ಲಿ, ಪರಿಷತ್ತುಗಳಲ್ಲಿ, ಉತ್ಸವಗಳಲ್ಲಿ ಸಕ್ರಿಯವಾಗಿ ಪಾಲುಗೊಂಡಿದ್ದಾರೆ.

ಚಿಂತನಪಲ್ಲಿ ವೆಂಕಟರಾಮಯ್ಯನವರ ಪುತ್ರ ಚಿಂತನಪಲ್ಲಿ ವಿ.ಶ್ರೀನಿವಾಸ್ ತಮ್ಮ ಹಿರಿಯರು ಹಾಗೂ ಶ್ರೀಕಂಠಮ್ ನಾಗೇಂದ್ರ ಶಾಸ್ತ್ರಿ ಅವರಲ್ಲಿ ಕಲಿತು ಆಕಾಶವಾಣಿ, ದೂರದರ್ಶನಗಳೂ ಸೇರಿದಂತೆ ಅನೇಕ ಕಾರ್ಯಕ್ರಮ ನೀಡಿದ್ದಾರೆ. ಕಲಾನಿಧಿ, ಸುಸ್ವರ ಚಿಂತಕ, ಜ್ಞಾನ ವಿಜ್ಞಾನ ವಿಶಾರದ ಇತ್ಯಾದಿ ಬಿರುದುಗಳೂ ಲಭಿಸಿವೆ. ಮುಳಬಾಗಿಲಿನ ಶ್ರೀಪಾದರಾಜ ಪ್ರಶಸ್ತಿ ದೊರಕಿದೆ. ಇವರ ಗಾಯನಗಳು 'ಮನೆಯೊಳಗಾಡೋ ಗೋವಿಂದ' ಎಂಬ ಹೆಸರಿನಲ್ಲಿ ಧ್ವನಿಸುರುಳಿಯಾಗಿ ಬಂದಿದೆ. ಶ್ರೀಯುತರಿಗೆ ಹಲವಾರು ಸಂಗೀತ ಸಂಸ್ಥೆಗಳೊಂದಿಗೆ ಸಂಪರ್ಕವಿದೆ.

ಇದೇ ಅವಧಿಯಲ್ಲಿ ಮೈಸೂರು ಅರಮನೆಯ ಕಲಾವಿದರಾಗಿದ್ದ ಗೌರಿಬಿದನೂರು ತಾಲೂಕಿನ ಕುರುಡಿಯಲ್ಲಿ ಜನಿಸಿದ ಚಿಕ್ಕರಾಮರಾಯರು (೧೮೯೦-೧೯೪೫) ಇನ್ನೊಬ್ಬ ಪ್ರಸಿದ್ಧ ಸಂಗೀತಗಾರರು. ಎಳವೆಯಲ್ಲಿಯೇ ತಾಯಿ ಹಾಡುತ್ತಿದ್ದ ಭಕ್ತಿಗೀತೆಗಳಿಂದ ಪ್ರೇರಿತರಾಗಿದ್ದು ಖ್ಯಾತ ವಿದ್ವಾಂಸರಾದ ಬಿಡಾರಂ ಕೃಷ್ಣಪ್ಪ, ಕರಿಗಿರಿರಾಯರು, ವೀಣೆ ಸುಬ್ಬಣ್ಣ, ಸುಬ್ರಹ್ಮಣ್ಯ ಅಯ್ಯರ್ ಮುಂತಾದವರಲ್ಲಿ ಕಲಿತು ಪ್ರಖ್ಯಾತರಾದರು. ಅಲ್ಲದೆ ಶಾಕುಂತಲ ಕರ್ನಾಟಕ ಸಭಾದ ನಾಟಕಗಳಲ್ಲಿ ಬಾಲನಟರಾಗಿ ಪಾತ್ರವಹಿಸಿದ್ದು ನಾಲ್ವಡಿ ಕೃಷ್ಣರಾಜರ ಕೃಪೆಗೆ ಪಾತ್ರರಾಗಿ ಅರಮನೆಯ ಚಾಮುಂಡೇಶ್ವರಿ ನಾಟಕ ಸಭಾದಲ್ಲಿ ಖಾಯಂ ನಟರಾಗಿ ಸೇರಿ ಅನೇಕ ಪಾತ್ರಗಳನ್ನು ವಹಿಸಿದ್ದರು. ಸಂಗೀತಗಾರರಾಗಿಯೂ ದಕ್ಷಿಣ ಭಾರತದ ಅನೇಕ ಕಡೆಗಳಲ್ಲಿ ಕಚೇರಿ ನಡೆಸಿ 'ಗಾನರತ್ನ' ಮೊದಲಾದ ಬಿರುದು ಪಡೆದಿದ್ದರು. ಪಾಶ್ಚಿಮಾತ್ಯ 'ಗ್ಲಾಸ್ ತರಂಗ್' ಸಂಗೀತದ ಅಭ್ಯಾಸ ಸಹ ಮಾಡಿದ್ದ ರಾಮರಾಯರು ಹಲವಾರು ರಾಗಗಳಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಚಲನಚಿತ್ರದ ಆರ್. ನಾಗೇಂದ್ರರಾವ್, ಬೆಂಗಳೂರು ನಾಗರತ್ನಮ್ಮ, ಅರಕೆರೆ ನಾರಾಯಣರಾವ್, ಬಿ.ನಾಗೇಂದ್ರಪ್ಪ, ಎಚ್.ವಿ.ರಾಮರಾವ್, ಎಚ್.ವಿ.ಕೃಷ್ಣಮೂರ್ತಿ, ಬಿ.ವಿ.ಕೆ.ಶಾಸ್ತ್ರಿ ಮುಂತಾದವರು ರಾಮರಾಯರ ಶಿಷ್ಯವರ್ಗಕ್ಕೆ ಸೇರಿದವರು.

ಮೂಲತಃ ಕೋಲಾರದವರಾದ ಕುರುಡಿ ವೆಂಕಣ್ಣಚಾರ್, ತಮ್ಮ ತಂದೆ ಕುರುಡಿ ಆದಿವಾಚಾರ್ ಹಾಗೂ ಚಿಂತನಪಲ್ಲಿ ವೆಂಕಟರಾಯರಲ್ಲಿ ಸಂಗೀತಾಭ್ಯಾಸ ಮಾಡಿದ್ದು ಪಿಟೀಲು ಹಾಗೂ ಮೃದಂಗ ವಾದನಗಳಲ್ಲೂ ಪರಿಶ್ರಮ ಹೊಂದಿದ್ದಾರೆ. ಚೆನ್ನೈ, ಹೈದರಾಬಾದ್ ಸೇರಿದಂತೆ ರಾಜ್ಯದ ಹಲವಾರು ಕಡೆ ಕಾರ್ಯಕ್ರಮ ನೀಡಿದ್ದಾರೆ. ಶ್ರೀಯುತರು ಅನೇಕ ವರ್ಣ, ಕೃತಿ, ದೇವರನಾಮಗಳನ್ನು ಅಪೂರ್ವವಾದ ರಾಗಗಳಲ್ಲಿ ರಚಿಸಿದ್ದಾರೆ. ಇವರ ಗಾಯನದ ಕ್ಯಾಸೆಟ್ ಬಿಡುಗಡೆಯಾಗಿದೆ.

ಕೋಲಾರದ ಎಚ್.ಯೋಗಾನರಸಿಂಹಂ (೧೮೯೭-೧೯೭೧) ಮೈಸೂರಿನ ಸಂಗೀತ ದಿಗ್ಗಜಗಳ ಒಡನಾಟದಿಂದ ಸ್ವತಃ ಸಂಗೀತಗಾರರಾಗಿದ್ದು, ಸಂಗೀತ ಕುರಿತ ಲೇಖನಗಳನ್ನು ಪ್ರಕಟಿಸಿರುವರಲ್ಲದೆ ಅನೇಕ ಸಂಗೀತಗಾರರಿಗೆ ವಿವಿಧ ರೀತಿಯಲ್ಲಿ ನೆರವಾಗಿದ್ದಾರೆ. ಸಂಸ್ಕೃತ, ಕನ್ನಡ, ತೆಲುಗುಗಳಲ್ಲಿ ಗೇಯ ಕೃತಿಗಳನ್ನು ರಚನೆ ಮಾಡಿದ್ದಾರೆ. ಇವರ ಜನ್ಮ ಶತಾಬ್ಧಿಯ ವೇಳೆಯಲ್ಲಿ ನೆನಪಿನ ಗ್ರಂಥವೊಂದನ್ನು ಹೊರತರಲಾಯಿತು.

ಸಂಗೀತಕ್ಷೇತ್ರಕ್ಕೆ ಕಾಣಿಕೆ ನೀಡಿದ ಇನ್ನೊಂದು ಪರಂಪರೆ ಎಂದರೆ ಚಿಂತಾಮಣಿಯ 'ಆನೂರು ಮನೆತನ'. ಶತಮಾನಕ್ಕೂ ಹಿಂದೆ ವೀಣಾಸುಬ್ಬರಾಯ ಶಾಸ್ತ್ರಿಗಳು ಈ ಪ್ರದೇಶದಲ್ಲಿದ್ದು ಇವರ ವಂಶಸ್ಥರಾದ ಶಾಮಣ್ಣರು ವೀಣೆ, ನಾದಸ್ವರ ನುಡಿಸುತ್ತಿದ್ದರು. ಶಾಮಣ್ಣರ ಸೋದರ ಸೂರ್ಯನಾರಾಯಣ ಅವರು ಹಾಡುಗಾರರಾಗಿದ್ದು ನಾಡಿನಾದ್ಯಂತ ಕಚೇರಿಗಳನ್ನು ನೀಡಿದ್ದಲ್ಲದೆ ನೃತ್ಯ ಪ್ರಕಾರಗಳಿಗೂ ಹಿನ್ನೆಲೆಯಾಗಿ ಹಾಡಿ ಹೆಸರು ಮಾಡಿದ್ದರು. ಶಾಮಣ್ಣರವರ ಪುತ್ರರೇ ಖ್ಯಾತ ಆನೂರು ಎಸ್.ರಾಮಕೃಷ್ಣರವರು. (೧೯೩೧–೯೫) ತಂದೆ ಹಾಗೂ ಎಂ.ಎಲ್.ವೀರಭದ್ರಯ್ಯ ಅವರಲ್ಲಿ ಮೃದಂಗ ಮತ್ತು ವೀಣೆ, ಆರ್.ಆರ್.ಕೇಶವಮೂರ್ತಿ ಮುಂತಾದವರಿಂದ ಪಿಟೀಲು ವಾದ್ಯ ಅಭ್ಯಸಿಸಿ, ಪಿಟೀಲು ವಾದನದಲ್ಲಿ ತಮ್ಮದೇ ಆದ ಛಾಪನ್ನು ತಂದವರು. "ಶಾಸ್ತ್ರೀಯತೆಯ ಚೌಕಟ್ಟಿನಲ್ಲಿ ವಿಶೇಷವಾಗಿ ವಿಚಾರ ಮಂಥನ ಪೂರ್ವಕವಾಗಿ ನವೀನ ಆಯಾಮಗಳನ್ನು ಪಿಟೀಲು ವಾದನದಲ್ಲಿ ತಂದ ರಸಜ್ಞರು" ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ನಾಡಿನ ಖ್ಯಾತರಿಗೆ ಪಕ್ಕ ವಾದ್ಯ ನುಡಿಸಿರುವುದಲ್ಲದೆ, ತನಿಯಾಗಿಯೂ ಕಚೇರಿ ನೀಡಿದ್ದರು. ಟಿ.ಚೌಡಯ್ಯನವರು ಆರಂಭಿಸಿದ 'ಶ್ರೀ ಅಯ್ಯನಾರ್ ಪ್ರೌಢ ಸಂಗೀತ ಕಲಾಶಾಲೆ'ಯನ್ನು ಹಲವಾರು ವರ್ಷಗಳು ನಡೆಸಿದ್ದಲ್ಲದೆ 'ಲಯಲಹರಿ ತಾಳವಾದ್ಯ ವೃಂದ'ದಿಂದ ಭಾರತಾದ್ಯಂತ ಕಾರ್ಯಕ್ರಮ ನೀಡಿದ್ದರು. ಸ್ವಂತವಾಗಿ 'ಶ್ರೀ ಕೃಷ್ಣ ಸಂಗೀತ ಸಭಾ' ಕಲಾಶಾಲೆ ತೆರೆದರು. ಬೆಂಗಳೂರಿನ ವಸಂತಪುರದಲ್ಲಿ ಪುರಂದರ ಹಾಗೂ ತ್ಯಾಗರಾಜರ ವಿಗ್ರಹ ಸ್ಥಾಪಿಸಿ ವಾರ್ಷಿಕ ಆರಾಧನೆಗೆ ಕಾರಣಕರ್ತರಾಗಿದ್ದರು. ಇತರರೊಂದಿಗೆ ಸೇರಿ 'ಪಿಟೀಲುತ್ರಯ' ಎಂಬ ಜನಪ್ರಿಯ ಕಾರ್ಯಕ್ರಮಗಳನ್ನು ನೀಡಿದವರು. ಸರ್ಕಾರ, ಅಕಾಡೆಮಿ ಹಾಗೂ ಜನತೆಯಿಂದ ಪ್ರಶಸ್ತಿ, ಪುರಸ್ಕಾರ ಪಡೆದಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ಸಂಗೀತ ವಿಭಾಗದಲ್ಲಿ ಸೇವೆ ಸಲ್ಲಿಸಿದ್ದರು. ಇವರ ಮಕ್ಕಳಾದ ಆಲೂರು ದತ್ತಾತ್ರೇಯ ಶರ್ಮ ಹಾಗೂ ಆಲೂರು ಅನಂತ ಕೃಷ್ಣಶರ್ಮರು ವಂಶಜರ ಸಂಗೀತ ಸೇವೆಯನ್ನು ಮುಂದುವರಿಸಿದ್ದು ಕಚೇರಿಗಳಲ್ಲದೆ ಆಕಾಶವಾಣಿ, ದೂರದರ್ಶನಗಳಲ್ಲೂ ಕಾರ್ಯಕ್ರಮ ನೀಡಿದ್ದಾರೆ. ಹಾಡುಗಾರಿಕೆ ಹಾಗೂ ಮೃದಂಗ, ತಬಲ, ಖಂಜೀರಗಳಲ್ಲಿ ಪರಿಣಿತರಿರುವ ಆನೂರು ಆರ್.ರಾಮಕೃಷ್ಣ (೧೯೬೫) ಅವರು ಅನೇಕ ಸಂಘಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸಂಗೀತ ಪರ ಕಾರ್ಯನಿರ್ವಹಿಸುತ್ತಿದ್ದಾರೆ.

ಜಿಲ್ಲೆಯಾದ್ಯಂತ ಅನೇಕ ಕ್ರಿಯಾಶೀಲ ಸಂಗೀತ ಕಲಾವಿದರಿದ್ದು ಮುಖ್ಯವಾಗಿ ಕೆಲವರನ್ನು ಹೆಸರಿಸಬಹುದಾಗಿದೆ. ಗುಡಿಬಂಡೆ ಸಹೋದರರೆಂದು ಗುರುತಿಸಲಾದ ಹನುಮಂತಭಟ್ ಮತ್ತು ನಾಗರಾಜಭಟ್, ರಾಯಚೂರಿನಲ್ಲಿ ನೆಲೆಸಿರುವ ಗೋಪಾಲ ಗುಡಿಬಂಡೆ, ಚಿಂತಾಮಣಿಯ ಶ್ರೀರಾಮರೆಡ್ಡಿ ಹಾಗೂ ಅಶ್ವತ್ಥನಾರಾಯಣರಾವ್ ಇವರ ಶಿಷ್ಯ ಹನುಮನಹಳ್ಳಿ ವಿದ್ವಾನ್ ತಿಮ್ಮಪ್ಪಯ್ಯ, ಮಾಲೂರಿನ ಶ್ರೀನಿವಾಸಮೂರ್ತಿ ಮತ್ತು ಲಕ್ಷ್ಮಣಮೂರ್ತಿ, ಮುಳಬಾಗಿಲಿನ ತಿಮ್ಮಪ್ಪಯ್ಯ, ಮುಡಿಯನೂರು ರಾಮಬ್ರಹ್ಮಂ, ಕೆ.ಜಿ.ಎಫ್.ನ ಮುನಿಕದಿರಪ್ಪ ಹಾಗೂ ಅಶ್ವತ್ಥನಾರಾಯಣ ಶಾಸ್ತ್ರಿಗಳು, ಬಂಗಾರಪೇಟೆಯ ವಿ.ಎಸ್.ವೇಣುಗೋಪಾಲ್ ಚಿಂತಾಮಣಿಯ ಪ್ರಭಾಕರ್, ವಿಶ್ವನಾಥ್, ಶಿಡ್ಲಘಟ್ಟದ ಪುಟ್ಟ ನಾಗರಾಜ್, ಕೋಲಾರದ ರಾಮಚಂದ್ರಪ್ಪ, ಗೋಪಾಲಪ್ಪ, ಸೂರ್ಯನಾರಾಯಣಚಾರ್, ಕೆ.ವಿ.ಚಂದ್ರಶೇಖರ್, ಶಂಕರಾಚಾರಿ, ಸರೋಜ ಕೃಷ್ಣಮೂರ್ತಿ ಮುಂತಾದವರನ್ನು ಹೆಸರಿಸಬಹುದು. ಇವರಲ್ಲಿ ಅನೇಕರು ರಾಜ್ಯ ಹೊರರಾಜ್ಯಗಳಲ್ಲಿ ಕಾರ್ಯಕ್ರಮ ನೀಡಿ ಹೆಸರುಗಳಿಸಿದ್ದಾರೆ. ಸ್ಥಳೀಯವಾಗಿ ಭಜನೆಮಂದಿರ, ಸಂಗೀತ ಸಂಸ್ಥೆ ನಿರ್ಮಿಸಿ ನಿಯಮಿತವಾಗಿ ಕಾರ್ಯಕ್ರಮ ನೀಡುತ್ತಿದ್ದಾರೆ. ಶಾಲೆಗಳಲ್ಲಿ ಸಂಗೀತೋಪಾಧ್ಯಾಯರು ಹಾಗೂ ಸ್ವಂತವಾಗಿ ಸಂಗೀತ ಶಾಲೆ ನಡೆಸುತ್ತಿದ್ದಾರೆ.

ಜಿಲ್ಲೆಯ ಇತರ ಸಂಗೀತಗಾರರೆಂದರೆ ಬಂಗಾರಪೇಟೆಯ ಟಿ.ಆರ್.ಶ್ರೀನಿವಾಸನ್ (೧೯೨೭) ಅವರು ತಮ್ಮ ಮುತ್ತಾತ ಗಣಪತಿ ದೀಕ್ಷಿತರು ಹಾಗೂ ತಂದೆ ಟಿ.ಆರ್.ರಾಮನಾಥ ಅಯ್ಯರ್ ಅವರ ಬಳಿ ಹಾಗೂ

ಇನ್ನಿತರರಲ್ಲಿ ಸಂಗೀತಾಭ್ಯಾಸ ಮಾಡಿ ಮೈಸೂರು ಅರಮನೆ ಸೇರಿದಂತೆ ಮುಂಬಯಿ, ತಿರುವಾಂಕೂರು ಮುಂತಾದ ಕಡೆಗಳ ಅಕಾಡೆಮಿ, ಸಂಘಸಂಸ್ಥೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಶ್ರೀನಿವಾಸನ್ ಅವರಿಗೆ 'ಭಕ್ತಿಗಾನನಿರತ' ಎಂಬ ಬಿರುದು ಲಭಿಸಿದೆ. ಗೌರಿಬಿದನೂರಿನ ಮೊದಲಗೋಡು ಗೊಲ್ಲಹಳ್ಳಿಯವರಾದ ಹಾವೇರಿ ವೆಂ.ಪ್ರಹ್ಲಾದಾಚಾರ್ಯ ಅವರು (೧೯೩೫) ಅನೇಕ ಕಡೆಗಳ ಸಭೆ, ಉತ್ಸವಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. 'ಸಂಗೀತ ಕೋವಿದ' ಎಂಬ ಬಿರುದು ಲಭ್ಯವಾಗಿದೆ. ಇವರು ಬರೆದಿರುವ 'ಸಂಗೀತ ಕುಸುಮ – ಭದ್ರಾಚಲ ರಾಮದಾಸ ಮೇಳ ಮಾಲಿಕಾ' ತಿರುಪತಿಯಿಂದ ಪ್ರಕಟವಾಗಿದೆ. ಕೈವಾರ ನಾರಣಪ್ಪರ ಕೃತಿಗಳನ್ನು 'ಗಾನಭಾರ್ಗವಿ' ಎಂಬ ಕೃತಿಯಲ್ಲಿ ಸಂಗ್ರಹಿಸಿದ್ದು ಸದರಿ ಮಠದಿಂದ ಮುದ್ರಿತವಾಗಿದೆ. ಶ್ರೀನಿವಾಸಪುರದ ಎಸ್.ವಿ.ರಮಣಕುಮಾರ(೧೯೪೯) ತಂದೆ ಬಿ.ಎಲ್.ಸೂರಪ್ಪರಲ್ಲಿ ಹಾಗೂ ಇನ್ನಿತರರಲ್ಲಿ ಸಂಗೀತಾಭ್ಯಾಸ ಮಾಡಿದ್ದಲ್ಲದೆ ಕ್ರಮಬದ್ಧವಾಗಿ ಸಂಗೀತ ಶಿಕ್ಷಣವನ್ನು ಪ್ರಥಮ ರ್‍ಯಾಂಕ್‌ನಲ್ಲಿ ಪೂರೈಸಿ 'ಕರ್ನಾಟಕ ಸಂಗೀತ ರಚನೆಯಲ್ಲಿ ಗೇಯತೆ' ಎಂಬ ವಿಷಯದಲ್ಲಿ ಸಂಪ್ರಬಂಧ ರಚಿಸಿ ಪಿಎಚ್.ಡಿ ಪದವಿ ಗಳಿಸಿದ್ದಾರೆ. ಅನೇಕ ಸಂಘಸಂಸ್ಥೆಗಳಲ್ಲಿ ಕಾರ್ಯಕ್ರಮ ನೀಡಿದ್ದು 'ಉತ್ತಮ ಗಾಯಕ' ಪ್ರಶಸ್ತಿ 'ಗಾಯನ ಗಂಧರ್ವ' ಬಿರುದು ಲಭಿಸಿದೆ. ಸಂಗೀತ ಕುರಿತು ಹಲವಾರು ಲೇಖನಗಳನ್ನು ಶ್ರೀಯುತರು ಬರೆದಿದ್ದಾರೆ. ಮಾಲೂರು ತಾ॥ ಮಾಸ್ತಿ ಬಳಿಯ ತೊಳಕನ ಹಳ್ಳಿ ಮೂಲದ ಟಿ.ಎನ್.ಪದ್ಮನಾಭನ್ ಅವರು ತ್ಯಾಗರಾಜದರ್ಶನಂ, 'ತ್ಯಾಗರಾಜ ಪಂಚರತ್ನ ಕೃತಿಗಳು' ಪುಸ್ತಿಕೆಗಳನ್ನು ರಾಮಕಥಾ ಸುಧಾ, ಸೀತಾಕಲ್ಯಾಣಂ ಮುಂತಾದ ಸಂಗೀತ ರೂಪಕಗಳನ್ನು ನಿರ್ಮಿಸಿದ್ದಾರೆ. ಆಕಾಶವಾಣಿ, ದೂರದರ್ಶನಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಗಾಯನ ಸಮಾಜವೂ ಸೇರಿದಂತೆ ಅನೇಕ ಸಂಸ್ಥೆಗಳು ಶ್ರೀಯುತರನ್ನು ಗೌರವಿಸಿವೆ.

ಕೋಲಾರದ ಬಿ.ಎನ್.ಸುಂದರರಾವ್ (೧೯೩೮) ಅವರ ತಾತ ಖಂಡೋಜಿರಾವ್, ತಂದೆ ಮುರಹರಿರಾವ್, ದೊಡ್ಡಪ್ಪ ಸಂತೋಜಿ ರಾವ್, ಚಿಕ್ಕಪ್ಪ ವೆಂಕೋಬರಾವ್ ಸಂಗೀತಗಾರರರಾಗಿದ್ದರು. ಸುಂದರರಾವ್ ಟಿ.ಆರ್.ಮಹಾಲಿಂಗಂ ಅವರಲ್ಲಿ ವೇಣುವಾದನ ಅಭ್ಯಸಿಸಿ ರಾಜ್ಯ ಹೊರರಾಜ್ಯಗಳಲ್ಲದೆ ಲಂಡನ್, ಜರ್ಮನಿ ಫ್ರಾನ್ಸ್ ಮುಂತಾದ ಹೊರದೇಶಗಳಲ್ಲೂ ಕಚೇರಿ ಕಾರ್ಯಕ್ರಮ ನೀಡಿದ್ದಾರೆ. ಪಿಟೀಲು ವಿದ್ವಾಂಸರಾದ, ಬಂಗಾರಪೇಟೆಯ ಜಕ್ಕರಸಕೊಪ್ಪದಲ್ಲಿ ಜನಿಸಿದ, ಜೆ.ಎಲ್.ಕಾಶೀನಾಥ ಶಾಸ್ತ್ರಿ ಅವರು (೧೯೨೨) ತಂದೆ ಲಕ್ಷ್ಮೀನರಸಿಂಹಶಾಸ್ತ್ರಿ ಅವರಲ್ಲಿಯೂ ಮುಂದೆ ಕರ್ನಾಟಕಿ ಹಾಗೂ ಹಿಂದೂಸ್ಥಾನಿ ಪದ್ಧತಿಗಳೆರಡರಲ್ಲೂ ಕ್ರಮಬದ್ಧ ಶಿಕ್ಷಣ ಪಡೆದಿದ್ದಾರೆ. ರಾಜ್ಯ ಹೊರರಾಜ್ಯಗಳ ಅನೇಕ ಕಲಾವಿದರಿಗೆ ಪಕ್ಕ ವಾದ್ಯವಾಗಿ ಪಿಟೀಲು ನುಡಿಸಿದ್ದಾರೆ. ಆಕಾಶವಾಣಿಯ ನಿಲಯ ಕಲಾವಿದರೂ ಆಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎರಡೂ ಸಂಗೀತ ಪದ್ಧತಿಯಲ್ಲಿ ಬೋಧಕರಾಗಿ ಸೇವೆ ಸಲ್ಲಿಸಿದ್ದಾರೆ. ಚಲನಚಿತ್ರ ವಾದ್ಯ ವೃಂದದಲ್ಲೂ ಪಿಟೀಲು ನುಡಿಸಿದ್ದಾರೆ. ಕೋಲಾರದವರೇ ಆದ ಎಸ್.ಗೋಪಾಲಕೃಷ್ಣ ಅವರ ತಂದೆ ಆರ್.ಸೀತಾರಾಮನ್ ಕೊಳಲು ವಿದ್ವಾಂಸರು. ಗೋಪಾಲಕೃಷ್ಣ ಅವರು (೧೯೪೬) ಹಲವಾರು ವಿದ್ವಾಂಸರಲ್ಲಿ ಪಿಟೀಲು ಕಲಿತು ಅನೇಕ ಸಂಘಸಂಸ್ಥೆಗಳಲ್ಲಿ ಜಿಲ್ಲೆ ಹೊರ ಜಿಲ್ಲೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. 'ಅತ್ಯುತ್ತಮ ಸಂಗೀತಗಾರ' ಪ್ರಶಸ್ತಿ ಹಾಗೂ 'ನಾದಾನಂದಯೋಗಿ' ಬಿರುದು ಲಭಿಸಿದೆ. ಕೆ.ಜಿ.ಎಫ್.ನ ಜೆ.ಕೆ.ಶ್ರೀಧರ್ ಅವರು ತಂದೆ ಜೆ.ಎಲ್.ಕಾಶೀನಾಥ ಶಾಸ್ತ್ರಿ ಅವರಲ್ಲಿ ಪಿಟೀಲು ಅಭ್ಯಸಿಸಿ ಅನೇಕ ಸೇವಾಮಂಡಲಿ, ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಪಕ್ಕ ವಾದ್ಯವಾಗಿ ಪಿಟೀಲು ನುಡಿಸಿದ್ದಾರೆ. 'ಶ್ರೇಷ್ಠ ಪಕ್ಕವಾದ್ಯ ಕಲಾವಿದ' ಪ್ರಶಸ್ತಿ ಲಭಿಸಿದೆ. ನಾಟಕಗಳಿಗೆ ಸಂಗೀತ ನಿರ್ದೇಶನ ನೀಡಿದವರಲ್ಲಿ ಸರಿತಾ ಜ್ಞಾನಾನಂದ ಅವರನ್ನು ಮುಖ್ಯವಾಗಿ ಪರಿಗಣಿಸಬಹುದು. ಚಂದ್ರಶೇಖರ ಕಂಬಾರರ 'ಜೋಕುಮಾರಸ್ವಾಮಿ, ಸಂಗ್ಯಾಬಾಳ್ಯ' ಇತ್ಯಾದಿ ಎಂಟು ನಾಟಕಗಳಿಗೆ, ಮಲ್ಲಿಕಾರ್ಜುನಯ್ಯ ನಿರ್ದೇಶಿಸಿದ ಹತ್ತರು ನಾಟಕಗಳಿಗೆ

ಸಂಗೀತ ನಿರ್ದೇಶನ ನೀಡಿ ಮೇಳಗಳಲ್ಲಿ ಮುಖ್ಯ ಗಾಯಕಿಯಾಗಿ ಹಾಡಿ ೧೯೭೭ ರಿಂದ ೨೦೦೫ರವರೆಗೆ ಪುಟ್ಟಣ್ಣ ಕಣಗಾಲ್ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ವಾರಣಾಸಿಯ ಕನ್ನಡ ಸಂಘದಲ್ಲಿ ೨೦೦೪ರಲ್ಲಿ ನಡೆದ 'ಮಂಥರೆ' ನಾಟಕಕ್ಕೆ ಸಂಗೀತ ನಿರ್ದೇಶನ ಮಾಡಿದ್ದಾರೆ.

ಚಿಂತಾಮಣಿಯ ನಂದ್ಯಾಲ ಎಸ್.ರಾಮಮೂರ್ತಿ ಅವರು ಸಂಗೀತ ವಿದ್ವಾಂಸರುಗಳಾದ ಬಂಗಾರಪೇಟೆ ಶ್ಯಾಮಶಾಸ್ತ್ರಿ, ಎನ್.ಆರ್.ಸುಬ್ಬಾಶಾಸ್ತ್ರಿ, ಕೃಷ್ಣಮೂರ್ತಿ ಅವರ ವಂಶಸ್ಥರು. ರಾಜ್ಯ ಹಾಗೂ ಆಂಧ್ರಪ್ರದೇಶಗಳಲ್ಲಿ ಕ್ರಮಬದ್ಧವಾಗಿ ಮೃದಂಗ ಶಿಕ್ಷಣ ಪಡೆದು ರಾಜ್ಯ-ಹೊರರಾಜ್ಯಗಳಲ್ಲಿ 'ಅತ್ಯುತ್ತಮ ಕಲಾವಿದ' ಪ್ರಶಸ್ತಿ ಪಡೆದಿದ್ದಾರೆ. ಚಿಂತಾಮಣಿಯ ಕೊರಕನಪಲ್ಲಿಯ ಶ್ರೀನಿವಾಸ್ ಅವರು ಶ್ರೀನಿವಾಸ ರೆಡ್ಡಿ ಅವರಲ್ಲಿ ಕ್ರಮಬದ್ಧವಾಗಿ ಸಂಗೀತ ಕಲಿತು ೧೯೮೫ರಲ್ಲಿ ಬೆಂಗಳೂರಿನಲ್ಲಿ ಕಚೇರಿ ನೀಡುವುದರಿಂದ ಆರಂಭಿಸಿ ರಾಜ್ಯದ ಅನೇಕ ಸ್ಥಳಗಳೂ ಸೇರಿದಂತೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮುಂತಾದೆಡೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ದೂರದರ್ಶನದಲ್ಲೂ ಕಾರ್ಯಕ್ರಮ ನೀಡಿದ್ದಾರೆ. ಧರ್ಮಸ್ಥಳದ ಹೆಗ್ಗಡೆಯವರಿಂದ ಸನ್ಮಾನಿತರಾಗಿದ್ದಾರೆ. 'ಗಾನಚದುರ' ಬಿರುದು ಸಂದಿದೆ. ಶ್ರೀನಿಧಿರಾಗ ಸುಧೆ ಹೆಸರಿನಲ್ಲಿ ಧ್ವನಿ ಸುರುಳಿಗಳು ಹೊರಬಂದಿವೆ. ನಂದಿಯಲ್ಲಿ ಜನಿಸಿದ ಕೆ.ವಿ.ಮುನಿಸ್ವಾಮಪ್ಪ (೧೯೧೧) ನಾಗಸ್ವರ ಶಿಕ್ಷಣವನ್ನು ವೆಂಕಟಪ್ಪನವರಲ್ಲಿ ಆರಂಭಿಸಿ ಮುಂದೆ ರಾಜ್ಯ, ಆಂಧ್ರಪ್ರದೇಶಗಳಲ್ಲಿ ಹೆಚ್ಚಿನ ಅಭ್ಯಾಸ ಮಾಡಿ, ಮೈಸೂರು ಅರಮನೆ ಸೇರಿದಂತೆ ಕೋಲ್ಕತ್ತ, ಚೆನ್ನೈ, ಸೇಲಂ ಹಾಗೂ ಉತ್ತರಭಾರತದ ಅನೇಕ ಸ್ಥಳಗಳಲ್ಲಿ ಹಾಗೂ ರಾಜ್ಯದ ಕೆಲವೆಡೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. 'ನಾದಮಣಿ', 'ನಾದಸ್ವರ ವಿಭೂಷಣ', 'ನಾದಸ್ವರ ಮಯೂರ' ಇತ್ಯಾದಿ ಬಿರುದುಗಳು ಸಂದಾಯವಾಗಿವೆ. ಶ್ರೀನಿವಾಸಪುರದ ಅಡ್ಡಗಲ್‌ನ ಎ.ಎನ್.ರೆಡ್ಡಪ್ಪ ಅವರು (೧೯೫೬) ತಂದೆ ನರಸಪ್ಪರಲ್ಲಿ ನಾಗಸ್ವರ ಕಲಿತು ಮುಂದೆ ಉನ್ನತ ಶಿಕ್ಷಣ ಪಡೆದವರು. ಸಂಘ, ಸಂಸ್ಥೆ, ಪರಿಷತ್ತು, ಅಕಾಡೆಮಿಗಳಲ್ಲಿ ಕಾರ್ಯಕ್ರಮ ನೀಡಿದ್ದು, ಹಲವಾರು ಬಹುಮಾನಗಳು ಬಂದಿದೆ. ಆಕಾಶವಾಣಿ, ದೂರದರ್ಶನಗಳಲ್ಲೂ ಕಾರ್ಯಕ್ರಮ ನೀಡಿದ್ದಾರೆ.

ಚಿಕ್ಕಬಳ್ಳಾಪುರದ ಬಿ.ಆರ್.ಗೋವಿಂದಸ್ವಾಮಿ ಪಿಟೀಲು ವಿದ್ವಾಂಸರಾಗಿದ್ದು ದಕ್ಷಿಣಭಾರತದ ಅನೇಕ ಖ್ಯಾತ ಸಂಗೀತಗಾರರಿಗೆ ಪಿಟೀಲು ನುಡಿಸಿದ್ದಾರಲ್ಲದೆ ಬಿಡಿಯಾಗಿಯೂ ಕಚೇರಿಗಳನ್ನು ನೀಡಿದ್ದಾರೆ. ಇವರ ಮಗ ವೆಂಕಟರಾಮು, ಶಿಷ್ಯ ನಾರಾಯಣಾಚಾರ್ ಪರಂಪರೆ ಮುಂದುವರಿಸಿದ್ದಾರೆ. ಖ್ಯಾತ ಸಂಗೀತಗಾರರಾದ ತಿಮ್ಮಸಂದ್ರದ ರಾಮಕೃಷ್ಣಪ್ಪ, ಎಲ್.ವೈ.ಶ್ರೀನಿವಾಸರೆಡ್ಡಿ, ಕೆ.ವಿ.ಶ್ರೀನಿವಾಸರೆಡ್ಡಿ ಕೋಲಾರ ಜಿಲ್ಲೆಯವರು. ಇವರಲ್ಲದೆ ಜಿಲ್ಲೆಯವರಾದ, ಕೆ.ಎ.ಸಂಪತ್, ಆರ್.ಚೆನ್ನಕೃಷ್ಣಪ್ಪ, ಅನಂತ ನಾರಾಯಣ ಶಾಸ್ತ್ರಿ, ಲಕ್ಷ್ಮಣರಾವ್ ಪೇಶ್ವೆ, ಲಕ್ಕೂರು ಪಾಪಯ್ಯ, ಎ.ಎಂ.ವೆಂಕಟಾಚಲಂ, ಕೃಷ್ಣಮೂರ್ತಿ, ಕೆ.ವಿ.ತ್ಯಾಗರಾಜನ್, ಕೆ.ವಿ.ಶ್ರೀನಿವಾಸನ್, ಕೆ.ವಿ.ಲಕ್ಷ್ಮಣಶರ್ಮ, ಆರ್.ಜಿ.ವೆಂಕಟರಮಣಪ್ಪ, ಕೆ.ಪಿ.ನಾರಾಯಣ್, ಜಿ.ವೆಂಕಟಮಣಪ್ಪ, ಬಾಲಾಜಿಸಿಂಗ್, ಕೆ.ಜಿ.ಎಫ್.ನ ರಾಮಮೂರ್ತಿ, ಜಲತರಂಗ್ ವಾದನದ ಪಾಂಡುರಂಗರಾವ್, ಕೆ.ಜಿ.ರಾಮಚಂದ್ರನ್, ಎಚ್.ಗೋಪಾಲರಾವ್, ಜಿ.ಗೋವಿಂದರಾವ್, ಎಚ್.ಕೃಷ್ಣಮೂರ್ತಿರಾವ್, ವೆಂಕಟಸುಬ್ಬಯ್ಯ, ಸುಬ್ಬರಾಯಪ್ಪ, ಮುನಿವೆಂಕಟಪ್ಪ, ಚಂಗಲರಾಯಪ್ಪ, ಗೋಪಾಲಪ್ಪ, ಜಿ.ತಿಮ್ಮಪ್ಪಯ್ಯ, ಬಿ.ಸರಸ್ವತಿ, ಕೋಲಾರ ರಾಜಮ್ಮ, ಬಿ.ಎಸ್.ಪದ್ಮಾಂಭ, ವೀಣಾ, ಆರ್.ಸುನಂದ, ಕೆ.ಪದ್ಮನಾಭರಾವ್, ಕೆ.ಎಚ್.ನಾಗಭೂಷಣಯ್ಯ, ಸುಬ್ರಹ್ಮಣ್ಯಂ, ರಾಮಚಂದ್ರರಾವ್ ಇವರೇ ಮುಂತಾದವರು ಹಾಡುಗಾರಿಕೆಯಲ್ಲದೆ ಪಿಟೀಲು, ಕೊಳಲು, ಮೃದಂಗ ಇತ್ಯಾದಿ ವಾದ್ಯಗಾರರೂ ಆಗಿದ್ದಾರೆ. ಶ್ರೀನಿವಾಸಪುರದ ಎಸ್.ವಿ.ರಮಣ ಕುಮಾರ್ ಅವರು ಸಂಗೀತದಲ್ಲಿ ಡಾಕ್ಟರೇಟ್ ಪಡೆದು ಬೆಂಗಳೂರು ವಿಶ್ವವಿದ್ಯಾಲಯದ ಸಂಗೀತ ವಿಭಾಗದ ಮುಖ್ಯಸ್ಥರಾಗಿದ್ದರು.

ಕೋಲಾರದಲ್ಲಿ ಗೊಲ್ಲಪಿನ್ನಿ ಪೂಚಂಭಟ್ಟರೆಂಬ ಮಹನೀಯರೊಬ್ಬರು ಸುಮಾರು ೫೦ ವರ್ಷಗಳ ಕಾಲ ತ್ಯಾಗರಾಜರ ಆರಾಧನೆ ವರ್ಷಂಪ್ರತಿ ನಡೆಸಿ ನಾಡಿನ ಅನೇಕ ಹಿರಿಯ, ಪ್ರಸಿದ್ಧ ವಿದ್ವಾಂಸರನ್ನು ಆಹ್ವಾನಿಸಿ ಸಂಗೀತ ಕಚೇರಿ ಏರ್ಪಡಿಸುತ್ತಿದ್ದರು. ನಂತರ ಅವರ ಸೋದರ ಭಜನಾ ನಿಪುಣ ಕೃಷ್ಣಂಭಟ್ಟ ವೀಣಾ ವಿದ್ವಾಂಸ ಸೀತಾರಾಮಶಾಸ್ತ್ರಿಗಳು ಹಾಗೂ ಮತ್ತಿತರರು ಆರಾಧನಾ ಕಾರ್ಯಕ್ರಮ ಕೆಲವರ್ಷ ಮುಂದುವರಿಸಿದರು.

## ಕೀರ್ತನೆ, ಹರಿಕಥೆ, ಗಮಕ

ಜಿಲ್ಲೆಯಲ್ಲಿ ವಿಜಯನಗರ ಕಾಲದಿಂದಲೂ ಯಕ್ಷಗಾನ ಬಯಲಾಟ ಪರಂಪರೆ ಕಾಣಬಹುದಾಗಿದ್ದು ಅವುಗಳೊಂದಿಗೆ ಪೌರಾಣಿಕ ಜನಪದ ನಾಟಕಗಳೂ ಮುಂದುವರಿದು ಬಂದಿವೆ. ಈ ಪ್ರಕಾರದ ಕಲಾವಿದರು ಸಹಜವಾಗಿ ಸಂಗೀತ, ವಾದ್ಯಗಳಲ್ಲಿ ಪರಿಣತರಿದ್ದರು. ಇವರುಗಳೇ ಹೆಚ್ಚಾಗಿ ಕೀರ್ತನೆ, ಹರಿಕಥೆ, ಗಮಕ ಕಲಾವಿದರೂ ಆಗಿದ್ದು ಪರಸ್ಪರ ಪೂರಕ ಕ್ಷೇತ್ರವೇ ಆಗಿದೆ. ಇವರೊಂದಿಗೆ ತತ್ವ ಪದಕಾರರು, ಪ್ರವಚನಕಾರರನ್ನು ಪರಿಗಣಿಸಬಹುದು. ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಮುಳಬಾಗಿಲಿನಲ್ಲಿದ್ದ ಇಬ್ಬರು ಹರಿಕಥೆ ವಿದ್ವಾಂಸರ ಬಗ್ಗೆ ಡಿ.ವಿ.ಜಿ ಅವರು ಗಮನಸೆಳೆಯುತ್ತಾರೆ. ತೆಲುಗಿನಲ್ಲಿ ಹರಿಕಥೆ ಮಾಡುತ್ತಿದ್ದ ಶಾಮದಾಸರಿಗೆ ಮಾಧವಯ್ಯ ಹಾಗೂ ರಾಮಚಂದ್ರಚಾರ್ ಪಿಟೀಲು ಸೀತಾರಾಮಯ್ಯ ಅವರ ಮೃದಂಗ ಅಥವ ಗಟ್ಟನ್ನಗಾರಿ ಮುನಿಸ್ವಾಮಿಯವರ ತಬಲ ವಾದನ ಸಹ ಇದ್ದು ಹರಿಕಥೆಯಲ್ಲಿ ಸಾಹಿತ್ಯ ಗುಣದೊಂದಿಗೆ ಸಂಗೀತವೂ ಸೇರಿಕೊಳ್ಳುತ್ತಿತ್ತು. ಶಾಮದಾಸರು ನರಸಿಂಹಸ್ವಾಮಿ ದೇವಾಲಯ ನಿರ್ಮಿಸಿದ್ದು ಪ್ರತಿ ಸಂಜೆ ಎಂಬಂತೆ ಅಲ್ಲಿ ಭಜನೆ ಹರಿಕಥೆಗಳು ವರ್ಷಾನುಗಟ್ಟಳೆ ನಡೆದವು. ಅಚ್ಚುತದಾಸರು ಕುಲವೃತ್ತಿಯಿಂದ ಶಾನುಭೋಗರಾಗಿದ್ದು ಸ್ವತ: ಸಂಗೀತ ಕಲಿತು ಹೆಣ್ಣುಮಕ್ಕಳ ಶಾಲೆಯಲ್ಲಿ ಸಂಗೀತ ಉಪಾಧ್ಯಾಯರಾಗಿದ್ದು ಅದನ್ನೂ ತ್ಯಜಿಸಿ ಹರಿಕಥಾ ಕಾಲಕ್ಷೇಪದಲ್ಲಿ ತೊಡಗಿದರು. ಇವರು ಕನ್ನಡದಲ್ಲಿ ಹರಿಕಥೆ ಮಾಡುತ್ತಿದ್ದು ಜೈಮಿನಿ, ಕುಮಾರವ್ಯಾಸ ಇತ್ಯಾದಿ ಅಭ್ಯಸಿಸಿದ್ದಲ್ಲದೆ ಅನೇಕ ದಾಸರ ಪದಗಳು, ಉಪಕಥೆಗಳನ್ನು ಸೇರಿಸಿ ಅತಿರಂಜಕವಾಗಿ ಕಥೆ ಹೇಳುತ್ತಿದ್ದರು. ಕಡೆಯ ದಿನಗಳಲ್ಲಿ ಬೆಂಗಳೂರಿಗೆ ಬಂದು ಹರಿಕಥೆ ಮಾಡಿ ಜನಪ್ರಿಯರಾಗಿದ್ದರು.

ಆಂಧ್ರದಿಂದ ವಲಸೆ ಬಂದ ಏರಿವೆಂಕಟೇಶಾಚಾರ್ಯ ಹಾಗೂ ಏರಿ ಶೇಷಾಚಾರ್ಯರು ಮುಳಬಾಗಿಲು, ಬೂದಿಕೋಟೆ, ಕೋಲಾರಗಳಲ್ಲಿದ್ದು ಅಂತಿಮವಾಗಿ ಚಿಂತಾಮಣಿಯಲ್ಲಿ ನೆಲೆಸಿದ್ದವರು. ಕೀರ್ತನಕಾರ ಸಹೋದರರಾದ ಇವರು ಇಲ್ಲಿದ್ದ ಅವಧಿಯನ್ನು ೧೭೭೦–೧೮೪೧ ಎಂದು ಗುರುತಿಸಲಾಗಿದೆ. ಏರಿ ವೆಂಕಟೇಶಾಚಾರ್ಯರು ತತ್ವ ಪ್ರಚಾರ ಮಾಡಿದ್ದಲ್ಲದೆ ಕೆಲವು ಜನಹಿತ ಕಾರ್ಯಮಾಡಿದ್ದು ಪೂರ್ಣಯ್ಯ ಹಾಗೂ ಮುಮ್ಮಡಿಯವರಿಂದ ಕೆಲವು ಜಾಗೀರು, ಉಂಬಳಿಗಳನ್ನು ಪಡೆದಿದ್ದು ಚಿಂತಾಮಣಿಯಲ್ಲಿ ಆಂಜನೇಯ ದೇವಾಲಯವೊಂದನ್ನು ನಿರ್ಮಿಸಿದ್ದರು. ಏರಿ ಶೇಷಾಚಾರ್ಯರು 'ಶ್ರೀನಿವಾಸ ಕಲ್ಯಾಣ'ವನ್ನು ಹಾಡಿನ ರೂಪದಲ್ಲಿ ರಚಿಸಿದ್ದು, ರಾಗಗಳನ್ನು ಸೂಚಿಸಲಾಗಿದೆ. ಏರಿ ವೆಂಕಟ ಎಂಬ ಅಂಕಿತದಲ್ಲಿ ಸಂಸ್ಕೃತ–ಪ್ರಾಕೃತ ಶ್ಲೋಕಗಳಿಂದ ಕೂಡಿದ ಈ ಕೃತಿ ಇಂದಿಗೂ ಅನೇಕರು ಪಾರಾಯಣ ಮಾಡುತ್ತಿದ್ದು, ಶ್ರೀನಿವಾಸ ಕಲ್ಯಾಣ ಮಹೋತ್ಸವವನ್ನೂ ಈ ಹಾಡುಗಳ ಮೂಲಕವೇ ನೆರವೇರಿಸುವುದುಂಟು. ಇವರು ದೇಹತ್ಯಾಗ ಮಾಡಿದ ದಿನದಂದು ಪ್ರತಿ ವರ್ಷ ಚಿಂತಾಮಣಿಯಲ್ಲಿ ಆರಾಧನೆ ನಡೆಯುತ್ತಿದ್ದು 'ಏರಿ ಶ್ರೀನಿವಾಸ ಕಲ್ಯಾಣ'ದ ಕೈಬರಹದ ಪ್ರತಿಗಳನ್ನು ಅವರ ವಂಶಸ್ಥರು ಭಕ್ತರಿಗೆ, ಬಂಧುಗಳಿಗೆ, ಆಪ್ತೇಷ್ಟರಿಗೆ ನೀಡುವ ಪದ್ಧತಿಯೂ ಇದೆ.

ಹರಿದಾಸ ಸಾಹಿತ್ಯದಲ್ಲಿ ಶ್ರೀಪಾದರಾಜರ ಪರಂಪರೆ ಮುಂದುವದಿರುವುದನ್ನು ಕಾಣಬಹುದು. ಶಿಡ್ಲಘಟ್ಟದ ಕೃಷ್ಣರಾಯರು (೧೮೫೦–೧೯೧೦) ಹಲವಾರು ಕಡೆ ಸರ್ಕಾರಿ ಉದ್ಯೋಗದಲ್ಲಿದ್ದರೂ

'ವೇಣುಗೋಪಾಲ' ಎಂಬ ಅಂಕಿತದಿಂದ ಸುಮಾರು ೨೦೦ ಕೀರ್ತನೆಗಳನ್ನು ರಚಿಸಿದ್ದಾರೆ. ಚಿಂತನಪಲ್ಲಿಯ ತಿಪ್ಪಣಾರ್ಯರು 'ಖಾದ್ರಿನೃಸಿಂಹ' ಎಂಬ ಅಂಕಿತದಲ್ಲಿ ಹನುಮದ್ವಿಲಾಸ, ಕುಚೇಲೋಪಾಖ್ಯಾನ, ಕಾಳೀಯ ಮರ್ದನ ಕೃತಿಗಳನ್ನು ರಚಿಸಿದ್ದಾರೆ. ತ್ರಿಚೂರಿನ ಮಧ್ವ ಸಿದ್ಧಾಂತೋನ್ನಾಹಿನಿ ಸಭಾ ಪ್ರಕಟಿಸಿರುವ 'ಗೀತಾರಂಜನಾಖ್ಯ'ದ ಕತೃ ಕೋಲಾರ ತಾಲೂಕಿನ ಮುದುವತ್ತಿಯ ಶೇಷಗಿರಿರಾಯರು. ಭಗವದ್ಗೀತೆಯ ಅನುವಾದವಾದ ಇದು ಇಂದಿರೇಶ ವಿಠಲ ಎಂಬ ಅಂಕಿತದಲ್ಲಿದೆ. ನಿರ್ಗುಣ ಸಾರ, ಹೋಲಿಕಾಖ್ಯಾನ, ಹಂಸಧ್ವಜನ ಕಥೆ ಇತ್ಯಾದಿಗಳು ಅವರ ಇನ್ನಿತರ ಕೃತಿಗಳು. ಬಾಗೇಪಲ್ಲಿಯ ಗುರುರಾಮ ವಿಠಲರನ್ನು ಜಿಲ್ಲೆಯ ಹರಿದಾಸ ಪರಂಪರೆಯಲ್ಲಿ ವಿಶೇಷವಾಗಿ ಪರಿಗಣಿಸಿದೆ. ಅಂಧರು, ಅವಿವಾಹಿತರು ಆಗಿದ್ದ ಇವರು ದೇಶಸಂಚಾರ, ಜ್ಞಾನಾರ್ಜನೆ, ಕೃತಿರಚನೆಗಳಲ್ಲಿ ತೊಡಗಿದ್ದು, ಪಿತೃಗಳ ಮೋಕ್ಷಕ್ಕಾಗಿ 'ಸಿದ್ಧಾಂತ ಸಾರ' ಎಂಬ ೧೦೫೫ ಕಂದ ಪದ್ಯಗಳುಳ್ಳ ಕೃತಿಯನ್ನು ರಚಿಸಿದ್ದಾರೆ. ಇದೇ ಬಾಗೇಪಲ್ಲಿಯ ಶೇಷದಾಸರು 'ಶೇಷವಿಠಲ' ಹಾಗೂ 'ಪ್ರಾಣನಾಥ ವಿಠಲ' ಎಂಬ ಅಂಕಿತಗಳಲ್ಲಿ ದೇವರನಾಮಗಳನ್ನು ರಚಿಸಿದ್ದು ಅವರ ವಂಶಜರೇ ಪ್ರಕಟಿಸಿದ್ದಾರೆ. ಗೌರಿಬಿದನೂರಿನ ವರವಣಿ ಎಂಬ ಗ್ರಾಮದಲ್ಲಿ ಜನಿಸಿದ ಜಗನ್ನಾಥ ತೀರ್ಥರು ವ್ಯಾಸಮಠಾಧೀಶರಲ್ಲಿ ಒಬ್ಬರಾಗಿದ್ದವರು. ಇದೇ ಗ್ರಾಮದ ಸುಬ್ಬಣ್ಣಾಚಾರ್ಯರು 'ಶ್ರೀ ವಾಮನ ವಿಠಲ' ಎಂಬ ಅಂಕಿತದಿಂದ ಅನೇಕ ದೇವರನಾಮಗಳನ್ನು ಬರೆದಿದ್ದಾರೆ. ಇವರ ಸೋದರ ನರಸಿಂಹ ಮೂರ್ತಿಯವರು ಅರಣ್ಯ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದು 'ಶ್ರೀನಾರಸಿಂಹ' ಎಂಬ ಅಂಕಿತದಲ್ಲಿ ದೇವರ ನಾಮಗಳನ್ನೂ, ಮೂರೂವರೆ ವಜ್ರದ ಕಥೆ, ಶಶಿರೇಖಾ ಪರಿಣಯ ಮುಂತಾದ ಹರಿಕಥೆಗಳನ್ನು ಬರೆದಿದ್ದಾರೆ. ಇವರ ಪುತ್ರ ವರವಣಿ ರಾಮರಾಯರು 'ಕರಿಗಿರೀಶ' ಎಂಬ ಅಂಕಿತದಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಅಲಕಾಪುರದ ಶ್ಯಾನುಭೋಗ ವೆಂಕಟರಮಣಯ್ಯ 'ಹರಿಸ್ಮರಣಾನಂದಿನಿ ಎಂಬ ಕೀರ್ತನ ಸಂಗ್ರಹ ರಚಿಸಿದ್ದಾರೆ. ಗಂಜಿಗುಂಟೆಯ ನರಸಿಂಹಮೂರ್ತಿಯವರ ಕೀರ್ತನೆಗಳಲ್ಲಿ ವಿಷ್ಣುಭಕ್ತಿ, ಭಾಗವತಜ್ಞಾನ, ಪಾಂಡಿತ್ಯಗಳನ್ನು ಗುರುತಿಸಲಾಗಿದೆ. ಬಂಗಾರಪೇಟೆಯ ಗಟ್ಟುಮಾದ ಮಂಗಲದಲ್ಲಿ ಹರಿದಾಸ ಪರಂಪರೆಯೊಂದು ಹಲವಾರು ತಲೆಮಾರುಗಳಿಂದ ಇದ್ದು ೧ನೇ ನರಸಿಂಹಯ್ಯ ಅವರು 'ಶ್ರೀಮಾಧವ ಪುರದರಸ' ಎಂಬ ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ಇಂದಿನ ಪೀಳಿಗೆಯವರಾದ ಶ್ರೀನಿವಾಸದಾಸರು ಅನೇಕ ಕಡೆಗಳಲ್ಲಿ ಸಂಚರಿಸಿ ಹಲವಾರು ಹರಿದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಅಕಾರಾದಿಯಾಗಿ ಜೋಡಿಸಿ ಹಸ್ತಪ್ರತಿ ಸಂಪುಟಗಳನ್ನು ಬರೆದಿದ್ದಾರೆ.

ದೊಡ್ಡತಮ್ಮನ ಹಳ್ಳಿಯ ಕಂದಾಡೈ ರಘುನಾಥಾಚಾರ್ಯರು (೧೮೪೦-೧೯೨೦) ಚನ್ನಕೇಶವ ಅಂಕಿತದಲ್ಲಿ ಕೀರ್ತನೆ ಹರಿಕಥೆ; ಬೆಳ್ಳಾಳದ ಕೆ.ಎನ್. ಭಾಗೀರಥಮ್ಮ ಕೀರ್ತನ ರಾಮಾಯಣ; ಚಿಕ್ಕಬಳ್ಳಾಪುರದ ಗೋದಮ್ಮರವರು ರಾಮಾಯಣದ ಕೀರ್ತನೆಗಳು; ಬಾಗೇಪಲ್ಲಿ ಸುಬ್ರಹ್ಮಣ್ಯದಾಸ ಗುರುರಾಮ ವಿಠಲ ಅಂಕಿತದಲ್ಲಿ ಕೀರ್ತನೆಗಳು ರಚಿಸಿದ್ದಾರೆ. ತುಲಸಿ ರಾಮದಾಸರು (೧೮೪೭-೧೯೦೩) ತೆಲುಗು ಆಶುಕವಿ, ಇವರ ಶಿಷ್ಯರಾದ ಮುಳಬಾಗಿಲ ಮಳಿಗೆ ರಂಗಸ್ವಾಮಿದಾಸರು ಗಾಣಿಗ ವಂಶಸ್ಥರಾಗಿದ್ದು ನೂರಾರು ಕೀರ್ತನೆಗಳನ್ನು ಬರೆದಿದ್ದಾರೆ. ತುಳಸಿರಾಮರ ದೇವಸ್ಥಾನ, ಅಖಂಡ ಭಜನೆ, ಭಜನೆ ತಂಡ ಇತ್ಯಾದಿ ರೂಪಿಸಿದವರು. ಅಲಂಗೂರು, ಶ್ರೀನಿವಾಸಾಪುರ, ಚಿಂತಾಮಣಿಗಳಲ್ಲಿ ಭಾರ್ಗವರಾಮ ಭಜನಾ ಮಂದಿರಗಳಿದ್ದು ಕೆಲವು ದೇವಾಲಯಗಳಾಗಿವೆ. ಬೆಂಗಳೂರಿನ ಕೋಲ್ಸ್ ಪಾರ್ಕ್‌ನಲ್ಲೂ ತುಳಸೀರಾಮದಾಸರ ಮಠವಿದೆ. ಇವರಲ್ಲದೆ ಮುಳಬಾಗಿಲು ರಾಮಯ್ಯ, ವಟ್ಟಪಲ್ಲಿ ಶ್ರೀನಿವಾಸದಾಸ ಮುಂತಾದವರೂ ಕೀರ್ತನಕಾರರು. ಕೀರ್ತನ ಕಲಾವಿದರಲ್ಲಿ ಮಾಲೂರಿನ ಕದಹಳ್ಳಿಯ ಹರಿದಾಸರತ್ನಂ ಗೋಪಾಲದಾಸರು (ಜ.೧೯೧೬) ಮುಳಬಾಗಿಲು, ತಿರುಪತಿ, ಮಂತ್ರಾಲಯಗಳಲ್ಲಿ ಸಂಸ್ಕೃತಾಭ್ಯಾಸ ಹಾಗೂ ಮೈಸೂರು ವಾಸುದೇವಾಚಾರ್ಯರು ಮುಂತಾದವರಲ್ಲಿ ಸಂಗೀತಾಭ್ಯಾಸ ಮಾಡಿ, ಸಾಂಪ್ರದಾಯಿಕವಾಗಿ ಹಲವಾರು ಗುರುಗಳ ಹಾಗೂ ವೃಂದಾವನಗಳ ಸೇವೆ ಸಲ್ಲಿಸಿ ಮುಳಬಾಗಿಲಿಗೆ ಬಂದು ಆಕಸ್ಮಿಕವಾಗಿ ಕೀರ್ತನೆ ರಂಗಕ್ಕೆ ಕಾಲಿರಿಸಿದರು. ಅರ್ಧಶತಮಾನಕ್ಕೂ ಹೆಚ್ಚುಕಾಲ ಕೀರ್ತನೆ ಸೇವೆ ಸಲ್ಲಿಸಿದವರು. 'ಶ್ರೀಹರಿದಾಸಭಾರತಿ' ಎಂಬ ಧಾರ್ಮಿಕ ಪತ್ರಿಕೆಯನ್ನು ೧೨ ವರ್ಷ ನಡೆಸಿದರಲ್ಲದೆ ಸುಮಾರು ೨೫ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಗೋಪಾಲದಾಸರಿಗೆ 'ಹರಿದಾಸರತ್ನಂ', 'ಕೀರ್ತನ ದುರಂಧರ', 'ಹರಿಕಥಾರತ್ನಾಕರ', 'ಹರಿದಾಸ ಚೂಡಾಮಣಿ', 'ಹರಿದಾಸ ಭೂಷಣ' ಇತ್ಯಾದಿ ಬಿರುದುಗಳು, ಹಲವಾರು ಸಂಘ ಸಂಸ್ಥೆಗಳಿಂದ ಗೌರವ ಸನ್ಮಾನಗಳು ನಡೆದಿದ್ದವು. ಗೌರಿಬಿದನೂರಿನ ಸಹದೇವಪುರದ ಪಿ.ಆರ್.ಕೃಷ್ಣಮೂರ್ತಿ ಆಚಾರ್ (೧೯೧೬) ಅವರು ತಮ್ಮ ತಾತ ಸಂಗೀತಗಾರ ಪೆದ್ದಪಲ್ಲಿ ಗುರುರಾಜಾಚಾರ್ಯರಲ್ಲಿ ಸಂಗೀತ ಹಾಗೂ ವಿವಿಧ ಕಡೆಗಳಲ್ಲಿ ಸಾಹಿತ್ಯ, ಸಂಗೀತವಾದ್ಯಗಳನ್ನು ಅಭ್ಯಸಿಸಿದವರು. ಇವರ ಕಥಾ ಕಾಲಕ್ಷೇಪ ರಾಜ್ಯ, ಹೊರರಾಜ್ಯಗಳಲ್ಲೂ ಮೆಚ್ಚುಗೆ ಪಡೆದಿವೆ. 'ವಾಗ್ ಭೂಷಣ' ಎಂಬ ಬಿರುದಾಂಕಿತರಾದ ಶ್ರೀಯುತರಿಗೆ ನಾಟಕರಂಗದಲ್ಲೂ ಪರಿಶ್ರಮವಿತ್ತು. ಸಂಗೀತ, ನಾಟಕ ಪರಂಪರೆಯ ಮನೆತನದಲ್ಲಿ